ಯುವಜನರಿಗಾಗಿ ಸಂಸ್ಕೃತ ವಾಙ್ಮಯ

ಗೀತೆಗೊಂದು ಕೈಪಿಡಿ



ಪ್ರೊ|| ಎಸ್.ಕೆ. ರಾಮಚಂದ್ರರಾವ್

ಗಾಂಧೀ ಸೆಂಟರ್ ಆಫ್ ಸೈನ್ಸ್ ಅ್ಯಂಡ್ ಹ್ಯೂಮನ್ ವ್ಯಾಲ್ಯೂಸ್
ಭಾರತೀಯ ವಿದ್ಯಾ ಭವನ
#43/1, ರೇಸ್‌ಕೋರ್ಸ್ ರಸ್ತೆ,
ಬೆಂಗಳೂರು – 560001

I

ಯುವಜನರಿಗಾಗಿ ಸಂಸ್ಕೃತ ವಾಙ್ಮಯ

ಗೀತೆಗೊಂದು ಕೈಪಿಡಿ

ಪ್ರೊ|| ಎಸ್.ಕೆ. ರಾಮಚಂದ್ರರಾವ್



ಭವನ್ಸ್ ಗಾಂಧೀ ಸೆಂಟರ್ ಆಫ್ ಸೈನ್ಸ್ ಆ್ಯಂಡ್ ಹ್ಯೂಮನ್ ವ್ಯಾಲ್ಯೂಸ್

ಭಾರತೀಯ ವಿದ್ಯಾ ಭವನ

#43/1, ರೇಸ್‌ಕೋರ್ಸ್ ರಸ್ತೆ,

ಬೆಂಗಳೂರು – 560001

ಗೀತೆಗೊಂದು ಕೈಪಿಡಿ *(Kannada)*

GEETEGONDU KAIPIDI

By ***Prof. S.K. Ramachandra Rao***

Published by
Bhavan's Gandhi Centre of Science and Human Values,
Bharatiya Vidya Bhavan,
#43/1, Race Course Road,
Bengaluru-560001.
Ph. 080-22266525. e-mail: gandhicentre.bvb@gmail.com

© Reserved

ISBN : 978-81-89220-49-8

1st Edition : 2002
2nd Edition : 2015
Copies : 1000
Size : 1/8th Crown, (70*gsm maplitho)*
Pages : viii+130+4
Price : Rs.60/- (*Rupees* *Sixty*)

DTP/Cover : Geetha.H.V, & Ganesha V.Aithal

Printed at:
Sreeranga Printers Pvt. Ltd.,
Industrial Layout, Monotype,
BSK 2nd Stage, Bengaluru-70.
Ph: 080-26715811 / 13.

ಮುನ್ನುಡಿ

ಭವನ್ಸ್ ಗಾಂಧೀ ಸೆಂಟರ್ ಆಫ್ ಸೈನ್ಸ್ ಆ್ಯಂಡ್ ಹ್ಯೂಮನ್ ವ್ಯಾಲ್ಯೂಸ್ ಸಂಸ್ಥೆಯು ಭಾರತೀಯ ಮೌಲ್ಯಗಳು, ವಿಜ್ಞಾನ, ವೈಚಾರಿಕತೆ, ಸಂಸ್ಕೃತಿ ಮತ್ತು ಸಂಸ್ಕೃತ ಸಾಹಿತ್ಯ ಇವುಗಳ ಅತ್ಯುತ್ತಮ ಕೃತಿಗಳನ್ನು ಪ್ರಕಟಿಸುತ್ತಾ ಬಂದಿದೆ. ಅವುಗಳ ಸಾಲಿಗೆ **"ಗೀತೆಗೊಂದು ಕೈಪಿಡಿ"** ಎಂಬ ಕಿರುಗ್ರಂಥ-ವನ್ನು ಪ್ರಕಟಿಸುತ್ತಿರುವುದು ಸಂತೋಷದ ಸಂಗತಿ.

ಸಾಹಿತ್ಯ ಪ್ರಪಂಚಕ್ಕೆ ಭಾರತೀಯರ ಮಹತ್ತರವಾದ ಕೊಡುಗೆಗಳಲ್ಲಿ **ಭಗವದ್ಗೀತೆ**ಯೆ ಅಗ್ರಗಣ್ಯ. ನರ-ನಾರಾಯಣ; ಜೀವಾತ್ಮ-ಪರಮಾತ್ಮರ ಸಂವಾದವೇ ಈ **ಗೀತೆ**. ಗೀತೆಯು *ಕರ್ಮ, ಭಕ್ತಿ, ಜ್ಞಾನಗಳ* ಮೂಲಕ ಆತ್ಮದರ್ಶನ/ಆತ್ಮಸಾಕ್ಷಾತ್ಕಾರಕ್ಕೆ ತೊಡಗಿಸುವುದಾಗಿದೆ. ಗೀತೆ ತೋರುವ ದಾರಿ ವಿರಕ್ತಿಯದಲ್ಲ; ಅದು ಕಾಡಿಗೋಡುವ ಹವಣಿಕೆಯದಲ್ಲ, ಇಲ್ಲಿಯೇ ಈಜಬೇಕು, ಈಜಿ ಜಯಿಸಬೇಕು ಎಂಬ ಛಲದ್ದು, ಇರಬೇಕು, ಇರದಿರ ಬೇಕೆಂಬ ಉಪಾಯದ್ದು. ನೀನು ಮಾಡಬೇಕಾದುದನ್ನು ಮಾಡು; ಕರ್ತವ್ಯ ವನ್ನು ಬಿಡಬೇಡ, ಸ್ವಧರ್ಮ ಎಂದಿಗೂ ತ್ಯಾಜ್ಯವಲ್ಲ, ನಾನು ಮಾಡುತ್ತಿದ್ದೇನೆಂಬ ಕರ್ತೃತ್ವಾಭಿಮಾನ ಬೇಡ, ಕರ್ಮವು ನಿಷ್ಕಾಮಕರ್ಮವಾಗಿರಲಿ ಎಂಬ ಚಿಂತನೆಯದು. ***"ಕರ್ಮಣ್ಯೇವಾಧಿಕಾರಸ್ತೇ.."***; ***"ಸುಖದುಃಖೇ ಸಮೇಕೃತ್ವಾ.."***; ***"ಬುದ್ಧೌಶರಣಮನ್ವಿಚ್ಛ.."***; ***"ಯುಧ್ಯಸ್ವ ವಿಗತಜ್ವರಃ.."***; ***"ನಾಭಿನಂದತಿ ನ ದ್ವೇಷ್ಟಿ.."***; ***"ವ್ಯವಸಾಯಾತ್ಮಿಕಾ ಬುದ್ಧಿರೇಕಾ"***; ***"ನಿಗ್ರಹಃ ಕಿಂ ಕರಿಷ್ಯತಿ.."***; ***"ಸ್ವಧರ್ಮೇ ನಿಧನಂ ಶ್ರೇಯಃ.."***; ***"ಆತ್ಮನ್ಯೇವ ಚ ಸಂತುಷ್ಟಃ" ಶ್ರದ್ಧಾವಾನ್ ಲಭತೇ ಜ್ಞಾನಂ"*** ಎಂಬ ನೀತಿಯವು.

ಗೀತೆ ಎಂದರೆ **ಭಗವದ್ಗೀತೆ**ಯೇ ಎನ್ನುವಷ್ಟರ ಮಟ್ಟಿಗೆ ಸುವಿಖ್ಯಾತ ವಾಗಿದೆ. ವೇದಗಳು, ಉಪನಿಷತ್ತುಗಳ ತರುವಾಯ ಪಂಚಮವೇದ ವೆಂದೂ ಕರೆಯಿಸಿಕೊಂಡು ಜನಸಾಮಾನ್ಯರ ಮೇಲೆ ತನ್ನ ಪ್ರಭಾವವನ್ನು ಬೀರಿರುವ ಗೀತೆಯು ಪ್ರಪಂಚದಲ್ಲೇ ಅತಿ ಹೆಚ್ಚು ಮುದ್ರಣಗೊಂಡ ಕೆಲವೇ ಧರ್ಮ/ಸಾಹಿತ್ಯಕೃತಿಗಳಲ್ಲಿ ಒಂದು. ಇಂದಿಗೂ **ಗೀತೆ** ಅನೇಕ ಭಾಷೆಗಳಲ್ಲಿ ಲಭ್ಯವಿದೆ.

ಭಗವದ್ಗೀತೆಗೆ ಮೊದಲು ಭಾಷ್ಯರಚಿಸಿದ ಶ್ರೀಮದ್ ಶಂಕರಾಚಾರ್ಯರಾದಿ ಖ್ಯಾತ ಅಚಾರ್ಯತ್ರಯರೂ; ಯುತಿ–ಮುನಿಗಳೂ, ವಿದ್ವಾಂಸರಾದಿ ಅನೇಕರು ಭಾಷ್ಯ/ಟೀಕುಗಳನ್ನು ರಚಿಸಿರುತ್ತಾರೆ. ಅಲ್ಲದೆ ಅನೇಕ ಪಾಶ್ಚಾತ್ಯ ವಿದ್ವಾಂಸರೂ ಗೀತೆಯಿಂದ ಪ್ರಭಾವಿತರಾಗಿ ಆಂಗ್ಲಭಾಷೆಗೊ ಇಲ್ಲವೆ ತಂತಮ್ಮ ಭಾಷೆಗಳಿಗೂ ಅನುವಾದಿಸಿದ್ದಾರೆ.

"ಗೀತೆಗೊಂದು ಕೈಪಿಡಿ"ಯು ಅತ್ಯುಪಯುಕ್ತ ಮಾಹಿತಿಗಳನ್ನುಳ್ಳ ವಿಶಿಷ್ಟ ಕೃತಿ. ಇದನ್ನು ಸರಳವಿನೂತನಶೈಲಿಯಲ್ಲಿ ನಿರೂಪಿಸಿರುವ ನಾಡಿನ ಖ್ಯಾತ ವಿದ್ವಾಂಸರಾದ ***ವಿದ್ಯಾವಾಚಸ್ಪತಿ*** **ಪ್ರೊ॥ ಎಸ್.ಕೆ.ರಾಮಚಂದ್ರರಾಯರಿಗೆ** ಅಭಿನಂದನೆಗಳು.

ಈ ದಿಶೆಯಲ್ಲಿ ನಮ್ಮ ಕನ್ನಡದ ಜನತೆ ಅಭೂತಪೂರ್ವ ರೀತಿಯಲ್ಲಿ ನಮ್ಮನ್ನು ಬೆಂಬಲಿಸುತ್ತಿದ್ದಾರೆ, ಇದರ ಫಲವಾಗಿಯೇ ಈ ಕೃತಿಯು ದ್ವಿತೀಯ ಆವೃತ್ತಿಯನ್ನು ಕಾಣುವಂತಾಗಿದೆ. ಈ ಪುಸ್ತಕದ ಕರಡು ಪ್ರತಿಯನ್ನು ಪರಿಶೀಲಿಸಿಕೊಟ್ಟ ಶ್ರೀಯುತ ಬಿ.ಎಸ್. ಗುಂಡೂರಾಯರಿಗೂ, ಡಿ.ಟಿ.ಪಿ. ಮಾಡಿದ ಶ್ರೀಮತಿ ಹೆಚ್.ವಿ.ಗೀತಾರವರಿಗೂ ಮತ್ತು ಅಂದವಾಗಿ ಮುದ್ರಿಸಿಕೊಟ್ಟ ಶ್ರೀರಂಗ ಪ್ರಿಂಟರ್ಸ್ ಅವರಿಗೂ ಕೇಂದ್ರವು ಕೃತಜ್ಞತೆಗಳನ್ನು ಅರ್ಪಿಸುತ್ತದೆ.

ಓದುಗರು ಎಂದಿನಂತೆ ನಮ್ಮ ಪುಸ್ತಕಗಳನ್ನು ಖರೀದಿಸಿ ನಮ್ಮ ಜ್ಞಾನ–ವಿಜ್ಞಾನ ಪ್ರಸಾರದ ಕೈಂಕರ್ಯದಲ್ಲಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಬಿ.ವಿ. ಶ್ರೀಕಂಠನ್

10-09-2014 **ಅಧ್ಯಕ್ಷರು, ಭವನದ ಗಾಂಧೀ ಕೇಂದ್ರ**

ಯುವಜನತೆಗಾಗಿ 'ಸಂಸ್ಕೃತ ವಾಙ್ಮಯ'

(ಪ್ರಥಮ ಮುದ್ರಣಕ್ಕೆ ಮುನ್ನುಡಿ)

"ಆನೋ ಭದ್ರಾಃ ಕ್ರತವೋ ಯಂತು ವಿಶ್ವತಃ"

ಶ್ರೇಷ್ಠ ಚಿಂತನೆಗಳು ಎಲ್ಲ ಕಡೆಗಳಿಂದಲೂ ನಮ್ಮತ್ತ ಹರಿದು ಬರಲಿ.

ಭಾರತೀಯ ವಿದ್ಯಾಭವನದ ಗಾಂಧೀ ಕೇಂದ್ರವು ಕಳೆದ ನಾಲ್ಕಾರು ವರುಷಗಳಲ್ಲಿ ಯುವಜನತೆಗೆ ಭಾರತೀಯ ಸಂಸ್ಕೃತಿ ಹಾಗೂ ಮೌಲ್ಯಗಳ ಹತ್ತು ಹಲವು ಮುಖಗಳನ್ನು ಪರಿಚಯಿಸುವ ಸಲುವಾಗಿ ಹೆಸರಾಂತ ವಿದ್ವಾಂಸರಿಂದ ಮೂವತ್ತು ಪುಸ್ತಕಗಳನ್ನು ಬರೆಯಿಸಿ ಪ್ರಕಟಿಸಿದೆ ಈ ಪುಸ್ತಕ-ಸಂಪುಟಗಳನ್ನು ಅವಲೋಕಿಸಿದ ವಿದ್ಯಾಸಂಸ್ಥೆಗಳೂ ಪ್ರಾಚಾರ್ಯರೂ ಸಾಮಾನ್ಯಜನರೂ ವೃತ್ತಪತ್ರಿಕೆಗಳೂ ಮನಸಾರೆ ಮೆಚ್ಚಿ ಹೊಗಳುಮಾತುಗಳನ್ನು ಬರೆದಿದ್ದಾರೆ. ಶ್ರೀ ರಾಮಕೃಷ್ಣಮಠದ ಅಧ್ಯಕ್ಷರಾಗಿದ್ದ ಸ್ವಾಮಿ ರಂಗನಾಥಾನಂದಜೀ ಅವರು ಯುವಜನರಿಗಾಗಿ ಪ್ರಕಟವಾದ ಈ ಸಂಪುಟಗಳು ಎಲ್ಲ ಭಾರತೀಯ ಭಾಷೆಗಳಲ್ಲಿಯೂ ಪ್ರಕಟಗೊಳ್ಳಬೇಕೆಂಬ ಆಶಯ ವ್ಯಕ್ತಪಡಿಸಿದ್ದಾರೆ.

ಇದೀಗ, ಸಂಸ್ಕೃತ ವಾಙ್ಮಯದ ವಿವಿಧ ಮುಖಗಳನ್ನು ಕುರಿತು ಯುವಜನರಿಗೆ ಆತ್ಮೀಯ ಪರಿಚಯ ಮಾಡಿಕೊಡುವ ಹೊಸದೊಂದು ಪ್ರಕಟಣಾ ಕಾರ್ಯಕ್ರಮವನ್ನು ಭವನದ ಗಾಂಧೀ ಕೇಂದ್ರವು ಹಮ್ಮಿಕೊಂಡಿದೆ. ಈ ಕೆಲಸಕ್ಕೆ ಆರ್ಥಿಕ ನೆರವನ್ನು ನೀಡಿದವರು ಶ್ರೀ ಸಿ.ಎಂ.ರಾಮಕುಮಾರ್ ಅವರು. ಅವರ ಪತ್ನಿ ಶ್ರೀಮತಿ ಗೋದಾದೇವಿ ಹೆಸರಾಂತ ಕಲಾವಿದೆ. ಸಂಗೀತ, ಸಂಸ್ಕೃತ ಹಾಗೂ ರಂಗಚಟುವಟಿಕೆಗಳಲ್ಲಿ ಆಕೆಗೆ ಅಪಾರ ಒಲವು. ಆಕೆಯ ಅಕಾಲಿಕ ನಿಧನದ ನಷ್ಟ ಅಪಾರವಾದದ್ದು. ಆಕೆಯ ನೆನಪಿನ ಸಲುವಾಗಿ ಈ ಪುಸ್ತಕ-ಸಂಪುಟವನ್ನು ಭವನದ ಗಾಂಧೀ ಕೇಂದ್ರವು ಪ್ರಕಟಿಸುತ್ತಿದೆ. ಇದನ್ನು ಅವಲೋಕಿಸುವ ಎಲ್ಲರ ಮನಸ್ಸಿನಲ್ಲಿ ಆಕೆಯ ನೆನಪು ಅರಳುತ್ತಿರಲಿ ಎಂಬುದು ನಮ್ಮ ಆಶಯ.

ಯುವಜನರಿಗಾಗಿ ಇಂಥದೊಂದು ಸಂಪುಟದ ಪ್ರಕಟಣೆಗೆ ಕಾರಣರಾದ ಶ್ರೀಯುತ ಸಿ.ಎಂ. ರಾಮ್‌ಕುಮಾರ್ ಅವರಿಗೂ, ಈ ಪುಸ್ತಕಗಳ ಮುಖಪುಟವನ್ನು ತಮ್ಮ ಕಲೆಗಾರಿಕೆಯಿಂದ ಚೆಲುವುಗೊಳಿಸಿದ ಹೆಸರಾಂತ ಕಲಾವಿದ ಶ್ರೀ ವಾಸುದೇವ್ ಎಸ್.ಜಿ., ಅವರಿಗೂ ಕೇಂದ್ರವು ಋಣಿಯಾಗಿದೆ.

ರಾಜಾ ರಾಮಣ್ಣ

೦೨-೧೧-೨೦೦೨ ಅಧ್ಯಕ್ಷರು, ಭವನದ ಗಾಂಧೀ ಕೇಂದ್ರ



)(◆)(

ಶ್ರೀ ಸಿ.ಎಂ. ರಾಮ್‌ಕುಮಾರ್ ಹಾಗೂ
ಶ್ರೀಮತಿ ಗೋದಾರಾಮ್‌ಕುಮಾರ್

**

ವಿಲಾಸೀರಂಗ, ಸಾಹಿತ್ಯ, ಸಂಸ್ಕೃತ
ಸಂಗೀತ ಸೇವೆಗೆ ಮುಡುಪಾದ
ದಿವ್ಯಜೀವನದ ಸವಿನೆನಪಿನ ಸಂಪುಟ.

)(◆)(

೧. ಮೊದಲ ಮಾತು

ರಾಮಾಯಣ–ಮಹಾಭಾರತಗಳನ್ನು ಬಿಟ್ಟರೆ, ನಮ್ಮ ಜನರಲ್ಲಿ ಅತಿ ಪ್ರಸಿದ್ಧವಾದುದು ಭಗವದ್ಗೀತೆ. ಸಾವಿರಾರು ವರ್ಷಗಳಿಂದ ನಮ್ಮ ದೇಶದ ಎಲ್ಲೆಡೆಗಳಲ್ಲಿ ಈ ಗ್ರಂಥದ ಪಾಠ, ಪ್ರವಚನ, ಅಧ್ಯಯನ, ಪಾರಾಯಣ, ಮನನ, ಅನುಸಂಧಾನಗಳು ನಡೆಯುತ್ತಲೇ ಇವೆ. ದೇಶದ ಎಲ್ಲ ಭಾಷೆಗಳಲ್ಲೂ ಇದರ ಅನುವಾದ, ವಿವರಣೆ, ಸಂಗ್ರಹ, ಸಮೀಕ್ಷೆಗಳು ಲೆಕ್ಕವಿರದಷ್ಟು ಸಂಖ್ಯೆಯಲ್ಲಿ ಕಾಣಿಸಿಕೊಂಡಿವೆ. ಒಂದೊಂದು ತಲೆಮಾರಿನಲ್ಲೂ ಲಕ್ಷಾಂತರ ಜನರು ಭಗವದ್ಗೀತೆಯಿಂದ ಬಾಳಿಗೆ ಬೆಳಕನ್ನು ಕಂಡುಕೊಂಡಿದ್ದಾರೆ. ಗೀತೆಯ ಉಪದೇಶವನ್ನು ಬದುಕಿನಲ್ಲಿ ಅನ್ವಯಿಸಿಕೊಂಡು ಕೃತಾರ್ಥರಾಗಿದ್ದಾರೆ. ಗುಪ್ತರ ಕಾಲದಿಂದ (ಎಂದರೆ ಕ್ರಿಸ್ತಾಬ್ದ ೩೨೦ರಿಂದ) ಇಂದಿನವರೆಗೂ ಇದರ ಜನಪ್ರಿಯತೆ ಉಳಿದು ಬೆಳೆದು ಬಂದಿರುವುದು ಹಲವಾರು ಪುರಾವೆಗಳಿಂದ ಖಚಿತವಾಗಿದೆ.

ನಮ್ಮಲ್ಲಿ ಹಲವಾರು ಗೀತೆಗಳಿದ್ದರೂ ಗೀತೆಯೆಂದರೆ ಭಗವದ್ಗೀತೆಯೇ. ಈ ಭಗವದ್ಗೀತೆಯಿರುವ ಮಹಾಭಾರತದಲ್ಲೆ ಶಾಂತಿಪರ್ವದಲ್ಲಿ ಪಿಂಗಲಗೀತ, ಶಂಪಾಕಗೀತ, ಮಂಕಿಗೀತ, ಬೋಧ್ಯಗೀತ, ವಿಚಖ್ಯುಗೀತ, ಹಾರೀತಗೀತ, ಹಂಸಗೀತ, ಬ್ರಾಹ್ಮಣಗೀತೆಗಳೂ; ಭಾಗವತದಲ್ಲಿ ಗೋಪಿಗೀತ–ಉದ್ಧವಗೀತಗಳೂ; ಗಣೇಶಪುರಾಣದಲ್ಲಿ ಗಣೇಶಗೀತ, ಕೂರ್ಮಪುರಾಣದ ಉತ್ತರಾರ್ಧದಲ್ಲಿ ಈಶ್ವರಗೀತ–ವ್ಯಾಸಗೀತಗಳೂ, ಸ್ಕಂದಪುರಾಣದ ಯಜ್ಞವೈಭವಖಂಡದಲ್ಲಿ ಬ್ರಹ್ಮಗೀತವೂ, ಪದ್ಮಪುರಾಣದ ಪಾತಾಳಖಂಡದಲ್ಲಿ ಶಿವಗೀತವೂ, ಅಧ್ಯಾತ್ಮ ರಾಮಾಯಣದ ಉತ್ತರಕಾಂಡದಲ್ಲಿ ರಾಮಗೀತವೂ, ದೇವೀಭಾಗವತದಲ್ಲಿ ದೇವೀಗೀತವೂ––ಹೀಗೆ ನೂರಾರು ಗೀತಗಳ ಪರಿಚಯ ನಮ್ಮ ಜನಕ್ಕುಂಟು. ಆದರೆ, ಜಯ–ತೀರ್ಥರು 'ಪಮೇಯದೀಪಿಕೆ'ಯಲ್ಲಿ ಹೇಳುವಂತೆ ಸುಮ್ಮನೆ ಗೀತೆಯೆಂದರೆ ಭಗವದ್ಗೀತೆಯೇ (**'ಗೀತೇತಿ ಭಗವದ್ಗೀತೈವ ಅಭಿಧೀಯತೇ'**). ಎಂದರೆ ಮುಖ್ಯವಾದುದು ಇದು; ಉಳಿದುದೆಲ್ಲ ಅಮುಖ್ಯ.

ನಮ್ಮಲ್ಲಿ ಬಹುಕಾಲದಿಂದ ತುಂಬ ಪರಿಚಿತವಾಗಿರುವ ಹಲವು ಮಾತುಗಳೂ ಅವುಗಳ ತಾತ್ಪರ್ಯವೂ ಗೀತೆಯಿಂದಲೇ ಹೊರಹೊಮ್ಮಿ

ದುವು. ಆತ್ಮ, ಬ್ರಹ್ಮ, ಧರ್ಮ, ಯೋಗ, ಸಂನ್ಯಾಸ, ಗುಣ, ಬಂಧ, ಮೋಕ್ಷ, ಅವತಾರ, ಬುದ್ಧಿ, ಭಕ್ತಿ, ಜ್ಞಾನ, ಪ್ರಕೃತಿ, ಪುರುಷ, ಶಾಸ್ತ್ರ, ಶ್ರದ್ಧೆ, ಅಧ್ಯಾತ್ಮ, ಪುಣ್ಯ, ಪಾಪ ಮೊದಲಾದ ಕಲ್ಪನೆಗಳು ಗೀತೆಯ ಮಡಿಲಲ್ಲಿ ಸ್ಫುಟಗೊಂಡು ನಮ್ಮ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡು ಬಂದಿವೆ. ಗೀತೆಯ ಎಷ್ಟೋ ವಾಕ್ಯಗಳು (**'ಜಾತಸ್ಯ ಮರಣಂ ಧ್ರುವಂ', 'ಶ್ರೇಯಾನ್ ಸ್ವಧರ್ಮ', 'ಸೂತ್ರೇ ಮಣಿಗಣಾ ಇವ' 'ಉದ್ಧರೇದಾತ್ಮನಾತ್ಮಾನಂ', 'ಪರಿತ್ರಾಣಾಯ ಸಾಧೂನಾಂ', 'ಚಂಚಲಂ ಹಿ ಮನಃ', 'ನಿಮಿತ್ತಮಾತ್ರಂ ಭವ'**, ಮೊದಲಾದುವು) ಜನಸಾಮಾನ್ಯರ ಆಡುಮಾತಿನಲ್ಲಿ ಉಳಿದುಬಂದಿವೆ. ಶುಭ-ಅಶುಭಕಾರ್ಯಗಳಲ್ಲಿ ಮನೆಮನೆಗಳಲ್ಲಿ ಗೀತೆಯ ಪಾರಾಯಣ ಮಾಡಿಸುವ ಪದ್ಧತಿಯಿದೆ. ಶಾಲೆಯ ಸ್ಪರ್ಧೆಗಳಲ್ಲಿ ಗೀತೆಯ ಶ್ಲೋಕಗಳ ಕಂಠಪಾಠವನ್ನು ಸೇರಿಸುವುದು ಎಲ್ಲೆಲ್ಲೂ ವಾಡಿಕೆ. ಗೀತೆಯ ಒಂದಾದರೂ ಪ್ರತಿಯಿರದ ಹಿಂದೂ ಮನೆಯೇ ಇಲ್ಲವೆಂದರೂ ತಡೆದೀತು.

ಇದರ ಪ್ರಸಿದ್ಧಿ ನಮ್ಮ ದೇಶದಲ್ಲಿ ಮಾತ್ರವಲ್ಲ, ಮಧ್ಯ ಏಶಿಯದ ಅರಬ್ಬೀ ಪ್ರವಾಸಿ ಅಲ್-ಬೆರೂನಿ(ಖಿವ ಪ್ರದೇಶದ ಅಬು-ರಹೈನಾ) ಇಲ್ಲಿಗೆ ಕ್ರಿಸ್ತಾಬ್ದ ೧೦೩೦ರಲ್ಲಿ ಬಂದಿದ್ದಾಗ ಭಗವದ್ಗೀತೆಯನ್ನು ಅಧ್ಯಯನ ಮಾಡಿದ್ದ ಉಲ್ಲೇಖವಿದೆ. ಮುಗಲಾಯಿ ಚಕ್ರವರ್ತಿ ಅಕಬರನು ೧೫೮೨ರ ಸುಮಾರಿಗೆ ಹಲವು ಉಪನಿಷತ್ತುಗಳೊಂದಿಗೆ ಭಗವದ್ಗೀತೆಯನ್ನೂ ಪರ್ಶಿಯನ್ ಭಾಷೆಗೆ ಪರಿವರ್ತನೆ ಮಾಡುವ ಸನ್ನಾಹ ಮಾಡಿದ್ದನು. ಮುಂದೆ ಅವರಂಗಜೇಬನ ಸೋದರ ದಾರಾ-ಷುಕೊ ಮಾಡಿದ ಪರ್ಶಿಯನ್ ಅನುವಾದ ಪ್ರಚಾರಕ್ಕೆ ಬಂದಿತು. ೧೭೮೪ರಲ್ಲಿ ಏಶಿಯಾಟಿಕ್ ಸೊಸೈಟಿ ಮೈದಳೆದಾಗ ಚಾರ್ಲಸ್ ವಿಲ್ಕಿನ್ಸ್ ಎಂಬಾತ ಭಗವದ್ಗೀತೆಯ ಆಂಗ್ಲ ಅನುವಾದವನ್ನು ಹೊರತಂದನು. ಆಗ ದೇಶದ ಆಳರಸನಾಗಿದ್ದ ವಾರೆನ್ ಹೇಸ್ಟಿಂಗ್ಸ್ ಗೀತೆಯನ್ನು ಬಹುವಾಗಿ ಮೆಚ್ಚಿಕೊಂಡಿದ್ದನು; ವಿಲ್ಕಿನ್ಸ್ ಅನುವಾದಕ್ಕೆ ಅವನದೇ ಪ್ರೇರಣೆ. ೧೮೯೯ರಲ್ಲಿ ವಿಲೆಹೆಲ್ಮ್ ವಾನ್ ಶ್ಲೆಗೆಲ್ ಭಗವದ್ಗೀತೆಯನ್ನು ಲ್ಯಾಟಿನ್ ಭಾಷೆಯಲ್ಲಿ ಅನುವಾದಮಾಡಿ ಪ್ರಕಟ-ಗೊಳಿಸಿದಾಗ ಗೀತೆಯ ಗರಿಮೆ ಯೂರೋಪ್ ದೇಶಗಳಲ್ಲೆಲ್ಲ ಅರಿವಿಗೆ ಬಂದಿತು.

ಜಗತ್ತಿನ ಎಲ್ಲ ಭಾಷೆಗಳಲ್ಲೂ ಗೀತೆಯ ಅನುವಾದಗಳು, ಸಂಗ್ರಹಗಳು. ಗೀತೆಯನ್ನು ಕುರಿತಂತೆ ವ್ಯಾಖ್ಯಾನಗಳು ವಿವರಣೆಗಳು ಬೆಳಕಿಗೆ ಬಂದಿವೆ. ಬೈಬಲನ್ನು ಬಿಟ್ಟರೆ. ಜಗತ್ತಿನ ಧರ್ಮಗ್ರಂಥಗಳಲ್ಲಿ ಅತಿಹೆಚ್ಚಿನ ಸಂಖ್ಯೆಯ ಪ್ರಕಟಣೆಗಳಿರುವುದು ಗೀತೆಯನ್ನು ಕುರಿತಂತೆಯೇ. ವಿಶ್ವದಲ್ಲೆಲ್ಲ ಪಂಡಿತರು ಮಾತ್ರವಲ್ಲದೆ ಎಣಿಕೆಗೆ ಸಿಗದಂತೆ ಸಾಮಾನ್ಯ ಜನರೂ ಗೀತೆಯಿಂದ ಬೆಳಕನ್ನು ಕಂಡುಕೊಳ್ಳಲು ಹವಣಿಸುತ್ತಿದ್ದಾರೆ. ಭಗವದ್ಗೀತೆ ಅನನ್ಯ ಸಾಧಾರಣವಾದುದು. ನಮ್ಮ ದೇಶದಲ್ಲಂತೂ ಅದರ ಗರಿಮೆಯ ಕಾರಣಗಳನ್ನು ಹುಡುಕಲು ಬಹುದೂರ ಹೋಗಬೇಕಾಗಿಲ್ಲ.

ಶ್ರೀಮದ್ ಶಂಕರಾಚಾರ್ಯರು(ಕ್ರಿಸ್ತಾಬ್ದ ೬೩೨-೬೬೪) ಭಗವದ್ಗೀತೆಗೆ ಭಾಷ್ಯಬರೆದವರಲ್ಲಿ ಮೊದಲನೆಯವರು. ಅವರು ಗೀತೆಯನ್ನು **'ಸಮಸ್ತ ವೇದಾರ್ಥ ಸಾರಸಂಗ್ರಹ'** ಎಂದು ಬಣ್ಣಿಸಿದ್ದಾರೆ. ಭಾರತೀಯ ಸಂಸ್ಕೃತಿಗೆ ಅಡಿಗಲ್ಲಾದ ವೇದದ ತಾತ್ಪರ್ಯವಾದ ಧರ್ಮವನ್ನು ತಿರುಳಾಗಿ ಹಿಂಡಿ ಇಲ್ಲಿ ತಿಳಿಯಪಡಿಸಲಾಗಿದೆಯೆಂದು ಅರ್ಥ. ವೇದದ ತಾತ್ಪರ್ಯ ವಿರುವುದು ಉಪನಿಷತ್ತುಗಳಲ್ಲಿ; ಹಾಗೆಂದೇ ಅವು 'ವೇದಾಂತ'ಗಳು. ಗೀತಾಮಾಹಾತ್ಮ್ಯೆಯಲ್ಲಿ ಬರುವ ಒಂದು ಶ್ಲೋಕ, ವೈಷ್ಣವೀಯ ತಂತ್ರಸಾರ ದಲ್ಲಿರುವುದು, ಉಪನಿಷತ್ತುಗಳು ಹಸುಗಳೆಂದೂ, ಅವುಗಳ ಹಾಲನ್ನು ಕರೆದವನು ಕೃಷ್ಣನೆಂದೂ, ಹಾಲು ಯಾವ ಕರುವಿನ ಸಲುವಾಗಿ ಉಂಟಾಗುವುದೋ ಅವನು ಅರ್ಜುನನೆಂದೂ, ಕರು ಕುಡಿದು ಮಿಕ್ಕ ಹಾಲನ್ನು ಮೆಲ್ಲುವವರು ಬುದ್ಧಿವಂತರೆಂದೂ ಈ ಶ್ಲೋಕ ಹೇಳುತ್ತದೆ:

ಸರ್ವೋಪನಿಷದಾ ಗಾವೋ ದೋಗ್ಧಾ ಗೋಪಾಲನಂದನಃ ।
ಪಾರ್ಥೋ ವತ್ಸಃ ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್ ॥

ಎಂದರೆ, ಉಪನಿಷತ್ತುಗಳ ಸಾರವೇ ಗೀತೆ. ಅಷ್ಟು ಮಾತ್ರವಲ್ಲ, ಗೀತೆಯ ಅಧ್ಯಾಯಗಳ ಕೊನೆಯಲ್ಲಿ ಕಾಣಿಸಿಕೊಳ್ಳುವ ಪುಷ್ಪಿಕೆ ಗೀತೆಯನ್ನೇ ಉಪನಿಷತ್ತೆಂದು ನಿರ್ದೇಶಿಸುತ್ತದೆ (**'ಶ್ರೀಮದ್ ಭಗವದ್ಗೀತಾಸೂಪ-ನಿಷತ್ಸು'**). ಗೀತಾ ಎನ್ನುವ ಸ್ತ್ರೀಲಿಂಗದ ಮಾತಿಗೂ, ಉಪನಿಷತ್ತೆಂಬ ಸ್ತ್ರೀಲಿಂಗದ ಮಾತಿಗೂ ಸಾಮ್ಯವಿರುವುದು ಯಾದೃಚ್ಛಿಕವಲ್ಲವೆಂದು ವೇದಾಂತದೇಶಿಕರ ವಿವರಣೆ. ಗೀತೆಯು ತಾನೇ ಒಂದು ಉಪನಿಷತ್ತಾಗಲಿ, ಅಥವಾ ಉಪನಿಷತ್ತುಗಳ ಸಾರವಾಗಲಿ, ಪ್ರಸ್ಥಾನ

ತ್ರಯದಲ್ಲಿ ಅದಕ್ಕೊಂದು ಸ್ಥಾನವಿದೆ. ಉಳಿದೆರಡು ಪ್ರಸ್ಥಾನಗಳೂ ಉಪನಿಷತ್ತನ್ನೇ ಕುರಿತವು (ಹತ್ತು ಉಪನಿಷತ್ತುಗಳು ಮತ್ತು ವೇದಾಂತ-ಮೀಮಾಂಸಾಸೂತ್ರಗಳು).

ಆದ್ದರಿಂದಲೇ ಎಲ್ಲ ಆಚಾರ್ಯರೂ ಗೀತೆಯ ಮೇಲೆ ಭಾಷ್ಯಗಳನ್ನು ರಚಿಸಿದ್ದಾರೆ. ವೈಷ್ಣವ, ಶ್ರೀವೈಷ್ಣವ, ಭಾಗವತ, ಶೈವ, ಕಾಶ್ಮೀರ ಶೈವ, ವೀರಶೈವ, ಶಾಕ್ತ, ನಾಥಪಂಥ, ಸಿದ್ಧಸಂಪ್ರದಾಯ ಎಲ್ಲ ಪ್ರಸ್ಥಾನ ಪ್ರಕ್ರಿಯೆಗಳ ಭಾಷ್ಯಗಳೂ ನೂರಾರು ವಿವರಣೆಗಳೂ ಭಗವದ್ಗೀತೆಗೆ ಇವೆ. ದ್ವೈತ. ಅದ್ವೈತ, ವಿಶಿಷ್ಟಾದ್ವೈತ, ದ್ವೈತಾದ್ವೈತ ಮೊದಲಾದ ಎಲ್ಲ ದಾರ್ಶನಿಕ ದೃಷ್ಟಿಗಳೂ ಉಪನಿಷತ್ತುಗಳಂತೆ ಭಗವದ್ಗೀತೆಯನ್ನೂ ಪ್ರಮಾಣವಾಗಿ ಗ್ರಹಿಸಿವೆ. ಉಪನಿಷತ್ತುಗಳು ಇರುವ ತತ್ತ್ವವನ್ನು (ಅಸ್ತಿತ್ವವನ್ನು) ತಿಳಿಸುವುದರಿಂದ ಅವು ಶ್ರುತಿ; ಇರುವ ತತ್ತ್ವವನ್ನು ಸೇರುವ ಉಪಾಯವನ್ನು ತಿಳಿಸುವುದರಿಂದ ಗೀತೆ ಶಾಸ್ತ್ರ. ಎಲ್ಲ ಭಾಷ್ಯ, ವ್ಯಾಖ್ಯಾನ, ವಿವರಣೆ, ಟೀಕೆಗಳಲ್ಲೂ ಈ ನಿಲುವನ್ನು ಗುರುತಿಸಬಹುದು.


धृतराष्ट्र उवाच ॥ ॥ धर्मक्षेत्रीं कुरुक्षेत्रीं ॥ मिळाले
युध्यकामुक ॥ माझे चि आणि पंडूचे ॥ संजया वर्तले

धृतराष्ट्र॰ धर्मक्षेत्रे कुरुक्षेत्रे ॥ समवेता
युयुत्सवः ॥ मामकाः पांडवाश्चैव ॥ किम
कुर्वत संजय ॥ १ ॥ संजय उवा॰ ॥ दृष्ट्वा
तु पांडवानीकं ॥ व्यूढं दुर्योधनस्तदा ॥ आ
चार्यमुपसंगम्य ॥ राजा वचनमब्रवीत् ॥ १ ॥
कसे ॥ १ ॥ संज॰ ॥ रचले पांडव दल ॥ ते दुर्योधन देखु
नी ॥ राजा वचन हे बोले ॥ द्रोणाजवळि येउनी ॥ २ ॥

೨. 'ಭಾರತೇ ಗೀತಿಕಾ ವರಾ'

ಭಗವದ್ಗೀತೆಯ ಪಾಠವಿರುವುದು ಮಹಾಭಾರತದ ಭೀಷ್ಮಪರ್ವದಲ್ಲಿ (೨೫ರಿಂದ ೪೨ನೆಯ ಅಧ್ಯಾಯದವರೆಗೆ, ೧೩ರಿಂದ ೪೩ನೆಯ ಅಧ್ಯಾಯದವರೆಗಿನ ಭಾಗಕ್ಕೆ ಭಗವದ್ಗೀತಾಪರ್ವವೆಂದೇ ಹೆಸರು). ಮಹಾ ಭಾರತದಲ್ಲಿರುವ ಮೂರು ರತ್ನಗಳಲ್ಲಿ ಭಗವದ್ಗೀತೆ ಒಂದೆಂದು ಎಣಿಕೆ (ಉಳಿದೆರಡು **ವಿಷ್ಣುಸಹಸ್ರನಾಮ** ಮತ್ತು **ಭೀಷ್ಮಸ್ತವರಾಜ**). ಎಲ್ಲ ಶಾಸ್ತ್ರಗಳಲ್ಲೂ ಮಹಾಭಾರತ ಶ್ರೇಷ್ಠವಾದುದು, ಮಹಾಭಾರತದಲ್ಲಿ ಗೀತೆಯ ಭಾಗ ಶ್ರೇಷ್ಠವಾದುದು ಎಂಬ ಮಾತಿದೆ (**'ಸರ್ವಶಾಸ್ತ್ರೇಷು ಭಾರತಂ, ಭಾರತೇ ಗೀತಿಕಾ ವರಾ'**). ಮಧ್ವಾಚಾರ್ಯರು ಗೀತೆಯನ್ನು *'ಭಾರತಪಾರಿಜಾತಮಧು ಭೂತ'ವೆಂದು* ಬಣ್ಣಿಸಿದ್ದಾರೆ. ಮಹಾಭಾರತಕ್ಕೆ ಸೇರಿದ ಭಾಗವಾದರೂ ಗೀತೆಯನ್ನು ಎಲ್ಲರೂ ಸ್ವತಂತ್ರಗ್ರಂಥವೆಂದೇ ಪರಿಗಣಿಸಿದ್ದಾರೆ.

ಹಾಗೆ ನೋಡಿದರೆ, ಮಹಾಭಾರತದ ಕಥೆಯ ಓಟಕ್ಕೂ ಭಗವದ್ಗೀತೆಯ ಪ್ರಸಂಗಕ್ಕೂ ನೇರವಾದ ಯಾವ ನಂಟೂ ಇರದು. ಮಹಾಭಾರತದ ಎಷ್ಟೋ ಪ್ರಾಚೀನ ಹಸ್ತಪ್ರತಿಗಳಲ್ಲಿ ಭಗವದ್ಗೀತಾಪರ್ವ ಸೇರಿಬಂದೇ ಇಲ್ಲ. ಶಂಕರಾಚಾರ್ಯರಾಗಲಿ ಗೀತೆಯು ಮಹಾಭಾರತಕ್ಕೆ ಸೇರಿದ್ದೆಂದು ಸೂಚಿಸುವುದಿಲ್ಲ. ರಾಮಾನುಜಾಚಾರ್ಯರೂ 'ಪಾಂಡುತನಯ ಯುದ್ಧ ಪ್ರೋತ್ಸಾಹನ'ದ ನೆವದಿಂದ(ವ್ಯಾಜೇನ) ಕರ್ಮಜ್ಞಾನಸಹಿತವಾದ ಭಕ್ತಿ ಯೋಗವನ್ನು ಕೃಷ್ಣನು ಕೆಳಗಿಳಿಸಿದನೆನ್ನುತ್ತಾರೆ('ಅವತಾರಯಾಮಾಸ'). ಇದನ್ನು ಅವರ ಹಿರಿಯರಾದ ಯಾಮುನಮುನಿಗಳು 'ಶಾಸ್ತ್ರಾವತರಣ' ವೆಂದು ನಿರ್ದೇಶಿಸಿದ್ದಾರೆ. ಮಧ್ವಾಚಾರ್ಯರು ಗೀತೆಯನ್ನು ಮಹಾಭಾರತದ ಅಂಗವೆಂದು ಒಪ್ಪಿದರೂ ಐತಿಹಾಸಿಕಕ್ಕೂ ಮಿಗಿಲಾದ ಆಧ್ಯಾತ್ಮಿಕ ಅರ್ಥವನ್ನೇ ಹಿಡಿಯುತ್ತಾರೆ (**'ಏವಂ ಆಧ್ಯಾತ್ಮನಿಷ್ಠಂ ಹಿ ಭಾರತಂ ಸರ್ವ- ಮುಚ್ಯತೇ'**). ತಾತ್ಪರ್ಯನಿರ್ಣಯ: ದ್ರೋಣನೇ ಮೊದಲಾದವರು ಇಂದ್ರಿಯಗಳು; ಕೌರವ ಸೈನಿಕರೆಲ್ಲ ಪಾಪದ ಪ್ರತಿನಿಧಿಗಳು; ಪಾಂಡವರು ಪುಣ್ಯವನ್ನು ಸಂಕೇತಿಸುತ್ತಾರೆ; ಕೃಷ್ಣನಾದ ವಿಷ್ಣುವು ಎಲ್ಲಕ್ಕೂ ನಿಯೋಜಕ ನಾದವನು.

ದ್ರೋಣಾದ್ಯಾ ಇಂದ್ರಿಯಾಣ್ಯೇವ ಪಾಪಾನ್ಯನ್ಯೇತು ಸೈನಿಕಾ ।
ಪಾಂಡವೇಯಾಶ್ಚ ಪುಣ್ಯಾನಿ ತೇಷಾಂ ವಿಷ್ಣುರ್ನಿಯೋಜಕಃ ॥

ರಾಘವೇಂದ್ರಸ್ವಾಮಿಗಳು ತಮ್ಮ **'ಗೀತಾವಿವೃತಿ'**ಯಲ್ಲಿ ಗೀತೆಯ ಶ್ಲೋಕಗಳಿಗೆ ಆಧ್ಯಾತ್ಮಾರ್ಥ, ಅಂಶಾರ್ಥ, ಪ್ರಸಿದ್ಧಾರ್ಥ ಎಂಬ ಮೂರು ಅರ್ಥಗಳನ್ನು ಹೇಳುತ್ತಾರೆ; ವಿಸ್ತಾರವಾಗಿ ಹೇಳುವುದು ಆಧ್ಯಾತ್ಮಪರವಾದ ಅರ್ಥವನ್ನೇ. ಕುರುಕ್ಷೇತ್ರವೆಂದರೆ ದಿಟವಾಗಿ ನಮ್ಮ ಶರೀರವೇ; ಅಲ್ಲಿ ನಡೆಯುವ ಸೆಣಸಾಟ ಒಳಿತು, ಕೆಡುಕುಗಳು ಬಣಗಳಲ್ಲಿ ಕೃಷ್ಣನೆಂದರೆ ಬುದ್ಧಿಯೇ. ಭಗವದ್ಗೀತೆಯ ಹಿನ್ನೆಲೆಯಲ್ಲಿರುವ ಹಗರಣ ನಮ್ಮಲ್ಲಿ ಒಬ್ಬೊಬ್ಬರಲ್ಲೂ ಎಡೆಬಿಡದೆ ಜರುಗುತ್ತಿರುವುದೇ. ಆದರೆ, ರಾಘವೇಂದ್ರ ಸ್ವಾಮಿಗಳೇ ಹೇಳುವಂತೆ. ಈ ಬಗೆಯ ಆಧ್ಯಾತ್ಮಿಕ ಅರ್ಥ ಇಂದ್ರಿಯ ಭೋಗಗಳಲ್ಲಿ ತೊಡಗಿರುವ ಸಾಮಾನ್ಯರಿಗೆ ರುಚಿಸುವುದಿಲ್ಲ, ಮೋಕ್ಷ ವನ್ನಪೇಕ್ಷಿಸುವವರಿಗಾದರೆ ಹಿಡಿಸುತ್ತದೆ (**'ವಿಷಯಿಣಾಂ ಅರುಚಿಕರತ್ವಂ'; 'ಮುಮುಕ್ಷೂಣಾಂ ರುಚಿಕರತ್ವಾತ್'**).

ಮಹಾಭಾರತವು ವ್ಯಾಸರ ರಚನೆ; ಆದರೆ ವೈಶಂಪಾಯನರು ಜನಮೇಜಯನಿಗೆ(ಎಂದರೆ ಅರ್ಜುನನ ಮರಿಮಗನಿಗೆ) ಹೇಳಿದುದನ್ನು ಸರ್ಪಯಾಗದಲ್ಲಿದ್ದ ಪೌರಾಣಿಕ ಉಗ್ರಶ್ರವನು(ಸೂತನು) ಕೇಳಿಸಿಕೊಂಡು, ಮುಂದೆ ಶೌನಕಾದಿಗಳಿಗೆ ನೈಮಿಷಾರಣ್ಯದಲ್ಲಿ ಹೇಳಿದಂತೆ ನಮ್ಮೆದುರು ಇರುವ ಪಾಠ. ಭಗವದ್ಗೀತೆಯಲ್ಲಿ ಈ ಒಕ್ಕಣೆಯೇನು ಕಾಣಸಿಗುವುದಿಲ್ಲ. ಸಂಜಯನು ಧೃತರಾಷ್ಟ್ರನಿಗೆ ಹೇಳಿದಂತೆ ಒಕ್ಕಣೆಯಿದೆ. ಆದರೆ, ಪ್ರಸಿದ್ಧ ವಾಗಿರುವುದು ಕೃಷ್ಣಾರ್ಜುನಸಂವಾದವೆಂದೇ. ಈಗ ನಾವು ಬಳಸುವ ಭಗವದ್ಗೀತೆಯ ಅಧ್ಯಾಯಗಳ ಕೊನೆಯಲ್ಲಿ ಕಾಣುವ ಪುಷ್ಪಿಕೆ ಮಹಾಭಾರತದ ಇದೇ ಭಾಗಗಳಲ್ಲಿ ಇಲ್ಲದಿರುವುದನ್ನೂ ಗಮನಿಸಬೇಕು. ಈ ಪುಷ್ಪಿಕೆಯಲ್ಲಿ **'ಶ್ರೀಮದ್ ಭಗವದ್ಗೀತಾಸೋಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ'** ಎಂಬ ವಿವರಗಳಿವೆ; ಮಹಾ- ಭಾರತದ ಪರ್ವ, ಸರ್ಗ ಮೊದಲಾದ ಉಲ್ಲೇಖ ಬರುವುದಿಲ್ಲ. ಮತ್ತೆ, ಮೊದಲ ಅಧ್ಯಾಯವನ್ನೂ ಎರಡನೆಯ ಅಧ್ಯಾಯದ ಮೊದಲ ಹತ್ತು ಶ್ಲೋಕಗಳನ್ನೂ ಬಿಟ್ಟರೆ ಮಹಾಭಾರತದ ಪ್ರಸ್ತಾವ ಎಲ್ಲಿಯೂ ಬರುವುದಿಲ್ಲ. ಹೀಗಾಗಿ ಭಗವದ್ಗೀತೆಯನ್ನು ಸ್ವತಂತ್ರಗ್ರಂಥವಾಗಿ ಎಣಿಸುವುದು ಸಂಪ್ರದಾಯದ ವಾಡಿಕೆ.

೩. 'ತದಿದಂ ಗೀತಾಶಾಸ್ತ್ರಂ'

ಗೀತೆಯು ಸ್ವತಂತ್ರವಾದ ಶಾಸ್ತ್ರಗ್ರಂಥವೆಂದು ಎಲ್ಲ ಭಾಷ್ಯಕಾರರ ಅಭಿಪ್ರಾಯ. ಶಾಸ್ತ್ರವೆಂದರೆ ಇಲ್ಲಿ ಅಧ್ಯಾತ್ಮಶಾಸ್ತ್ರ; ಧರ್ಮಶಾಸ್ತ್ರವಲ್ಲ; ಆತ್ಮನನ್ನು ಅರಿತುಕೊಂಡು ಮನುಷ್ಯ ತನ್ನೆಲ್ಲ ಪುರುಷಾರ್ಥಗಳನ್ನು ಕೈಗೂಡಿಸಿಕೊಳ್ಳುವ ಶಾಸ್ತ್ರ ಇದು ಎಂದು ಶಂಕರಾಚಾರ್ಯರು ಸೂಚಿಸಿದ್ದಾರೆ. ಮನುಷ್ಯನ ಅಭ್ಯುದಯ-ನಿಃಶ್ರೇಯಸಗಳಿಗೆ ಬೇಕಾದ ತತ್ತ್ವ-ಹಿತ ಎರಡನ್ನೂ ಮನದಟ್ಟು ಮಾಡಿಕೊಡುವ ಶಾಸ್ತ್ರವೆಂದು ವೇದಾಂತದೇಶಿಕರ ವಿವರಣೆ. ಯಾವುದೋ ಪಂಗಡಕ್ಕೆ, ಜನಾಂಗಕ್ಕೆ, ಸಂಸ್ಕೃತಿ-ವಿಶೇಷಕ್ಕೆ ಅಂಟಿಕೊಂಡದ್ದು, ಯಾವುದೋ ಕಾಲಕ್ಕೆ ಪ್ರಸಕ್ತವಾದುದು, ಯಾವುದೋ ಪ್ರದೇಶದಲ್ಲಿ ಪ್ರಚಲಿತವಾದುದು ಶಾಸ್ತ್ರವಾಗಲಾರದು; ಶಾಸ್ತ್ರಕ್ಕಿರುವುದು ಸಾರ್ವತ್ರಿಕವಾದ ಅನ್ವಯ; ಅದು ನಿಲ್ಲುವುದು ಎಲ್ಲರ ಅನುಭವದ ಆಧಾರದ ಮೇಲೆ.

ಮನುಷ್ಯರಿಗೆ ಸಾಮಾನ್ಯವಾಗಿ ಹಿತಕ್ಕಿಂತ ಪ್ರಿಯವಾದುದರ ಮೇಲೆ ಹೆಚ್ಚು ಗಮನ. ಆ ಕಾಲಕ್ಕೆ ಸುಖವೆನಿಸಿದರೆ ಸಾಕು, ಅದಕ್ಕಾಗಿ ಬಾಯಿಬಿಡುವುದು ಸ್ವಭಾವ. ಎದುರಿಗಿರುವ ಈ ಲೋಕವೇ ಇರುವುದು (**'ಅಯಂ ಲೋಕಃ'**), ಅದರಾಚೆ ಏನೂ ಇರದು (**'ನಾಸ್ತಿ ಪರಃ'**) ಎಂಬ ನಂಬುಗೆ ಮನುಷ್ಯರಿಗೆ ಸಹಜವಾಗಿಯೆ ಒದಗಿಬರುತ್ತದೆ. ಮನುಷ್ಯನೆಂದರೆ ಶರೀರ, ಇಂದ್ರಿಯ, ಮನಸ್ಸು ಅಷ್ಟೇ ಎಂಬ ಕಲ್ಪನೆ. ಅವುಗಳಾಚೆ ಆತ್ಮನಿದ್ದಾನೆ ಎಂಬ ಅರಿವು ತಾನಾಗಿ ಮೂಡಲಾರದು; **'ನಾ ಸಾಂಪರಾಯಃ ಪ್ರತಿಭಾತಿ ಬಾಲಂ'**, ಈ ಬಗೆಯ ಅರಿವು ಮೂಡಿಕೊಂಡು ಬೆಳೆಯುವುದೇ ಹಿತವೆನಿಸಿಕೊಳ್ಳುತ್ತದೆ. ಇದು ಅಧ್ಯಾತ್ಮವಿದ್ಯೆ, ಅಧ್ಯಾತ್ಮಶಾಸ್ತ್ರ. ಆತ್ಮನೆಂಬ ತತ್ತ್ವವನ್ನೂ ಜೀವಕ್ಕೆ ಬೇಕಾದ ಹಿತವನ್ನೂ ತಿಳಿಸಿಕೊಡುವ ಶಾಸ್ತ್ರ ಇದು. ಭಗವದ್ಗೀತೆಯ ನೆಲೆ ಇದು.

ಗೀತೆಯನ್ನು ಶಾಸ್ತ್ರವೆಂದಾಗ ಈಗಿರುವ ಗೀತೆಯಲ್ಲಿ ಶಾಸ್ತ್ರಭಾಗ ಯಾವುದು? ಅದರ ಉಪಕ್ರಮ-ಉಪಸಂಹಾರಗಳು ಯಾವುವು?

ಈಗ ನಮ್ಮೆದುರು ಇರುವ ಗೀತೆಯಲ್ಲಿ ಏಳುನೂರು ಶ್ಲೋಕಗಳು. ಶಂಕರಾಚಾರ್ಯರ ಕಾಲಕ್ಕೂ ಇದೇ ಎಣಿಕೆ ಇದ್ದಿತು; **'ಸಪ್ತಭಿಃ ಶ್ಲೋಕಶತೈಃ'**

ಎನ್ನುವ ಮಾತು ಅವರ ಗೀತಾಭಾಷ್ಯದಲ್ಲಿದೆ. ಆದರೆ ಮಹಾಭಾರತದಲ್ಲೇ ಭೀಷ್ಮಪರ್ವದಲ್ಲಿ (ಅಧ್ಯಾಯ ೪೩, ಶ್ಲೋಕ ೪) ಗೀತೆಯಲ್ಲಿ ೭೪೫ ಶ್ಲೋಕಗಳಿರುವಂತೆ ಉಲ್ಲೇಖವಿದೆ.

ಷಟ್‌ಶತಾನಿ ಸವಿಂಶಾನಿ ಶ್ಲೋಕಾನಾಂ ಪ್ರಾಹ ಕೇಶವಃ ।
ಅರ್ಜುನಃ ಸಪ್ತಪಂಚಾಶತ್ ಸಪ್ತಷಷ್ಟಿಂ ತು ಸಂಜಯಃ ।
ಧೃತರಾಷ್ಟ್ರಃ ಶ್ಲೋಕಮೇಕಂ ಗೀತಾಯಾಃ ಮಾನಮುಚ್ಯತೇ ॥

ಎಂದರೆ, ಕೃಷ್ಣ ಹೇಳಿದ್ದು ೬೨೦ ಶ್ಲೋಕಗಳು; ಅರ್ಜುನ ೫೭; ಸಂಜಯ ೬೭; ಧೃತರಾಷ್ಟ್ರ ಒಂದು. ಒಟ್ಟು ೭೪೫. ಇದು ಗೀತೆಯ ಶ್ಲೋಕಗಳ ಎಣಿಕೆ. ನಮ್ಮಲ್ಲಿಂದು ಬಳಕೆಯಲ್ಲಿರುವ ಗೀತೆಯಲ್ಲಿ ಕೃಷ್ಣ ಹೇಳಿದ್ದು ೫೭೪ (ಅಥವಾ ೫೭೫); ಅರ್ಜುನ ೮೪; ಸಂಜಯ ೪೧ (ಅಥವಾ ೪೦); ಧೃತರಾಷ್ಟ್ರ ಒಂದು, ಒಟ್ಟು ೭೦೦ ಶ್ಲೋಕಗಳು. ಈ ವ್ಯತ್ಯಾಸ ಹೇಗೆ, ಯಾವಾಗ ಒದಗಿಬಂದಿತೋ ತಿಳಿಯುವುದಿಲ್ಲ, ಆದರೆ ೭೪೫ ಶ್ಲೋಕಗಳಿರುವ ಗೀತಾಪಾಠ ಕಾಶ್ಮೀರ ಸಂಪ್ರದಾಯದಲ್ಲಿದೆ (ಅಭಿನವಗುಪ್ತನ ಗೀತಾಸಂಗ್ರಹ: ರಾಜಾನಕ ರಾಮಭದ್ರನ 'ಸರ್ವತೋ-ಭದ್ರ' ವ್ಯಾಖ್ಯೆ). ಅಲ್‌ಬೆರೂನಿಯೂ(೧೦೩೦ ಸುಮಾರಿಗೆ) ಅಧ್ಯಯನ ಮಾಡಿದ್ದು, ಪರ್ಶಿಯನ್ ಮತ್ತು ಅರಾಬಿಕ್ ಭಾಷೆಗಳಿಗೆ ಅನುವಾದಗೊಂಡದ್ದು ೭೪೫ ಶ್ಲೋಕಗಳಿರುವ ಗೀತೆಯನ್ನೇ.

ಈ ಒಗಟು ಎಂತಾದರಿರಲಿ. ನಮ್ಮ ೭೦೦ ಶ್ಲೋಕಗಳ ಗೀತಾಪಾಠದಲ್ಲಿರುವ ಹದಿನೆಂಟು ಅಧ್ಯಾಯಗಳಲ್ಲಿ ನಮಗೆ ಪ್ರಸಕ್ತವಾದುದು 'ಕೃಷ್ಣಾರ್ಜುನಸಂವಾದ' ಅಷ್ಟೇ; ಪುಷ್ಪಿಕೆಯು ಹೇಳಿರುವುದು ಇದನ್ನೇ. ಗೀತೆಯೆಂದರೆ ಕೃಷ್ಣಾರ್ಜುನಸಂವಾದವೇ. ಮಹಾಭಾರತದ ಒಕ್ಕಣೆಯಂತೆ ಇಡೀ ಗೀತೆಯು ಸಂಜಯನ ಮಾತುಗಳೇ ಆದರೂ, ಸಂಜಯನದೇ ಎಂಬಂಥ ಮಾತುಗಳು('ಸಂಜಯ ಉವಾಚ' ಎಂದು ನಿರ್ದಿಷ್ಟವಾಗಿರುವುವು) ಮೊದಲನೆಯ ಅಧ್ಯಾಯದಲ್ಲಿ ಮತ್ತು ಎರಡನೆಯ ಅಧ್ಯಾಯದ ಮೊದಲ ಹತ್ತು ಶ್ಲೋಕಗಳಲ್ಲಿ ಕಾಣಸಿಗುತ್ತವೆ. ಗೀತೆಯ ಉಳಿದ ಭಾಗವೆಲ್ಲ ಕೃಷ್ಣಾರ್ಜುನ ಸಂವಾದವೇ(ಕಡೆಯ ಕೆಲವು ಶ್ಲೋಕಗಳನ್ನು ಬಿಟ್ಟು). ಎರಡನೆಯ ಅಧ್ಯಾಯದ ಹನ್ನೊಂದನೆಯ ಶ್ಲೋಕಕ್ಕೆ 'ಶ್ರೀಭಗವಾನುವಾಚ' ಎಂಬ ನಿರ್ದೇಶನವಿದೆ. ಅಲ್ಲಿಂದ ಮುಂದೇ ದಿಟವಾದ ಗೀತಾಪಾಠ.

ಶಂಕರಾಚಾರ್ಯರಾಗಲಿ ರಾಮಾನುಜಾಚಾರ್ಯರಾಗಲಿ, ಮಧ್ವಾಚಾರ್ಯರಾಗಲಿ ತಂತಮ್ಮ ಗೀತಾಭಾಷ್ಯಗಳನ್ನು ಇಲ್ಲಿಂದಲೇ ಆರಂಭ ಮಾಡಿರುವುದನ್ನು ಗಮನಿಸಬೇಕು. ಹಿಂದಿನ ಎಲ್ಲ ಶ್ಲೋಕಗಳನ್ನೂ ಆಚಾರ್ಯರು ಕೈಬಿಟ್ಟಿದ್ದಾರೆ.

ಆದ್ದರಿಂದ ಗೀತೆಯ ಉಪಕ್ರಮ 'ಅಶೋಚ್ಯಾನನ್ವಶೋಚಸ್ತ್ವಂ' ಎಂಬ ಶ್ಲೋಕದಿಂದಲೇ(೨,೧೧). ಗೀತೆಯ ಶಾಸ್ತ್ರಭಾಗ ಮೊದಲಾಗುವುದು ಇಲ್ಲಿಯೇ.

ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ ।
ಗತಾಸೂನಗತಾಸೂಂಶ್ಚ ನಾನುಶೋಚಂತಿ ಪಂಡಿತಾಃ ॥

"ಯಾರಿಗಾಗಿ ಶೋಕಪಡುವುದು ಸಲ್ಲದೋ ಅಂಥವರಿಗಾಗಿ ಶೋಕ ಪಡುತ್ತಿರುವೆ; ಮತ್ತೆ ಬುದ್ಧಿವಂತನಂತೆ ಮಾಡನಾಡುವೆ! ಬುದ್ಧಿವಂತರಾದ ವರು ಇರುವವರಿಗಾಗಿ ಅಥವಾ ಹೋದವರಿಗಾಗಿ ಶೋಕಪಡುವುದಿಲ್ಲ". ಇಲ್ಲಿಂದ ಮೊದಲಾದ ಭಗವಂತನ ಮಾತು ನಿರ್ಣಾಯಕವಾಗಿ, ಸಹಜ-ವಾಗಿ ಮುಗಿಯುವುದು ಹದಿನೆಂಟನೆಯ ಅಧ್ಯಾಯದ ಅರವತ್ತಾರನೆಯ ಶ್ಲೋಕದಲ್ಲಿ –

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥

"ಎಲ್ಲ ಧರ್ಮಗಳನ್ನೂ ಕೈಬಿಟ್ಟು ನನ್ನೊಬ್ಬನಲ್ಲಿ ಶರಣುಹೋಗು; ನಾನು ನಿನ್ನನ್ನು ಎಲ್ಲ ಪಾಪಗಳಿಂದಲೂ ಬಿಡುಗಡೆಮಾಡಿಸುವೆನು. ಶೋಕ ಪಡಬೇಡ!" ಶೋಕದ ಪ್ರವೃತ್ತಿಯಿಂದಲೇ ಉಪಕ್ರಮವಾದದ್ದು ಶೋಕದ ನಿರಾಕರಣೆಯಿಂದ ಉಪಸಂಹಾರಗೊಳ್ಳುವುದು ಯುಕ್ತವೇ ತಾನೆ? ಶೋಕ ದಿಂದ ಬಳಲಿರುವರಿಗೆ ಬೇಕಾದುದು ಶೋಕದ ಅಭಾವ. ಇಲ್ಲಿಗೆ ಗೀತಾ-ಶಾಸ್ತ್ರ ಮುಗಿಯಿತು. ಮುಂದೆ ಆರು ಶ್ಲೋಕಗಳು ಫಲಸ್ತುತಿಯಂತೆ ಇರುವುವು. ಅಲ್ಲಿಂದ ಮುಂದೆ ಅರ್ಜುನನ ಮಾತು 'ಶೋಕ ತನ್ನಿಂದ ತೊಲಗಿತು' ಎಂಬ ಸೂಚನೆ. (೧೮, ೭೩ 'ಅರ್ಜುನ ಉವಾಚ'). ಇಲ್ಲಿಗೆ ಕೃಷ್ಣಾರ್ಜುನಸಂವಾದ ಕೊನೆಗೊಳ್ಳುತ್ತದೆ. ಇದಾದೊಡನೆಯೇ ಮತ್ತೆ 'ಸಂಜಯ ಉವಾಚ'; ಐದು ಶ್ಲೋಕಗಳಲ್ಲಿ ಸಂಜಯನು ಈ ಕೃಷ್ಣಾರ್ಜುನ ಸಂವಾದದಿಂದ ತಾನು ಪುಳುಕಿತನಾದದ್ದನ್ನು ತಿಳಿಸುತ್ತಾನೆ.

ಇಡೀ ಮೊದಲನೆಯ ಅಧ್ಯಾಯ (ನಲವತ್ತೇಳು ಶ್ಲೋಕಗಳು) ಮತ್ತು ಎರಡನೆಯ ಅಧ್ಯಾಯದ ಮೊದಲ ಹತ್ತು ಶ್ಲೋಕಗಳಲ್ಲಿ ಗೀತಾತ್ವವೇ ಇಲ್ಲ ಎಂದಾಯಿತು; ಎಂದರೆ ಈ ಭಾಗ ಗೀತೆಯ ಸ್ವರೂಪಕ್ಕೆ ಸೇರಿದ್ದಲ್ಲ. ಆದರೆ ಈ ಭಾಗ ಸಂಪೂರ್ಣವಾಗಿ ಅಪ್ರಸ್ತುತ ಎನ್ನುವಂತಿಲ್ಲ. ರಾಘವೇಂದ್ರ ಸ್ವಾಮಿಗಳು ಈ ಭಾಗದ ಅಗತ್ಯ ಇರುವುದು ಆಕಾಂಕ್ಷಾ-ಪರಿಪೂರಣದಲ್ಲಿ, ಎಂದು ಹೇಳಿದ್ದಾರೆ. ಗ್ರಂಥವನ್ನು ಓದುವವರಿಗೆ ಗ್ರಂಥ ಸಂದರ್ಭದ ವಿಚಾರವಾಗಿ ವಿವರಗಳನ್ನು ತಿಳಿದುಕೊಳ್ಳುವ ಬಯಕೆಯಿರುತ್ತದೆ. ಈ ಉಪದೇಶ ಆದ್ದದು ಎಲ್ಲಿ(ಕುರುಕ್ಷೇತ್ರದಲ್ಲಿ). ಯಾವಾಗ(ಸಮರಕ್ಕೆ ಸಿದ್ಧರಾಗಿದ್ದಾಗ), ಯಾವ ಕಾರಣಕ್ಕಾಗಿ(ಸ್ವಜನರನ್ನು ಕಂಡು ಅರ್ಜುನನಿಗೆ ವಿಷಾದವಾದ್ದರಿಂದ), ಉಪದೇಶ ಮಾಡಿದವರು ಯಾರು (ಕೃಷ್ಣ), ಉಪದೇಶ ಪಡೆದುಕೊಂಡವರು ಯಾರು (ಅರ್ಜುನ), ಈ ಮೊದಲಾದ (ದೇಶ, ಕಾಲ ನಿಮಿತ್ತ, ವಕ್ತೃ, ಶ್ರೋತೃ) ವಿವರಗಳು ಗ್ರಂಥದ ಬೇರೆ ಎಲ್ಲಿಯೂ ದೊರಕುವುದಿಲ್ಲ, ಇದಕ್ಕಾಗಿಯೇ ಮೊದಲನೆಯ ಅಧ್ಯಾಯ ಮತ್ತು ಎರಡನೆಯ ಅಧ್ಯಾಯದ ಮೊದಲ ಹತ್ತು ಶ್ಲೋಕಗಳು ಶಾಸ್ತ್ರಕ್ಕೆ ಉಪೋದ್ಘಾತರೂಪವಾಗಿ ಸೇರಿಕೊಂಡು ಬಂದಿವೆ.

'ಶಾಸ್ತ್ರ' ಎನ್ನುವ ಮಾತು ಗೀತೆಯಲ್ಲೇ ಮೂರು ಬಾರಿ ಬಂದಿದೆ:

(೧) ಗೀತೆಯ ರಹಸ್ಯೋಪದೇಶಕ್ಕೇ ಶಾಸ್ತ್ರವೆಂದು ಹೆಸರು (೧೫, ೨೦, **'ಇತಿ ಗುಹ್ಯತಮಂ ಶಾಸ್ತ್ರಂ ಇದಮುಕ್ತಂ ಮಾಯಾನಘ'**).

(೨) ನಾವು ಮಾಡಬೇಕಾದದ್ದು, ಮಾಡದೆ ಇರಬೇಕಾದದ್ದು, ಇದರ ನಿರ್ಣಯವನ್ನು ಶಾಸ್ತ್ರದ ಆಧಾರದ ಮೇಲೆ ಮಾಡಿಕೊಳ್ಳಬೇಕು (೧೬, ೨೪, **'ತಸ್ಮಾತ್ ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ'**). ಇಲ್ಲಿ ಶಾಸ್ತ್ರವೆಂದರೆ ಧರ್ಮಶಾಸ್ತ್ರ, ಆಚಾರಸಂಹಿತೆ ಎಂಬ ಅರ್ಥ ಹೊರಡುವುದೆಂದು ಕೆಲವರ ಎಣಿಕೆ. ಆದರೆ ಗೀತೆಯಲ್ಲಿ ಮಾಡ-ಬೇಕಾದದ್ದು(ಕಾರ್ಯ) ಎಂದರೆ ಜ್ಞಾನವನ್ನು ಪಡೆದುಕೊಂಡು ಅದರಿಂದ ಕರ್ಮವನ್ನು ಕತ್ತರಿಸುವುದು; ಮಾಡದೆ ಇರಬೇಕಾದದ್ದು (ಅಕಾರ್ಯ) ಎಂದರೆ ಫಲಸಂಗ, ಕರ್ತೃತ್ವಾಭಿಮಾನ. ಇದು ಧರ್ಮ ಶಾಸ್ತ್ರದ ವಿಚಾರವಾಗಲಾರದು; ಅಧ್ಯಾತ್ಮಶಾಸ್ತ್ರಕ್ಕೆ ಸೇರಿದ ವಿಷಯ.

(೩) ಶಾಸ್ತ್ರದ ಕಟ್ಟಳೆಯನ್ನು ಕೈಬಿಟ್ಟು ಮನಸ್ಸಿಗೆ ಬಂದಂತೆ ಇದ್ದರೆ ಸಿದ್ಧಿಯಾಗಲಾರದು(೧೬, ೨೩, **'ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ । ನ ಸ ಸಿದ್ಧಿಮವಾಪ್ನೋತಿ'**). ಇಲ್ಲಿಯೂ ಶಾಸ್ತ್ರವೆಂದರೆ ಧರ್ಮಶಾಸ್ತ್ರವೆಂದು ಹೇಳುವಂತಿಲ್ಲ ಶಾಸ್ತ್ರವೆಂದರೆ ಕಾಮಕಾರಕ್ಕೆ, ಸ್ವಚ್ಛಂದವೃತ್ತಿಗೆ, ಸ್ವೇಚ್ಛಾವಿಹಾರಕ್ಕೆ ವಿರುದ್ಧವಾದುದು. ಇಂದ್ರಿಯ ನಿರೋಧವನ್ನೂ ಮನಸ್ಸಿನ ಏಕಾಗ್ರತೆಯನ್ನೂ ಗೀತೆ ಶಾಂತಿಗೆ ಉಪಾಯವಾಗಿ ಸೂಚಿಸುತ್ತದೆ. ಇದನ್ನೇ ಪುಷ್ಪಿಕೆಯು 'ಯೋಗಶಾಸ್ತ್ರ' ವೆಂದು ನಿರ್ದೇಶಿಸಿರುವುದು. ಇಲ್ಲಿ ಇನ್ನೂ ಒಂದು ವಿವರವನ್ನು ನಾವು ಗಮನಿಸಬೇಕು. ಪುಷ್ಪಿಕೆಯಲ್ಲಿ **'ಬ್ರಹ್ಮವಿದ್ಯಾಯಾಂ ಯೋಗ-ಶಾಸ್ತ್ರೇ** ಎಂಬ ಸಪ್ತಮ್ಯಂತವಾದ ಮಾತುಗಳಿವೆ. ಗೀತೆಯು ಬ್ರಹ್ಮ ವಿದ್ಯೆಯೂ ಹೌದು, ಯೋಗಶಾಸ್ತ್ರವೂ ಹೌದು. ಎರಡೂ ಬೇರೆ ಬೇರೆ ನಿರ್ದೇಶನಗಳು ಎಂದು ವೈಯಧಿಕರಣರೂಪವಾಗಿ ಗ್ರಹಿಸುವುದು ತಪ್ಪು. ಬ್ರಹ್ಮವಿದ್ಯಾಂತರ್ಗತವಾದ ಯೋಗಶಾಸ್ತ್ರವೆಂದು ಸಾಮಾನಾ-ಧಿಕರಣ್ಯದಿಂದ ಗ್ರಹಿಸಿಬೇಕು. ಬ್ರಹ್ಮವಿದ್ಯೆಯೇ ಯೋಗಶಾಸ್ತ್ರ; ಎರಡೂ ಬೇರೆ ಬೇರೆಯಲ್ಲ, ಬ್ರಹ್ಮವಿದ್ಯೆಯಲ್ಲೇ ಯೋಗಶಾಸ್ತ್ರ ಅಡಗಿದೆ.



೪. ಗೀತೆಯಲ್ಲಿರುವ ಅಪೂರ್ವತೆ

ಭಗವದ್ಗೀತೆಯಲ್ಲಿ ಏನಿದೆ? ಭಗವದ್ಗೀತೆಯನ್ನೊಮ್ಮೆ ಓದಿ ಮುಗಿಸಿದರೆ ಮನವರಿಕೆಯಾಗುವುದು ಇದು – ಚೆನ್ನಾಗಿ ಬದುಕಲು ಬೇಕಾದುದೆಲ್ಲ ಇಲ್ಲಿದೆ ಎಂಬುದು. ಚೆನ್ನಾಗಿ ಬದುಕುವುದೆಂದರೆ ಏನು ಎಂಬುದೂ ತಿಳಿಯುತ್ತದೆ. ಚೆನ್ನಾಗಿ ಬದುಕುವುದು ಹೇಗೆ ಎಂಬುದೇ ಗ್ರಂಥದ ಪ್ರಯೋಜನವಿದ್ದಂತೆ ಕಾಣುತ್ತದೆ. ಆದರೆ ಇದೇನು ವೇದಿಕೆಯ ಮೇಲಣ ಪ್ರವಚನದಂತಿಲ್ಲ; ಸಿದ್ಧಾಂತಗಳ ಹೊರೆಯಿರದು. ಕೇವಲ ಪಂಡಿತ ಪರಿಗ್ರಾಹ್ಯವಾದ ಭಾಷೆಯಲ್ಲೂ ಗ್ರಂಥವಿಲ್ಲ. ಇಲ್ಲಿ ಕಾಣಸಿಗುವ ತಿಳಿವಳಿಕೆಯೆಲ್ಲ ಸರಳವಾದ ಆಡುಮಾತುಗಳಲ್ಲಿ ವ್ಯವಹಾರದ ಮಾತು-ಕತೆಯ ರೂಪದಲ್ಲಿ, ನೇರವಾದ ನಿರೂಪಣೆಯಲ್ಲಿ ಮೂಡಿಬಂದಿದೆ. ಇಲ್ಲಿನ ಸಂವಾದವೂ ಗುರು-ಶಿಷ್ಯರ ನಡುವೆ ಆದದ್ದಲ್ಲ; ಸ್ನೇಹಿತರಿಬ್ಬರ ಸಂಭಾಷಣೆ. ಬದುಕಿನ ಬವಣೆಗಳಿಗೆ ಮನಸ್ಸು ಮುದುಡಿಕೊಳ್ಳದೆ, ಗುಂಡಿಗೆ ಸೊರಗದೆ, ಮನುಷ್ಯ ಗೆಲುವಾಗಿರುವುದು ಹೇಗೆಂಬುದನ್ನು ತಿಳಿಸುವುದೇ ಗೀತೆಯ ಉದ್ದೇಶ.

ಭಗವದ್ಗೀತೆಯಲ್ಲಿ ಏನಿಲ್ಲ? ನಮಗೆ ಇಂದು ಪರಿಚಿತವಾಗಿರುವ ಆರು ದರ್ಶನಗಳ ಪ್ರಸ್ತಾಪವೇ ಇಲ್ಲಿಲ್ಲ, ನಾಲ್ಕು ಆಶ್ರಮಗಳ ಸೋಲ್ಲೂ ಇಲ್ಲ. ಜಾತಿ ವ್ಯವಸ್ಥೆಯ ಉಲ್ಲೇಖ ಒಂಡೆರಡು ಕಡೆ ಬಂದಿದ್ದರೂ ಅದು ತೀರ ಗೌಣ. ಅಪ್ರಸ್ತುತ ಪ್ರಸಂಗ ಎಂಬಂತೆಯೇ ಯಜ್ಞದ ಹೆಗ್ಗಳಿಕೆಯನ್ನು ಹೇಳಿದ್ದರೂ ಅದು ಕರ್ಮಕಾಂಡದ ನೆಲೆಯಲ್ಲಲ್ಲ; ಬದುಕೇ ಒಂದು ಯಜ್ಞ ಎಂಬರ್ಥದಲ್ಲಿ ಆಚಾರ ಸಂಹಿತೆಯ ಧ್ವನಿಯಿದ್ದರೂ ಯಾವ ಪಂಗಡದ, ಪಂಥದ ಧೋರಣೆಯೂ ಕಾಣಸಿಗದು. ವೈದಿಕಸಂಪ್ರದಾಯವನ್ನು ಸಮರ್ಥಿಸಿರುವುದಾಗಲಿ ಅವೈದಿಕ ಸಂಪ್ರದಾಯವನ್ನು ನಿಂದಿಸಿರುವುದಾಗಲಿ ಎಲ್ಲಿಯೂ ಇಲ್ಲ. ಇನ್ನು ನಮ್ಮಲ್ಲಿ ಇಂದು ಬಳಕೆಯಲ್ಲಿರುವ ದೇವತಾಮೂರ್ತಿಗಳಾಗಲಿ ಗುಡಿಗುಂಡಾರಗಳಾಗಲಿ ಆಗಮೋಕ್ತ ಪೂಜೆ ಪುನಸ್ಕಾರಗಳಾಗಲಿ ತೀರ್ಥಯಾತ್ರೆಯಾಗಲಿ, ವ್ರತ, ನೋಂಪಿ ಮೊದ-ಲಾದುವುಗಳಾಗಲಿ ಭಗವದ್ಗೀತೆಯಲ್ಲೆಲ್ಲೂ ಕಾಣಸಿಗುವುದಿಲ್ಲ.

ಉಪನಿಷತ್ತುಗಳಿಂದ ಈ ಗ್ರಂಥ ಪ್ರಭಾವಿತವಾಗಿರುವುದನ್ನು ನಾವು ಊಹಿಸಬಹುದಾದರೂ ಗ್ರಂಥದಲ್ಲೇ ಯಾವ ಉಪನಿಷತ್ತಿನ ಉಲ್ಲೇಖವೂ

ಇರದು. ಇದರ ವರ್ಣನೆ ಯೋಗಶಾಸ್ತ್ರವೆಂದಿದ್ದರೂ ನಮಗಿಂದು ತಿಳಿದಿರುವ ಯಾವ ಯೋಗಸಾಧನಾಪ್ರಕಾರದ ನಿರ್ದಿಷ್ಟ ಆಕರವಾಗಲಿ ಅನ್ವಯವಾಗಲಿ ಇಲ್ಲಿ ಇರದು. ಗ್ರಂಥದ ಪುಷ್ಪಿಕೆಯಲ್ಲಿ ಬ್ರಹ್ಮವಿದ್ಯೆಯೆಂಬ ನಿರ್ದೇಶನವಿದೆಯಾದರೂ, ವೇದಾಂತದ ಕ್ರಮವರಿತ ನಿರೂಪಣೆಯನ್ನಿಲ್ಲಿ ಕಾಣಲಾರೆವು. ಶಾಸ್ತ್ರಗ್ರಂಥವೆಂದು ಭಾಷ್ಯಕಾರರೆಲ್ಲ ಗ್ರಹಿಸಿದ್ದರೂ ಶಾಸ್ತ್ರದ ಯಾವ ಪ್ರಕ್ರಿಯೆಯೂ(ಸರ್ವತಂತ್ರಸಿದ್ಧಾಂತ-ಪ್ರತಿತಂತ್ರಸಿದ್ಧಾಂತ, ಉದ್ದೇಶ-ಲಕ್ಷಣ-ಪರೀಕ್ಷಾ, ಪೂರ್ವಪಕ್ಷ-ಸಮಾಧಾನ, ಖಂಡನ-ಮಂಡನ, ಸಂಶಯ-ಪರಿಹಾರ-ಸಿದ್ಧಾಂತ ಮೊದಲಾದವು) ನಮಗಿಲ್ಲಿ ಕಾಣಸಿಗುವುದಿಲ್ಲ. 'ಸಂನ್ಯಾಸ' ಎಂಬ ಮಾತಿನ ಬಳಕೆ ಇಲ್ಲಿ ವಿಶೇಷವಾಗಿ ಇದೆಯಾದರೂ ನಮ್ಮ ಇಂದಿನ ಆಶ್ರಮ-ಸಂನ್ಯಾಸದ ಕಲ್ಪನೆ ರವೆಯಷ್ಟೂ ಇರದು.

ಗೀತೆಯನ್ನು ಹೇಳಿದ ಕೃಷ್ಣ, ಕೇಳಿದ ಅರ್ಜುನ ಇಬ್ಬರೂ ಗೃಹಸ್ಥರೇ; ಗೃಹಸ್ಥರಾಗಿಯೇ ಉಳಿದವರು, ತೀರಿಕೊಂಡವರು. ಇಬ್ಬರೂ ಕ್ಷತ್ರಿಯರು; ಕೃಷ್ಣನಂತೂ ಮೊದಲಿಗೆ ಶೂದ್ರನಾಗಿದ್ದವನು ಆನಂತರ ಕ್ಷತ್ರಿಯನೆಂದು ಪರಿಗಣಿತನಾದವನು. ಅವರು ಬ್ರಾಹ್ಮಣ್ಯವೆಂಬ ಸಾಮಾಜಿಕ ವ್ಯವಸ್ಥೆಗೆ ಸೇರದೆ ಇದ್ದವರು. ಹಾಗಾಗಿ ಅವರಿಗೆ ವೇದಾಧ್ಯಯನದಲ್ಲಿ, ಕರ್ಮಕಾಂಡ ದಲ್ಲಿ, ಬ್ರಹ್ಮಜ್ಞಾನದಲ್ಲಿ ಸಹಜವಾದ ಒಲವೇನು ಇದ್ದಿರಲಾರದು, ಎಂದ ಮೇಲೆ ಕೃಷ್ಣನ ಅಧ್ಯಾತ್ಮ ಉಪದೇಶ, ಅರ್ಜುನನ ಜಿಜ್ಞಾಸೆ ಎರಡೂ ಲೋಕವ್ಯವಸ್ಥೆಯಲ್ಲಿ ಸೋಜಿಗವಾದುವೇ. ಆದರೆ ಇಬ್ಬರೂ ದಿಟವಾದ ಅರ್ಥದಲ್ಲಿ ಮನುಷ್ಯರಾಗಿದ್ದುದರಿಂದ, ಮನುಷ್ಯಸಹಜವಾದ ಉದಾತ್ತ ನೆಲೆಯ ಸಂವಾದ ಅವರಿಬ್ಬರ ನಡುವೆ ನಡೆಯಿತು. ಮನುಷ್ಯಮಾತ್ರ ದವರಿಗೆ ಪ್ರಸಕ್ತವಾದ ವಿಚಾರವಾಗಿ ನಡೆದದ್ದು ಅವರಿಬ್ಬರ ಮಾತುಕತೆ. ಮೇಲಾಗಿ, ಹೇಳುವವನಿಗೆ ತಾನು ಹೇಳಿದ್ದೇ ಸರಿಯೆಂಬ ಹಟವಿರಲಿಲ್ಲ; ಕೇಳುವವನು ತಾನು ತೋರಿಸಿದ ದಾರಿಯಲ್ಲೇ ನಡೆಯಬೇಕೆಂಬ ಆಗ್ರಹವಾಗಲಿ ಹೇಳಿದವನಿಗೆ ಇರಲಿಲ್ಲ. ಗ್ರಂಥ ಮುಗಿಯುವುದು – 'ನಾನು ಹೇಳಿದುದನ್ನೆಲ್ಲ ಚೆನ್ನಾಗಿ ವಿಚಾರಮಾಡಿನೋಡು; ನಿನಗೆ ಸರಿಯೆಂದು ತೋರಿದ ರೀತಿಯಲ್ಲಿ ನಡೆದುಕೋ!' ಎಂಬ ಮಾತಿನಿಂದ (೧೮, ೬೩ **'ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು'**).

ಭಗವದ್ಗೀತೆಯ ಸ್ವಾರಸ್ಯವಿರುವುದೇ ಇಲ್ಲಿ. ಪರಮಾರ್ಥವನ್ನು ಪಡೆದು ಕೊಳ್ಳಲು ಇರುವುದು ಒಂದೇ ದಾರಿಯಲ್ಲ; ಅವರವರು ತಮತಮಗೆ ರುಚಿಸಿದ ದಾರಿಗಳನ್ನು ಹಿಡಿದುಕೊಳ್ಳಲಿ, ಪರಮಾರ್ಥ ದೊರಕುವು ದಂತೂ ದಿಟ ಎಂಬುದು ಭಗವದ್ಗೀತೆಯ ನಿಲುವು. **'ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ'** ಎನ್ನುವ ಮಾತು ಭಗವದ್ಗೀತೆ ಯದೇ. ಪರಮಾರ್ಥದ ಸ್ವರೂಪವು ಸಾಧನೆಗನುಗುಣವಾಗಿ ತೋರಿ ಕೊಳ್ಳುತ್ತದೆ. ಸಿದ್ಧಾಂತ ಏನಾದರಾಗಲಿ, ಸಾಧನೆ ಯಾವುದಾಗಿರಲಿ ಮುಟ್ಟುವ ಪರಮಾರ್ಥ ಒಂದೇ. ಅದು ನಿರಾಕಾರ, ನಿರ್ಗುಣ; ಇಂದ್ರಿಯ ಗಳಾಗಲಿ ಮನಸ್ಸಾಗಲಿ ಅದನ್ನು ಹಿಡಿಯಲಾರದು. ಅದನ್ನು ಹಾಗೆ, ಹೀಗೆ ಎಂದು ಬಣ್ಣಿಸುವುದಾಗದು. ದಾರಿ ಯಾವುದಾಗಿರಲಿ ಗುರಿ ಒಂದೇ; ಬೇರೆ ಬೇರೆ ದಾರಿಗಳಿಗೆ ಬೇರೆ ಬೇರೆ ಗುರಿಗಳು ಎಂಬುದು ಪರಮಾರ್ಥಕ್ಕೆ ಸಲ್ಲುವ ಮಾತಲ್ಲ.

ಇಂಥ ಪರಮಾರ್ಥತತ್ವವನ್ನು ಮನವರಿಕೆಮಾಡಿಕೊಡುವುದು. ಬ್ರಹ್ಮ-ವಿದ್ಯೆ. ಈ ತತ್ತ್ವಸಾಕ್ಷಾತ್ಕಾರವನ್ನು ಗೀತೆಯ ಬ್ರಹ್ಮ(೫, ೬), ಬ್ರಹ್ಮಸಂಸ್ಥೆ, ಬ್ರಹ್ಮನಿರ್ವಾಣ(೫, ೨೫), ಬ್ರಹ್ಮಭೂಯ(೧೪, ೨೬), ಬ್ರಹ್ಮಗಮನ(೪, ೩೧, ೫, ೬; ೪, ೨೪), ಬ್ರಹ್ಮಸಂಪತ್ತಿ(೧೩, ೩೧), ಬ್ರಹ್ಮಸಂಸ್ಪರ್ಶ(೬, ೨೮), ಬ್ರಾಹ್ಮೀಸ್ಥಿತಿ(೨, ೭೨), ಎಂದು ಮೊದಲಾಗಿ ಕರೆಯುತ್ತದೆ; ಬ್ರಹ್ಮಾತ್ಮಭಾವ, ಬ್ರಹ್ಮಭಾವ(೬, ೨೭) ಪರಂಸ್ಥಾನ, ಅಮೃತತ್ವ(೨, ೧೫) ಅನಾಮಯಪದ (೨, ೫೧), ಅಕ್ಷಯಸುಖ(೫, ೨೧), ಸಂಸಿದ್ಧಿ(೮, ೧೫), ಭೂತಪ್ರಕೃತಿ ಮೋಕ್ಷ(೧೩, ೩೪), ಶಾಂತಿ(೨, ೭೦; ೨, ೭೧; ೪, ೩೯; ೫, ೧೨; ೫, ೨೯; ೬, ೧೫) ಇವೆಲ್ಲ ಗೀತೆ ತೋರಿಸುವ ಗುರಿಯ ಹೆಸರುಗಳೇ, ಗೀತೆ-ಯಲ್ಲೆಲ್ಲೂ ಪರಮಾರ್ಥವನ್ನು ಸ್ವರ್ಗ, ವೈಕುಂಠ, ಕೈಲಾಸ, ಸತ್ಯಲೋಕ ಎಂದು ಕಾಣಿಸಿಲ್ಲ.

ಮೇಲಾಗಿ, ದೇಹ ಬಿದ್ದಮೇಲೆ ಪಡೆದುಕೊಳ್ಳಬಹುದಾದ ವಿದೇಹ ಮುಕ್ತಿಯನ್ನು ಗೀತೆ ಒತ್ತಿ ಹೇಳುವುದಿಲ್ಲ. ಇಲ್ಲಿಯೇ, ಈಗಲೇ, ಬದುಕಿರು ವಾಗಲೇ, ದೇಹವಿರುವಾಗಲೇ ಜೀವನ್ಮುಕ್ತನಾಗುವುದನ್ನು ಸ್ಥಿತಪ್ರಜ್ಞಸ್ಥಿತಿ ಯೆಂದು ಹೊಗಳಿದೆ(೨, ೫೫ರಿಂದ ಮುಂದೆ) **'ಪ್ರಾಕ್ ಶರೀರವಿಮೋಕ್ಷ ಣಾತ್'**("ಶರೀರ ಬಿದ್ದುಹೋಗುವ ಮೊದಲೇ") ಎಂಬ ಸ್ಪಷ್ಟವಾದ

ಮಾತುಗಳೇ ಇವೆ. ಅಲ್ಲದೆ, ಗೀತೆಯಲ್ಲಿ ಉಪೇಯವಾದ ಮೋಕ್ಷದ ವಿಚಾರ (ಸ್ವರೂಪ ಮುಂತಾಗಿ) ಅಷ್ಟಾಗಿ ಪ್ರಧಾನವಾಗಿ ಬರುವುದೇ ಇಲ್ಲ. ಗೀತೆಯ ಗಮನವೆಲ್ಲ ಇರುವುದು ಉಪಾಯವಾದ ಯೋಗವನ್ನು ಕುರಿತು. ಬದುಕಿಗೇ ಗೀತೆಯ ಉಪದೇಶದ ಅನ್ವಯ ಇರುವುದು. ಬದುಕುವುದೆಲ್ಲ ಮೋಕ್ಷಕ್ಕಾಗಿಯೇ ಎಂಬುದು ಗೀತೆಯ ಕಲ್ಪನೆಯಲ್ಲ; ಚೆನ್ನಾಗಿ ಬದುಕಿದರೆ ಅದು ಮೋಕ್ಷಕ್ಕೆ ಸಮನಾದುದೇ ಎಂದು ಗೀತೆ ಹೇಳುತ್ತದೆ.

ಶರೀರ, ಇಂದ್ರಿಯಗಳು. ಮನಸ್ಸು ಇವೆಲ್ಲ ಬದುಕಿಗೆ ಹೊರೆಗಳಲ್ಲ, ಆತಂಕಗಳಲ್ಲ. ಅವನ್ನು ಸರಿಯಾಗಿ ಬಳಸಿಕೊಂಡರೆ ಮೋಕ್ಷಕ್ಕೆ ನೆರವಾದಾವು. ಹೀಗೆ ಅವನು ಮೋಕ್ಷಕ್ಕೆ ನೆರವಾಗುವಂತೆ ಬಳಸಿಕೊಳ್ಳುವ ಉಪಾಯವೇ ಯೋಗ. ಗೀತೆಯ ಹೆಚ್ಚುಗಾರಿಕೆಯಿರುವುದು ಹೀಗೆ ಜೀವನೋಪಯೋಗಿಯಾದ ಯೋಗವನ್ನು ತಿಳಿಯಹೇಳುವುದರಲ್ಲಿಯೇ. ಇದರ ಮುಖ್ಯ ಉದ್ದೇಶವೇ ಯೋಗದ ನಿರೂಪಣೆ. ಹಾಗೆಂದೇ ಅದರ ಒಂದೊಂದು ಅಧ್ಯಾಯವೂ ಒಂದೊಂದು ಬಗೆಯ ಯೋಗವೆಂದು ಹೆಸರಾಗಿದೆ. ಗೀತೆಯ ಕೃಷ್ಣ ಯೋಗೇಶ್ವರನಲ್ಲವೆ?

ಈ ಚೌಕಟ್ಟಿನಲ್ಲಿ ವೈರಾಗ್ಯ, ತ್ಯಾಗ, ಸಂನ್ಯಾಸ ಎನ್ನುವ ಮಾತುಗಳಿಗೆ ಸಾಮಾನ್ಯವಾಗಿ ಬದುಕಿನಿಂದ ದೂರವಾಗುವ ಅರ್ಥವಿರದು. ದಿನನಿತ್ಯದ ಬದುಕಿನಲ್ಲೇ ಅವಕ್ಕೆ ತಾತ್ಪರ್ಯ, ಬೆಲೆ. ಊರನ್ನು ಬಿಟ್ಟು ಕಾಡಿಗೆ ಓಡಿ ಹೋಗುವುದು ವಿರಕ್ತಿಯಲ್ಲ; ಹೆಂಡತಿ ಮಕ್ಕಳನ್ನು ಕೈಬಿಡುವುದು ತ್ಯಾಗವಲ್ಲ; ಸಂಸಾರವನ್ನು ತೊರೆಯುವುದು ಸಂನ್ಯಾಸವಲ್ಲ. ಇದನ್ನು ಗೀತೆ ಸ್ಪಷ್ಟಪಡಿಸುತ್ತದೆ. ವೈರಾಗ್ಯವೆಂದರೆ ಭೋಗದ ನಿರಾಕರಣೆಯಲ್ಲ; ಭೋಗ-ದಲ್ಲಿ ಸಂಯಮ. ಕರ್ಮವನ್ನೇ ಕೈಬಿಡುವುದು ತ್ಯಾಗವಲ್ಲ; ಕರ್ಮದಲ್ಲಿ ತೊಡಗಿದ್ದು ಫಲಾಕಾಂಕ್ಷೆಯನ್ನು ಬಿಡುವುದೀಗ ತ್ಯಾಗ; ಅಭಿಮಾನ, ಸಂಕಲ್ಪಗಳನ್ನು ಮನಸ್ಸಿನಿಂದ ತೊಲಗಿಸಿಕೊಂಡರೆ ಅದು ಸಂನ್ಯಾಸ.

ಹಾಗೆಯೆ ಯಜ್ಞವೆಂಬ ಮಾತನ್ನೂ ಯಜ್ಞದ ಕಲ್ಪನೆಯನ್ನೂ ಗೀತೆ ಹಾಡಿಹೊಗಳಿದೆ. ಆದರೆ ಇದು ಕರ್ಮಕಾಂಡದ ಯಜ್ಞವಲ್ಲ, ದ್ರವ್ಯಯಜ್ಞ, ತಪೋಯಜ್ಞ, ಇಂದ್ರಿಯಯಜ್ಞ, ಪ್ರಾಣಯಜ್ಞ, ಆತ್ಮಸಂಯಮಯಜ್ಞ, ಜಪ ಯಜ್ಞ, ಜ್ಞಾನಯಜ್ಞ ಮೊದಲಾದ ಅನೇಕ ಯಜ್ಞಗಳಿವೆ(೪, ೨೪-೩೩).

ಯಜ್ಞದಲ್ಲಿ ಮುಖ್ಯವಾದ ವಿವರ, ತನ್ನದೆಂದು ಭಾವಿಸಿಕೊಂಡಿದ್ದನ್ನು ತನ್ನದಲ್ಲವೆಂದು ('ನ ಮಮ') ಸಂಕಲ್ಪಿಸಿಕೊಳ್ಳುವುದು. ತ್ಯಾಗಬುದ್ಧಿಯಿಂದ ಮಾಡುವ ಕೆಲಸವೆಲ್ಲ ಯಜ್ಞವೇ. ಯಜ್ಞದಲ್ಲಿ ಸಾರಭೂತವಾದ ವಿವರ ಸಂಕಲ್ಪತ್ಯಾಗ. ಈ ಮನೋವೃತ್ತಿಯಿಲ್ಲದೆ ನಾನು, ನನ್ನದು, ನನಗೆ ಎಂದು ಯಾವ ಕೆಲಸವನ್ನು ಮಾಡಿದರೂ, ಮಾಡಿದ ಕೆಲಸ ಬಂಧನಕ್ಕೆ ಕಾರಣವಾಗುತ್ತದೆ; ಆದರೆ ನಾನು, ನನ್ನದು ಎಂಬ ಅಭಿಮಾನ-ಸಂಗಗಳಿಲ್ಲದೆ ಮಾಡಿದರೆ ಕೆಲಸವು ಯಜ್ಞವಾಗುತ್ತದೆ. ಈ ಬಗೆಯ ಸ್ವಾರ್ಥತ್ಯಾಗವೂ ಯಜ್ಞಾರ್ಥ; ಆ ಕೆಲಸ ಬಂಧಕವಾಗುವುದಿಲ್ಲ. ಈ ಮನೋವೃತ್ತಿಯಿಂದ ಕೆಲಸಮಾಡಿದರೆ ಅದು ಜ್ಞಾನದಲ್ಲಿ(ಆತ್ಮಜ್ಞಾನದಲ್ಲಿ) ಮುಗಿಯುತ್ತದೆ; ಜ್ಞಾನಕ್ಕೆ ಕಾರಣವಾಗುತ್ತದೆ. ಈ ದೃಷ್ಟಿಯಿಂದ ಜ್ಞಾನಯಜ್ಞ ಎಂದರೆ ಜ್ಞಾನ ಸಂಪಾದನರೂಪವಾದ ಯಜ್ಞ, ಶ್ರೇಷ್ಠವಾದುದು(೪, ೩೨-೩೩).

ಕರ್ಮಕಾಂಡದ ಯಜ್ಞವಾದರೋ ಕಾಮನೆಗಳಿಗೆ ಸೀಮಿತವಾದುದು. ಪರಿಕರಗಳನ್ನು ಆಶ್ರಯಿಸಿರುವುದು, ದೀಕ್ಷಾದಿ ವಿಧಿಗಳನ್ನು ಆಪೇಕ್ಷಿಸುವಂಥದು. ಗೀತೆಯ ಯಜ್ಞ ಈ ಬಗೆಯದಲ್ಲ. ಏನನ್ನು ಸಂಕಲ್ಪತ್ಯಾಗದಿಂದ ಮಾಡಿದರೂ, ಅದು ಯಜ್ಞವೇ. ಹಾಗೆಯೇ ಕರ್ಮಕಾಂಡದಲ್ಲಿ ಕರ್ಮವೆಂದರೆ ವಿಧಿಯುಕ್ತವಾದ(ಬ್ರಾಹ್ಮಣಗ್ರಂಥಗಳಲ್ಲಿ ಹೇಳಿರುವ ನಿತ್ಯ, ನೈಮಿತ್ತಿಕ, ಕಾಮ್ಯ) ಅನುಷ್ಠಾನಗಳು. ಗೀತೆಯಲ್ಲಿಯಾದರೋ ಕರ್ಮ-ವೆಂದರೆ ಕೆಲಸ. ಯಾವ ಕೆಲಸವಾದರೂ ಸರಿಯೆ, ಮೈ-ಮಾತು-ಮನಸ್ಸುಗಳಿಂದ ನಡೆಯುವುದೆಲ್ಲ ಕರ್ಮವೇ. ಹಾಗೆ ನೋಡಿದರೆ, ಕರ್ಮ ಮಾಡದೆ ಒಂದು ಗಳಿಗೆಯಾದರೂ ಇರುವುದಾಗದು. ಜ್ಞಾನಕ್ಕಾಗಿ ಮಾಡುವ ಯಾವುದೇ ಕೆಲಸವಾದರೂ ಅದು ಯಜ್ಞವೇ. ಬದುಕೇ ಒಂದು ಯಜ್ಞ. **'ಜೀವಯಾಜಂ ಯಜತೇ'** ಎನ್ನುವ ಋಗ್ವೇದದ ಮಾತನ್ನು ನೆನಪಿಗೆ ತರುತ್ತದೆ. ಮಾಡುವ ಕೆಲಸವೆಲ್ಲ ಯಜ್ಞ; ಮನುಷ್ಯ ದೇಹವೇ ಯಜ್ಞಶಾಲೆ.

ಹೀಗೆ ಗೀತೆಯು ಕರ್ಮ, ಯಜ್ಞ, ಯೋಗ, ಸಂನ್ಯಾಸ ಮೊದಲಾದ ಬಳಕೆಯ ಮಾತುಗಳಿಗೆಲ್ಲ ಹೊಸ ತಿರುವನ್ನು ನೀಡುತ್ತದೆ. ಹೊಸದೆಂದರೆ ಕರ್ಮಕಾಂಡದ ಚೌಕಟ್ಟಿಗೆ ಹೊಸತು ಅಷ್ಟೆ; ಇವೆಲ್ಲ ಸಾಂಪ್ರದಾಯಿಕವಾದ ವೈದಿಕ ಪ್ರತಿಮೆಗಳೇ. ಕಾಲದೇಶಾಧೀನವಾಗಿ ಸಂಕುಚಿತ ಅರ್ಥವನ್ನು

ಪಡೆದುಕೊಂಡು ಸಾರ್ಥಕತೆಯನ್ನು ಕಳೆದುಕೊಂಡಿದ್ದ ಕಲ್ಪನೆಗಳಿಗೆ ಮತ್ತೆ ವಿಶಾಲವಾದ, ವ್ಯಾಪಕವಾದ ಸಾರ್ವಜನೀನವಾದ ಅರ್ಥವನ್ನು ತುಂಬಿಸಿ ಅವನ್ನು ಸಂಸ್ಕೃತಿ ಸಂದರ್ಭದಲ್ಲಿ ಪುನಶ್ಚೇತನಗೊಳಿಸಿದ್ದು ಗೀತೆಯಲ್ಲಿನ ಅಪೂರ್ವತೆ.

ಇನ್ನೂ ಒಂದು ವಿವರವನ್ನು ಇಲ್ಲಿ ಗಮನಿಸಬೇಕು. ಕರ್ಮಕಾಂಡದಲ್ಲಿ ಕರ್ಮ, ಉಪಾಸನಾಕಾಂಡದಲ್ಲಿ ಉಪಾಸನೆ, ಜ್ಞಾನ ಕಾಂಡದಲ್ಲಿ ಜ್ಞಾನ ಇವು ಮುಖ್ಯವಷ್ಟೆ? ಜ್ಞಾನವೇ ಕಟ್ಟಕಡೆಯ ನೆಲೆ ಎಂಬ ಕಲ್ಪನೆ ಹರಡಿ ಕೊಂಡು, ಮುಂದಿನ ಹಂತ ಮೋಕ್ಷವೇ, ಸಂಸಾರದಿಂದ ವಿಮೋಚನೆಯೇ ಎಂಬುದು ದರ್ಶನಕ್ಷೇತ್ರದಲ್ಲಿ ಬೇರೂರಿಕೊಂಡಿದ್ದಾಗ, ಜ್ಞಾನಿಯಾದವ ನಿಗೂ ಒಂದು ಕರ್ತವ್ಯವಿದೆ ಎಂದು ಗೀತೆ ಕಾಣಿಸಿತು. ಅದು ಲೋಕಸಂಗ್ರಹದ ದೃಷ್ಟಿ(೩, ೨೦). ಜ್ಞಾನಿಯಾದವನೂ ಕೂಡ, ಜನಕಾದಿ ಗಳಂತೆ, ಜನರ ನಡುವೆಯೇ ಇದ್ದು, ತಂತಮ್ಮ ಕೆಲಸಗಳನ್ನು ಮಾಡುತ್ತಲೇ ಇದ್ದು, ಸಂಸಾರದಲ್ಲೇ ತೊಡಗಿದ್ದು ಜನರನ್ನು ಮೇಲೆತ್ತಲು, ಅವರಿಗೆ ಸರಿಯಾದ ದಾರಿ ತೋರಲು ಹೆಣಗಬೇಕು.

ಇದನ್ನು ಗೀತೆ 'ಲೋಕ ಸಂಗ್ರಹ' ಎಂದು ಕರೆದಿದೆ. ಲೋಕವೆಂದರೆ ಜನರು; ಸಂಗ್ರಹವೆಂದರೆ ಅವರು ಅಡ್ಡದಾರಿ ಹಿಡಿಯದಂತೆ ಮಾಡುವುದು. ಎಂದರೆ ಈಗಿನ ಲೋಕಕಲ್ಯಾಣವೆಂಬ ಕಲ್ಪನೆ. ಈ ದೃಷ್ಟಿಯನ್ನಾಗಲಿ ನಾವು ಸಂಪ್ರದಾಯದ ಕರ್ಮಕಾಂಡ, ಜ್ಞಾನಕಾಂಡ ಗಳಲ್ಲಿ ಕಾಣಲಾರೆವು. ಆದರೆ ಋಗ್ವೇದದಲ್ಲೇ ಇದು ಇದೆ, ಋಗ್ವೇದ ಮುಗಿಯುವುದೇ **'ಯಥಾ ವಃ ಸುಸಹಾಸತಿ'** ಎನ್ನುವ ಮಾತಿನಿಂದ. ಋಷಿಗಳಿಗೆ ಲೋಕೋಪಕಾರದ ಕಲ್ಪನೆಯಿರದಿದ್ದರೆ ವೇದ ಹೊರ ಬರುತ್ತಲೇ ಇರಲಿಲ್ಲ. ಗೀತೆಯ ಆಚಾರ್ಯನೂ ಜ್ಞಾನಿಯಾಗಿ ಜೀವನ್ಮುಕ್ತ ನಾಗಿದ್ದರೂ ಗೀತೋಪದೇಶ ಮಾಡಿದ್ದು ಲೋಕಸಂಗ್ರಹದ ಉದ್ದೇಶ ದಿಂದಲೇ. ಜ್ಞಾನಿಗೆ ಲೋಕಸಂಗ್ರಹವನ್ನು ಬಿಟ್ಟು ಬೇರೆ ಕರ್ತವ್ಯವಿರದು.

ಮಹಾಭಾರತದ ಶಾಂತಿಪರ್ವದಲ್ಲಿ, ಹೀಗೆ ಯಾವುದು ಎಲ್ಲರಿಗೂ ಹಿತವನ್ನುಂಟುಮಾಡುವುದೋ ಅದೇ ಸತ್ಯವೆನಿಸಿಕೊಳ್ಳುತ್ತದೆ ಎಂಬ ಮಾತಿದೆ – **ಯಲ್ಲೋಕಹಿತಮತ್ಯಂತಂ ತತ್ಸತ್ಯಮಿತಿ ನಃ ಶ್ರುತಂ ।**

ಎಂದರೆ ಲೋಕಸಂಗ್ರಹವೆಂಬುದು ಆತ್ಮಸಾಕ್ಷಾತ್ಕಾರದ ಇನ್ನೊಂದು ಮುಖ. ಸಾಮಾಜಿಕ ಪ್ರಸಕ್ತಿಗಿಂತ ಅದರಲ್ಲಿ ಅಧ್ಯಾತ್ಮತಾತ್ಪರ್ಯವೇ ಮುಖ್ಯವಾಗಿರಬೇಕು. ಅದು ಸ್ವಧರ್ಮವೆಂದಾದರೇನೇ ಅದರ ಸಾರ್ಥಕತೆ. ಇದು ಗೀತೆಯ ದೃಷ್ಟಿ.

ಲೋಕಸಂಗ್ರಹದಂತೆಯೇ ಯೋಗ, ಭಕ್ತಿ ಎಂಬೆರಡು ಕಲ್ಪನೆಗಳೂ ಗೀತೆಯಲ್ಲಿ ಹೊಸ ಆಯಾಮದಲ್ಲಿ ಕಂಡುಕೊಳ್ಳುತ್ತವೆ. ಭಕ್ತಿಯ ವಿವರಣೆಯಂತೂ ಅಪೂರ್ವತೆಯ ನಿದರ್ಶನವೇ. ಪ್ರಸ್ಥಾನತ್ರಯದಲ್ಲಿ ಈ ಉಪಾಯವು ಕಂಡುಬರುವುದು ಗೀತೆಯಲ್ಲಿಯೇ; ಹತ್ತು ಉಪನಿಷತ್ತುಗಳಲ್ಲಾಗಲಿ ವೇದಾಂತ ಮೀಮಾಂಸಾ ಸೂತ್ರದಲ್ಲಿಯಾಗಲಿ ಭಕ್ತಿಯ ವಿಚಾರ ಎದ್ದು ಕಾಣುವುದಿಲ್ಲ. ಗೀತೆಯ ಭಕ್ತಿ ರಾಮಾನುಜಾಚಾರ್ಯರು ಹೇಳುವಂತೆ ಕರ್ಮ–ಜ್ಞಾನಾನುಗೃಹೀತವಾದದ್ದು. ಇಲ್ಲಿನ ಒಕ್ಕಣೆ ನಾರದ ಭಕ್ತಿಸೂತ್ರಗಳಿಗಿಂತ ಶಾಂಡಿಲ್ಯಸೂತ್ರಗಳಿಗಿಂತ ಬೇರೆಯಾದದ್ದು. ಭಕ್ತಿಯೋಗ ಎನ್ನುವ ಮಾತು ಗೀತೆಯಲ್ಲಿ(೧೪, ೨೬) ಕಾಣಸಿಗುತ್ತದೆ; ಹಾಗೆ ಈಗ ಬಳಕೆಯಲ್ಲಿರುವ ಕರ್ಮಯೋಗ ಎಂಬ ಮಾತನ್ನಾಗಲಿ ಜ್ಞಾನಯೋಗ ಎಂಬ ಮಾತನ್ನಾಗಲಿ ಗೀತಾಪಾಠದಲ್ಲಿ ಕಾಣಲಾರೆವು. ಭಕ್ತಿಯೇ ಯೋಗ(ಉಪಾಯ) ಎಂಬರ್ಥದಲ್ಲಿ ಭಕ್ತಿಯೋಗ. ಅದರಂತೆ ಧ್ಯಾನಯೋಗ ಎನ್ನುವ ಮಾತೂ ಬಂದಿದೆಯೆಂಬುದನ್ನು ಗಮನಿಸಬೇಕು(೬, ೧೯); ಸಾಂಖ್ಯಯೋಗವನ್ನೂ ಕಾಣಬಹುದು(೧೩, ೨೪) ಅಷ್ಟಾಂಗಯೋಗದ ಸೂಚನೆಯಿದ್ದರೂ(೮, ೧೨) ಆ ಯೋಗದ ಹೆಸರಿರದು.

ಗೀತೆಯಲ್ಲಿ ಯುಜ್ ಧಾತುವಿನಿಂದಾದ ಯೋಗ, ಯೋಗಿ, ಯುಕ್ತ, ಯೋಗಾರೂಢ, ಯೋಗಯಜ್ಞ, ಮೊದಲಾದ ಪದಗಳು ಒಟ್ಟು ಒಂದು ನೂರು ಹದಿನೆಂಟು ಬಾರಿ ಬಳಸಲ್ಪಟ್ಟಿವೆ. ಯೋಗದ ಕಲ್ಪನೆ ಇಲ್ಲಿ ಮುಖ್ಯವಾದದ್ದು. ಆದರೆ ಪತಂಜಲಯೋಗ, ಹಠಯೋಗ, ಲಯಯೋಗ, ರಾಜಯೋಗ ಮೊದಲಾದ ಯೋಗ ಪ್ರಕ್ರಿಯೆಗಳಿಗಿಂತ ತೀರ ವಿಲಕ್ಷಣವಾದುದು ಭಗವದ್ಗೀತೆಯ ಯೋಗ. ಈ ಬೇರೆ ಬೇರೆ ಯೋಗಗಳ ಉಲ್ಲೇಖವಾಗಲಿ ವಿವರಣೆಯಾಗಲಿ ಗೀತೆಯಲ್ಲಿ ಎಲ್ಲೂ ಬರುವುದಿಲ್ಲ. ಇಲ್ಲಿ ಯೋಗವೆಂದರೆ ಚೆನ್ನಾಗಿ ಬದುಕುವ ಬಗೆ. ಚೆನ್ನಾಗಿ ಬದುಕುವು–ದೆಂದರೆ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳುವುದು. ಇದೇ ಯೋಗದ ಚೌಕಟ್ಟು.

ಇಲ್ಲಿ ಉಲ್ಲೇಖಕ್ಕೆ ಬಂದಿರುವ ಯೋಗಗಳು ಆತ್ಮಜ್ಞಾನಕ್ಕಾಗಿಯೇ. ನಿಷ್ಕಾಮಕರ್ಮಯೋಗ(೨, ೪೮), ಭಗವತ್ಪ್ರಾಪ್ತಿಯೋಗ(೬, ೨೩) ಭಗವಚ್ಛಕ್ತಿರೂಪಯೋಗ(೯, ೫), ಇವೆಲ್ಲ ಬೇರೆಬೇರೆ ಯೋಗಗಳಲ್ಲ. ಆದಿಯಲ್ಲಿ ಭಗವಾನನು ವಿವಸ್ವತನಿಗೆ ಬೋಧಿಸಿದ ಅವ್ಯಯವಾದ ಯೋಗ. ಇದು ಕಾಲಕ್ರಮದಲ್ಲಿ ನಷ್ಟವಾಯಿತಂತೆ(೪, ೨), ಎಂದರೆ ಒಂದಾಗಿದ್ದುದು ಒಡೆದು ಭಿನ್ನವಾಯಿತು. ಗೀತೆಯಲ್ಲಿ ಹೇಳಿರುವುದು ಏಕವಚನ ಯೋಗ (**'ಯೋಗಂ ಆತಿಷ್ಠ', 'ಯೋಗೀ ಭವ', 'ಯೋಗಂ ಯುಂಜನ್'** ಮೊದಲಾದ ಪ್ರಯೋಗಗಳೇ ಇವೆ). ಇದು ಸಮನ್ವಯ ಯೋಗ.

೫. 'ಶ್ರೀಭಗವಾನುವಾಚ'

ರಾಘವೇಂದ್ರ ಸ್ವಾಮಿಗಳು ಗೀತೆಯನ್ನು ಕೃಷ್ಣಗೀತೆಯೆಂದು ಕರೆದಿದ್ದಾರೆ. ಮಹಾಭಾರತದಲ್ಲೇ ಇದನ್ನು ಹರಿಗೀತೆ ಎಂದು ಕರೆದಿರುವುದುಂಟು. ಆದರೆ ಭಗವದ್ಗೀತೆ ಎನ್ನುವ ಹೆಸರೇ ವಾಡಿಕೆಯಲ್ಲಿರುವುದು. ಕೃಷ್ಣಾರ್ಜುನ ಸಂವಾದವಾದರೂ 'ಭಗವಾನುವಾಚ', 'ಅರ್ಜುನ ಉವಾಚ' ಎಂದೇ ವಿಭಾಗ. ಇಲ್ಲಿ ಕೃಷ್ಣನೆಂದು ಹೇಳದೆ ಭಗವಾನ್ ಎಂದು ಹೇಳಿರುವುದರ ಸ್ವಾರಸ್ಯವೇನು? ಭಗವಾನನು ಕೃಷ್ಣನೇ ಎನ್ನುವುದರಲ್ಲಿ ಸಂದೇಹವಿಲ್ಲ. ಅರ್ಜುನನ ಸಂಬೋಧನೆಗಳಿಂದಲೇ ಇದು ಸ್ಪಷ್ಟವಾಗುತ್ತದೆ. ಸಂಜಯನ ಒಕ್ಕಣೆಯೂ ಸಮರ್ಥಿಸುತ್ತದೆ. ಮಹಾಭಾರತದ ಹಿನ್ನೆಲೆಯೂ ಇದನ್ನೆ ಸೂಚಿಸುತ್ತದೆ. ಆದರೆ ಕೃಷ್ಣನಿಗೆ ಬೇರೆಲ್ಲಿಯೂ ಇರದ ಭಗವತ್ ಪ್ರಶಸ್ತಿ ಇಲ್ಲಿ ಅಂಟಿಕೊಂಡದ್ದು ಹೇಗೆ?

ಭಗ ಎಂದಿಗೂ ಉಳ್ಳವನು ಭಗವತ್. ಅದೇ ಭಗವಾನ್. ಭಗ ಶಬ್ದಕ್ಕೆ ಮತುಪ್ ಪ್ರತ್ಯಯವಾಗಿ ನಿತ್ಯಯೋಗಾರ್ಥದಲ್ಲಿ **'ಮಸ್ಯ ವಃ'** ಎಂದಾಗಿ ಭಗವತ್ ಎಂಬ ರೂಪ ಮೈದಾಳಿತು. ಭಗ ಎಂಬ ಮಾತಿನ ಧಾತು ಭಜ್(ಸೇವಾಯಾಂ), ಭಜ್ಯತೇ ಎಂಬುದರಿಂದ **'ಸರ್ವೈಃ ಭಜನೀಯಂ'**, ಎಲ್ಲರ ಸೇವೆಗೆ ಯೋಗ್ಯವಾದದ್ದು. ಎಲ್ಲರಿಂದಲೂ ಆದರಿಸಲ್ಪಡತಕ್ಕದ್ದು ಎಂಬ ಅರ್ಥವನ್ನು ಹೊಂದುತ್ತದೆ. ಭಗ ಎಂದರೆ ಪೂಜ್ಯವಾದದ್ದು ಎಂಬ ಪರಿಭಾಷೆಯಲ್ಲಿ ಋಗ್ವೇದವೂ ಇಂದ್ರನನ್ನು ಭಗನೆಂದು ಕರೆದಿದೆ(೩, ೩೬, ೫; **'ಇಂದ್ರೋ ಭಗೋ ವಾಜದಾ ಯಸ್ಯ ಗಾವಃ'**). ಈ ಮಾತಿನ ಯೋನಿ, ಕಾರಣ, ಆಧಾರ, ಪ್ರಕೃತಿ, ವೀರ್ಯ, ಜ್ಞಾನ, ಐಶ್ವರ್ಯ ಎಂಬ ಅರ್ಥಗಳೂ ಇವೆ. ಭಾಗವತದಲ್ಲಿ ಭಗವೆಂದರೆ ಭೋಗಾಸ್ಪದವಾದದ್ದು. **'ಭಗೋ ಭಾಗ್ಯಂ'**; ಸೌಭಾಗ್ಯ, ಶ್ರೀ, ಸಂಪತ್ತು, ಮಾಹಾತ್ಮ್ಯ.

ವಿಷ್ಣುಪುರಾಣದಲ್ಲಿ(೬, ೫, ೭೪-೭೮) ಐಶ್ವರ್ಯ, ವೀರ್ಯ, ಶ್ರೀ (ಸಂಪತ್ತು), ಯಶಸ್ಸು, ಜ್ಞಾನ, ವೈರಾಗ್ಯ ಈ ಆರು ಗುಣಗಳ ಸಮೂಹಕ್ಕೆ ಭಗವೆಂದೂ, ಇವನ್ನೆಲ್ಲ ಸಂಪೂರ್ಣರೂಪದಲ್ಲಿ ಉಳ್ಳ ವಾಸುದೇವನು ಮುಖ್ಯಾರ್ಥದಲ್ಲಿ ಭಗವಾನನೆಂದೂ, ಇತರರಿಗೆ ಈ ನಿರ್ದೇಶನವು ಬರಿಯ ಉಪಚಾರ ರೂಪವಾದುದೆಂದೂ ಹೇಳಿದೆ; ಇಲ್ಲಿಯೇ, ಯಾರು ಜಗತ್ತಿನ ಹುಟ್ಟು-ಸಾವುಗಳನ್ನೂ ಪ್ರಾಣಿವರ್ಗದ ಅಭಿವ್ಯಕ್ತಿ-ತಿರೋಭಾವ

ಗಳನ್ನೂ, ವಿದ್ಯೆ-ಅವಿದ್ಯೆಗಳನ್ನೂ ತಿಳಿದಿರುವನೋ ಅವನು ಭಗವಾನನೆಂಬ ವರ್ಣನೆಯೂ ಇದೆ:

ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯ ಯಶಸಃ ಶ್ರಿಯಃ ।
ಜ್ಞಾನವೈರಾಗ್ಯಯೋಶ್ಚೈವ ಷಣ್ಣಾಂ ಭಗ ಇತೀಂಗನಾ ॥

ವಸಂತಿ ಯತ್ರ ಭೂತಾನಿ ಭೂತಾತ್ಮನ್ಯಖಿಲಾತ್ಮನಿ ।
ಸ ಚ ಭೂತೇಷ್ವಶೇಷೇಷು ವಕಾರಾರ್ಥಸ್ತತೋಽವ್ಯಯಃ ।

ಏವಮೇವ ಮಹಾಬಾಹೋ ಭಗವಾನಿತಿ ಸತ್ತಮ ।
ಪರಬ್ರಹ್ಮಭೂತಸ್ಯ ವಾಸುದೇವಸ್ಯ ನಾನ್ಯಗ ಃ ॥

ತತ್ರ ಪೂಜ್ಯಪದಾರ್ಥೋಕ್ತಿಪರಿಭಾಷಾಸಮನ್ವಿತಃ ।
ಶಬ್ದೋಽಯಂ ನೋಪಚಾರೇಣ ಅನ್ಯತ್ರ ಹ್ಯುಪಚಾರತಃ ॥

ಉತ್ಪತ್ತಿಂ ಚ ವಿನಾಶಂ ಚ ಭೂತಾನಾಮಾಗತಿಂ ಗತಿಂ ।
ವೇತ್ತಿ ವಿದ್ಯಾಮವಿದ್ಯಾಂ ಚ ಸ ವೇದ್ಯೋ ಭಗವಾನಿತಿ ॥

ಷಾಡ್ಗುಣ್ಯ ಸಂಪೂರ್ತಿಗೂ ಭಗವೆಂಬ ಶಬ್ದವಿದ್ದು, ಜ್ಞಾನ(ಎಲ್ಲವನ್ನೂ ತಿಳಿಯುವುದು), ಬಲ(ಎಲ್ಲಕ್ಕೂ ಆಸರೆಯಾಗುವುದು), ಐಶ್ವರ್ಯ(ಎಲ್ಲದರ ಒಡೆತನ), ವೀರ್ಯ(ಏನೊಂದು ವಿಕಾರವಿಲ್ಲದೆ ಎಲ್ಲವನ್ನೂ ನಿಯಮಿಸುವುದು), ಶಕ್ತಿ(ಬೇರೆ ಯಾರಿಗೂ ಸಾಧ್ಯವಿರದ, ಎಲ್ಲವನ್ನೂ ಮಾಡುವುದು) ಮತ್ತು ತೇಜಸ್ಸು(ಯಾರ ನೆರವನ್ನು ಕೋರದಿರುವುದು, ಯಾರಿಗೂ ಅಧೀನ-ನಾಗದಿರುವುದು) ಈ ಆರು ಗುಣಗಳನ್ನು ಹೊಂದಿದವನು ಭಗವಾನನೆಂದು ಆಗಮಗ್ರಂಥಗಳಲ್ಲಿ ವಿವರಣೆಯಿದೆ.

ವಿಷ್ಣುವಿಗೆ(ವಾಸುದೇವನಿಗೆ) ವಿಶೇಷವಾಗಿ ಭಗವಚ್ಛಬ್ದಪ್ರಯೋಗವಿರುವುದು ಕಂಡುಬರುತ್ತದೆ. ನಿದರ್ಶನಕ್ಕೆ ಅಗ್ನಿಪುರಾಣದಲ್ಲಿ(ವೈಷ್ಣವ ಕ್ರಿಯಾಯೋಗ, ಯಮಾನುಶಾಸನ) **'ಪರಮಾತ್ಮ ಚ ಭಗವಾನ್'** ಎಂದು ಸೂಚಿಸಿ:

ಭಗವಾನ್ ಭೂತಭವ್ಯೇಶೋ ಭೂತಾದಿ ಪ್ರಭವೋಽವ್ಯಯಃ ।
ಭಾವೇನ ತಂ ಭಜಸ್ಯೇಶಂ ಭವಭಂಗಕರಂ ಹರಿಂ ॥

ಎಂದು ಹೇಳುತ್ತದೆ. ಬ್ರಹ್ಮವೈವರ್ತಪುರಾಣದಲ್ಲಿ (ಶ್ರೀಕೃಷ್ಣಜನ್ಮಖಂಡ, ಅ. ೨೫)

ಮಹತಾಂ ಕ್ಷುದ್ರಜಂತೂನಾಂ ಸರ್ವೇಷಾಂ ಜೀವಿನಾಂ ಸದಾ ।
ಸ್ರಷ್ಟಾ ಪಾತಾ ಚ ಶಾಸ್ತಾ ಚ ಭಗವಾನ್ ಕರುಣಾನಿಧಿಃ ॥

ಎಂಬ ವರ್ಣನೆಯಿದೆ.

ಎಂದರೆ ಭಗವದ್ಗೀತೆಯ ವಕ್ತಾರನಾದ ಕೃಷ್ಣ ಕೇವಲ ಪಾಂಡವರ ಹಿತೈಷಿಯಾದ, ಅರ್ಜುನನ ಸಾರಥಿಯಾದ ಮನುಷ್ಯಮಾತ್ರವಲ್ಲ. **'ವಾಸುದೇವಃ ಸರ್ವಮಿತಿ'**(೭, ೧೯) ಎಂಬ ತಿಳಿವಳಿಕೆಯನ್ನು ಹೇಳುವ ವಾಸುದೇವ. ಅವನೇ ಗೀತೆಯಲ್ಲಿ ತನ್ನ ತಾತ್ತ್ವಿಕ ಸ್ವರೂಪವನ್ನು ಅರ್ಜುನನಿಗೆ ಮಾತಿನಲ್ಲೂ ವಿಶ್ವರೂಪದರ್ಶನದಲ್ಲೂ ತೋರಿಸಿಕೊಟ್ಟಿದ್ದಾನೆ. ಗೀತೆಯಲ್ಲಿ ಕೃಷ್ಣನು 'ನಾನು ಇದು', 'ನಾನು ಅದು', 'ನನ್ನನ್ನು ಭಕ್ತಿಭಾವದಿಂದ ಸ್ಮರಿಸು', 'ನನ್ನ ತತ್ವವನ್ನು ತಿಳಿದುಕೋ', 'ನನ್ನಲ್ಲೇ ಮನಸ್ಸಿಡು', 'ನನ್ನಲ್ಲಿ ಶರಣುಹೋಗು', 'ನಾನು ನಿನ್ನನ್ನು ಪಾಪಗಳಿಂದ ಬಿಡಿಸುತ್ತೇನೆ' ಎಂದು ಮುಂತಾಗಿ ಹೇಳುವ ಮಾತುಗಳೆಲ್ಲ ಭಗವಾನನವು. ಅರ್ಜುನನ ಸಾರಥಿಯಾದ ಕೃಷ್ಣನೇ ಆದರೂ ಈ ಸಂದರ್ಭದಲ್ಲಿ ಅವನು ಬರಿಯ ಮನುಷ್ಯನಲ್ಲ; ಭಗವಾನ್. ಅವನನ್ನು ಕಾಣಲು ದ್ವಾರಕೆಗೆ, ಮಥುರೆಗೆ, ಬೃಂದಾವನಕ್ಕೆ, ಕುರುಕ್ಷೇತ್ರಕ್ಕೆ ಹೋಗಬೇಕಾದುದಿಲ್ಲ. ಎಲ್ಲರೂ ತಂತಮ್ಮ ಒಡಲಲ್ಲೇ ಅವನನ್ನು ಸರ್ವಭೂತಾಶಯಸ್ಥಿತನಂತೆ ಕಂಡುಕೊಳ್ಳಬಹುದು(೧೦, ೨೦).

ಮಹಾಭಾರತದ ಇನ್ನೊಂದು ಸಂದರ್ಭವನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಅಶ್ವಮೇಧಿಕಪರ್ವದಲ್ಲಿ ಬರುವ ಸಂದರ್ಭ. ಯುದ್ಧ ಮುಗಿದಿದೆ; ಪಾಂಡವರು ಮಾಡಿದ ಅಶ್ವಮೇಧಯಾಗವೂ ಕೊನೆಗೊಂಡಿದೆ. ಕೃಷ್ಣನು ದ್ವಾರಕೆಗೆ ಹಿಂದಿರುಗಲು ಸಿದ್ಧನಾಗಿ ಪಾಂಡವರನ್ನು ಕಾಣಲೆಂದು ಬಂದಿದ್ದಾನೆ. ಆಗ ಅರ್ಜುನನು ಕೃಷ್ಣನೊಂದಿಗೆ "ಅಯ್ಯಾ ಕೃಷ್ಣ, ಹಿಂದೆ ನೀನು ಸಮರದ ಆರಂಭವಾಗುವಾಗ ನನ್ನ ಮೇಲೆ ಕರುಣೆಯಿಟ್ಟು ಭಗವಾನನಾಗಿ ನಿನ್ನ ಗರಿಮೆಯನ್ನು ತೋರಿಸಿ ಉಪದೇಶ ಮಾಡಿದೆ. ಅದೆಲ್ಲ ಈಗ ಮರೆತು ಹೋದಂತಾಗಿದೆ. ಆದರೆ ಮತ್ತೆ ಮತ್ತೆ ನನ್ನ ಕುತೂಹಲವನ್ನೇನೋ ಕೆರಳಿಸುತ್ತಿದೆ. ಈಗ ನೀನು ಇನ್ನೇನು ದ್ವಾರಕೆಗೆ ಹೊರಟು ಹೋಗುತ್ತಿದ್ದೀಯೆ. ಮತ್ತೊಮ್ಮೆ ಅದನ್ನು ತಿಳಿಸಲಾರೆಯಾ? ಎಂದು ಕೇಳುತ್ತಾನೆ. ಅವನ ಮಾತುಗಳು---

ವಿದಿತಂ ತೇ ಮಹಾಬಾಹೋ ಸಂಗ್ರಾಮೇ ಸಮುಪಸ್ಥಿತೇ ।
ಮಾಹಾತ್ಮ್ಯಂ ದೇವಕೀಮಾತಸ್ತಚ್ಚ ತೇ ರೂಪಮೈಶ್ವರಂ ॥

ಯತ್ತದ್ ಭಗವತಾ ಪ್ರೋಕ್ತಂ ಪುರಾ ಕೇಶವ ಸೌಹೃದಾತ್ ।
ತತ್ಸರ್ವಂ ಪುರುಷವ್ಯಾಘ್ರ ನಷ್ಟಂ ಮೇ ಭ್ರಷ್ಟಚೇತಸಃ ।

ಮಮ ಕೌತೂಹಲಂ ತ್ವಸ್ತಿ ತೇಷ್ವರ್ಥೇಷು ಪುನಃ ಪುನಃ ।
ಭವಾಂಸ್ತು ದ್ವಾರಕಾಂ ಗಂತಾ ನ ಚಿರಾದೇವ ಮಾಧವ ॥

ಅದಕ್ಕೆ ಕೃಷ್ಣ ಹೇಳುತ್ತಾನೆ, "ನೀನು ತಿಳಿಗೇಡಿ! ಗುಹ್ಯವಾದುದನ್ನೂ ನಿತ್ಯವಾದುದನ್ನೂ ಆಗ ನಾನು ನಿನಗೆ ತಿಳಿಸಿದೆ. ಬುದ್ಧಿಯಿಲ್ಲದವನಾಗಿ ನೀನು ಅದನ್ನೆಲ್ಲ ಮನಸ್ಸಿಗೆ ತಂದುಕೊಳ್ಳದೆ, ನನಗೆ ಅಪ್ರಿಯವನ್ನೇ ಮಾಡಿರುವೆ! ನಿನಗೆ ಶ್ರದ್ಧೆಯಿಲ್ಲ; ನಿನ್ನದು ಕೆಟ್ಟ ಮನಸ್ಸು ಅದನ್ನು ನಾನು ಈಗ ಮತ್ತೆ ಹೇಳುವುದಾದರೂ ಹೇಗೆ? ಆಗ ನನಗೊಂದು ಯೋಗ ಒದಗಿಬಂದಿದ್ದಿತು; ಪರಬ್ರಹ್ಮವನ್ನು ಕುರಿತು ಹೇಳುವುದಾಯಿತು. ಈಗ ಮತ್ತೆ ಅದು ಬರಲಾರದು, ನಿನಗೆ ಎಲ್ಲವನ್ನೂ ಬ್ರಹ್ಮಾನುಭವಕ್ಕೆ ಬೇಕಾದ ಧರ್ಮವನ್ನು ಮತ್ತೆ ಹೇಳುವುದು ಸಾಧ್ಯವಿಲ್ಲ!" ಕೃಷ್ಣನ ಮಾತುಗಳು --

ಶ್ರಾವಿತಸ್ತ್ವಂ ಮಯಾ ಗುಹ್ಯಂ ಜ್ಞಾಪಿತಶ್ಚ ಸನಾತನಂ ।
ಧರ್ಮಸ್ವರೂಪಿಣಂ ಪಾರ್ಥ ಸರ್ವಲೋಕಾಂಶ್ಚ ಶಾಶ್ವತಾನ್ ॥

ಅಬುದ್ಧ್ಯಾ ನಾಗ್ರಹೀರ್ಯಸ್ತ್ವಂ ತನ್ಮೇ ಸುಮಹದಪ್ರಿಯಂ ।
ನ ಚ ಸಾಥ ಪುನರ್ಭೂಯಃ ಸ್ಮೃತಿರ್ಮೇ ಸಂಭವಿಷ್ಯತಿ ॥

ನೂನಮಶ್ರದ್ದಧಾನೋಽಸಿ ದುರ್ಮೇಧಾ ಹ್ಯಸಿ ಪಾಂಡವ ।
ನ ಚ ಶಕ್ಯಂ ಪುನರ್ವಕ್ತುಶೇಷೇಣ ಧನಂಜಯ ॥

ಸ ಹಿ ಧರ್ಮಃ ಸುಪರ್ಯಾಪ್ತೋ ಬ್ರಹ್ಮಣಃ ಪದವೇದನೇ ।
ನ ಶಕ್ಯಂ ತನ್ಮಯಾ ಭೂಯಾಸ್ತಥಾ ವಕ್ತುಮಶೇಷತಃ ॥

ಪರಂ ಹಿ ಬ್ರಹ್ಮ ಕಥಿತಂ ಯೋಗಯುಕ್ತೇನ ತನ್ಮಯಾ ।
ಇತಿಹಾಸಂ ತು ವಕ್ಷ್ಯಾಮಿ ತಸ್ಮಿನ್ನರ್ಥೇ ಪುರಾತನಂ ॥

ಇದರಿಂದ ಸ್ಪಷ್ಟವಾಗುವುದು ಭಗವದ್ಗೀತೆಯ ವಕ್ತಾರನು ಕೃಷ್ಣನಲ್ಲ; ಭಗವಾನನು ಎಂಬುದು. ಆದರೆ ಇಬ್ಬರು ಬೇರೆ ಬೇರೆ ವ್ಯಕ್ತಿಗಳು

ಎನ್ನಲಾಗದು. ಕೃಷ್ಣನೇ ಭಗವಾನನಾಗಿ ಅರ್ಜುನನ ಮೋಹವನ್ನು ಕಳೆದು, ಸಂದೇಹಗಳನ್ನು ತೊಲಗಿಸಿ ಸ್ವಧರ್ಮವೆಂಬ ಲೋಕಸಂಗ್ರಹಕಾರ್ಯದಲ್ಲಿ ಅವನನ್ನು ತೊಡಗಿಸಿದನು. ಅರ್ಜುನನಿಗೆ ವಿಶ್ವರೂಪದರ್ಶನವಾದಾಗ ಅವನಿಗೆ ಇದರ ಅರಿವಾಯಿತು. "ಅಯ್ಯೋ, ಇಷ್ಟು ಕಾಲ ನಿನ್ನನ್ನು ಸ್ನೇಹಿತನೆಂದು ಬಗೆದು, ನಿನ್ನ ಹಿರಿಮೆಯನ್ನು ಅರಿತುಕೊಳ್ಳದೆ, ಸಲುಗೆ ಯಿಂದ ಅಯ್ಯಾ, ಕೃಷ್ಣ, ಮಾಧವ, ಯಾದವ ಎಂದೆಲ್ಲ ನಿನ್ನನ್ನು ಕರೆದು ಅಪಚಾರ ಮಾಡಿದೆ; ನನ್ನನ್ನು ಮನ್ನಿಸು"(೧೧, ೪೧-೪೨) ಎಂದು ಅಂಗಲಾಚಿ ಬೇಡಿಕೊಳ್ಳುತ್ತಾನೆ.

ಮನುಷ್ಯನಾದವನು ಭಗವಾನನಾಗುವುದು ಸಾಧ್ಯವೇ? ಕೃಷ್ಣನು ಮನುಷ್ಯನೋ, ದೇವರೋ, ಅವತಾರವೋ ಎಂಬ ಪ್ರಶ್ನೆ ಇಲ್ಲಿ ಅಪ್ರಸ್ತುತ; ಬೇರೊಂದೆಡೆ ಅದು ಚರ್ಚೆಗೆ ಬಂದಿದೆ. ಅರ್ಜುನನು ಬಗೆದಂತೆ ಅವನು ಮನುಷ್ಯನೇ ಆಗಿರಲಿ. ಮಹಾಭಾರತದಲ್ಲೂ ಇತರ ಆಕರಗಳನ್ನು ಇತಿಹಾಸದ ಎಳೆಗಳನ್ನು ಗುರುತಿಸುವುದು ಸಾಧ್ಯ. ದೇವಕೀಪುತ್ರ ಕೃಷ್ಣನು ಘೋರ ಆಂಗೀರಸನೆಂಬ ಋಷಿಯ ಬಳಿ ಅಧ್ಯಾತ್ಮವಿದ್ಯೆಯನ್ನು ಕಲಿತು ಪ್ರಪಂಚದ ಬಯಕೆಗಳನ್ನು ತೊಲಗಿಸಿಕೊಂಡು(ಅಪಿಪಾಸ) ಜ್ಞಾನಿ-ಯಾದದ್ದು ಛಾಂದೋಗ್ಯೋಪನಿಷತ್ತಿನಲ್ಲಿ ಬಂದಿದೆ (೩, ೧೭, ೨-೩). ಛಾಂದೋಗ್ಯೋಪನಿಷತ್ತು ಸಾಮವೇದಕ್ಕೆ ಸೇರಿದ್ದು. ಕೃಷ್ಣನು ಗೀತೆಯಲ್ಲಿ **'ವೇದಾನಾಂ ಸಾಮವೇದೋಽಸ್ಮಿ'** ಎಂದು ಹೇಳಿಕೊಂಡಿದ್ದಾನೆ. ಗೀತೆಗೂ ಕೃಷ್ಣನಿಗೂ ಸಾಮವೇದಕ್ಕೂ ಇರುವ ನಂಟನ್ನು ಗಮನಿಸಬೇಕು. ಮಹಾಭಾರತದ ಶಾಂತಿಪರ್ವದಲ್ಲಿ(ರಾಜಧರ್ಮಾನುಶಾಸನ) ಯುಧಿಷ್ಠಿರನು ಏಕಾಂತದಲ್ಲಿದ್ದ ಕೃಷ್ಣನನ್ನು ಕಂಡ ಬಗೆಯ ವಿವರವಿದೆ --

ನಿಗೃಹೀತೋ ಹಿ ವಾಯುಸ್ತೇ ಪಂಚಕರ್ಮಾ ಶರೀರಗಃ ।
ಇಂದ್ರಿಯಾಣಿ ಪ್ರಸನ್ನಾನಿ ಮನಸಿ ಸ್ಥಾಪಿತಾನಿ ತೇ ॥

ವಾಕ್ ಚ ಸತ್ತ್ವಂ ಚ ಗೋವಿಂದ ಬುದ್ಧೌ ಸಂವೇಶಿತಾನಿ ತೇ ।
ಸರ್ವೇ ಚೈವ ಗುಣಾ ದೇವಾಃ ಕ್ಷೇತ್ರಜ್ಞೇ ತೇ ನಿವೇಶಿತಾ ॥

ನೇಂಗತೇ ತವ ರೋಮಾಣಿ ಬುದ್ಧಿಸ್ತ ಥಾ ಮನಃ ।
ಕಾಷ್ಠಕುಡ್ಯಶಿಲಾಭೂತೋ ನಿರೀಹಾಶ್ಚಾಸಿ ಮಾಧವ ॥

ಯಥಾ ದೀಪೋ ನಿವಾತಸ್ಥೋ ನಿರಿಂಗೋ ಜ್ವಲತೇ ಪುನಃ ।
ತಥಾಪಿ ಭಗವಾನ್ ದೇವ ಪಾಷಾಣ ಇವ ನಿಶ್ಚಲಃ ॥

ಇದು ಯೋಗಿಯ ಚಿತ್ರ. ಕೃಷ್ಣನು ನಿತ್ಯಜೀವನದಲ್ಲೂ ಯೋಗಿಯಂತೆ ಇದ್ದವನೇ ಎಂಬುದು ಯುಧಿಷ್ಠಿರನ ಒಕ್ಕಣೆಯಿಂದ ಸ್ಪಷ್ಟವಾಗುತ್ತದೆ. ಯುಧಿಷ್ಠಿರನು ಕೃಷ್ಣನನ್ನು ಕಾಣಲು ಹೋದಾಗ, ಕೃಷ್ಣನು ಪ್ರಾಣವನ್ನು ನಿಗ್ರಹಿಸಿ, ಮೌನನಾಗಿ ಇಂದ್ರಿಯಗಳನ್ನೆಲ್ಲ ಮನಸ್ಸಿನಲ್ಲಿ ಸೆಳೆದುಕೊಂಡು ಮನಸ್ಸನ್ನು ಬುದ್ಧಿಯಲ್ಲಿ ನೆಲೆಗೊಳಿಸಿ, ಧ್ಯಾನಮಗ್ನನಾಗಿದ್ದ. ಶರೀರವು ಕಟ್ಟಿಗೆಯಂತೆ, ಗೋಡೆಯಂತೆ, ಕಲ್ಲುಬಂಡೆಯಂತೆ ಜಡವಾಗಿದ್ದಿತು; ಯಾವೊಂದು ಬಯಕೆಯ ತುಣುಕೂ ಇರಲಿಲ್ಲ. ಗಾಳಿಯಿರದೆಡೆ ದೀಪ ನೆಮ್ಮದಿಯಿಂದ ಉರಿಯುವಂತೆ ಕೃಷ್ಣ ಬೆಳಗುತ್ತಿದ್ದ. ಯುಧಿಷ್ಠಿರನು ಕಂಡ ಕೃಷ್ಣನು ಮುನಿ.

ಮಹಾಭಾರತದಲ್ಲೇ ಶಾಂತಿಪರ್ವದ ನಾರಾಯಣೀಯದಲ್ಲಿ ದೇವರ್ಷಿ ಯಾದ ನಾರದರು ಕೃಷ್ಣನನ್ನು(ನಾರಾಯಣನನ್ನು) ಕಂಡ ಪ್ರಸಂಗ ಬರುತ್ತದೆ. ನಾರದರು ಬಂದಾಗ, ಕೃಷ್ಣನು ಮೇಲೆ ಹೇಳಿದಂತೆಯೇ ಧ್ಯಾನದಲ್ಲಿದ್ದ. ನಾರದರು ಸೋಜಿಗಗೊಂಡು ಅವನನ್ನು ಕೇಳುತ್ತಾರೆ -- "ಅಯ್ಯಾ ನಾರಾಯಣ, ನಿನ್ನನ್ನೇ ದಿನವೂ ಎಲ್ಲರೂ ಧ್ಯಾನಮಾಡುತ್ತಾರೆ; ನೀನು ಯಾರನ್ನು ಧ್ಯಾನ ಮಾಡುವೆ?"

ಯಜಂತೇ ತ್ವಾಮಹರಹಃ ನಾನಾಮೂರ್ತಿಸಮುತ್ಥಿತಂ ।
ಕಂ ತ್ವದ್ಯ ಯಜಸೇ ದೇವ?

ನಾರಾಯಣನು ನಾರದರಿಗೆ ನೀಡಿದ ಉತ್ತರ ಇದು --

ಅವಾಚ್ಯಮೇತದವ್ಯಕ್ತಂ ಆತ್ಮಗುಹ್ಯಂ ಸನಾತನಂ ।
ತವ ಭಕ್ತಿಮತೋ ಬ್ರಹ್ಮನ್ ವಕ್ಷ್ಯಾಮಿ ತು ಯಥಾ ತಥಂ ॥

ಸ ಹ್ಯಂತರಾತ್ಮಾ ಭೂತಾನಾಂ ಕ್ಷೇತ್ರಜ್ಞಶ್ಚೇತಿ ಕಥ್ಯತೇ ॥
ತ್ರಿಗುಣವ್ಯತಿರಿಕ್ತೋ ವೈ ಪುರುಷಶ್ಚೇತಿ ಕಲ್ಪಿತಃ ॥

ಇತ್ಯಾದಿಯಾಗಿ. "ಎಲ್ಲರಲ್ಲೂ ಎಂದೆಂದೂ ಗುಟ್ಟಾಗಿ ಇರುವ ಅವ್ಯಕ್ತತತ್ತ್ವ ವಿದೆಯಲ್ಲ; ಇದೇ ಎಲ್ಲರ ಅಂತರ್ಯಾಮಿ; ಆತ್ಮ, ಕ್ಷೇತ್ರಜ್ಞ, ಪುರುಷ, ರಜಸ್ಸು, ಸತ್ತ್ವ, ತಮಸ್ಸು ಎಂಬ ಮೂರು ಗುಣಗಳಿಂದ

ಉಂಟಾಗಿರುವ ಶರೀರಕ್ಕೆ, ಪ್ರಪಂಚಕ್ಕೆ ವಿಲಕ್ಷಣನಾಗಿರುವನು. ಗುಣಾತೀತನಾದರೂ ಗುಣಗಳಿಗೆ ಆಧಾರ; ಪ್ರಕೃತಿಗೆ ಚೈತನ್ಯ ಎಂದರೆ ಆ ತತ್ತ್ವವೇ. ನಾನು ಧ್ಯಾನಮಾಡುತ್ತಿರುವುದು ಅದನ್ನೇ. ಭಕ್ತನಾದ ನಿನಗೆ ದಿಟವಾಗಿ ಹೇಳುತ್ತಿದ್ದೇನೆ". ಅನಂತರ ನಾರದರಿಗೆ ವಿಶ್ವರೂಪದರ್ಶನ ದೊರಕುತ್ತದೆ (ಅರ್ಜುನನಿಗೆ ಹಿಂದೆ ದೊರೆತಂತೆ). ಇದು ಭಗವತ್ತತ್ತ್ವ ಮನುಷ್ಯರಿಗೆ ಅಲಭ್ಯವಾದುದಲ್ಲ; ಯೋಗದಿಂದ ಸಾಧ್ಯವಾಗುವುದು.

ಕೃಷ್ಣನು ಮನುಷ್ಯನಾಗಿ ಬದುಕಿದ್ದದ್ದು ಒಂದು ನೂರಿಪ್ಪತ್ತೈದು ವರ್ಷಗಳು ಎಂಬ ವಿವರವಿದೆ. ಅವನು ತೀರಿಕೊಳ್ಳುವ ಸಂದರ್ಭ ಮಹಾಭಾರತದ ಮೌಸಲಪರ್ವದಲ್ಲಿ ಕಾಣಸಿಗುತ್ತದೆ. ಬೇಡನೊಬ್ಬನ ಭ್ರಮೆಯಿಂದ ಅವನ ಬಾಣದ ಏಟಿಗೆ ತುತ್ತಾಗುವಾಗ ಕೃಷ್ಣನು ಮಲಗಿ ವಿಶ್ರಮಿಸಿಕೊಳ್ಳುತ್ತಿದ್ದ; ಆಗಲೂ ಧ್ಯಾನಮಗ್ನನೇ --

ಸ ಸಂನಿರುದ್ಧೇಂದ್ರಿಯ ವಾಙ್ಮನಾಸ್ತು ।
ಶಿಶ್ಯೇ ಮಹಾಯೋಗಮುಪೇತ್ಯ ಕೃಷ್ಣಃ ॥

ಇಂದ್ರಿಯಗಳು, ಮನಸ್ಸು, ವಾಕ್ಕು ಎಲ್ಲವನ್ನೂ ನಿರೋಧಿಸಿಕೊಂಡು ಮಹಾಯೋಗದಲ್ಲಿ ಮಲಗಿದ್ದ. ಅವನು ದೇಹ ಬಿಡುವಾಗಲೂ ಯೋಗಿಯೇ --

ಯೋಗಾಚಾರ್ಯೋ ರೋದಸೀ ವ್ಯಾಪ್ಯ ಲಕ್ಷ್ಮ್ಯಾ ।
ಸ್ಥಾನಂ ಸಂಪ್ರಾಪ ಸ್ವಂ ಮಹಾಯತ್ಮಾಽಪ್ರಮೇಯಂ ॥

ಭೂಮ್ಯಂತರಿಕ್ಷಗಳನ್ನು ತನ್ನ ಪ್ರಭೆಯಿಂದ ಬೆಳಗಿಸಿ, ಎಲ್ಲವನ್ನೂ ಆವರಿಸಿಕೊಂಡು ಕೃಷ್ಣನು ಯಾರೂ ಅರಿಯಲಾಗದ, ಅಳೆಯಲಾಗದ ತನ್ನ ನೈಜಸ್ಥಿತಿಯನ್ನು ಪಡೆದುಕೊಂಡನು. ಇದು ಕೃಷ್ಣನ ದಿಟವಾದ ವ್ಯಕ್ತಿತ್ವ; ತನ್ನ ಸ್ವರೂಪದಲ್ಲಿ ಅವನು ಭಗವಾನನೇ. ಗೀತೆಯಲ್ಲೇ ಇದರ ಪ್ರಸ್ತಾಪ ಬರುತ್ತದೆ --

"ನನ್ನನ್ನು ತತ್ತ್ವತಃ ತಿಳಿಯದಿದ್ದವರು ನಾನು ಮನುಷ್ಯಮಾತ್ರದವನೆಂದು ಬಗೆದು ನನ್ನನ್ನು ಅಸಡ್ಡೆಯಿಂದ ಕಾಣುತ್ತಾರೆ. ಮನುಷ್ಯತ್ವವನ್ನು ಮೀರಿದ ನನ್ನ ದಿಟವಾದ ಸ್ಥಿತಿಯೆಂದರೆ ಎಲ್ಲರಲ್ಲೂ ಅಡಗಿರುವ ಆತ್ಮತತ್ತ್ವವೇ!" (೯, ೧೧)

ಅವಜಾನಂತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಂ ।
ಪರಂ ಭಾವಮಜಾನಂತೋ ಮಮ ಭೂತಮಹೇಶ್ವರಂ ॥

ಇದರ ಹಿನ್ನೆಲೆಯೂ ವೈದಿಕವಾಙ್ಮಯದಲ್ಲೇ ಕಾಣಸಿಗುತ್ತದೆ. **'ಶಾಸ್ತ್ರ-ದೃಷ್ಟ್ಯಾತೋಪದೇಶಃ'** ಎಂಬುದು ಒಂದು ವೇದಾಂತ ಮೀಮಾಂಸಾ ಸೂತ್ರ (೧, ೧, ೨೮); ವಾಮದೇವಋಷಿಯು ಋಗ್ವೇದಸೂಕ್ತವೊಂದರಲ್ಲಿ (೪, ೨೬) "ನಾನೇ ಮನುವಾದವನು. ಸೂರ್ಯನೂ ನಾನೇ. ಸಜ್ಜನರಿಗೆ ಭೂಮಿಯ ಭಾಗ್ಯವನ್ನು ನೀಡುವವನು ನಾನು; ಮಳೆಗರೆಸುವವನು ನಾನು"(**ಅಹಂ ಮನುರಭವಂ ಸೂರ್ಯಶ್ಚ...**) ಎಂದು ಮೊದಲಾಗಿ ತನ್ನ ಮಹಿಮೆಯನ್ನು ಹೇಳಿಕೊಂಡಿದ್ದಾನೆ. ಹೀಗೆ ಹೇಳಿಕೊಳ್ಳುವಾಗ ಅವನು ಮನುಷ್ಯಮಾತ್ರದವನಲ್ಲ. ಅವನು ಮನುಷ್ಯನೆಂದು ಕಾಣುವುದು ಲೋಕ ದೃಷ್ಟಿ; ಅವನು ವಿಶ್ವತತ್ತ್ವವನ್ನು ತನ್ನಲ್ಲಿ ಕೊಂಡುಕೊಂಡ ನೆಲೆಯಲ್ಲಿ ಈ ಮಂತ್ರದ ಮಾತುಗಳು ಹೊರಹೊರಡುತ್ತವೆ. ಇದನ್ನೇ ಕೃಷ್ಣನು ಯೋಗ ವೆಂದು ಕರೆದಿರುವುದು. ತಾನು ಯೋಗಯುಕ್ತನಾದಾಗ ತನಗೆ ಭಗವದ್ಗೀತೆ ಯನ್ನು ಉಪದೇಶ ಮಾಡುವುದಾಯಿತೆಂದು ಅರ್ಜುನನಿಗೆ ಹೇಳಲಿಲ್ಲವೆ? ಇದು ಶಾಸ್ತ್ರದೃಷ್ಟಿ.

ಹೀಗೆ ವಾಗಂಭ್ರಣಿಯು (ಅಂಭ್ರಣ ಋಷಿಯ ಮಗಳು, ವಾಕ್ ಎಂಬ ಹೆಸರಿನವಳು ತನ್ನನ್ನೇ ವಿಶ್ವತತ್ತ್ವದಲ್ಲಿ ಏಕೀಭವಿಸಿಕೊಂಡು ತಾನು ರುದ್ರ ರೊಂದಿಗೆ ವಸುಗಳೊಂದಿಗೆ ಓಡಿಯಾಡುವವಳು, ತಾನೇ ಇಂದ್ರ, ಅಗ್ನಿ, ಅಶ್ವಿನಿಗಳು, ಸೋಮ ಮೊದಲಾದ ದೇವತೆಗಳನ್ನೆಲ್ಲ ಎತ್ತಿ ನಿಲ್ಲಿಸುವವಳು. ರಾಷ್ಟ್ರೀ, ಸಂಗಮನೀ ಇತ್ಯಾದಿಯಾಗಿ ಹೇಳಿಕೊಂಡು ತಾನು ಗಾಳಿಯಂತೆ ಲೋಕಗಳನ್ನೆಲ್ಲ ತುಂಬಿಕೊಂಡು ಬೀಸುತ್ತಿರುವವಳು ಎಂದು ತನ್ನ ಮಹಿಮೆಯ ಕಥನವನ್ನು ಮುಗಿಸುತ್ತಾಳೆ(ಋಗ್ವೇದ ೧೦, ೧೨೫ ಎಂಟು ಋಚೆಗಳು). ಇಲ್ಲಿಯೂ ಈ ಋಷಿಯದು ಶಾಸ್ತ್ರದೃಷ್ಟಿಯೇ; ಆಕೆಗೆ ಯೋಗಯುಕ್ತವಾದ ಅವಸ್ಥೆಯಲ್ಲಿಯೇ ಈ ಮಂತ್ರದರ್ಶನ ಆದುದು.

ಇನ್ನೂ ಒಂದು ನಿದರ್ಶನವೆಂದರೆ ಕೌಷಿತಕೀ ಉಪನಿಷತ್ತಿನಲ್ಲಿ ಇಂದ್ರನು ದಿವೋದಾಸನ ಮಗ ಪ್ರತರ್ದನನಿಗೆ ತಾನೇ ಪ್ರಾಣ, ಪ್ರಜ್ಞಾತ್ಮಾ, ಆಯು, ಅಮೃತನೆಂದೂ ಆದ್ದರಿಂದ ತನ್ನನ್ನೇ ಉಪಾಸನೆಮಾಡುವಂತೆಯೂ ಉಪದೇಶಿಸುವುದು (**'ಪ್ರಾಣೋಽಸ್ಮಿ ಪ್ರಜ್ಞಾತ್ಮಾ ತಂ ಮಾಂ ಆಯುರಮೃತ**

ಮಿತ್ಯುಪಾಸ್ಸ್ವ'). ಇಲ್ಲಿಯೂ ಇಂದ್ರನು ಕೇವಲ ದೇವತೆಯೆಂದಲ್ಲ; ಅವನಲ್ಲಿ ಅಂತರ್ಗತವಾದ ಅಂತರ್ಯಾಮಿಯಾದ ತತ್ತ್ವವೇ ಎಲ್ಲೆಲ್ಲೂ ಗುಹ್ಯವಾಗಿರುವ ಇರವು. ಇದರತ್ತ ಗಮನ ಸೆಳೆಯುವುದು ಉಪದೇಶದ ಉದ್ದೇಶ.

ಈ ದೃಷ್ಟಿಯಿಂದ ನೋಡಿದಾಗ ಭಗವದ್ಗೀತೆ ಎಂಬ ಹೆಸರಿನ ಸ್ವಾರಸ್ಯವೂ ಸಾರ್ಥಕತೆಯೂ ಮನದಟ್ಟಾಗುತ್ತದೆ. ಗೀತೆಯೆನ್ನುವ ಮಾತಿಗೆ ಹೇಳಿದ್ದು, ಹಾಡು(ಗೈ ಶಬ್ದೇ) ಎಂದರ್ಥ. ಇಷ್ಟೇ ಆದರೆ ಶಬ್ದವೂ 'ಗೀತಂ' ಎಂದು ನಪುಂಸಕಲಿಂಗದಲ್ಲಿರಬೇಕು (ಭಾಗವತಂ, ಭಾರತಂ, ಗೋಪಿಕಾ–ಗೀತಂ ಎಂದಿರುವಂತೆ). ಆದರೆ ಇದು ಸ್ತ್ರೀಲಿಂಗದಲ್ಲಿ 'ಗೀತಾ' ಎಂದಿದೆ. ವ್ಯಾಕರಣಮರ್ಯಾದೆಯಲ್ಲಿ ಇದರ ಅರ್ಥ 'ಗಾನಮಾಡಲ್ಪಟ್ಟ' ಎಂದು ಕರ್ಮಾರ್ಥವಾಗುತ್ತದೆ. ಭಗವದ್ಗೀತಾ ಎಂದರೆ ಭಗವಾನನಿಂದ ಗಾನ ಮಾಡಲ್ಪಟ್ಟದ್ದು. ಉಪನಿಷತ್ತು ಎಂಬ ಮಾತೂ ಸ್ತ್ರೀಲಿಂಗದಲ್ಲಿದೆ. ಭಗವಾನನಿಂದ ಹೇಳಲ್ಪಟ್ಟಿದ್ದರಿಂದ 'ಭಗವದ್ಗೀತಾಸೂಪನಿಷತ್ಸು' ಎಂದು ಸಪ್ತಮ್ಯಂತವಾದ ಪ್ರಯೋಗ. **'ಉಪನಿಷತ್ಸಮಾಧಿನಾ ಸಿದ್ಧ ವ್ಯವಹಾರ ನಿರೂಢೇ ಸ್ತ್ರೀಲಿಂಗನಿರ್ದೇಶಃ'**. ಎಂದು ವೇದಾಂತದೇಶಿಕರ ವಿವರಣೆಯಿದೆ(ಗೀತಾರ್ಥ ಸಂಗ್ರಹರಕ್ಷಾ). ಗೀತೆಯು ಉಪನಿಷತ್ತೆಂಬ ಅರ್ಥದಲ್ಲಿಯೇ ಅದರ ಸ್ತ್ರೀಲಿಂಗ ನಿರ್ದೇಶನ.

ಉಪನಿಷತ್ತೆಂದರೆ ರಹಸ್ಯವಾದ ಉಪದೇಶ; ಅವಿದ್ಯೆಯನ್ನು ತೊಲಗಿಸು ವುದರಿಂದಲೂ ಉಪನಿಷತ್ತೆಂಬ ಹೆಸರು. ಬುದ್ಧಿ ನಿರ್ಮಲವಾದಾಗ ಪರತತ್ತ್ವವು (ಎಂದರೆ ಬ್ರಹ್ಮ) ಅದರಲ್ಲಿ ಪ್ರಕಟವಾಗುತ್ತದೆ; ಇದರ ತಿಳಿವಳಿಕೆಯೇ ಬ್ರಹ್ಮವಿದ್ಯೆ. ಉಪನಿಷತ್ತಿಗೆ ಬ್ರಹ್ಮವಿದ್ಯೆಯೆನ್ನುವುದು ಇನ್ನೊಂದು ಹೆಸರು.

೬. ರಥರೂಪಕ

ಗೀತೆಯ ಉಪದೇಶವಾದದ್ದು ಎರಡು ಸೇನೆಗಳ ನಡುವೆ ಅರ್ಜುನನ ರಥವನ್ನು ಸಾರಥಿಯಾದ ಕೃಷ್ಣ ತಂದು ನಿಲ್ಲಿಸಿದಾಗ, **'ಸೇನಯೋ-ರುಭಯೋರ್ಮಧ್ಯೇ ಮೇ ರಥಂ ಸ್ಥಾಪಯ'** ಎಂದು ಅರ್ಜುನ ಕೇಳುತ್ತಾನೆ; **'ಸೇನಯೋರುಭಯೋರ್ಮಧ್ಯೇ ಸ್ಥಾಪಯಿತ್ವಾ ರಥೋತ್ತಮಂ'** ಕೃಷ್ಣನು ಅರ್ಜುನನಿಗೆ ಎರಡೂ ಬಣಗಳನ್ನು ನೋಡೆಂದು ತೋರಿಸುತ್ತಾನೆ. **'ಸೇನಯೋರುಭಯೋರ್ಮಧ್ಯೇ'**(ಎರಡು ಸೇನೆಗಳ ನಡುವೆ) ಎಂಬ ಮಾತು ಇನ್ನೂ ಒಂದು ಬಾರಿ ಗೀತೆಯಲ್ಲಿ ಬರುತ್ತದೆ(೨, ೧೦); ಅದು ಅರ್ಜುನನ ವಿಷಾದದ ಸಂದರ್ಭದಲ್ಲಿ ಈ ಮೂರು ಬಾರಿ ಬಳಕೆಗೆ ಬಂದ ಮಾತುಗಳಲ್ಲಿ ಮೊದಲನೆಯದು ಅರ್ಜುನನ ಶೌರ್ಯೋತ್ಸಾಹಗಳು ಪ್ರಕಟವಾದಾಗ; ಎರಡನೆಯದು ಅರ್ಜುನ ತಟಸ್ಥನಾಗಿರುವಾಗ; ಮೂರನೆಯದು ಅರ್ಜುನನ ಮನಸ್ಸು ತಳಮಳಗೊಂಡಾಗ. ಮೂರೂ ಸಮಯಗಳಲ್ಲಿ ಕೃಷ್ಣನಲ್ಲಿ ಯಾವ ವಿಕಾರವೂ ಇರದೆ, ಅವನು ಏಕರೂಪ ದಿಂದಿರುತ್ತಾನೆ.

ರಥವು ಅರ್ಜುನನದು; ರಥದ ಒಡೆಯ ಅವನು. ಕೃಷ್ಣ ಸಾರಥಿ ಅಷ್ಟೆ. ರಥ ಅವನದಲ್ಲ. ರಥ ಯಾರದ್ದೋ, ರಥ ಯಾವನಿಗಿದೆಯೋ ಅವನು ರಥಿ; ರಥದ ಮಾಲಕ. ರಥದೊಂದಿಗೆ ಇರುವುದು ರಥ; ಎಂದರೆ ಕುದುರೆ. ರಥವನ್ನು ಪ್ರೇರಿಸುವವನು, ರಥವನ್ನು ನಡೆಸುವವನು, ಕುದುರೆ ಗಳನ್ನು ನಿಯೋಜಿಸುವವನು ಸಾರಥಿ (**'ಡಘೇ ಕಾದಿತಿ ಷ್ಣಿರ್ವಾ'** ಎಂಬ ವ್ಯಾಕರಣ ಸೂತ್ರದಿಂದ ಈ ಪದದ ರೂಪ). ನಿಯಾಮಕ ಎಂಬುದು ಪರ್ಯಾಯಪದ. ರಥಿಯೂ ಸಾರಥಿಯೂ ರಥದಲ್ಲಿಯೇ ಇರುತ್ತಾರೆ. ರಥದ ನಂಟು ಇರುವುದರಿಂದಲೇ ಒಬ್ಬನು ರಥಿ(ಅರ್ಜುನ), ಇನ್ನೊಬ್ಬನು ಸಾರಥಿ(ಕೃಷ್ಣ).

ಭಗವದ್ಗೀತೆಯ ಹಿನ್ನಲೆಯಲ್ಲಿ ಕಠೋಪನಿಷತ್ತು ಪ್ರಧಾನವಾಗಿದೆ. ಕಠೋಪನಿಷತ್ತಿನ ಎಷ್ಟೋ ಮಾತುಗಳು ಗೀತೆಯಲ್ಲಿ ಹಾಗೆಹಾಗೆಯೇ ಬಂದಿವೆ. (೨, ೧೯-೨೦; ೨, ೨೯; ೨. ೪೦; ೮, ೧೧; ೧೫, ೧-೩; ಇತ್ಯಾದಿ). ಅದೇ ಉಪನಿಷತ್ತಿನ **'ಯುಕ್ತೇನ ಮನಸಾ'** (೩, ೩-೯) ಎಂಬ

ಕಲ್ಪನೆಯ ವಿಸ್ತಾರವಾದ ವಿವರಣೆಯೇ ಗೀತೆಯೆಂದರೂ ತಡೆದೀತು. ಅಲ್ಲಿ (೧, ೩, ೧೦) ಬಂದಿರುವ ರಥರೂಪಕ ಇಲ್ಲಿ ಪ್ರಸಕ್ತವಾಗುತ್ತದೆ;

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ಚ ।
ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ ॥

ಇಂದ್ರಿಯಾಣಿ ಹಯಾನಾಹುಃ ವಿಷಯಾಂಸ್ತೇಷು ಗೋಚರಾನ್ ।
ಆತ್ಮೇಂದ್ರಿಯಮನೋಯುಕ್ತಂ ಭೋಕ್ತೇತ್ಯಾಹುರ್ಮನೀಷಿಣಃ ॥

ಆತ್ಮನೇ (ಎಂದರೆ ಜೀವವೇ) ರಥದ ಮಾಲಕ; ರಥವೆಂಬುದು ಶರೀರವೇ. ಶರೀರ ಅವನಿಗಿರುವುದರಿಂದ ಆತ್ಮನು (ಜೀವನು) ಶಾರೀರಿ (ಶಾರೀರಿಕ). ಅವನೇ ಶರೀರವಲ್ಲ; ಶರೀರವನ್ನು ನಿಯಮನಮಾಡು ವವನೂ ಅವನಲ್ಲ. ಬುದ್ಧಿಯೆನ್ನುವ ತತ್ತ್ವ ಶರೀರವೆಂಬ ರಥದ ಸಾರಥಿ; ಶರೀರವನ್ನು ನಿಯೋಜಿಸುವುದು ಬುದ್ಧಿಯೇ. ಇನ್ನು ಶರೀರದ ಇಂದ್ರಿಯ ಗಳು (ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳೆಂಬ ಬಹಿರಿಂದ್ರಿಯಗಳು ಹತ್ತು) ರಥಕ್ಕೆ ಕಟ್ಟಿರುವ ಕುದುರೆಗಳು; ಇಂದ್ರಿಯಗಳನ್ನು ಹಿಡಿತದಲ್ಲಿರಿಸಿಕೊಳ್ಳಲು ಬುದ್ಧಿ ತನ್ನ ಕೈಯಲ್ಲಿ ಹಿಡಿದಿರುವ ಹಗ್ಗ ಮನಸ್ಸು. ಶರೀರವೆಂಬ ರಥ ಓಡುವ ಹಾದಿಯೆಂದರೆ ಇಂದ್ರಿಯಗೋಚರವಾದ ವಿಷಯಗಳು (ಎಂದರೆ ಪ್ರಪಂಚ, ಲೋಕ). ಹೀಗೆ ಆತ್ಮ(ಜೀವ), ಇಂದ್ರಿಯಗಳು, ಮನಸ್ಸು ಇವುಗಳನ್ನು ಸೇರಿಸಿದಾಗ ಒದಗುವುದು ಭೋಕ್ತೃತ್ವ ಎಂದರೆ ವಿಷಯ ಗಳನ್ನು ಅನುಭವಿಸುವ ಜೀವ.

ಈ ರಥರೂಪಕದ ಒಕ್ಕಣೆ ಭಗವದ್ಗೀತೆಯಲ್ಲಿ ಬಂದಿಲ್ಲವಾದರೂ, ಅದರ ಸಂವಾದಿಯಾಗಿ ಮೂರನೆಯ ಅಧ್ಯಾಯದಲ್ಲಿ ೪೦-೪೨ನೆಯ ಶ್ಲೋಕ ಗಳನ್ನು ಗುರುತಿಸಬಹುದು. ಅವುಗಳಲ್ಲೊಂದು --

ಇಂದ್ರಿಯಾಣಿ ಪರಾಣ್ಯಾಹುಃ ಇಂದ್ರಿಯೇಭ್ಯಃ ಪರಂ ಮನಃ ।
ಮನಸಸ್ತು ಪರಾ ಬುದ್ಧಿಃ ಯೋ ಬುದ್ಧೇಃ ಪರತಸ್ತು ಸಃ ॥

ಇಂದ್ರಿಯಗಳೆಂಬ ಕುದುರೆಗಳನ್ನು ಹಿಡಿತದಲ್ಲಿರಿಸಿಕೊಳ್ಳುವುದು, ಅವಕ್ಕಿಂತ ಮಿಗಿಲಾದುದು ಕಡಿವಾಣ, ಹಗ್ಗ(ಮನಸ್ಸು), ಮನಸ್ಸನ್ನು ಹಿಡಿತ ದಲ್ಲಿರಿಸಿಕೊಳ್ಳುವುದು, ಎಂದರೆ ಅದಕ್ಕಿಂತ ಮಿಗಿಲಾದುದು, ಬುದ್ಧಿ; ಬುದ್ಧಿಯನ್ನೂ ಮೀರಿದ್ದು, ಬುದ್ಧಿಯನ್ನು ತನ್ನ ಉಪಯೋಗಕ್ಕಾಗಿ ಬಳಸಿ-

ಕೊಳ್ಳುವುದು ಆತ್ಮ. ಆ ರಥರೂಪದ ಅಭಿವ್ಯಕ್ತಿಯೇ ಭಗವದ್ಗೀತೆಯ ಸಂದರ್ಭ. ಇಲ್ಲಿ ಶರೀರವೇ(ಎಂದರೆ ಕ್ಷೇತ್ರ) ರಥ, ಜೀವವೇ ಶಾರೀರ (ಕ್ಷೇತ್ರಜ್ಞ). ಅರ್ಜುನನಿಗೆ ಸಂಕೇತ. ಶರೀರದಲ್ಲಿರುವ ಶಾರೀರಿಯ ನಿಯಾಮಕನಾದ ಸಾರಥಿಯು ಇಲ್ಲಿ ಕೃಷ್ಣಸ್ಥಾನೀಯ. ಕಠೋಪನಿಷತ್ತಿನಲ್ಲಿ ಬರುವ **'ದುಷ್ಟಾಶ್ವಾ....ಸದಶ್ವಾ ಇವ ಸಾರಥೇಃ'**, ಸಾರಥಿಯ ತುಂಟಕುದುರೆ ಗಳು ಮತ್ತು ಸಾಧುಕುದುರೆಗಳು ಕೌರವರ, ಪಾಂಡವರ ಬಣಗಳು. ನಮ್ಮ ಶರೀರ ಈ ಎರಡು ಬಣಗಳ ನಡುವೆ ನಿಂತಿದೆ (**'ಸೇನಯೋರುಭಯೋ ರ್ಮಧ್ಯೇ ರಥಃ'**).

ರಥವೆಂದರೆ ಶರೀರ; ಜೀವಾತ್ಮನೊಬ್ಬ, ಮತ್ತು ಬುದ್ಧಿಸ್ಥಾನೀಯನಾದ ಪರಮಾತ್ಮ ಇನ್ನೊಬ್ಬ. ಇಬ್ಬರೂ ರಥದ ನಂಟುಳ್ಳವರೇ, ರಥದಲ್ಲೇ ಇರುವವರು. ರಾಮಾನುಜಾಚಾರ್ಯರು **'ಪಾರ್ಥಂ ರಥಿನಂ ಆತ್ಮಾನಂ ಚ ಸಾರಥಿಂ ಸರ್ವಲೋಕ ಸಾಕ್ಷಿಕಂ ಚಕಾರ'** ಎಂದು ಹೇಳಿದರು. ಕೃಷ್ಣನು ಅರ್ಜುನನನ್ನು ರಥಿಯನ್ನಾಗಿಯೂ, ತನ್ನನ್ನು ಸಾರಥಿಯನ್ನಾಗಿಯೂ ಮಾಡಿಕೊಂಡು, ಲೋಕಕ್ಕೆಲ್ಲ ಇದೊಂದು ಮಾದರಿಯನ್ನು ಮುಂದೆ ಮಾಡಿದ. ಅರ್ಜುನನು ನರ, ಕೃಷ್ಣನು ನಾರಾಯಣ.

ನರನಾರಾಯಣರಿಬ್ಬರೂ ವಿಷ್ಣುವಿನ ಅಂಶಾವತಾರಿಗಳು. ನರನೆಂದರೆ ಮನುಷ್ಯ, ಜೀವ; ನಾರಾಯಣನು ಆತ್ಮ, ಪರಮಾತ್ಮ. ಭಕ್ತನ ಒಡಲೇ (ಹೃದ್ದೇಶ) ಬದರಿ. ಅಲ್ಲಿಯೇ ಜೀವಾತ್ಮ–ಪರಮಾತ್ಮರಿಬ್ಬರೂ (ನರ ನಾರಾಯಣರು) ತಪಸ್ಸಿನಲ್ಲಿ ಒಟ್ಟಿಗೆ ತೊಡಗಿದ್ದಾರೆ. ನರನೆಂದರೆ ಪ್ರಕೃತಿ–ಯಾಚೆ ಇರುವ ಪುರುಷ; ಇಪ್ಪತ್ತೈದನೆಯ ತತ್ತ್ವ. ಅದಕ್ಕೆ ಸಂಬಂಧ ಪಟ್ಟದ್ದು ನಾರ; ಅಥವಾ ಜ್ಞಾನ. ಅದನ್ನು ಪಡೆದುಕೊಳ್ಳಲು ನೆರವಾಗು ವವನು ನಾರಾಯಣ(ಪುರುಷೋತ್ತಮ), (**ಅಯ ಗತೌ** ಎನ್ನುವ ಧಾತುವಿಗೆ ಭಾವೇ ಲ್ಯುಟ್ ಪ್ರತ್ಯಯ; **'ಸರ್ವೇ ಗತ್ಯರ್ಥಾಃ ಪ್ರಾಪ್ತ್ಯರ್ಥಾಶ್ಚ'** ಎಂಬ ನಿಯಮದಿಂದ **'ನಾರಸ್ಯ ಜ್ಞಾನಸ್ಯ ಅಯನಂ ಪ್ರಾಪ್ತಿಃ ಯಸ್ಮಾತ್'**). ಮನುಷ್ಯರಿಗೆ ಪ್ರಾಪ್ತಿಸ್ಥಾನನಾದವನು ನಾರಾಯಣನೆಂದು ಮಹಾಭಾರತದ ಶಾಂತಿಪರ್ವದಲ್ಲಿ(೫, ೭೦, ೧೦, ೩) ಉಲ್ಲೇಖಿಸಿದೆ. (**'ನರಾಣಾಮಯನಾ ಚ್ಚಾಪಿ ನಾರಾಯಣಃ ಸ್ಮೃತಃ'**).

ಅರ್ಜುನನೆಂದರೆ ಎಲ್ಲ ಮನುಷ್ಯರ ಪ್ರತೀಕ; ಕೃಷ್ಣನು ಮನುಷ್ಯರಿಗೆ ಜ್ಞಾನವನ್ನು ಒದಗಿಸುವ ಅಂತರ್ಯಾಮಿ. ನರ–ನಾರಾಯಣರ ನಂಟು ಜೀವಾತ್ಮ–ಪರಮಾತ್ಮರದ್ದು. ರಾಮಾನುಜರು ಪಾರ್ಥನೆಂದು ಅರ್ಜುನನನ್ನು ಕರೆದಿರುವುದು ಶರೀರದ ಒಡೆಯನಾದ ಜೀವ ಎಂಬರ್ಥದಲ್ಲಿ; ಕೃಷ್ಣನು ಆತ್ಮ, ಪರಮಾತ್ಮ, ಶರೀರದಲ್ಲೇ ರಥಿಯಾದ ಜೀವನ ಜೊತೆ ಇರುವವನು.

ಇನ್ನೊಂದು ರೂಪಕವಿದೆ. ಒಂದೇ ಮರದಮೇಲೆ ಎರಡು ಹಕ್ಕಿಗಳು. ಎರಡಕ್ಕೂ ಹೊಂಬಣ್ಣದ ರೆಕ್ಕೆಗಳು. ಎರಡೂ ಒಡನಾಡಿಗಳು, ಎರಡೂ ಸ್ನೇಹಭಾವದಲ್ಲಿ ಪರಸ್ಪರ ಸೇರಿಕೊಂಡವು. ಅವುಗಳಲ್ಲಿ ಒಂದು ಮರದ ಹಣ್ಣುಗಳನ್ನು ತಿನ್ನುತ್ತದೆ; ಇದು ಭೋಕ್ತೃ. ಇನ್ನೊಂದಾದರೋ ಏನನ್ನೂ ತಿನ್ನದೆ, ತನ್ನ ಜೊತೆಗಿರುವ ಹಕ್ಕಿಯನ್ನು ನೋಡುತ್ತ ಕುಳಿತಿರುತ್ತದೆ; ಅದು ಸಾಕ್ಷಿ --

ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ ।
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ ಅನಶ್ನನ್ನನ್ಯೋ ಅಭಿಚಾಕಶೀತಿ ॥

ಒಂದೇ ಮರವೆಂದರೆ ಒಂದೇ ಶರೀರದಲ್ಲಿ, ಎರಡು ಹಕ್ಕಿಗಳು. ಹಕ್ಕಿಗಳು ಮರಕ್ಕೆ ಸೇರಿದುವಲ್ಲ, ಮರದ ಅಂಗಗಳಲ್ಲ. ಮರದಿಂದ ಅತ್ಯಂತ ಭಿನ್ನವಾದುವೇ. ಆದರೆ ಒಂದು ಸಮಯದಲ್ಲಿ ಅವಕ್ಕೂ ಮರಕ್ಕೂ ನಂಟು. ಒಂದು ಹಕ್ಕಿ ಜೀವಾತ್ಮ, ಇನ್ನೊಂದು ಪರಮಾತ್ಮ. ಹಣ್ಣನ್ನು ತಿನ್ನುವುದೆಂದರೆ ವ್ಯವಹಾರದಲ್ಲಿ ತೊಡಗಿರುವುದು. ಶರೀರಾಭಿ–ಮಾನವನ್ನು ಹೊಂದಿರುವುದು. ಅದೇ ಜೀವಭಾವವೆನಿಸಿಕೊಳ್ಳುತ್ತದೆ. ತಿನ್ನದೆ ನೋಡುತ್ತಿರುವುದು ಪರಮಾರ್ಥ, ಅಸಂಗ, ಎರಡೂ ಗೆಳೆಯರು, ಸಮಾನಧರ್ಮ ಉಳ್ಳ ತತ್ತ್ವಗಳು; ಒಟ್ಟಿಗೆ ಇರುವಂಥವು. ಜೀವಾತ್ಮನಿಗಾಗಲಿ ಪರಮಾತ್ಮನಿಗಾಗಲಿ ಶರೀರದ ನಂಟು ಕೆಲಕಾಲದ್ದು; ಸಹಜವಾದದ್ದೇನಲ್ಲ, ನಿತ್ಯವೂ ಅಲ್ಲ.

ಗೀತೆಯ ಕಾಶ್ಮೀರಪಾಠದಲ್ಲಿ(ರಾಜಾನಕ ಅಭಿನವಗುಪ್ತ ಮತ್ತು ರಾಜಾನಕ ರಾಮಭದ್ರ ಇವರು ಬಳಸಿಕೊಂಡ ಪಾಠ) ಇದೊಂದು ಸ್ವಾರಸ್ಯವಾದ ಶ್ಲೋಕವಿದೆ, ರಥರೂಪಕವನ್ನು ಕುರಿತದ್ದು --

ಸಾರಥ್ಯಮರ್ಜುನಸ್ಯಾಜೌ ಕುರ್ವನ್ ಗೀತಾಮೃತಂ ದದೌ ।
ಲೋಕತ್ರಯೋಪಕಾರಾಯ ತಸ್ಮೈ ಕೃಷ್ಣಾತ್ಮನೇ ನಮಃ ॥

ಅರ್ಜುನನಿಗೆ ಕೃಷ್ಣನು ಸಾರಥಿಯಾದದ್ದು ಲೋಕಕ್ಕೆಲ್ಲ ಉಪಕಾರಕವಾದ ಗೀತಾಮೃತವನ್ನು ನೀಡಲೆಂದೇ. ಕೃಷ್ಣನು ಬುದ್ಧಿಸ್ಥಾನೀಯನಾದುದರಿಂದ ಕೃಷ್ಣಾತ್ಮನೆನಿಸಿಕೊಂಡಿದ್ದಾನೆ. ಎಂದರೆ ಈ ರೂಪಕದಲ್ಲಿ ಮುಖ್ಯವಾದ ವಿವರ ಬುದ್ಧಿಗಿರುವ ಹೆಚ್ಚಳ, ಅದೂ ಅಧ್ಯಾತ್ಮವಿದ್ಯೆಯ ಸಂದರ್ಭದಲ್ಲಿ. '**ಬುದ್ಧಿಂ ತು ಸಾರಥಿಂ ವಿದ್ಧಿ**' ಎಂದು ಕಠೋಪನಿಷತ್ತು ಹೇಳುತ್ತದೆ. ಭಾಗವತದಲ್ಲಿ --

ನಿಯಚ್ಛೇದ್ವಿಷಯೇಭ್ಯೋಽಕ್ಷಾನ್ ಮನಸಾ ಬುದ್ಧಿಸಾರಥಿಃ ॥

'ಬುದ್ಧಿಯೆಂಬ ಸಾರಥಿಯ ಮನಸ್ಸಿನಿಂದ ಇಂದ್ರಿಯಗಳನ್ನು ವಿಷಯಗಳಿಂದ ತಡೆಹಿಡಿಯಬೇಕು'(೨, ೧, ೧೮), ಎಂದೂ

ಇಂದ್ರಿಯಾಣೀಂದ್ರಿಯಾರ್ಥೇಭ್ಯೋ ಮನಸಾಽಕೃಷ್ಯ ತನ್ಮನಃ ।
ಬುದ್ಧ್ಯಾ ಸಾರಥಿನಾ ಧೀರಃ ಪ್ರಣಯೇನ್ಮಯಿ ಸರ್ವತಃ ॥

"ಇಂದ್ರಿಯಗಳನ್ನು ವಿಷಯಗಳಿಂದ ಮನಸ್ಸು ತನ್ನೆಡೆಗೆ ಸೆಳೆದುಕೊಳ್ಳಬೇಕು; ಮನಸ್ಸನ್ನು ಎಲ್ಲೆಡೆಗಳಿಂದ ತಡೆಹಿಡಿದು ಬುದ್ಧಿಯೆಂಬ ಸಾರಥಿಯು ಆತ್ಮನಲ್ಲಿ ತೊಡಗಿಸಬೇಕು" (೧೧, ೧೪, ೪೨) ಎಂದೂ ಬುದ್ಧಿಯೇ ನಮ್ಮ ಬದುಕಿನಲ್ಲಿ ಸಾರಥಿಸ್ಥಾನೀಯವಾದ ತತ್ತ್ವವೆಂದು ಕಾಣಿಸಿದೆ.

ಗೀತೆಯ ಸಾಧನೆಯಲ್ಲಿ ಬುದ್ಧಿಗೇ ಅಗ್ರಸ್ಥಾನ. 'ಬುದ್ಧಿಯಲ್ಲೆ ಶರಣುಹೋಗು' (**ಬುದ್ಧೌ ಶರಣಮನ್ವಿಚ್ಛ**') ಎಂದರೆ ನಿನ್ನ ಬದುಕನ್ನು ಬುದ್ಧಿಯಲ್ಲೆ ನೆಲೆಗೊಳಿಸು, ಎಂದು ಕೃಷ್ಣನು ಮಾಡಿರುವ ಉಪದೇಶ. ಬುದ್ಧಿಯಲ್ಲಿ ನೆಲೆನಿಂತವನು ಪುಣ್ಯಪಾಪಗಳೆಲ್ಲವನ್ನೂ ಕೈಬಿಟ್ಟು ಯೋಗದಲ್ಲಿ(ಸಮತೆಯಲ್ಲಿ) ನಿಲ್ಲುವನು. ಬುದ್ಧಿಯಿಂದಾಗಿ ಕರ್ಮದಿಂದ ಆಗಬಹುದಾದ ಫಲಕ್ಕಾಗಿ ಆಸೆಪಡದೆ. ಸಂಸಾರದ ಸುಳಿಯಿಂದ ತಪ್ಪಿಸಿಕೊಂಡು, ಪರಮಪದವನ್ನು ಮುಟ್ಟುವನು. ಸಂಸಾರದ ಕೊಳೆಗಳನ್ನು ದಾಟಿದಲ್ಲದೆ ಬುದ್ಧಿ ನಿರ್ಮಲವಾಗದು. ಬುದ್ಧಿ ನಿರ್ಮಲವಾದರೆ ಅದು ಯೋಗ(೨, ೪೯-೫೧).

ಬುದ್ಧಿ ಎನ್ನುವ ಮಾತು ಎಚ್ಚರಗೊಳ್ಳುವುದು ಎಂಬ ಮೂಲಾರ್ಥದಿಂದ ಹೊರಬಂದದ್ದು (ಬುದ್ ಧಾತುವಿಗೆ ಕ್ತಿನ್ ಪ್ರತ್ಯಯ ಸೇರಿ). ನಿಘಂಟುವಿನಲ್ಲಿ ಬುದ್ಧಿಗೆ ಮತಿ, ಮೇದಾ, ಸಂಖ್ಯಾ, ಸಂವಿತ್ತಿ, ಉಪಲಬ್ಧಿ ಎಂದು ಪರ್ಯಾಯ ಪದಗಳು. ರಾಜನಿಘಂಟು ಈ ಪದಗಳೊಂದಿಗೆ ಮನನ, ಜ್ಞಾನ, ಪ್ರತಿಭಾ, ಹೃಲ್ಲೇಖ ಎಂಬುವನ್ನೂ ಕಾಣಿಸಿದೆ. ಅಮರ-ಕೋಶದಲ್ಲಿ ಮನೀಷಾ, ಧೀ, ಧಿಷಣಾ, ಪ್ರಜ್ಞಾ, ಪ್ರೇಕ್ಷಾ, ಸಂವಿತ್, ಚಿತ್, ಪ್ರತಿಪತ್, ಜ್ಞಪ್ತಿ, ಶೇಮುಷೀ, ಚೇತನಾ ಎಂಬ ಮಾತುಗಳೆಲ್ಲ ಬುದ್ಧಿ-ಯನ್ನೇ ತಿಳಿಸುತ್ತವೆ ಎಂಬ ಉಲ್ಲೇಖವಿದೆ. ಶಬ್ದರತ್ನಾವಳಿಯು ಪಂಡಾ, ವಿಜ್ಞಾನ ಎಂಬ ಪರ್ಯಾಯಪದಗಳನ್ನು ಸೂಚಿಸುತ್ತದೆ. ಇವನ್ನೆಲ್ಲ ಅರ್ಥ ಹಿಡಿದು ನೋಡಿದರೆ ಬುದ್ಧಿಯ ಸ್ವರೂಪವೂ, ಪ್ರಯೋಜನವೂ, ಪ್ರಸಕ್ತಿಯೂ ಮನದಟ್ಟಾಗುತ್ತವೆ. ಮಹಾಭಾರತದಲ್ಲೇ ಬುದ್ಧಿಯ ಐದು ಗುಣಗಳ ಒಕ್ಕಣೆಯಿದೆ --

ಇಷ್ಟಾನಿಷ್ಟವಿಪತ್ತಿಶ್ಚ ವ್ಯವಸಾಯಃ ಸಮಾಧಿತಾ ।
ಸಂಶಯಃ ಪ್ರತಿಪತ್ತಿಶ್ಚ ಬುದ್ಧೇಃ ಪಂಚಾಗುಣಾನ್ ವಿದುಃ ॥

ಇದು ಬೇಕು, ಇದು ಬೇಡ ವಿವೇಚನೆ(ವಿವೇಕ, ನಿಶ್ಚಯ); ಮನಸ್ಸನ್ನು ನಿದ್ರಾರೂಪದ ಪ್ರವೃತ್ತಿಗೀಡುಮಾಡುವುದು; ಕೆಲಸಕ್ಕೆ ತೊಡಗುವ ಉತ್ಸಾಹ; ಚಿತ್ತವನ್ನು ಒಂದೆಡೆ ನಿಲ್ಲಿಸುವ ಸ್ಥೈರ್ಯ(ಎಂದರೆ ಚಿತ್ತವೃತ್ತಿಗಳ ನಿರೋಧ); ತಿಳಿವಳಿಕೆಯಲ್ಲಿ ಗೊಂದಲವನ್ನು ಪರಿಹರಿಸಿ ನಿರ್ಣಯಕ್ಕೆ ಬರುವುದು ಮತ್ತು ಪ್ರತ್ಯಕ್ಷಾದಿ ಪ್ರಮಾಣಗಳಿಂದ ವಸ್ತುವನ್ನು ಅರಿತುಕೊಳ್ಳುವ ಸಾಮರ್ಥ್ಯ. ಹೀಗೆ ಬುದ್ಧಿಯಿಂದಲೇ ನಿಶ್ಚಯವಾದ ತಿಳಿವಳಿಕೆ ಒದಗುವುದು; ಅನುಭವ ಉಂಟಾಗುವುದು. ಬ್ರಹ್ಮವೈವರ್ತಪುರಾಣದಲ್ಲಿ (ಪ್ರಕೃತಿ ಖಂಡ, ೨೩).

ಬುದ್ಧಿರ್ವಿವೇಚನಾರೂಪಾ ಸಾ ಜ್ಞಾನಜನನೀ ಶ್ರುತಾ ॥

ಎಂದು ಸಂಗ್ರಹವಾಗಿ ಹೇಳಿರುವುದನ್ನು ಗಮನಿಸಬೇಕು. ಅದು ಸ್ವರೂಪದಲ್ಲಿ ವಿವೇಚನೆ; ಪ್ರಯೋಜನದಲ್ಲಿ ಸರಿಯಾದ ತಿಳಿವಳಿಕೆಗೆ ಕಾರಣವಾಗುವುದು.

ಋಗ್ವೇದದಲ್ಲಿ 'ಬುಧ್ನ' ಎಂಬ ಪದದ ಪ್ರಯೋಗವಿರುವುದು ಬುದ್ಧಿಯ ಮೂಲನೆಲೆ. ಬುಧ್ನ ಎಂದರೆ ಅರಿವು; ಇರವಿನ ನೇರಾದ ಅನುಭವ. 'ಬುಧ್ನಾತಿ' (ಬಧ ಬಂಧನೇ, ಉಣಾದಿಕೋಶ ೩, ೫, **'ನಕ್ ಯುಧಾದೇಶಶ್ಚ'**) ಎಂದರೆ ಕಟ್ಟುವ ಅರ್ಥದಲ್ಲಿ ಪದದ ಬಳಕೆ. ಮರದ ಬುಡ ಎಂದು ಅಮರಕೋಶ (೨, ೪, ೧೨) ಸೂಚಿಸುವಾಗ ಮರವನ್ನು ನೆಲಕ್ಕೆ ಕಟ್ಟಿರುವ ಸಂದರ್ಭವೇ. ನೆಲ, ತಳ, ಅಡಿಪಾಯ, ಆಳ ಎಂಬರ್ಥಗಳಲ್ಲಿ ವೈದಿಕ ಸಾಹಿತ್ಯದಲ್ಲಿ ಈ ಪದದ ಬಳಕೆಯಿದೆ. ಮರದ ಬುಡ ನೆಲಕ್ಕೆ ಅಂಟಿ-ಕೊಂಡಿರುತ್ತದೆ; ನೆಲದೊಳಗೆ ಅದರ ನೆಲೆ. ಬುದ್ಧಿಯೆಂಬುದು ಬುಡವಾದರೆ ಅದರಿಂದ ಎದ್ದುಕೊಂಡು ಹೊರಗೆ ಮೈಚಾಚಿರುವುದು ಅಹಂಕಾರವೆಂಬ ತತ್ತ್ವ, ಮನಸ್ಸೆಂಬ ಒಳಗಣ ಸಾಧನ(ಅಂತಃಕರಣ), ಇಂದ್ರಿಯಗಳೆಂಬ ಹೊರಗಣ ಸಾಧನ, ವಿಷಯಗಳ ಕಡೆ ಆವರ್ಜನ. ಇದು ಬಹಿರ್ಮುಖವ್ಯಾಪಾರ. ಬುಡಕ್ಕೆ ಕಾಂಡ, ಕೊಂಬೆ, ರೆಂಬೆ, ಎಲೆ, ಹೂ, ಹಣ್ಣು ಮುಂತಾದವು ಹೀಗೆಯೇ ಬಹಿರ್ಮುಖ ಪ್ರವೃತ್ತಿಗಳು. ಆದರೆ ಅದಕ್ಕೆ ನೆಲೆಯಿರುವುದು ನೆಲದೊಳಗೇ. ಬುದ್ಧಿಗೆ ಆಸರೆ-ಯಾಗಿರುವುದನ್ನೆ ಆತ್ಮನೆಂದು ಕರೆಯುವುದು. ಆತ್ಮದ ಕಡೆ ಬುದ್ಧಿಯ ಒಲವು ಒದಗಿದಾಗ ಅದು ಅಂತರ್ಮುಖಪ್ರವೃತ್ತಿ: ಅಧ್ಯಾತ್ಮವೆಂದರೆ ಅದೇ. ಆತ್ಮವೇ ಆಳವಾಗಿರುವುದು; ಒಳಗೆ ಅಡಗಿರುವುದು.

ಬುದ್ಧಿಯು ಅದನ್ನು ಮರೆತು ಹೊರಗಡೆಯೇ ಹರಿಯತೊಡಗಿದಾಗ ಅದು ಸಂಸಾರ; ನಿದ್ರೆಯ ಮಂಪರು ಇದ್ದಂತೆ; ವಿಷಯಗಳೆಡೆ ಇಂದ್ರಿಯ ಗಳು ಹೋಗುತ್ತವೆ; ಇಂದ್ರಿಯಗಳು ಗ್ರಹಿಸಿದುದರಲ್ಲಿ ಮನಸ್ಸುತೊಡಗುತ್ತದೆ. ಮನಸ್ಸಿನ ಸಂಕಲ್ಪ-ವಿಕಲ್ಪಗಳಲ್ಲಿ ಬುದ್ಧಿ ತನ್ನನ್ನು ತಾನು ಮರೆಯುತ್ತದೆ. ಬುದ್ಧಿ ತನ್ನ ನೆಲೆಯತ್ತ ಗಮನ ಹರಿಸುವುದು ಎಚ್ಚರಗೊಂಡಂತೆ. ಆತ್ಮನ ಇರವನ್ನು ಅರಿತುಕೊಳ್ಳುವುದೇ ಎಚ್ಚರ. ಬುದ್ಧಿ, ಬೋಧಿ, ಬುಧ್ನ ಇವೆಲ್ಲ **'ಬುಧ್'**(ಎಚ್ಚರಗೊಳ್ಳು) ಎಂಬ ಧಾತುವಿನಿಂದಲೇ ಆದ ಪದಗಳು. ಯಾವುದರಿಂದ ಆತ್ಮನ ಅರಿವಾಗುವುದೋ(**ಬುಧ್ಯತೇ ಅನಯಾ**) ಅದು ಬುದ್ಧಿ; ಬುದ್ಧಿಯ ಸಹಜವಾದ ಕಲೆ.

ಯೋಗದ ನೆರವಿಲ್ಲದೆ ಬುದ್ಧಿಯ ಈ ನೆಲೆ ಸಾಧ್ಯವಾಗದು (**'ನಾಸ್ತಿ ಬುದ್ಧಿರಯುಕ್ತಸ್ಯ'**, ೨, ೬೬) ಎಂದು ಗೀತೆಯ ನಿಲುವು. ಯೋಗದಿಂದ

ಕ್ರಮಕ್ರಮವಾಗಿ ಮನಸ್ಸನ್ನು ಹೊರಗಣ ಹರವಿನಿಂದ ಹಿಂದಿರುಗಿಸಿಕೊಂಡು ಆತ್ಮನಲ್ಲೇ ಬೇರೂರುವಂತೆ ಮಾಡಲಾಗುವುದು ಎಚ್ಚರವಾಗಿರುವ ಬುದ್ಧಿಯ ಮೂಲಕವೇ (೬, ೨೫) --

"ಶನೈಃಶನೈರುಪರಮೇದ್ ಬುದ್ಧ್ಯಾ ಧೃತಿಗೃಹೀತಯಾ ।
ಆತ್ಮಸಂಸ್ಥಂ ಮನಃ ಕೃತ್ವಾ ನ ಕಿಂಚಿದಪಿ ಚಿಂತಯೇತ್ ॥

ಬುದ್ಧಿಯಿಂದ ಯೋಗ ಸಾಧ್ಯವಾಗುವ ಮಾತನ್ನು ಋಗ್ವೇದದಲ್ಲೇ (೫, ೮೧, ೧ **'ಯುಂಜತೇ ಧಿಯಾ'**) ಕಾಣಬಹುದು. ಇದು ಗೀತೆಯಲ್ಲಿ ವಿವರ ವಾಗಿ ಬರುತ್ತದೆ. ಭಗವಾನನ ಆಶಯ ಬುದ್ಧಿಯೋಗವನ್ನು ಸ್ಫುಟ ಗೊಳಿಸುವುದೇ; ಈ ಬುದ್ಧಿಯೋಗದಿಂದ ಪರಮಾತ್ಮನ ಪ್ರಾಪ್ತಿಯಾಗುವು ದೆಂದು ಗೀತೆ ಹೇಳುತ್ತದೆ;

ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾಂತಿ ತೇ ॥(೧೦, ೧೦)

ಬುದ್ಧಿಯೋಗವೆಂಬ ಮಾತು (೧೮, ೫೭ **'ಬುದ್ಧಿಯೋಗಮುಪಾಶ್ರಿತ್ಯ'**) ಮತ್ತೆ ಬರುತ್ತದೆ. ಇಲ್ಲಿ ಬುದ್ಧಿಯೋಗವೆಂದರೆ ಅಹಂಕಾರ, ಮನಸ್ಸು, ಇಂದ್ರಿಯಗಳು, ವಿಷಯಗಳು, ಇವುಗಳಿಂದ ಕಲುಷಿತವಾದ, ಕದಲಿದ, ಕಂಗಾಲಾದ ಬುದ್ಧಿಯಲ್ಲಿ ತಿಳಿವನ್ನು, ನೆಮ್ಮದಿಯನ್ನು, ಸ್ಥೈರ್ಯವನ್ನು ಉಂಟುಮಾಡುವುದು. ಇದು ಬುದ್ಧಿಯ ಶೋಧನೆ, ಶುದ್ಧಿ. **'ಬುದ್ಧ್ಯಾ ವಿಶುದ್ಧಯಾ ಯುಕ್ತೋ'** (೧೮, ೫೧) ಎಂಬ ಮಾತು ಬರುತ್ತದೆ.

ಬುದ್ಧಿಯು ಶರೀರದಲ್ಲಿರುವ ಮನಸ್ಸಲ್ಲ; ಮನಸ್ಸಿನ ಕೆಲಸ ನಾಮ-ರೂಪಗಳ ವಿಂಗಡಣೆ (**'ಮನೋ ವ್ಯಾಕರಣಾತ್ಮಕಂ'**), ಆಕಾರಗಳ ಕಲ್ಪನೆ, ಬೇಕು-ಬೇಡಗಳ ಬಯಕೆ. ಬುದ್ಧಿಯು ಹೃದಯಲ್ಲಿರುವ ಆತ್ಮನೂ ಅಲ್ಲ. ಆತ್ಮನಿಗೆ ಯಾವ ವಿಕಾರಗಳೂ ಇಲ್ಲ, ನಾಮರೂಪಸಂಬಂಧವೂ ಇರದು. ಮನಸ್ಸು ಬಹಿರ್ಮುಖ ಪ್ರವೃತ್ತಿಯದು. ಬುದ್ಧಿಯ ಸ್ಥಾನ ಹೃದಯ ಮತ್ತು ಮನಸ್ಸುಗಳ ನಡುವೆ. ಮನಸ್ಸಿನ ಪಕ್ಷಪಾತಿಯಾಗಿ ಬುದ್ಧಿ ಪ್ರವೃತ್ತವಾದಾಗ ಕ್ಲೇಶ, ಶೋಕ, ಮೋಹ. ಎಷ್ಟಾದರೂ ಮನಸ್ಸು ಇಂದ್ರಿಯಗಳೆಂಬ ಕುದುರೆಗಳನ್ನು ನಡೆಸುವ ಕಡಿವಾಣವಷ್ಟೆ(ಪ್ರಗ್ರಹ)? ಅದಕ್ಕೇ ಒಡೆತನ ಒಪ್ಪಿಸಿಬಿಟ್ಟರೆ ಹೇಗೆ? ಸಾರಥಿಯಾದ ಬುದ್ಧಿಯ ಕೈಯಲ್ಲಿ ಮನಸ್ಸೆಂಬ ಕಡಿವಾಣವಿರಬೇಕು; ಕಡಿವಾಣದ ಅಧೀನವಾದ ಸಾರಥಿ ಇದ್ದರೆ ರಥದ

ಗತಿಯೇನು? ರಥಿಯ ಅವಸ್ಥೆಯನ್ನು ಹೇಳುವುದೇನು? ಮನಸ್ಸನ್ನು ಬುದ್ಧಿಗೆ ಒಪ್ಪಿಸುವುದು ಯೋಗವೆನಿಸಿಕೊಳ್ಳುತ್ತದೆ. ರಥರೂಪಕದ ಧ್ವನಿ ಇದು. ಆತ್ಮನು (ರಥಿಯು) ಅತೀಂದ್ರಿಯನಾದರೂ ಅವಾಙ್ಮಾನಸಗೋಚರನಾದರೂ ಬುದ್ಧಿಗ್ರಾಹ್ಯ (೬, ೨೧).

೭. ಗ್ರಂಥಪರಿಚಯ

ಭಗವದ್ಗೀತೆಯ ಏಳುನೂರು ಶ್ಲೋಕಗಳನ್ನು ಹದಿನೆಂಟು ಆಧ್ಯಾಯಗಳಲ್ಲಿ ವಿಂಗಡಿಸಿದ್ದಾರೆ. ಒಂದೊಂದು ಅಧ್ಯಾಯದ ಕೊನೆಯಲ್ಲೂ ಅಧ್ಯಾಯದ ಹೆಸರನ್ನು ತಿಳಿಸುವ ಪುಷ್ಪಿಕೆಯಿದೆ. ಬೇರೆ ಬೇರೆ ಪಾಠಗಳಲ್ಲಿ ಈ ಹೆಸರುಗಳಲ್ಲಿರುವ ವೈವಿಧ್ಯವನ್ನು ಗಮನಿಸಿದಾಗ, ಪುಷ್ಪಿಕೆಗಳು ಗ್ರಂಥಕ್ಕೇ ನೇರವಾಗಿ ಸೇರಿಕೊಂಡು ಬಂದವಲ್ಲವೆಂಬುದು ಸ್ಪಷ್ಟವಾಗುತ್ತದೆ. ಮಹಾಭಾರತದ ಭೀಷ್ಮಪರ್ವದ ಹಸ್ತಪ್ರತಿಗಳಲ್ಲಿ ಇರುವ ಗೀತಾಪಾಠದ ಅಧ್ಯಾಯಗಳ ಕೊನೆಯಲ್ಲಿ ಬಂದಿರುವ ಪುಷ್ಪಿಕೆಗಳು ತೀರ ಬೇರೆಯಾಗಿಯೆ ಇವೆ. **'ಇತಿ ಶ್ರೀ ಮಹಾಭಾರತೇ ಭೀಷ್ಮಪರ್ವಣಿ ಪಂಚವಿಂಶೋಽಧ್ಯಾಯಃ'** ಎಂದು ಗೀತೆಯ ಮೊದಲನೆಯ ಅಧ್ಯಾಯದ ಪುಷ್ಪಿಕೆ; ಉಳಿದ ಅಧ್ಯಾಯಗಳಲ್ಲಿ ಈ ಸಂಖ್ಯೆ (೨೫) ಮುಂದರಿಯುತ್ತದೆ. ಅಧ್ಯಾಯಗಳಿಗೆ ಸಂಖ್ಯಾನಿರ್ದೇಶನವಲ್ಲದೆ ಹೆಸರುಗಳಿಲ್ಲ. ಈಚೆಗೆ ಅಚ್ಚಾದ ಪುಸ್ತಕ-ಗಳಲ್ಲೇನೋ ಗೀತೆಯ ಪುಷ್ಪಿಕೆಗಳನ್ನೆ ಅಳವಡಿಸಿರುತ್ತಾರೆನ್ನಿ.

ಅಧ್ಯಾಯದ ಹೆಸರುಗಳು ಒಂದೇ ತೆರನಾಗಿಲ್ಲ. ನಿದರ್ಶನಕ್ಕೆ ಮೊದಲನೆಯ ಅಧ್ಯಾಯದ ಹೆಸರು ದೇವನಾಗರಿ ಪ್ರತಿಯದು. 'ಅರ್ಜುನ ವಿಷಾದಯೋಗ'; ಕಾಶ್ಮೀರಿ ಪ್ರತಿಯದು 'ಸೈನ್ಯದರ್ಶನಃ'; ಬಂಗಾಳಿ ಪ್ರತಿಯದು 'ಸೈನ್ಯೋಪದರ್ಶನಃ'; ದೇವನಾಗರಿಯದೇ ಇನ್ನೊಂದು ಪ್ರತಿಯದು 'ಅರ್ಜುನ ಪರಿಖೇದಃ'. ಎರಡನೆಯ ಅಧ್ಯಾಯದ ಹೆಸರು ನಮ್ಮ ಪ್ರತಿಗಳಲ್ಲಿ 'ಸಾಂಖ್ಯಯೋಗ'ವೆಂದಿದ್ದರೆ ಗ್ರಂಥಲಿಪಿಯ ಪ್ರತಿಯಲ್ಲಿ 'ಯೋಗಶಾಸ್ತ್ರ ನಿರ್ಣಯಃ' ಎಂದಿದೆ; ಶಾರದಾ ಪ್ರತಿಯಲ್ಲಿ 'ಇಂದ್ರಿಯ ಸಂಯಮಯೋಗ'ವೆಂದಿದೆ. ಹೀಗೆ ಎಲ್ಲಾ ಅಧ್ಯಾಯಗಳ ಹೆಸರುಗಳೂ ಬೇರೆಬೇರೆಯಾಗಿವೆ. ಮಹಾಭಾರತಕ್ಕೆಲ್ಲ ವ್ಯಾಖ್ಯಾನವನ್ನು ಮಾಡಿದ

ನೀಲಕಂಠಸೂರಿಯೂ ಭಗವದ್ಗೀತೆಯ ಭಾಗದ ಕೊನೆಗೆ **'ಭಾರತಭಾವ ದೀಪೇ ಭೀಷ್ಮಪರ್ವಣಿ ಗೀತಾರ್ಥಪ್ರಕಾಶೇ ಅಷ್ಟಾದಶೋಽಧ್ಯಾಯಃ'** ಎಂದಷ್ಟೇ ಹೇಳಿದ್ದಾರೆ. ರಾಮಾನುಜಾಚಾರ್ಯರಾಗಲಿ, ಮಧ್ವಾಚಾರ್ಯರಾಗಲಿ, ರಾಘವೇಂದ್ರಸ್ವಾಮಿಗಳಾಗಲಿ, ಧನಪತಿಸೂರಿಯಾಗಲಿ, ವೇದಾಂತದೇಶಿಕ ರಾಗಲಿ, ಕೇಶವ ಕಾಶ್ಮೀರಿಯಾಗಲಿ, ಶ್ರೀಧರಸ್ವಾಮಿಯಾಗಲಿ, ಪುಷ್ಪಿಕೆಯಲ್ಲಿ 'ಶ್ರೀಮದ್ಭಗವದ್ಗೀತಾಭಾಷ್ಯೇ ದ್ವಿತೀಯೋಽಧ್ಯಾಯಃ' ಎಂದು ಮುಂತಾಗಿ ಅಧ್ಯಾಯ ಸಂಖ್ಯೆಗಳನ್ನು ಮಾತ್ರ ನಿರ್ದೇಶಿಸುವ ಕ್ರಮವನ್ನು ಹಿಡಿದಿದ್ದಾರೆ; ಅಧ್ಯಾಯದ ಹೆಸರನ್ನು ಪುಷ್ಪಿಕೆಯಲ್ಲಿ ಕಾಣಿಸುವುದಿಲ್ಲ.

ಅದು ಮಾತ್ರವಲ್ಲ, ಗೀತೆಯಲ್ಲಿ ಪಾಠಭೇದಗಳೂ ಅನೇಕ ಇವೆ. ನಿದರ್ಶನಕ್ಕೆ ಎರಡನೆಯ ಅಧ್ಯಾಯದ ಹನ್ನೊಂದನೆಯ ಶ್ಲೋಕದ ನಮ್ಮ ಪಾಠ **'ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ'** ಎಂದಿದ್ದರೆ ಕಾಶ್ಮೀರಿ ಪಾಠದಲ್ಲಿ **'ಅಶೋಚ್ಯಾನನುಶೋಚಂಸ್ತಂ ಪ್ರಾಜ್ಞಾವನ್ನಾಭಿಭಾಷಸೇ'** ಎಂದಿದೆ. ಮುಖ್ಯವಾಗಿ ದೇವನಾಗರಿ, ಗ್ರಂಥಲಿಪಿ, ನೇಪಾಳಿ, ಕಾಶ್ಮೀರಿ, ಶಾರದಾಲಿಪಿ, ಬಂಗಾಳಿ, ಮಲಯಾಳಂ ಪ್ರತಿಗಳಲ್ಲಿ ಪಾಠಭೇದಗಳನ್ನು ಗುರುತಿಸಬಹುದು. ಆದರೆ ಶಂಕರಾಚಾರ್ಯರು ತಮ್ಮ ಭಾಷ್ಯಕ್ಕೆ ಬಳಸಿಕೊಂಡ ಪಾಠವೇ ಇಂದು ಎಲ್ಲ ಕಡೆ ಬಳಕೆಯಲ್ಲಿರುವುದು.

ಹದಿನೆಂಟು ಅಧ್ಯಾಯಗಳಲ್ಲಿ ಒಂದೊಂದು ಹೆಸರಿನ ಕೊನೆಯಲ್ಲೂ 'ಯೋಗ'ವೆಂಬ ಮಾತು ಸೇರಿಕೊಂಡು ಬರುತ್ತದೆ. ಕೆಲವು ಸಾರಿ ಇದು ಅಸಂಗತವೆಂಬಂತೆ ಕಾಣುತ್ತದೆ. 'ಅರ್ಜುನ ವಿಷಾದಯೋಗ' ಎಂಬಂತೆ; ವಿಷಾದವು ಯೋಗವಾಗುವುದು ಹೇಗೆ? ಕೆಲವೊಮ್ಮೆ ಹೆಸರಿಗೂ ಅಧ್ಯಾಯದ ವಿಷಯಕ್ಕೂ ಅಷ್ಟಾಗಿ ನಂಟಿಲ್ಲದೆ ಇರುವುದುಂಟು. ಇಡೀ ಗ್ರಂಥವು ಯೋಗಶಾಸ್ತ್ರವೆಂಬುದನ್ನು ಹೆಸರುಗಳಲ್ಲಿನ 'ಯೋಗ' ದೃಢ ಪಡಿಸುತ್ತದೆ ಎಂದಷ್ಟು ಹೇಳಬಹುದು. ಅಧ್ಯಾಯಗಳ ಅನುಕ್ರಮವು ವಿಷಯನಿರೂಪಣೆಯ ಕ್ರಮವನ್ನೇನು ಕಟ್ಟಿನಿಟ್ಟಾಗಿ ಅನುಸರಿಸುವುದಿಲ್ಲ. ಅನೇಕ ವೇಳೆ ಅಧ್ಯಾಯಗಳ ನಡುವೆ ಸಂಗತಿಯೇ ಕಾಣುವುದಿಲ್ಲ. ಇನ್ನು, ಎಲ್ಲ ಅಧ್ಯಾಯಗಳಲ್ಲೂ ಎಲ್ಲ ವಿಷಯಗಳೂ ಬರುವುದುಂಟು. ಕರ್ಮ, ಭಕ್ತಿ, ಜ್ಞಾನ, ಯೋಗ ಈ ವಿಷಯಗಳು ಎಲ್ಲ ಅಧ್ಯಾಯಗಳಲ್ಲೂ ಬರುವಾಗ ಕೆಲವು ಅಧ್ಯಾಯಗಳ ಹೆಸರುಗಳು ಮಾತ್ರ ಕರ್ಮಯೋಗ,

ಭಕ್ತಿಯೋಗ, ಜ್ಞಾನಯೋಗ ಎಂದಿರುವುದು ಸೋಜಿಗವೆನಿಸುತ್ತದೆ. ಅಧ್ಯಾಯಗಳ ವಿಂಗಡಣೆಯೇ ಅಷ್ಟು ಸಮರ್ಪಕವಲ್ಲವೆನ್ನಬಹುದು.

ನಮ್ಮಲ್ಲಿ ಬಳಕೆಯಲ್ಲಿರುವ ಗೀತಾಪಾಠವಲ್ಲದೆ ಇತರ ಕೆಲವು ಪಾಠಗಳೂ ಇವೆ. ಇಲ್ಲಿನ ಶ್ಲೋಕಗಳೇ ಆದರೂ ಅಧ್ಯಾಯಭೇದವಿಲ್ಲದೆ, ಎಲ್ಲವೂ ಸೇರದೆ ಇರುವ ಪಾಠಗಳು ಇವು. ನಿದರ್ಶನಕ್ಕೆ, ಬಾಲಿದ್ವೀಪದಲ್ಲಿ ೮೭ ಶ್ಲೋಕಗಳಿರುವ ಗೀತಾಪಾಠವಿದೆ. (ಎನ್.ಜಿ. ಸರದೇಸಾಯರು ಇದನ್ನು ಮಾಡರ್ನ್ ರೆವ್ಯೂದಲ್ಲಿ ತುಂಬ ಹಿಂದೆ ಪ್ರಕಟಪಡಿಸಿದರು. ಇದರ ಪಾಠವನ್ನು ಅನುಬಂಧವಾಗಿ ಕೊಟ್ಟಿದೆ. ಜಾವಾದಲ್ಲಿ ಧರ್ಮವಂಶದೇಯ ಅನಂತವಿಕ್ರಮದೇವನ ಆಳ್ವಿಕೆಯಲ್ಲಿ ೮೧ ಶ್ಲೋಕಗಳ ಗೀತೆಯು ಪ್ರಾಚೀನ ಜಾವಾನೀ ಭಾಷೆಗೆ ೫೬ ಪದ್ಯಗಳಲ್ಲಿ ಅನುವಾದಗೊಂಡಿತು. (ಜೆ. ಹೊಂಡಾ ಅವರು ೧೯೩೫ರಲ್ಲಿ ಇದನ್ನು ಸಂಸ್ಕೃತ ಮೂಲದೊಂದಿಗೆ ಹೊರತಂದರು).

ಇದು ಹಾಗಿರಲಿ, ಪ್ರಸ್ತುತ ನಮ್ಮ ಅಷ್ಟಾದಶಾಧ್ಯಾಯಿ ಗೀತೆಯ ವಿಚಾರ. ಇದರಲ್ಲಿರುವ ಹದಿನೆಂಟು ಅಧ್ಯಾಯಗಳನ್ನು ಆರಾರು ಅಧ್ಯಾಯಗಳಂತೆ ಮೂರು ಷಟ್ಕಗಳಾಗಿ(ಎಂದರೆ ಆರರ ಒಂದು ಗುಂಪಾಗಿ) ವಿಂಗಡಿಸಿರುವುದು ಪ್ರಾಚೀನ ಪದ್ಧತಿ. ವೈದಿಕವಾಙ್ಮಯದಲ್ಲಿ ಕರ್ಮಕಾಂಡ(ಎಂದರೆ ಪೂರ್ವ ಮೀಮಾಂಸಾ; ಬ್ರಾಹ್ಮಣಗಳು), ಉಪಸನಾಕಾಂಡ(ಸಂಕರ್ಷಣ ಕಾಂಡ) ಮತ್ತು ಜ್ಞಾನಕಾಂಡ(ಉತ್ತರ ಮೀಮಾಂಸಾ; ಉಪನಿಷತ್ತುಗಳು) ಎಂಬ ವಿಭಾಗಕ್ಕನು ಗುಣವಾಗಿ ಮೊದಲನೆ ಷಟ್ಕದಲ್ಲಿ(ಅಧ್ಯಾಯ ಒಂದರಿಂದ ಆರರವರೆಗೆ) ಕರ್ಮ; ಎರಡನೆಯದರಲ್ಲಿ(ಏಳನೆಯ ಅಧ್ಯಾಯದಿಂದ ಹನ್ನೆರಡನೆಯದರ ವರೆಗೆ) ಭಕ್ತಿ; ಮೂರನೆಯದರಲ್ಲಿ(ಹದಿಮೂರರಿಂದ ಹದಿನೆಂಟನೆಯ ಅಧ್ಯಾಯಗಳು) ಜ್ಞಾನ, ಇವು ಪ್ರಸ್ತಾಪಕ್ಕೆ ಬಂದಿವೆಯೆಂದು ಎಣಿಕೆ.

ಮಧುಸೂದನಸರಸ್ವತಿಗಳು ತಮ್ಮ ಗೂಢಾರ್ಥದೀಪಿಕೆಯೆಂಬ ಗೀತಾ-ವ್ಯಾಖ್ಯಾನದ ಕಡೆಯಲ್ಲಿ ಇದನ್ನು ಸಮರ್ಥಿಸಿ ಹೀಗೆ ಹೇಳುತ್ತಾರೆ --

ಕಾಂಡತ್ರಯಾತ್ಮಕಂ ಶಾಸ್ತ್ರಂ ಗೀತಾಖ್ಯಂ ಯೇನ ನಿರ್ಮಿತಂ ।
ಆದಿಮಧ್ಯಾಂತಷಟ್ಕೇಷು ತಸ್ಮೈ ಭಗವತೇ ನಮಃ ॥

ಆದರೆ ಕರ್ಮ, ಭಕ್ತಿ, ಜ್ಞಾನ ಇವು ಹೀಗೆ ಗೀತೆಯ ನಿರೂಪಣೆಯಲ್ಲಿ ವಿಂಗಡಣೆಗೆ ಬಂದೇ ಇಲ್ಲ; ಮೂರು ಷಟ್ಕಗಳಲ್ಲಿ ಒಂದೊಂದರಲ್ಲೂ ಮೂರೂ ವಿಚಾರಗಳು ಕೂಡಿಕೊಂಡೇ ಬಂದಿರುವುದನ್ನು ಕಾಣಬಹುದು. ಈ ಷಟ್ಕಗಳ ವ್ಯವಸ್ಥೆ ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗಗಳೆಂದು ಹೇಳುವುದಾಗದು.

ಈ ಷಟ್ಕವಿಭಾಗದ ಅತ್ಯಂತ ಪ್ರಾಚೀನವಾದ ಉಲ್ಲೇಖ ನಮಗೆ ಕಂಡು ಬರುವುದು ಯಾಮುನಮುನಿ ಗೀತಾರ್ಥಸಂಗ್ರಹದಲ್ಲಿ ಆಳವಂದಾರ್ ಎಂದು ಪ್ರಸಿದ್ಧರಾದ ಇವರು ಬದುಕಿದ್ದುದು ಕ್ರಿಸ್ತಾಬ್ದ ೯೧೮ರ ಸುಮಾರಿಗೆ. ಶಂಕರಾಚಾರ್ಯರ ತರುವಾಯ, ರಾಮಾನುಜಾಚಾರ್ಯರಿಗೆ ಮುಂಚೆ ಇವರ ಕಾಲ, ಇವರ ಪ್ರಕಾರ, ಮೊದಲನೆಯ(ಪೂರ್ವ)ಷಟ್ಕದಲ್ಲಿ ಭಕ್ತಿಯೋಗ ನಿಷ್ಪತ್ತಿಗೆ ಜ್ಞಾನ ಮತ್ತು ಕರ್ಮ ಯೋಗಗಳು ಅಂಗಗಳೆಂದೂ, ಆತ್ಮಾಸಾಕ್ಷಾತ್ಕಾರ(ಆತ್ಮಾನುಭೂತಿ, ಆತ್ಮಾವಲೋಕನ)ವೆಂಬ ಚಿತ್ತಸಮಾಧಾನ ಒದಗಿಬರುವ ಬಗೆ ಎಂತು ಎಂಬುದನ್ನೂ ಹೇಳಿದೆ. ಎರಡನೆಯ (ಮಧ್ಯಮ) ಷಟ್ಕದಲ್ಲಿ ಭಗವತ್ತತ್ತ್ವಯಾಥಾತ್ಮ್ಯವನ್ನು ಪಡೆದುಕೊಳ್ಳುವ ಸಲುವಾಗಿ ಭಕ್ತಿಯೋಗದ ಸ್ವರೂಪವನ್ನು ವಿವರಿಸಲಾಗಿದೆ. ಮೂರನೆಯ (ಅಂತಿಮ) ಷಟ್ಕದಲ್ಲಿ ಪ್ರಧಾನ, ಪುರುಷ, ಕಾರ್ಯರೂಪದ ಪ್ರಕೃತಿ ಮತ್ತು ಈಶ್ವರ ಈ ತತ್ತ್ವಗಳ ವಿವೇಚನೆ, ಹಿಂದಿನ ಷಟ್ಕದಲ್ಲಿ ಹೇಳದೆ ಇರುವ ವಿವರಗಳು, ಜ್ಞಾನಯೋಗ, ಭಕ್ತಿಯೋಗ, ಕರ್ಮಯೋಗಗಳ ಕುರಿತಂತೆ, ವಿವರಣೆಗೆ ಬರುತ್ತವೆ.

ಯಾಮುನರ ಗೀತಾರ್ಥಸಂಗ್ರಹವನ್ನೇ ಅನುಸರಿಸಿದ ರಾಮಾನುಜಾ-ಚಾರ್ಯರು(೧೦೧೭-೧೧೩೭) ತಮ್ಮ ಗೀತಾಭಾಷ್ಯದಲ್ಲಿ(ಹದಿನಾರನೆಯ ಅಧ್ಯಾಯದ ಮೊದಲಲ್ಲಿ) ಮೂರು ಷಟ್ಕಗಳ ವಿಷಯವ್ಯಾಪ್ತಿಯನ್ನು ಹೀಗೆ ಸೂಚಿಸಿದ್ದಾರೆ:

ಪ್ರಥಮ ಷಟ್ಕ :	**ಗೀತಾಶಾಸ್ತ್ರಾವತರಣ; ಪ್ರಯೋಜನ;**
ಅಧ್ಯಾಯಗಳು ೧-೨	**ಶೋಕಾಪನಯನಕ್ಕಾಗಿ ಆತ್ಮಸ್ವರೂಪವಿವೇಕ**
ಅಧ್ಯಾಯಗಳು ೩-೬	**ಉಪಾಯಸಾಧನಕ್ಕೆ ಅಂಗವಾಗಿ ಆತ್ಮದರ್ಶನ ಮುಖ್ಯವಾದುದು**

ದ್ವಿತೀಯಷಟ್ಕ : ಅಧ್ಯಾಯಗಳು ೭–೯	ಭಕ್ತಿಯೋಗದ ಅಧಿಕಾರಿಗಳು; ಫಲಭೇದದಿಂದ ನಾಲ್ಕು ಬಗೆ; ಅಂಥ ಉಪಾಯಗಳಿಗೆ ಪರಿಕರಗಳು ಯಾವುವು
ಅಧ್ಯಾಯಗಳು ೧೦–೧೨	ಆ ಭಕ್ತಿಯ ಉತ್ಪತ್ತಿ, ವಿವೃದ್ಧಿಗಳು
ತೃತೀಯಷಟ್ಕ: ಅಧ್ಯಾಯಗಳು ೧೩–೧೫	ಪ್ರಧಾನ, ಪುರುಷ, ಈಶ್ವರ ಎಂಬ ತತ್ತ್ವತ್ರಯ; ಅದರ ವಿವೇಚನೆ; ಪ್ರಾಸಂಗಿಕವಾದ ಕರ್ತವ್ಯ
ಅಧ್ಯಾಯಗಳು ೧೬–೧೮	ಕರ್ತವ್ಯಾದಿ ವಿವೇಚನೆ; ಕರ್ತವ್ಯ ಸಿದ್ಧ್ಯರ್ಥವಾಗಿ ಪ್ರಾಸಂಗಿಕವಾಗಿ ತತ್ತ್ವಾನುಪ್ರವೇಶ; ಶಾಸ್ತ್ರವಶ್ಯಾದಿ ವಿವೇಕ

ರಾಘವೇಂದ್ರ ಸ್ವಾಮಿಗಳ ಪ್ರಕಾರ ಮೊದಲನೆಯ ಷಟ್ಕವು ಜ್ಞಾನವನ್ನು ಪಡೆದುಕೊಳ್ಳುವ ಬಗೆಯನ್ನೂ (ಜ್ಞಾನೋಪಾಯೋಕ್ತಿ), ಎರಡನೆಯದು ಈ ಬಗೆಯಿಂದ ಸಿದ್ಧವಾಗುವ ಜ್ಞಾನದ ಸ್ವರೂಪವನ್ನೂ (ತತ್ಸಾಧ್ಯಜ್ಞಾನಕಥನಂ) ಹೇಳಿ ಮೂರನೆಯದು ಹಿಂದೆ ಹೇಳಿದ ಎಲ್ಲಾ ವಿಚಾರಗಳನ್ನೂ ವಿವರಿಸುತ್ತದೆ (ಪೂರ್ವೋಕ್ತ ಸರ್ವಪ್ರಪಂಚನಂ). ಇಲ್ಲಿ ಜ್ಞಾನವೆಂದರೆ ಜೀವಾತ್ಮನ ಜ್ಞಾನವೂ ಹೌದು, ಪರಮಾತ್ಮನ ಜ್ಞಾನವೂ ಹೌದು. ಇವೆರಡೂ ಒಂದೇ ಜ್ಞಾನದ ಮುಖಗಳು; ಈ ಎರಡನ್ನು ಬೇರ್ಪಡಿಸಲಾಗದು. ಜ್ಞಾನದಲ್ಲಿ ಇವೆರಡೂ ಪಾಲ್ಗೊಂಡಾಗ ಅದೇ ಭಕ್ತಿಯಾಯಿತು. ಭಕ್ತಿಯೆಂಬ ಮಾತಿನ ಮೂಲಾರ್ಥ ಪಾಲುಗೊಳ್ಳುವುದೆಂದೇ.

ಹದಿನೆಂಟು ಅಧ್ಯಾಯಗಳಲ್ಲಿ ಬರುವ ವಿವರಗಳನ್ನು ಸಂಪ್ರದಾಯದಲ್ಲಿ ಹೀಗೆ ಕಾಣಿಸಲಾಗಿದೆ (ಕಂಸದಲ್ಲಿರುವುದು ಅಧ್ಯಾಯದ ಶ್ಲೋಕಸಂಖ್ಯೆ) –

ಅಧ್ಯಾಯ ೧	(೪೭)	ಶ್ರವಣಾಧಿಕಾರಿ; ಅವನ ಮೋಹ
ಅಧ್ಯಾಯ ೨	(೭೨)	ಆ ಅಧಿಕಾರಿಯ ಮೋಹಶಮನ
ಅಧ್ಯಾಯ ೩	(೪೩)	ಕರ್ಮಯೋಗದ ಕರ್ತವ್ಯತೆ
ಅಧ್ಯಾಯ ೪	(೪೨)	ಕರ್ಮಯೋಗದ ಭೇದಗಳು
ಅಧ್ಯಾಯ ೫	(೨೯)	ಕರ್ಮಯೋಗದಲ್ಲಿ ಅಂತರ್ಗತವಾದ ಜ್ಞಾನ
ಅಧ್ಯಾಯ ೬	(೪೭)	ಯೋಗಭ್ಯಾಸದ ವಿಧಿ; ಏಕಾಗ್ರತಾಯೋಗ
ಅಧ್ಯಾಯ ೭	(೩೦)	ಪ್ರತಿಬುದ್ಧ ಜ್ಞಾನಿಯ ಪ್ರಾಧಾನ್ಯ; ಭಕ್ತಿ

		ಯೋಗದ ಆರಂಭ; ಪ್ರಪತ್ತಿ
ಅಧ್ಯಾಯ ೮	(೨೮)	ತ್ರಿವಿಧಾಧಿಕಾರಿಗಳಿಂದ ತಿಳಿಯತಕ್ಕ ಉಪಾದೇಯ ವಿಭಾಗ; ಸಾತತ್ಯಯೋಗ
ಅಧ್ಯಾಯ ೯	(೩೪)	ಸಪ್ರಕಾರಕ ಭಕ್ತಿಯೋಗ; ಸಮರ್ಪಣಭಾವ
ಅಧ್ಯಾಯ ೧೦	(೪೧)	ಗುಣವಿಭೂತಿಯ ಅನಂತ್ಯ
ಅಧ್ಯಾಯ ೧೧	(೫೫)	ವಿಶ್ವರೂಪದರ್ಶನ
ಅಧ್ಯಾಯ ೧೨	(೨೦)	ಭಕ್ತಿಯ ಆರೋಹ ಕ್ರಮ; ಸಮಗ್ರತಾಯೋಗ; ಹಂತಗಳು; ಆರನೆಯ ಅಧ್ಯಾಯದಲ್ಲಿ ಆರಂಭವಾದ ಏಕಾಗ್ರತೆಯ ವಿಚಾರ ಸಮಗ್ರತೆಯಲ್ಲಿ ಮುಗಿಯುತ್ತದೆ; ಭಕ್ತಿಯೋಗದ ಮುಕ್ತಾಯ
ಅಧ್ಯಾಯ ೧೩	(೩೪)	ವಿಶುದ್ಧಕ್ಷೇತ್ರಜ್ಞನ ವಿಜ್ಞಾನ
ಅಧ್ಯಾಯ ೧೪	(೨೭)	ತ್ರಿಗುಣಗಳ ವಿಶೋಧನ
ಅಧ್ಯಾಯ ೧೫	(೨೦)	ಪುರುಷೋತ್ತಮ ತತ್ತ್ವದ ವೈಲಕ್ಷಣ್ಯ; ಗುಹ್ಯತಮ ಶಾಸ್ತ್ರ; ಪರಮಾರ್ಥದರ್ಶನ; ವೇದಸಾರ
ಅಧ್ಯಾಯ ೧೬	(೨೪)	ದೈವಾಸುರಸಂಪದ್ವಿಭಾಗ
ಅಧ್ಯಾಯ ೧೭	(೨೮)	ಶಾಸ್ತ್ರೀಯ ವಿವೇಚನೆ; ಕಾರ್ಯಕರ್ಮಯೋಗ; ನಿತ್ಯಜೀವನ
ಅಧ್ಯಾಯ ೧೮	(೭೮)	ಸಾರೋದ್ಧಾರ; ಯಜ್ಞ, ದಾನ, ತಪಸ್ಸುಗಳನ್ನು ಬಿಡತಕ್ಕದ್ದಲ್ಲ.

ಗೀತೆಯಲ್ಲಿ ಮೊದಲಿಗೆ ಹನ್ನೆರಡೇ ಅಧ್ಯಾಯಗಳಿದ್ದುವೆಂದೂ, ಮುಂದಿನ ಅಧ್ಯಾಯಗಳು ಅನಂತರದ ಸೇರ್ಪಡೆಯೆಂದೂ ಕೆಲವು ಆಧುನಿಕ ಪಂಡಿತರ ಎಣಿಕೆ. ಹನ್ನೆರಡನೆಯ ಅಧ್ಯಾಯದಲ್ಲಿ ಬರುವ ವಿಚಾರಸರಣಿ ಅಲ್ಲಿಗೇ ನಿಂತು, ಹದಿಮೂರರಲ್ಲಿ ಬೇರೊಂದು ವಿವೇಚನೆ ಉಪಕ್ರಮಗೊಳ್ಳುವುದನ್ನು ಅವರು ತೋರಿಸುತ್ತಾರೆ. ಇಡೀ ಮಹಾಭಾರತಕ್ಕೆ ವ್ಯಾಖ್ಯಾನ ಮಾಡಿರುವ ನೀಲಕಂಠಸೂರಿಯು ಗೀತಾಭಾಗದ ಹನ್ನೊಂದನೆಯ ಅಧ್ಯಾಯದ ಕೊನೆಯಲ್ಲಿ **'ಶಾಸ್ತ್ರಸರ್ವಸ್ವಂ ಸಂಗೃಹ್ಣಾತಿ'** ಎಂದು ಹೇಳಿರುವುದನ್ನು ಗಮನಿಸಬೇಕು. ಎಂದರೆ ಅಲ್ಲಿಗೆ ಗೀತಾಶಾಸ್ತ್ರ ಮುಗಿಯಿತು ಎಂದೇ ಅರ್ಥವಲ್ಲವೆ? ಕೃಷ್ಣನು ತಾನು ಆಡಿದ ಮಾತು

ಗಳಿಗೆಲ್ಲ ಮಕುಟಪ್ರಾಯವಾಗಿ ವಿಶ್ವರೂಪದರ್ಶನವನ್ನೇ ತೋರಿಸಿದ ಮೇಲೆ ಇನ್ನು ಹೆಚ್ಚು ಹೇಳುವುದರ ಅಗತ್ಯವೇನು? ಔಚಿತ್ಯವೇನು? ಆ ಅಧ್ಯಾಯದ ಮೊದಲಲ್ಲೇ ಅರ್ಜುನನು 'ನನ್ನ ಮೋಹ ತೊಲಗಿ ಹೋಯಿತು'. (**'ಮೋಹೋಽಯಂ ವಿಗತೋ ಮಮ'**) ಎಂದು ಹೇಳಿಬಿಟ್ಟ ನಲ್ಲವೆ? ಮುಂದಿನ ಮಾತುಗಳಿಗೆ ಅವಕಾಶವೆಲ್ಲಿಯದು? ಮುಂದಿನ ಅಧ್ಯಾಯಗಳಲ್ಲಿ ಸಂಕೀರ್ಣ ವಿವರಗಳು ಉಲ್ಲೇಖಕ್ಕೆ ಬರುತ್ತವೆ. ಇನ್ನು ಕೆಲವು ಪಂಡಿತರು ಗೀತೆಯ ಶಾಸ್ತ್ರಭಾಗ ಹದಿನೈದನೆಯ ಅಧ್ಯಾಯಕ್ಕೇ ಮುಗಿಯುವುದೆಂದೂ, ಉಳಿದ ಮೂರು ಆಧ್ಯಾಯಗಳು ಅನುಬಂಧ ರೂಪವಾಗಿವೆಯೆಂದೂ ಹೇಳುತ್ತಾರೆ. ಹದಿನೈದನೆಯ ಅಧ್ಯಾಯದ ಕೊನೆಯಲ್ಲಿ (೨೦ನೆಯ ಶ್ಲೋಕ) --

ಇತಿ ಗುಹ್ಯತಮಂ ಶಾಸ್ತ್ರಮಿದಮುಕ್ತಂ ಮಯಾನಘ ।
ಏತದ್ ಬುದ್ಧ್ವಾ ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ ॥

"ಹೀಗೆ ಗುಹ್ಯತಮವಾದ ಈ ಶಾಸ್ತ್ರವನ್ನು ನಿನಗೆ ಹೇಳಿದ್ದೇನೆ; ಇದನ್ನರಿತು ಕೊಂಡವನು ಬುದ್ಧಿವಂತನಾಗುವನು; ಕೃತಾರ್ಥನಾಗುವನು" ಎಂದು ಮುಗಿಯುವುದೇನೋ ದಿಟವೆ. ಇಲ್ಲಿಗೆ ಗೀತೆಯೂ ಸಹಜವಾಗಿ ಮುಕ್ತಾಯವಾದಂತೆಯೇ ತಾನೆ?

ಶಂಕರಾಚಾರ್ಯರೂ ತಮ್ಮ ಗೀತಾಭಾಷ್ಯದಲ್ಲಿ ಹದಿನೈದನೆಯ ಅಧ್ಯಾಯದಲ್ಲೇ ಗೀತೆಯ ಶಾಸ್ತ್ರವೆಲ್ಲ ಸಂಗ್ರಹವಾಗಿ ಹೇಳಿದೆಯೆಂದು ಸೂಚಿಸುತ್ತಾರೆ (೧೫, ೨೦, **'ಸರ್ವೋಹಿ ಗೀತಾಶಾಸ್ತ್ರಾರ್ಥಃ ಅಸ್ಮಿನ್ನಧ್ಯಾಯೇ ಸಮಾಸೇನ ಉಕ್ತಃ'**).

ಇದು ಹೇಗಾದರಿರಲಿ, ಗೀತಾಶಾಸ್ತ್ರವು ಮೂರು ಷಟ್ಕಗಳಲ್ಲಿ ವ್ಯವಸ್ಥಿತ-ವಾಗಿದೆ ಎಂಬ ಕಲ್ಪನೆಯಲ್ಲಿ ಸ್ವಾರಸ್ಯವೊಂದಿದೆ. ಅದು ಗೀತೆಯ ಮುಖ್ಯ ವಿಷಯವಾದ ಯೋಗವನ್ನು ಕುರಿತಂತೆ. ಭಗವಾನನು ಸೃಷ್ಟಿಯ ಮೊದಲಲ್ಲಿ ವಿವಸ್ವಾನನಿಗೆ ಹೇಳಿದ ಯೋಗವು, ಮನು, ಇಕ್ಷ್ವಾಕು ಮೊದಲಾದ ರಾಜರ್ಷಿಗಳ ಪರಂಪರೆಯಲ್ಲಿ ಸಾಗಿಬಂದು ಮುಂದೆ ಕಾಲ ಕ್ರಮದಲ್ಲಿ ನಷ್ಟವಾಯಿತೆಂಬ ಮಾತು ಗೀತೆಯಲ್ಲಿ(೪, ೧-೨) ಬರುವುದಷ್ಟೆ. ಅದನ್ನೆ ಮತ್ತೆ ಎತ್ತಿಹಿಡಿಯುವುದು ಗೀತೆಯ ಉದ್ದೇಶ(೪, ೩). ಯೋಗವು ನಷ್ಟವಾಯಿತೆಂದರೆ ಸಮಗ್ರವಾಗಿದ್ದ ಯೋಗವು ವಿಭಿನ್ನ ಪ್ರಕಾರಗಳಲ್ಲಿ

ಕಳೆದುಳಿಯಿತೆಂದರ್ಥ. ಮೊದಲನೆಯ ಷಟ್ಕದಲ್ಲಿ ಹೀಗೆ ಏಕದೇಶೀಯವಾದ ಐದು ಬೇರೆಬೇರೆ ಪ್ರಕಾರದ ಸಾಧನಾ ಪ್ರಣಾಲಿಗಳ ಪ್ರಸ್ತಾಪವಿದೆ. ಆರನೆಯ ಅಧ್ಯಾಯದ ಕೊನೆಯಲ್ಲಿ ಬರುವ **'ಯೋಗನಾಮಪಿ ಸರ್ವೇಷಾಂ'** ಎಂಬ ಮಾತಿನ ಧ್ವನಿಯೇ ಇದು. ಎರಡನೆಯ ಷಟ್ಕದಲ್ಲಿ ಗೀತೆಯ ಉದ್ದೇಶವನ್ನು ವಿವರಿಸಿ ಮೊದಲಿದ್ದ ಅವ್ಯಯ(ಸಮಗ್ರ) ಯೋಗದ ವಿಚಾರ ಬಂದಿದೆ. ಹಲವು ಪ್ರಕಾರಗಳ ಸಮನ್ವಯದ ದೃಷ್ಟಿ ಇಲ್ಲಿಯದು.

ಈ ಷಟ್ಕದ ಮೊದಲಲ್ಲೇ ಬರುವ **'ಯೋ ಯೋ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ'** (೭, ೨೧) ಎನ್ನುವ ಭರವಸೆಯನ್ನು ಗಮನಿಸಬೇಕು. ಯಾರು ಯಾವ ದಾರಿಯನ್ನು ಭಕ್ತಿಯಿಂದ ಶ್ರದ್ಧೆಯಿಂದ ಹಿಡಿದರೂ ಸರಿಯೇ, ಅದು ಗುರಿಯನ್ನು ಕಾಣಿಸೀತು. ಒಂಬತ್ತನೆಯ ಅಧ್ಯಾಯದ ಕೊನೆಯಲ್ಲಿ (೩೪) ಬರುವ ಒಕ್ಕಣೆಯನ್ನು ನೋಡಿ --

ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।

ಇದೇ ಸಾಲು ಮತ್ತೆ ಹದಿನೆಂಟನೆಯ ಅಧ್ಯಾಯದಲ್ಲೂ ಬಂದಿದೆ (೬೫). ಈ ಶ್ಲೋಕದ ಉತ್ತರಾರ್ಧದ ಎರಡನೆಯ ಭಾಗ ಮಟ್ಟಿಗೆ ಬೇರೆಯಾಗುತ್ತದೆ.

'ಮನ್ಮನಾ' ಎಂದರೆ ಜ್ಞಾನಯೋಗ; 'ಮದ್ಭಕ್ತ' ಎಂದರೆ ಭಕ್ತಿಯೋಗವೇ ಆಯಿತು; 'ಮದ್ಯಾಜೀ' ಎಂದರೆ ಕರ್ಮಯೋಗಿ, 'ನಮಸ್ಕುರು' ಎನ್ನುವಾಗ ಶರಣಾಗತಿ. ಇವೆಲ್ಲದರ ಪ್ರಯೋಜನ ಒಂದೇ – **'ಮಾಮೇವೈಷಸಿ'** ("ನನ್ನನ್ನೆ ಪಡೆದುಕೊಳ್ಳುವೆ"). ಕರ್ಮಯೋಗ (೨, ೪೮; ೩, ೩; ೫, ೨; ೧೩, ೨೪), ಜ್ಞಾನಯೋಗ (೩, ೩; ೩, ೨೮; ೧೩, ೨೪; ೧೬, ೧), ಭಕ್ತಿಯೋಗ (೯, ೨೭; ೧೪, ೨೬), ಜಪಯೋಗ (೮, ೧೪), ಅಭ್ಯಾಸಯೋಗ (೧೨, ೯), ಹಠಯೋಗ (೮, ೧೦ ಮತ್ತು ೧೨), ರಾಜಯೋಗ (೬, ೨೫-೨೬), ಧ್ಯಾನ ಯೋಗ(೬, ೧೯; ೧೮, ೫೨), ಅಷ್ಟಾಂಗಯೋಗ(೮, ೧೨), ಸಾಂಖ್ಯಾಯೋಗ (೧೩, ೨೪), ಸಂನ್ಯಾಸಯೋಗ(೬, ೨೧; ೯, ೨೮), ಬ್ರಹ್ಮಯೋಗ(೫, ೨೧), ಬುದ್ಧಿಯೋಗ (೧೦, ೧೦; ೧೮, ೫೭), ಆತ್ಮಯೋಗ (೧೦, ೧೮; ೧೧, ೪೭), ದೈವಯಜ್ಞಯೋಗ (೪; ೨೫), ಐಶ್ವರಯೋಗ (೯, ೫; ೧೧, ೪-೯) ಹೀಗೆ ಹಲವು ಯೋಗಪ್ರಕಾರಗಳು, ಕೆಲವು ವೇಳೆ ಹೆಸರು ಹಿಡಿದು, ಹಲವು

ವೇಳೆ ಹೆಸರು ಹೇಳದೆ, ಉಲ್ಲೇಖಿಸಿರುವುದನ್ನು ಕಾಣಬಹುದು. ಆದರೆ ಗೀತೆಯ ನಿಲುವು ಇವೆಲ್ಲ ಅಂಗಗಳಷ್ಟೆ; ಯೋಗ ಸಮಗ್ರವಾದುದು ಎಂದು. ಇವೆಲ್ಲದರ ಸಮನ್ವಯ ಗೀತೆಯ ಉದ್ದೇಶ.

ಆದ್ದರಿಂದಲೇ ದ್ವಿತೀಯಷಟ್ಕದ ಆರಂಭದಲ್ಲೇ (೭, ೧) --

ಮಯ್ಯಾಸಕ್ತಮನಾಃ ಪಾರ್ಥ ಯೋಗಂ ಯುಂಜನ್ ಮದಾಶ್ರಯಃ ।
ಅಸಂಶಯಂ ಸಮಗ್ರಂ ಮಾಂ ಯಥಾ ಜ್ಞಾಸ್ಯಸಿ ತಚ್ಛೃಣು ॥

ಎಂಬ ಪ್ರತಿಜ್ಞೆಯಿರುವುದು. ಅವರವರು ತಂತಮ್ಮ ಯೋಗವನ್ನೇ ಬಳಸಿ ಕೊಂಡು ಪರಮಾತ್ಮನಲ್ಲಿ ಮನಸಿಟ್ಟು ಪ್ರಪನ್ನರಾದರೆ ಸಮಗ್ರಯೋಗದ ಫಲ ದೊರಕುವುದೆಂದು ಅಭಿಪ್ರಾಯ. ಯೋಗದಲ್ಲಿ ಆಧ್ಯಾತ್ಮಿಕವಾದ ಅಂತರ್ದೃಷ್ಟಿ ಮುಖ್ಯವಾದುದು. ಬದುಕಿನಲ್ಲಿ ದುಃಖ ಒದಗಿಬರುವುದು ಸಹಜ; ಅದು ದುಃಖ ಸಂಯೋಗ. ಇದು ಆಗದಂತೆ ಮಾಡುವುದೇ ಯೋಗ. (೬, ೨೩, **'ತಂ ವಿದ್ಯಾದ್ದುಃಖಸಂಯೋಗವಿಯೋಗಂ ಯೋಗಂ ಸಂಜ್ಞಿತಂ'**). ಯೋಗವೆಂಬ ಮಾತಿನ ದಿಟವಾದ ಅರ್ಥ ವಿಯೋಗವೇ. ಭೋಜರಾಜನು ತನ್ನ ಪಾತಂಜಲ ಯೋಗಸೂತ್ರವೃತ್ತಿಯಲ್ಲಿ ಇದನ್ನೇ ಸೂಚಿಸಿದ್ದಾನೆ --

ಪತಂಜಲಿ ಮುನೇರುಕ್ತಿಃ ಕಾಪ್ಯಪೂರ್ವಾ ಜಯತ್ಯಸೌ ।
ಪುಂಪ್ರಕೃತ್ಯೋರ್ವಿಯೋಗೋಽಪಿ ಯೋಗ ಇತ್ಯುದಿತೋ ಯಯಾ ॥

ಯೋಗ ಎಂದರೆ ಅಮರಕೋಶದಲ್ಲಿ (೨, ೧೯೯) ಕಾಣಿಸಿರುವ --

ಯೋಗಃ ಸಂನಹನೋಪಾಯಧ್ಯಾನ ಸಂಗತಿಯುಕ್ತಿಷು

ಸಿದ್ಧನಾಗುವುದು, ಸಾಧನವಾಗಿ ಬಳಸಿಕೊಳ್ಳುವುದು, ಚಿಂತಿಸುವುದು(ಚಿತ್ತ ಏಕಾಗ್ರತೆ), ಸಂಬಂಧ ಏರ್ಪಡಿಸುವುದು ಮತ್ತು ಜೋಡಿಸುವುದು. ಗೀತೆಯಲ್ಲಿ ಯೋಗವೆಂಬ ಮಾತನ್ನು ಉಪಾಯ ಅಥವಾ ಜ್ಞಾನಸಾಧನ ಎಂಬರ್ಥದಲ್ಲೇ ಹೆಚ್ಚಾಗಿ ಬಳಸಿದ್ದಾರೆ. ಕೆಲಸಮಾಡುವುದರಲ್ಲಿ ಜಾಣತನ (**'ಯೋಗಃ ಕರ್ಮಸು ಕೌಶಲಂ'** ೨, ೫೦) ಎನ್ನುವಾಗ ಇದೇ ಅರ್ಥ.

೮. ಸಾರೋದ್ಧಾರ

ರಥರೂಪಕವೇ ಭಗವದ್ಗೀತೆಯ ಮೂಲವೆಂದು ಭಾವಿಸಿದರೆ ತಪ್ಪಾಗದು. ಈ ರೂಪಕದ ಪ್ರಸ್ತಾವ ಆಗಲೇ ಬಂದಿದೆ. ಸಂದರ್ಭ ಕುರುಕ್ಷೇತ್ರದಲ್ಲಿ ನಡೆದ ಹಗರಣ. ಈ ಹಗರಣವು ಸಾಂಕೇತಿಕವಾದುದು. ಕುರುಕ್ಷೇತ್ರಯುದ್ಧ ಎಲ್ಲಿಯೋ ಎಂದೋ ನಡೆದದ್ದು ಎಂದು ಭಾವಿಸ ಬಾರದು. ನಮ್ಮ ಒಡಲಲ್ಲಿ ಅನುಗಾಲವೂ ನಡೆಯುತ್ತಿರುವ ಹಗರಣ ಅದು. ಪಾಂಡವರೆಂದರೆ ಒಳಿತಿಗೆ ಒಲಿದವರು (ಪಂಡಾ ಎಂದರೆ ಆತ್ಮಜ್ಞಾನ; ಅದನ್ನು ಬಯಸುವವರು); ಕೌರವರು ಕೇಡಿಗರು (ಕುರು ಎಂದರೆ ಕರ್ಮ; ಸಕಾಮಕರ್ಮದಲ್ಲಿ ತೊಡಗಿದವರು). ನಮ್ಮಲ್ಲಿ ಒಬ್ಬೊಬ್ಬರಲ್ಲೂ ಇರುವ ಪ್ರವೃತ್ತಿಗಳು ಇವು.

ಹಗರಣದಲ್ಲಿ ತೊಡಗಿದ ಅರ್ಜುನ ಹೇಳಿಕೇಳಿ ನರ; ಎಂದರೆ ಮನುಷ್ಯ. ನಮ್ಮಲ್ಲಿ ಒಬ್ಬೊಬ್ಬರೂ ಅರ್ಜುನನೇ; ಅವನು ಸರ್ವಲೋಕಸಾಕ್ಷಿ. ಅರ್ಜುನನಿಗೆ ಒದಗಿದ ವಿಷಾದ ನಮ್ಮೆಲ್ಲರನ್ನೂ ಒಂದಲ್ಲ ಒಂದು ಬಗೆಯಲ್ಲಿ ಕಾಡುತ್ತದೆ. ಈ ವಿಷಾದವು ಎಲ್ಲರ ಸಾಂಸಾರಿಕ ಜೀವನಕ್ಕೆ ಅಂಟಿಕೊಂಡದ್ದು; ರಾಗ, ದ್ವೇಷ, ಮೋಹಗಳ ಮಡಿಲಿನಿಂದ ಎದ್ದದ್ದು. ಇದರಿಂದ ಪಾರಾಗಬೇಕೆಂಬುದೇ ಬದುಕಿನ ದೊಡ್ಡ ಬಯಕೆ. ಎಲ್ಲರ ಅಳಲೂ ಅದೇ. ಪಾರಾಗುವುದು ಹೇಗೆಂಬ ಹವಣಿಕೆ ಇದ್ದವರಿಗೆ ಗೀತೆ ದಾರಿ ತೋರಿಸೀತು, ಅರ್ಜುನನಿಗೆ ಕೃಷ್ಣ ದಾರಿ ತೋರಿಸಿದಂತೆ.

ನರನಿಗಿಂತ ನಾರಾಯಣನು ಬೇರೆಯವನಲ್ಲ. ಮಹಾಭಾರತದಲ್ಲೇ (ಉದ್ಯೋಗಪರ್ವದಲ್ಲಿ) **'ನಾರಾಯಣೋ ನರಶ್ಚೈವ ಸತ್ತ್ವಮೇಕಂ ದ್ವಿಧಾ ಕೃತಂ'** ಎಂಬ ಮಾತಿದೆ. ಒಂದೇ ತತ್ತ್ವದ ಎರಡು ಮುಖಗಳು ಪರಮಾತ್ಮ, ಜೀವಾತ್ಮರು. ಜೀವಾತ್ಮನಿಗೆ ಸಂಸಾರದ ನಂಟಿದೆ; ಪರಮಾತ್ಮನಿಗೆ ಇಲ್ಲ. ಸಂಸಾರದ ದುಃಖದಲ್ಲಿ ತೊಳಲುವ ಜೀವಾತ್ಮನಿಗೆ ನೆರವಾಗುವವನು ನಾರಾಯಣ (ಪರಮಾತ್ಮ).

ನರನಿಗೆ ದಾರಿಕಾಣಿಸುವವನು ಆಸರೆಯಾಗುವವನು ನಾರಾಯಣ(ಕೃಷ್ಣ). ನಾರಾಯಣ ಎನ್ನುವ ಮಾತಿನ ಅರ್ಥವೇ ಅದು (**'ನರಾಣಾಂ ಅಯನಂ'**). ನರನ ಹತ್ತಿರವೇ ಇರುವವನು ನಾರಾಯಣ; ನಮ್ಮ ಒಡಲೊಳಗೇ

ಇರುವವನು. **'ಹೃದ್ದೇಶೇಽರ್ಜುನ ತಿಷ್ಠತಿ'** ಎಂದೇ ಗೀತೆ ಹೇಳುವುದು. ಅವನನ್ನು ನಾವು ಗುರುತಿಕೊಳ್ಳಬೇಕಷ್ಟೆ; ಅವನ ನೆರವನ್ನು ಕೋರಬೇಕಷ್ಟೆ; ಸರಿಯಾಗಿ ಬದುಕುವ ಹದನವನ್ನು ಅವನಿಂದ ಅರಿತುಕೊಳ್ಳಬೇಕಷ್ಟೆ. ಇದು ಜ್ಞಾನ, ಭಕ್ತಿ, ಕರ್ಮ ಮೂರು ಬೇರೆ ಬೇರೆ ಹವಣಿಕೆಗಳಲ್ಲ; ಒಂದೇ ದಾರಿಯ ವಿವರಗಳು.

ಗೀತೆಯ ಉಪದೇಶ ಯೋಗವಾದರೆ, ಗೀತಾಚಾರ್ಯನಾದ ಕೃಷ್ಣನು ಯೋಗೇಶ್ವರ. ತಾನೇ ಯೋಗದ ದಾರಿ ಹಿಡಿದು, ಅದರಲ್ಲೇ ಗುರಿಯನ್ನು ಮುಟ್ಟಿದ್ದವನು, ಕೃತಕೃತ್ಯನಾದವನು. ಅವನು ಮಾಡಲೇಬೇಕಾದ ಕೆಲಸ-ವೇನು ಇರಲಿಲ್ಲ; ಆದರೂ ಲೋಕಸಂಗ್ರಹದ ದೃಷ್ಟಿಯಿಂದ ವ್ಯವಹಾರ ಪ್ರಪಂಚದಲ್ಲಿ ತೊಡಗಿದವನು. ಯುದ್ಧದಲ್ಲಿ ಶಸ್ತ್ರಾಸ್ತ್ರಗಳನ್ನು ಹಿಡಿಯ-ದಿದ್ದರೂ, ಅರ್ಜುನನ ಸಾರಥಿಯಾಗಲು ಸಮ್ಮತಿಸಿದವನು. ಅವನಲ್ಲಿ ಆಚಾರ-ವಿಚಾರಗಳ ನಡುವೆ ಅಂತರವಿರಲಿಲ್ಲ. ಬದುಕಿನ ಒಟ್ಟಾರೆ ಕಾಣ್ಕೆ ಅವನಿಗಿದ್ದಿತು.

ಅವನಿದ್ದ ಕಡೆ ಅರ್ಜುನನಿರಬೇಕು. **'ಯತ್ರ ಯೋಗೇಶ್ವರಃ ಕೃಷ್ಣೋ, ತತ್ರ** (ಯತ್ರ ಎಂದು ಮೂಲಪಾಠ) **ಪಾರ್ಥೋ ಧನುರ್ಧರಃ'** ಎನ್ನೋಣ. ವಿಷಾದ ದಿಂದ ಧನುಸ್ಸನ್ನು ಕೆಳಗೆ ಬಿಸುಟ (**'ವಿಸೃಜ್ಯ ಸಶರಂ ಚಾಪಃ ಶೋಕಸಂವಿಗ್ನ ಮಾನಸಃ'**) ಅರ್ಜುನನಲ್ಲ; 'ನನ್ನ ಮೋಹ ಕಳೆಯಿತು. ನೀನು ಹೇಳಿದಂತೆ ಮಾಡುತ್ತೇನೆ' (**'ಕರಿಷ್ಯೇ ವಚನಂ ತವ'**) ಎಂದು ನಿರ್ಧರಿಸಿದ ಅರ್ಜುನ, ತನ್ನ ಕರ್ತವ್ಯವನ್ನು ನಿರ್ವಹಿಸಲು ಸಿದ್ಧನಾದ ಅರ್ಜುನ. ಯೋಗದ ಪ್ರಯೋಜನವಿರುವುದು ಇಲ್ಲಿಯೇ. ಆದ್ದರಿಂದಲೇ ಯೋಗೇಶ್ವರನಾದ ಕೃಷ್ಣನು ಧನುರ್ಧರನಾದ ಅರ್ಜುನನಿಗೆ 'ನೀನು ಯೋಗಿಯಾಗು' ಎಂದು ಉಪದೇಶಮಾಡಿದ್ದು (**'ತಸ್ಮಾತ್ ತ್ವಂ ಯೋಗೀ ಭವಾರ್ಜುನ'**).

ಯುದ್ಧಮಾಡೆಂದು ಅರ್ಜುನನಿಗೆ ಕೃಷ್ಣನೇನು ಪ್ರೇರಣೆಮಾಡಲಿಲ್ಲ. ಕೃಷ್ಣನು ಸಾರಥ್ಯವನ್ನು ಒಪ್ಪಿಕೊಂಡು ಬಂದದ್ದು ಯುದ್ಧ ನಿಶ್ಚಯವಾದ ಮೇಲೇ. ಮಹಾಭಾರತದ ಕತೆಯಲ್ಲಿ ಯುದ್ಧ ನಡೆಯಬಾರದೆಂದೇ ಕೃಷ್ಣ ಬಹುವಾಗಿ ಪ್ರಯತ್ನ ಪಟ್ಟ. ಉದ್ಯೋಗಪರ್ವದಲ್ಲಿ **'ಯದಯುದ್ಧೇನ ಲಭ್ಯೇತ ತನ್ಮೇ ಬಹುಮತಂ ಭವೇತ್'** (ಯುದ್ಧವಿಲ್ಲದೆ ನಿಮಗೆ ರಾಜ್ಯಲಾಭವಾಗುವು ದಾದರೆ ಅದು ನನಗೆ ತುಂಬ ಇಷ್ಟವಾದೀತು) ಎನ್ನುತ್ತಾನೆ ಕೃಷ್ಣ.

ಇನ್ನು ಸಮತೆಯ ಯೋಗವನ್ನು ಉಪದೇಶಿಸಿದ ಕೃಷ್ಣ ಪಾಂಡವ ಹಿತೈಷಿ, ಕೌರವದ್ವೇಷಿ ಎನ್ನುವಂತೆಯೂ ಇಲ್ಲ. ಕೃಷ್ಣನೇ ದುರ್ಯೋಧನನಿಗೆ ಹೇಳುತ್ತಾನೆ --

ಸಮಂ ಹಿ ಭವತಃ ಸಖ್ಯಂ ಮಮ ಚೈವಾಽರ್ಜುನೇಽಪಿ ಚ ।
ಸಾಹಾಯ್ಯಮುಭಯೋರೇವ ಕರಿಷ್ಯಾಮಿ ಸುಯೋಧನ ॥

"ಅರ್ಜುನನೊಂದಿಗೆ ನನ್ನ ಸ್ನೇಹ ಎಷ್ಟೋ, ಅಷ್ಟೇ ನನ್ನ ಸ್ನೇಹ ನಿನ್ನಲ್ಲಿ, ನಿಮ್ಮಿಬ್ಬರಲ್ಲಿ ನಾನು ಭೇದವನ್ನೆಣಿಸಲಾರೆ. ಯುದ್ಧದಲ್ಲಿ ನಾನು ನೇರವಾಗಿ ಪಾಲ್ಗೊಳ್ಳಲಾರೆ; ಶಸ್ತ್ರವನ್ನು ಹಿಡಿಯುವುದಿಲ್ಲವೆಂದು ನಿರ್ಧರಿಸಿದ್ದೇನೆ. (**ಅಯುಧ್ಯಮಾನಃ ಸಂಗ್ರಾಮೇ ನ್ಯಸ್ತ ಶಸ್ತ್ರಃ** ।). ಆದರೆ ನಾನು ಏನು ಸಹಾಯ ಮಾಡಬಹುದೋ ಅದನ್ನು ನಿಮ್ಮಿಬ್ಬರಿಗೂ ಸಮಾನವಾಗಿಯೇ ಮಾಡುತ್ತೇನೆ." ಇದು ಕೃಷ್ಣನ ನಿಲುವು. ಅವನು ತುಂಬಿದ ಸಭೆಯಲ್ಲಿ ಮಾಡಿದ ಕರೆಯನ್ನಾದರೂ ನೋಡಿ --

ಏವಂಗತೇ ಧರ್ಮಸುತಸ್ಯ ರಾಜ್ಞೋ
ದುರ್ಯೋಧನಸ್ಯಾಪಿ ಚ ಯದ್ಧಿತಂ ತತ್ ।
ತಚ್ಚಿಂತಯಧ್ವಂ ಕುರುಪುಂಗವಾನಾಂ
ಧರ್ಮ್ಯಂ ಚ ಯುಕ್ತಂ ಚ ಯಶಸ್ಕರಂ ಚ ॥

"ಧರ್ಮರಾಯನಿಗೂ ದುರ್ಯೋಧನನಿಗೂ ಯಾವುದು ಸಮಾನವಾಗಿ ಹಿತವೋ, ಯಾವುದು ಕುರುವಂಶದವರಿಗೆಲ್ಲ ಒಳ್ಳೆಯದೋ ಆ ಧರ್ಮವನ್ನು ಕುರಿತು ನೀವೆಲ್ಲ ಆಲೋಚನೆಮಾಡಿ!" ಇಂಥ ಸ್ಥಿತಪ್ರಜ್ಞನೇ ಇಲ್ಲಿ ವಕ್ತಾರ.

ಯುದ್ಧಕ್ಕೆಂದು ಹೊರಟುನಿಂತ ಉತ್ಸಾಹಿ ಅರ್ಜುನನು ಇದ್ದಕ್ಕಿದ್ದಂತೆ ರಣವಿಮುಖನಾಗಿ, ಭಿಕ್ಷೆಎತ್ತಿ ಬದುಕುವುದು ಸಂಗ್ರಾಮದಲ್ಲಿ ವಿಜಯಕ್ಕಿಂತ ಶ್ರೇಷ್ಠವಾದುದು ಎಂದು ವಿಷಾದಗೊಂಡು ನಿಂತಾಗ, ಕೃಷ್ಣನಲ್ಲಿ '**ಶಿಷ್ಯಸ್ತೇಹಂ ಶಾಧಿ ಮಾಂ ತ್ವಾಂ ಪ್ರಪನ್ನಂ**' ಎಂದು ಬೇಡಿಕೊಂಡಾಗ, ಕೃಷ್ಣನು ಮಾಡಬೇಕಾದುದೇನು? ಕಾಶಿಗೆಂದು ಹೊರಟವನು ರಾಮೇಶ್ವರದ ಕಡೆ ಹೆಜ್ಜೆ ಹಾಕುತ್ತಿದ್ದರೆ ಅವನಿಗೆ ಹಿರಿಯವನಾದವನು ಕಾಶಿಗೆ ಸರಿಯಾದ ದಾರಿ ತೋರಿಸಬೇಕಷ್ಟೆ? ಕೃಷ್ಣ ಮಾಡಿದುದು ಅಷ್ಟೆ. ಕಾಶಿಗೆ ಹೋಗೆಂದು ಆ

ಹಿರಿಯನೇನು ಹೇಳಿಕಳುಹಿಸಲಿಲ್ಲ. ಕಾಶಿಗೆ ಹೋಗಬೇಕೆಂದು ಪಯಣಿಗನದೇ ನಿರ್ಧಾರ; ದಾರಿ ತಪ್ಪಿದಾಗ ಅವನನ್ನು ಹಿಡಿದು ಸರಿಯಾದ ದಾರಿ ತೋರಿಸಿ ಕಾಶಿಯತ್ತ ಕಳುಹಿಸುವುದು ಹಿರಿಯನ ಕೆಲಸ. ಹಾಗೆಯೇ, ಯುದ್ಧಮಾಡಬೇಕೆಂಬುದು ಅರ್ಜುನನದೇ ನಿರ್ಧಾರ; ಅದರಲ್ಲಿ ಕೃಷ್ಣನ ಕೈವಾಡವೇನಿರಲಿಲ್ಲ, ಆದರೆ ಅವನು ಯುದ್ಧಕ್ಕೆ ಅಂಜಿ ಹಿಮ್ಮೆಟ್ಟಿದಾಗ ಕೃಷ್ಣ **'ಯುಧ್ಯಸ್ವ', 'ಯುದ್ಧಾಯ ಕೃತನಿಶ್ಚಯಃ'** ಎಂದೆಲ್ಲ ಹೇಳಬೇಕಾಯಿತು. ಇಲ್ಲಿ ಯುದ್ಧ ಎಂದರೆ ಕರ್ತವ್ಯದ ಸಂಕೇತ ಅಷ್ಟೆ, ಶಸ್ತ್ರಾಸ್ತ್ರಗಳನ್ನೆತ್ತಿಕೊಂಡು ಹೋರಾಡುವುದಲ್ಲ; ದ್ವೇಷಬುದ್ಧಿಯನ್ನು ಬೆಳೆಸಿಕೊಳ್ಳುವುದಿಲ್ಲ.

ಗೀತೆಯ ಉಪದೇಶ -- ನೀನು ಮಾಡಬೇಕಾದುದನ್ನು ಮಾಡು; ಕರ್ತವ್ಯವನ್ನು ಬಿಡಬೇಡ. ನಿನ್ನ ಸ್ವಧರ್ಮ ಎಂದಿಗೂ ತ್ಯಾಜ್ಯವಲ್ಲ, ಆದರೆ ಅದು ನಿನ್ನ ಹಿತಕ್ಕೆ ಅಡ್ಡಿಬಾರದಂತೆ ಮಾಡಿಕೊ. ಇದೇ ಉಪಾಯ, ಇದೇ ಯೋಗ. ಮಾಡುವಾಗ 'ನಾನು ಮಾಡುತ್ತೇನೆ' ಎಂಬ ಅಭಿಮಾನ ಬೇಡ; 'ಇದನ್ನು ಮಾಡಿ ಅದನ್ನು ಪಡೆದುಕೊಳ್ಳುತ್ತೇನೆ' ಎನ್ನುವ ಸಂಗ ಬೇಡ. ಭಗವದರ್ಪಣ ಬುದ್ಧಿಯಿಂದ ಮಾಡು. ಗೀತೆ ತೋರಿಸುವ ದಾರಿ ವಿರಕ್ತಿಯದಲ್ಲ; ಅದು ಕಾಡಿಗೋಡುವ ಹವಣಿಕೆಯದಲ್ಲ, ಇಲ್ಲಿಯೇ ಈಜಬೇಕು, ಈಜಿ ಜಯಿಸಬೇಕು ಎಂಬ ಛಲದ್ದು. ಇರಬೇಕು, ಇರದಿರಬೇಕು ಎಂಬ ಉಪಾಯದ್ದು. ಗೀತೆಯಲ್ಲಿ ಕಂಡುಬರುವ ಹೊಸ ಪರಿ-ಭಾಷೆಯಲ್ಲಿ ಸ್ವಧರ್ಮ, ಲೋಕಸಂಗ್ರಹ ಸೇರುತ್ತವೆ. ವ್ಯಕ್ತಿಯು ತನ್ನ ಹಿತವನ್ನು ತಾನೇ ಕೈಗೂಡಿಸಿಕೊಳ್ಳಬೇಕು, ತನಗೆ ವಿಹಿತವಾದ ಕರ್ಮಗಳನ್ನು ಮಾಡುತ್ತಲೆ ಇರಬೇಕು; ಬಿಡಬಾರದು. ಆದರೆ ಕರ್ಮ ಮಾಡು-ವಾಗ ತಾನು ಮಾಡುತ್ತಿದ್ದೇನೆಂಬ ಕರ್ತೃತ್ವಾಭಿಮಾನವನ್ನು ಬಿಡಬೇಕು. ಪ್ರಯೋಜನದ ಸಲುವಾಗಿಯೇ ಮಾಡುತ್ತಿದ್ದೇನೆಂಬ ಎಣಿಕೆಯನ್ನೂ ಬಿಡಬೇಕು. ಇದು ಸ್ವಧರ್ಮದ ಕಲ್ಪನೆ. ಇದನ್ನೇ ನಿಷ್ಕಾಮಕರ್ಮ ಎಂದು ಕರೆದಿದ್ದಾರೆ, ಅನಾಸಕ್ತಿಯೋಗ ಎಂದು ಕರೆದಿದ್ದಾರೆ. ಆದರೆ ವ್ಯಕ್ತಿಯು ತನ್ನ ಹಿತವನ್ನು ಮಾತ್ರ ಸಾಧಿಸಿಕೊಂಡರೆ ಸಾಲದು. ಸುತ್ತಮುತ್ತಲವರ, ಪರಿವಾರದ, ಸಮುದಾಯದ ಹಿತವನ್ನೂ ಸಾಧಿಸಬೇಕು. ಇದು ಲೋಕಸಂಗ್ರಹ.

ಭಾಗವತದಲ್ಲಿ(೮, ೭, ೪೪) ಈ ಮಾತು ಬರುತ್ತದೆ. ಲೋಕಸಂಗ್ರಹದ ಸ್ವರೂಪವನ್ನು ಇದು ಮನಗಾಣಿಸುತ್ತದೆ.

ತಪ್ಯಂತೇ ಲೋಕತಾಪೇನ ಸಾಧವಃ ಪ್ರಾಯಶೋ ಜನಾಃ ।
ಪರಮಾರಾಧನಂ ತದ್ಧಿ ಪುರುಷಸ್ಯಾಖಿಲಾತ್ಮನಃ ॥

ಸಾಧುಜನರು ಇತರರ ದುಗುಡವನ್ನು ಕಂಡು ತಾವೂ ಮರುಗಿ, ಅವರ ನೆರವಿಗೆ ಬರುತ್ತಾರೆ. ಹಾಗೆ ಮಾಡುವುದೇ ಭಗವಂತನ ಆರಾಧನೆ; ಭಗವಂತನು ಎಲ್ಲರ ಆತ್ಮನೂ ಆಗಿರುವನೆಂಬ ತತ್ತ್ವದ ಅರಿವು ಅವರಿ-ಗುಂಟು. ಅರಿವಿರುವುದು ಜ್ಞಾನ; ಆ ಅರಿವು ನಡೆಯಲ್ಲಿ, ನುಡಿಯಲ್ಲಿ ಮೂಡಿಕೊಳ್ಳುವುದು ಕರ್ಮ. ನನ್ನ ಪ್ರಯೋಜನಕ್ಕಾಗಿ ನಾನಿದನ್ನು ಮಾಡುತ್ತಿಲ್ಲ; ನನ್ನ ಒಡಲಲ್ಲಿರುವ ಪರಮಾತ್ಮನ ಪೂಜೆಯೆಂದು ಮಾಡುತ್ತಿರುವೆ ಎಂದು ಭಾವಿಸಿದಾಗ ಅದು ಭಕ್ತಿ.

ಸ್ವಧರ್ಮದ ಹಿನ್ನೆಲೆಯಲ್ಲಿರಬೇಕಾದುದು ಜ್ಞಾನ; ಲೋಕಸಂಗ್ರಹದ ಹಿನ್ನೆಲೆಯಲ್ಲಿರುವುದು ಕರ್ಮ. ಎರಡನ್ನೂ ಕೂಡಿಸಿಕೊಳ್ಳುವುದು ಭಕ್ತಿ. ವೈದಿಕ ನೆಲೆಯ ಧರ್ಮವನ್ನು ತಿಳಿಯಹೇಳಲು ಹೊರಟದ್ದು ಗೀತೆ ಎಂದು ಶಂಕರಾಚಾರ್ಯರು ವಿವರಿಸಿದರು; ಧರ್ಮದಲ್ಲಿ ಪ್ರವೃತ್ತಿ-ನಿವೃತ್ತಿಗಳೆಂಬ ಎರಡು ಪ್ರಕಾರಗಳಿರುವುದನ್ನೂ ಅವರು ಹೇಳಿದರು. ಗೀತೆಯಲ್ಲಿ ಪ್ರವೃತ್ತಿ ಎಂದರೆ ಕರ್ಮವನ್ನು ಮಾಡುವುದು, ಸ್ವಧರ್ಮದಲ್ಲಿ ತೊಡಗಿರು-ವುದು; ನಿವೃತ್ತಿಯೆಂದರೆ ಸಂಗವನ್ನು, ಅಭಿಮಾನವನ್ನು, ಕಾಮನೆಯನ್ನು ಬಿಡುವುದು. ಒಂದಕ್ಕೊಂದು ವಿರುದ್ಧವಾದದ್ದೆಂಬ ಕಲ್ಪನೆ ಗೀತೆಯದಲ್ಲ. ಗೀತೆಯಲ್ಲಿ ಸಂನ್ಯಾಸ ಎನ್ನುವ ಮಾತು ಮತ್ತೆ ಮತ್ತೆ ಬರುತ್ತದೆ; ಅದಕ್ಕಿಂತ ಹೆಚ್ಚಾಗಿ 'ಕುರು'(ಮಾಡು) ಎಂಬ ಆದೇಶ ಬರುತ್ತದೆ. ಸಂನ್ಯಾಸವೆಂದರೆ ಸಂಕಲ್ಪಸಂನ್ಯಾಸವಷ್ಟೆ. ಜ್ಞಾನಿಯ ನಿಷ್ಠೆ ಅದೇ. ಮಾಡಬೇಕಾದುದನ್ನು ಉಪಾಯವಾಗಿ (ಎಂದರೆ ಫಲತ್ಯಾಗ, ಕರ್ತೃತ್ವಾಭಿಮಾನ ತ್ಯಾಗ, ಕಾಮನಾತ್ಯಾಗ ಪೂರ್ವಕವಾಗಿ) ಮಾಡಿದರೆ ಅದು ಯೋಗವಾಯಿತು.

೯. ಮಾಡುವ ಕೆಲಸಕ್ಕೆ ಹೊಣೆ ಯಾರು?

'ಮನುಷ್ಯನಾದವನು ಕೆಲಸಗಳಲ್ಲಿ ತೊಡಗಿರುತ್ತಲೆ ನೂರು ವರ್ಷಕಾಲ ಬದುಕಲು ಬಯಸಬೇಕು' (**'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ'**). ಇದು ಈಶಾವಾಸ್ಯ ಉಪನಿಷತ್ತಿನದೊಂದು ಮಾತು. ಭಗವದ್ಗೀತೆಯೆಲ್ಲ ಈ ಮಾತಿನ ವ್ಯಾಖ್ಯಾನವೆ ಎಂದರೂ ನಡೆದೀತು. ಆದರೆ ಈ ಮಾತಿನ ಇಂಗಿತವೇನು? ಕೆಲಸಮಾಡದೆ ಯಾರಿರುತ್ತಾರೆ? ಕೆಲಸವೆಂದರೆ ದೊಡ್ಡದೊಂದು ಉದ್ದಿಮೆಯನ್ನು ನಡೆಸುವುದು, ದೇಶ-ವನ್ನಾಳುವುದು ಇಂಥ ಕೆಲಸವೆ? ಕಣ್ಣಿನ ರೆಪ್ಪೆ ಮಿಟುಕಿಸುವುದೂ ಕೆಲಸವಲ್ಲವೆ? ಕೈಕಾಲುಗಳನ್ನಾಡಿಸುವುದು, ಮಾತನಾಡುವುದು, ಊಟ ಮಾಡುವುದು, ಮಲಗುವುದು ಇವೆಲ್ಲ ಕೆಲಸಗಳಲ್ಲವೆ? ಉಪನಿಷತ್ತಾಗಲಿ, ಗೀತೆಯಾಗಲಿ 'ಕರ್ಮ'ವೆನ್ನುವಾಗ ಇಂಥ ನಿಸರ್ಗಸಿದ್ಧವಾದ ಕ್ರಿಯೆಗಳನ್ನು ಸೂಚಿಸುವುದಿಲ್ಲ. ಮನಸ್ಸಿಟ್ಟು, ಪ್ರಯತ್ನಪೂರ್ವಕವಾಗಿ, ಶ್ರಮವಹಿಸಿ ಮಾಡುವ ಕ್ರಿಯೆ 'ಕರ್ಮ'ವೆನಿಸಿಕೊಳ್ಳುವುದು. ಯಾವುದನ್ನು ನಾವು ಮಾಡಬಹುದೋ, ಮಾಡದೆ ಬಿಡಬಹುದೋ, ಒಂದಲ್ಲ ಇನ್ನೊಂದು ರೀತಿಯಿಂದ ಮಾಡಬಹುದೋ ಅದು ಕರ್ಮ. ಯಾವುದಾದರೊಂದು ಪ್ರಯೋಜನವನ್ನು ಉದ್ದೇಶಿಸಿ ಮಾಡುವುದು ಕಾಮ್ಯಕರ್ಮ; ವಿಹಿತವಾದು ದೆಂದು, ಮಾಡದಿದ್ದರೆ ದೋಷವಾದೀತೆಂದು, ಮಾಡುವುದು ನಿತ್ಯಕರ್ಮ. ಮಾಡಬಾರದ್ದನ್ನು ಮಾಡುವುದು ನಿಷಿದ್ಧಕರ್ಮ. ಎಲ್ಲವೂ ದಿಟವಾಗಿ ಕರ್ಮಗಳೇ. ಎಲ್ಲ ಮನುಷ್ಯರೂ ಇಂಥವನ್ನು ಮಾಡುತ್ತಲೆ ಇರುತ್ತಾರೆ. ಆದರೆ ಪರಿಭಾಷೆಯಾಗಿ, ಮಾಡಬೇಕಾದದ್ದನ್ನು ಮಾಡುವುದು ಕರ್ಮ; ಅದನ್ನು ಮಾಡದೆ ಬಿಡುವುದು ಅಕರ್ಮ, ಮಾಡಬಾರದ್ದನ್ನು ಮಾಡು-ವುದು ವಿಕರ್ಮ, ಇದು ಗೀತೆಯಲ್ಲಿ ಬರುವ ವಿಚಾರ.

ಪಂಚೈತಾನಿ ಮಹಾಬಾಹೋ ಕಾರಣಾನಿ ನಿಬೋಧ ಮೇ ।
ಸಾಂಖ್ಯೇ ಕೃತಾಂತೇ ಪ್ರೋಕ್ತಾನಿ ಸಿದ್ಧಯೇ ಸರ್ವಕರ್ಮಣಾಂ ॥ (೧೮, ೧೩)

ಮಾಡಬೇಕಾದ ಕೆಲಸವನ್ನು ಕರ್ಮವೆಂದೆವಲ್ಲ? ಇಂಥ ಒಂದು ಕೆಲಸ, ಅದು ಯಾವುದೇ ಆಗಲಿ, ಕೈಗೂಡಬೇಕಾದರೆ ಐದು ವಿವರಗಳು ಹಿನ್ನೆಲೆ ಯಲ್ಲಿರಬೇಕು. ಇದನ್ನು ಗೀತೆಯ ಮೂಲನೆಲೆಯಲ್ಲಿರುವ ಸಾಂಖ್ಯ ದರ್ಶನವೂ ವೇದಾಂತವೂ ತಿಳಿಯಹೇಳಿವೆ. ಯೋಗಶಾಸ್ತ್ರವೆನಿಸಿದ

ಗೀತೆಯು ಸಾಂಖ್ಯಸಿದ್ಧಾಂತದ ಚೌಕಟ್ಟಿನಲ್ಲಿಯೆ ಮೈದಳೆದು, ವೇದಾಂತವನ್ನೂ ಒಳಗೊಂಡಿದೆ. ವೇದಾಂತದಂತೆ ಸಾಂಖ್ಯವೂ ಉಪನಿಷತ್ತಿನಿಂದಲೇ ಹೊರಹೊಮ್ಮಿದ್ದು. ಗೀತೆಯು ಉಪನಿಷತ್ತಿನ ಸಾರಸಂಗ್ರಹವೇ ತಾನೇ? ಸಾಂಖ್ಯದರ್ಶನದಲ್ಲಿ ಪ್ರಕೃತಿ, ಪುರುಷ ಎನ್ನುವ ವಿಭಾಗ; ವೇದಾಂತದಲ್ಲಿ ಮಾಯೆ, ಈಶ್ವರ ಎನ್ನುವ ವಿಭಾಗ. ಎರಡೂ ಕೂಡಿಕೊಂಡಾಗಲೇ ಕೆಲಸ; ಕರ್ಮ. ಯಾವುದಾದರೂ ಗುರಿಯಿಲ್ಲದಿದ್ದರೆ ಕೆಲಸ ಹೇಗೆ? ಗುರಿಯನ್ನು ಮುಟ್ಟಿದಾಗ ಕೆಲಸ ಕೈಗೂಡಿತೆಂದರ್ಥ. ಅದನ್ನೇ ಸಿದ್ಧಿಯೆನ್ನುವುದು. ಅದಕ್ಕೆ ಸಾಧನವಾಗುವುದು ಕರ್ಮ. ಹೀಗೆ ಕರ್ಮಸಿದ್ಧಿಯಾಗಬೇಕೆಂದರೆ ಐದು ವಿವರಗಳು ಒಟ್ಟುಗೂಡಬೇಕು. ಅವು ಯಾವುವೆಂಬುದನ್ನು ಮುಂದಿನ ಶ್ಲೋಕ ಹೇಳುತ್ತದೆ.

ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಂ ।
ವಿವಿಧಾಶ್ಚ ಪೃಥಕ್ ಚೇಷ್ಟಾ ದೈವಂ ಚೈವಾತ್ರ ಪಂಚಮಂ ॥ (೧೮, ೧೪)

ಯಾವ ಕರ್ಮದ ಸಿದ್ಧಿಯಾಗಬೇಕಾದರೂ (ಎಂದರೆ ಹಿಡಿದ ಯಾವುದೇ ಕೆಲಸ ಕೈಗೂಡಲು) ಒಟ್ಟುಗೂಡಬೇಕಾದ ಐದು ವಿವರಗಳಲ್ಲಿ ಮೊದಲನೆ-ಯದು ಅಧಿಷ್ಠಾನ, ಎಂದರೆ ಕೆಲಸ ಮಾಡಲು ನೆಲೆ, ಆಸರೆ, ಶರೀರವಿಲ್ಲದೆ ಕೆಲಸ ಮಾಡಲು ಆಗುತ್ತದೆಯೆ? ಶರೀರವು ಅಧಿಷ್ಠಾನ. ಸುಖ ದುಃಖಗಳನ್ನು ಅನುಭವಿಸುವುದಕ್ಕೆ ಎಚ್ಚರ, ಕನಸು, ನಿದ್ರೆಗಳೆಂಬ ಮೂರು ಅವಸ್ಥೆಗಳಿಗೆ, ಬಂಧ-ಮೋಕ್ಷಗಳಿಗೆ ಆಸರೆಯಾಗಿರುವುದು ಶರೀರವೇ. ನೆಲವಿಲ್ಲದೆ ಶರೀರವಿರುವುದು ಹೇಗೆ? ಕೆಲಸ ಸಾಗುವುದು ಹೇಗೆ? ಭೂಮಿಯೂ ಅಧಿಷ್ಠಾನ, ಅವ್ಯಕ್ತವಾದ ಪ್ರಕೃತಿಯೂ ಅಧಿಷ್ಠಾನವೇ.

ಎರಡನೆಯದು ಕೆಲಸ ಮಾಡುವವನು ಕರ್ತಾ, ಎಂದರೆ ಜೀವ. ಕೆಲಸದ ಉದ್ದೇಶವಿರುವುದು, ಪ್ರಯೋಜನವಿರುವುದು ಜೀವನಿಗೆ. ದೇಹ, ಇಂದ್ರಿಯ, ಮನಸ್ಸು, ಬುದ್ಧಿ ಇವುಗಳನ್ನೆಲ್ಲ ಹೊಂದಿರುವವನು ಜೀವನೆನಿಸಿಕೊಳ್ಳುತ್ತಾನೆ. ದೇಹವೆಂಬ ಬಂಡಿಯ ಒಡೆಯ ಅವನು,

ಮೂರನೆಯದು ನಮ್ಮ ಇಂದ್ರಿಯಗಳು; ಕರಣಗಳು. ಕೆಲಸವನ್ನು ಆಗಮಾಡಿಸುವುದು ಇದು. ಕರ್ಮಕ್ಕೆ ಸಾಧನರೂಪವಾದುದು. ಕೆಲಸ ಮಾಡುವ ಮೊದಲು ತಿಳಿವಳಿಕೆ ಇರಬೇಡವೆ? ತಿಳಿವಳಿಕೆ ಒಂದೇ ಆದರೂ ಅದು ನಮಗೆ ಒದಗುವುದು ಐದು ಬಗೆಗಳಲ್ಲಿ, ನೋಡಲು

ಕಣ್ಣು, ಕೇಳಲು ಕಿವಿ, ಮೂಸಿ ನೋಡಲು ಮೂಗು, ರುಚಿ ಸವಿಯಲು ನಾಲಗೆ, ಮುಟ್ಟಿದ್ದನ್ನರಿತುಕೊಳ್ಳಲು ಚರ್ಮ ಇವೆಲ್ಲ ಕರಣಗಳು. ಇವನ್ನು ಬುದ್ಧೀಂದ್ರಿಯಗಳೆಂದೂ ಕರೆಯುತ್ತಾರೆ. ಜೀವನ ಮುಖ್ಯವಾದ ವಿವರ ಬುದ್ಧಿಯೆ; ಅದಕ್ಕೆ ಸಾಧನವಾಗುವ, ನೆರವಾಗುವ ಇಂದ್ರಿಯಗಳು ಇವು.

ನಾಲ್ಕನೆಯದು ಕೆಲಸ ಮಾಡಲು ನೇರವಾಗಿ ನೆರವಾಗುವ ಮನಸ್ಸು ಅಥವಾ ಬೇರೆಬೇರೆ ಕರ್ಮೇಂದ್ರಿಯಗಳು; ಮಾತನಾಡಲು ಬಾಯಿ, ಹಿಡಿಯಲು ಕೈ, ನಡೆಯಲು ಕಾಲು, ಹೀಗೆ. ಇವಿಲ್ಲದಿದ್ದರೆ ಯಾವ ಕೆಲಸವೂ ಸಾಧ್ಯವಿಲ್ಲ. ಇವನ್ನು ಇಲ್ಲಿ ಚೇಷ್ಟೆಯೆಂದು ಕರೆದಿದ್ದಾರೆ; ಸಂಸ್ಕೃತ ದಲ್ಲಿ 'ಚೇಷ್ಟಾ' ಎಂದರೆ ಕೆಲಸ ಎಂದಷ್ಟೇ ಅರ್ಥ. ಐದು ವಿಧವಾದ ಪ್ರಾಣವಾಯುಗಳು ಮಾಡುವ ಕೆಲಸವೂ ಚೇಷ್ಟೆಯೆ. ಕಂಠದಲ್ಲಿ ಪ್ರಾಣ, ಗುದದಲ್ಲಿ ಅಪಾನ, ಎದೆಯಲ್ಲಿ ಉದಾನ, ನಾಭಿಯಲ್ಲಿ ಸಮಾನ, ಶರೀರ ದಲ್ಲೆಲ್ಲ ವ್ಯಾನ. ಇವಲ್ಲದೆ ನಾವು ಮನಸ್ಸಿನಿಂದ ಮಾಡುವ ಧ್ಯಾನ ಮೊದಲಾದುವು ಇದರಲ್ಲೇ ಸೇರುತ್ತವೆ. ಕರಣ ಎಂಬುದರಲ್ಲಿ ಇಂದ್ರಿಯ ಗಳನ್ನೆಲ್ಲ ಸೇರಿಸಿದರೆ, ಚೇಷ್ಟಾ ಎಂದರೆ ಮಾನಸಿಕ ವ್ಯಾಪಾರ ಎಂದಾಗುತ್ತದೆ.

ಐದನೆಯದು ದೈವ. ನಮ್ಮ ಒಡಲಲ್ಲೆ ಎಲ್ಲ ಜೀವರ ಅಂತರ್ಯಾಮಿ ಯಾಗಿ ನೆಲೆಸಿ, ಎಲ್ಲ ಕರ್ಮಗಳಿಗೂ ಪ್ರೇರಕನೆನಿಸಿದ ಪರಮಾತ್ಮ. ಅವನೇ ಮುಖ್ಯ ಕಾರಣ. ಅವನಿಚ್ಛೆಯಿಲ್ಲದ ಒಂದು ಹುಲ್ಲುಕಡ್ಡಿಯಾಗಲಿ ಅಲುಗಲಾದೀದೆ? ಉಳಿದ ನಾಲ್ಕು ವಿವರಗಳಿಗೂ ಇವನೇ ಆಸರೆ. ದೈವವೆಂದರೆ ಅದೃಷ್ಟವೂ ಹೌದು. ಕಣ್ಣಿಗೆ ಕಾಣದಿದ್ದರೂ, ಸಂಸ್ಕಾರಗಳ ಬಲದಿಂದ, ಆಗ ಬೇಕಾದುದನ್ನು ಆಗಮಾಡಿಸುವ, ನಿಯಮದಿಂದ ಸದಾ ನಮ್ಮನ್ನು ಆಳುತ್ತಿರುವ ಶಕ್ತಿ. ಇದಕ್ಕೆ ಎದುರಾಗಬಲ್ಲುದು ಯಾವುದೂ ಇರದು.

ಶರೀರವಾಙ್ಮನೋಭಿರ್ಯತ್ಕರ್ಮ ಪ್ರಾರಭತೇ ನರಃ ।
ನ್ಯಾಯ್ಯಂ ವಾ ವಿಪರೀತಂ ವಾ ಪಂಚೈತೇ ತಸ್ಯ ಹೇತವಃ ॥ (೧೮, ೧೫)

ಮನುಷ್ಯನು ಮಾಡುದ ಕೆಲಸಗಳು ಮೂರು ತೆರೆನಾದುವು -- ಶರೀರ ದಿಂದ ಮಾಡುವ ಕೆಲಸಗಳು, ಮಾತು, ಮತ್ತು ಮನಸ್ಸಿನ ವೃತ್ತಿಗಳು. ಮನುಷ್ಯನು ಇವುಗಳಲ್ಲಿ ಯಾವುದನ್ನು ಮಾಡಲು ತೊಡಗಿದರೂ ಈ

ಐದು ವಿವರಗಳು ಹಿನ್ನೆಲೆಯಲ್ಲಿ ಇದ್ದೇ ಇರುತ್ತವೆ. ಮಾಡುವ ಕೆಲಸ ಸರಿಯಾದದ್ದೇ ಇರಬಹುದು, ಈ ಐದು ವಿವರಗಳಿಲ್ಲದೆ ಆಗುವುದಿಲ್ಲ. ನ್ಯಾಯವಾದ ಕೆಲಸವೆಂದರೆ ಶಾಸ್ತ್ರವಿಹಿತವಾದದ್ದು, ಸಮಾಜದ ಸುಸ್ಥಿತಿಗೆ ಕಾರಣವಾಗುವಂಥದು, ವ್ಯಕ್ತಿಯ ಬೆಳವಣಿಗೆಗೆ ಪ್ರೇರಕವಾದುದು, ಸ್ವಭಾವಕ್ಕೆ ಹೊಂದಿಕೊಳ್ಳುವಂಥದು. ಸತ್ಯ, ಅಹಿಂಸೆ, ಅಪರಿಗ್ರಹ ಮೊದಲಾದ ಕಟ್ಟುಪಾಡಿಗೆ ಒಳಗಾದದ್ದು. ವಿಪರೀತವೆಂದರೆ ನ್ಯಾಯಕ್ಕೆ ವಿರುದ್ಧವಾದುದು; ನಿಷಿದ್ಧವಾದುದು, ಆತಂಕಕಾರಿಯಾದುದು. ಕರ್ಮದಲ್ಲಿ ಇವೆರಡೇ ಬಗೆಗಳು. ನಿಸರ್ಗದ ಕ್ರಿಯೆಗಳಲ್ಲಿ ಈ ವಿಭಾಗವಿರದು. ದೈಹಿಕವಾದ ವ್ಯಾಪಾರಗಳು ಸಹಜವಾಗಿ ನಡೆಯುವಂತಿದ್ದಾಗ (ಕಣ್ಣು ಮಿಟುಕಿಸುವುದು, ಆಕಳಿಕೆ, ಸೀನು, ಉಸಿರಾಟ ಇತ್ಯಾದಿ) ಅವು ನ್ಯಾಯವೂ ಅಲ್ಲ, ವಿಪರೀತವೂ ಅಲ್ಲ. ಶ್ಲೋಕದಲ್ಲಿ **'ಕರ್ಮ ಪ್ರಾರಭತೇ'** ಎಂದು ಒಕ್ಕಣೆ ಇದೆ. ಪ್ರಯತ್ನಪೂರ್ವಕವಾಗಿ, ಪ್ರಯೋಜನವನ್ನು ಬಯಸಿ, ತೊಡಗುವ ಕೆಲಸವೇ ಇಲ್ಲಿ ಪ್ರಸ್ತಾಪಕ್ಕೆ ಬಂದಿರುವುದು. ಅದೇ ಕರ್ಮವೆನಿಸಿ ಕೊಳ್ಳುವುದು.

ತತ್ರೈವಂ ಸತಿ ಕರ್ತಾರಮಾತ್ಮಾನಂ ಕೇವಲಂ ತು ಯಃ ।
ಪಶ್ಯತ್ಯಕೃತಬುದ್ಧಿತ್ವಾನ್ನ ಸ ಪಶ್ಯತಿ ದುರ್ಮತಿಃ ॥ (೧೮, ೧೬)

ವಸ್ತುಸ್ಥಿತಿ ಹೀಗಿರಲು, ಯಾರಾದರೂ 'ತಾನೆ ಕೆಲಸ ಮಾಡುವವನು', 'ತನ್ನಿಂದಲೇ ಕೆಲಸ ನಡೆಯುವುದು', 'ತನ್ನದೇ ಕೆಲಸ' ಎಂದು ಅಂದು-ಕೊಂಡರೆ, ಅವನು ತಿಳಿವಳಿಕೆಯಿಲ್ಲದವನು. ಅವನ ಬುದ್ಧಿಯು ಚೆನ್ನಾಗಿ ಬೆಳೆಯಲಿಲ್ಲವೆಂದೇ ಅರ್ಥ. ಯಾವ ಕೆಲಸವೂ ಯಾರೊಬ್ಬರಿಂದಲೇ ನಡೆಯಲಾರದು. ಅವನಿಂದಲೇ ಕೆಲಸವು ನಡೆದಂತೆ ತೋರಿದರೂ, ಹಿನ್ನೆಲೆಯಲ್ಲಿ ಉಳಿದ ನಾಲ್ಕು ವಿವರಗಳೂ ಸೇರಬೇಕು. 'ತಾನು', 'ತನ್ನದು' ಎಂದುಕೊಳ್ಳುವುದು ಬರಿದೆ ಅಭಿಮಾನ. ಉಳಿದ ವಿವರಗಳ ನೆರವನ್ನು ಗಮನಕ್ಕೆ ತಂದುಕೊಳ್ಳದಿದ್ದರೆ ಈ ಅಭಿಮಾನ ಬೆಳೆಯುತ್ತದೆ; ವಿಪರೀತಕರ್ಮಗಳಿಗೆ ಎಡೆಮಾಡಿಕೊಡುತ್ತದೆ.

ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ ।
ನ ಕರ್ಮಫಲಸಂಯೋಗಂ ಸ್ವಭಾವಸ್ತು ಪ್ರವರ್ತತೇ ॥ (೫, ೧೪)

ಲೋಕವನ್ನು ಸೃಷ್ಟಿಮಾಡಿದ ಒಡೆಯನು ಜನರಿಗೆ ಈ ಬಗೆಯ ಕರ್ತೃತ್ವವನ್ನೂ ಹುಟ್ಟುಹಾಕಲಿಲ್ಲ; ಕರ್ಮವನ್ನಾಗಲಿ ವಿಧಿಸಲಿಲ್ಲ; ಕರ್ಮಗಳಿಗೂ ಫಲಗಳಿಗೂ ಸಂಬಂಧವನ್ನೂ ಗಂಟುಹಾಕಲಿಲ್ಲ. 'ತಾನು ಮಾಡುವವನು, ತನ್ನಿಂದಲೆ ಕೆಲಸ ನಡೆದದ್ದು' ಎಂಬ ಭಾವನೆ ಕರ್ತೃತ್ವ. 'ತಾನು ಮಾಡಿದ ಕೆಲಸದಿಂದ ಈ ಪ್ರಯೋಜನವನ್ನು ಪಡೆದುಕೊಳ್ಳುತ್ತೇನೆ' ಎನ್ನುವುದು ಭೋಕ್ತೃತ್ವ. ಇಲ್ಲಿ ಲೋಕವೆಂದರೆ ಶರೀರವೆಂದರ್ಥ. ಲೋಕಗಳನ್ನು ಸೃಷ್ಟಿಮಾಡಿದ ಒಡೆಯ(ಪ್ರಭು)ನೆಂದರೆ ಆತ್ಮ. ಕರ್ತೃತ್ವವೆನ್ನುವುದು, ಶರೀರಕ್ಕೆ ಸಹಜವಾದ ಧರ್ಮವೇನಲ್ಲ; ನಿದ್ರೆ ಮಾಡುವಾಗ 'ನಾನು ನಿದ್ರೆ ಮಾಡುತ್ತಿದ್ದೆನೆಂಬ' ಅರಿವು ಇರುವುದೆ? ಆತ್ಮನು ಶರೀರದಲ್ಲಿ ಮೂಡಿರುವ ಒಂದು ವಿವರವಲ್ಲ; ಶರೀರಾಭಿಮಾನದಿಂದ ಅಹಂಕಾರ ಎದ್ದುಕೊಂಡು ಅದರಿಂದ ಕರ್ತೃತ್ವ ಕಾಣಿಸಿಕೊಳ್ಳುತ್ತದೆ. ದಿಟವಾಗಿ ಇದು ಎಲ್ಲೂ ಇರದು. ಇನ್ನು ಮಾಡಬೇಕೆಂದು ಹೊರಡುವ ಕರ್ಮಗಳೂ ಹಾಗೆಯೆ. ಆಯಾ ಜೀವರಿಗೆ ಆಯಾ ಸಂದರ್ಭಗಳಲ್ಲಿ ಪ್ರಸಕ್ತವಾಗುತ್ತವೆ ಅಷ್ಟೆ. ಅವೇನು ಲೋಕಧರ್ಮಗಳಲ್ಲ; ಎಲ್ಲರಿಗೆ ಏಕಪ್ರಕಾರವಾಗಿ ಇರುವುವೂ ಅಲ್ಲ. ಕರ್ಮಕ್ಕೂ ಅದರ ಪ್ರಯೋಜನಕ್ಕೂ ಇರುವ ನಂಟಾಗಲಿ ತತ್ತ್ವವೆನ್ನು-ವಂತಿಲ್ಲ. ಆತ್ಮನಿಗೆ ಇದು ಏತರ ಗೊಂದಲವೂ ಇಲ್ಲ.

ಆದರೂ ಇವು ಕಾಣುತ್ತಿವೆಯಲ್ಲ? ಕೆಲಸ ಮಾಡುವಾಗ ಕರ್ತೃತ್ವ ಯಾರಿಗಿರುವುದಿಲ್ಲ? ಕರ್ಮದ ಎಣಿಕೆ ಯಾರಿಗಿಲ್ಲ? ಕರ್ಮ-ಫಲಗಳ ನಂಟು ಹುಸಿಯೇ? ಇವೆಲ್ಲ ಇವೆ, ನಿಜ. ಆದರೆ ಇವು ಆತ್ಮನಿಗೆ ಸೇರಿದವಲ್ಲ. ಸ್ವಭಾವಕ್ಕೆ ಸೇರಿದವು. ಸ್ವಭಾವವೆಂದರೆ ಪ್ರಕೃತಿ. ಕೆಲಸ ಮಾಡುವ ಶರೀರಕ್ಕೆ (ಇಂದ್ರಿಯ-ಮನಸ್ಸುಗಳಿಂದ ಕೂಡಿರುವ ಶರೀರಕ್ಕೆ) ತಾನು ಕೆಲಸ ಮಾಡುತ್ತಿರುವ ಅರಿವು ಇದ್ದೇ ಇರುತ್ತದೆ; ಇರುವುದು ಶರೀರಧರ್ಮವಲ್ಲ, ಶರೀರದೊಂದಿಗೆ ಸೇರಿಕೊಂಡ ಮನಸ್ಸಿನ ಧರ್ಮ. ಇದನ್ನೆ ಅಭಿಮಾನವೆನ್ನುವುದು. ಅಭಿಮಾನವಿದ್ದಾಗ ಕರ್ತೃತ್ವವೂ ತೋರಿ-ಕೊಳ್ಳುತ್ತದೆ. ಬೆಂಕಿ ಉರಿಯುವಾಗ ಕಾವು ಇರುವುದಿಲ್ಲವೆ? ಹೀಗೆಯೇ ನಾವು ತೊಡಗುವ ಕೆಲಸಗಳೂ ಪ್ರಕೃತಿಯಿಂದಲೇ ಸಿದ್ಧವಾದುವು. ಕರ್ಮ-ಪ್ರಯೋಜನಗಳ ಎಣಿಕೆಗಳೂ ಅಷ್ಟೇ.

ಎಂದರೆ, ಇವನ್ನು ತತ್ತ್ವಗಳು ಎನ್ನುವಂತಿಲ್ಲ. ಸ್ವತಂತ್ರವಾಗಿ ಇವು ಯಾವುವೂ ಇರಲಾರವು. ಶರೀರ-ಇಂದ್ರಿಯಗಳು-ಮನಸ್ಸು ಇದ್ದರೆ ಕರ್ತೃತ್ವ, ಕರ್ಮಗಳು, ಕರ್ಮಫಲಸಂಯೋಗ. ಶರೀರಾಭಿಮಾನವಿದ್ದಾಗ ಮಾತ್ರ ಆತ್ಮನಿಗೆ ಇವು ಹೊಂದಿಕೊಳ್ಳುತ್ತವೆ. ನಿದ್ರೆಯಲ್ಲಿ ಆತ್ಮನಿದ್ದಾನೆ; ಆದರೆ ಕರ್ತೃತ್ವವೂ ಇಲ್ಲ, ಕರ್ಮವೂ ಇಲ್ಲ, ಕರ್ಮಫಲ ಸಂಯೋಗವೂ ಇಲ್ಲ; ಏಕೆಂದರೆ ಅಲ್ಲಿ ಶರೀರಾಭಿಮಾನವಿರದು. ಎಲ್ಲರ ಆತ್ಮವೂ ಒಂದೇ; ಆದರೆ ಎಲ್ಲರ ಕರ್ತೃತ್ವವಾಗಲಿ, ಕರ್ಮಗಳಾಗಲಿ, ಕರ್ಮಫಲಸಂಯೋಗ ವಾಗಲಿ ಸಮಾನವಾಗಿರುತ್ತದೆಯೆ? ಅವರವರ ಸ್ವಭಾವದಂತೆ ಇವು ತೋರಿಕೊಳ್ಳುತ್ತವೆ.

೧೦. ಮೂರು ಗುಣಗಳು ಮಾಡುವ ಕೆಲಸ

ಹಿಂದೆ ಹೇಳಿದ ಸ್ವಭಾವ(ಪ್ರಕೃತಿ) ಎಂದರೆ ಮೂರು ಗುಣಗಳ ಒಕ್ಕೂಟ. ಸತ್ತ್ವ(ಇರವು, ಬೆಳಕು, ತಿಳಿವಳಿಕೆ, ಒಳ್ಳೆಯತನ), ರಜಸ್ಸು(ಕೆಲಸ, ಉತ್ಸಾಹ, ಸುಖದುಃಖ, ಭಾವ) ಮತ್ತು ತಮಸ್ಸು(ಕತ್ತಲೆ, ಆಲಸಿಕೆ, ಅಜ್ಞಾನ, ಕೆಟ್ಟತನ, ತಡೆ) ಇವು ಮೂರು ಗುಣಗಳು. ಮೂಲಪ್ರಕೃತಿಯಲ್ಲಿ ಇವು ಮೂರೂ ಸಮವಾಗಿರುತ್ತದೆ. ಒಂದು ಇನ್ನೆರಡನ್ನು ಹಿಂದಕ್ಕೆ ತಳ್ಳಿ ತಾನು ಮುಂದೆ ಬರುವುದು ಮೇಲೇಳುವುದು ನಡೆಯುತ್ತಲೆ ಇರುತ್ತದೆ. ರಜಸ್ಸು ಮುಂದಾದರೆ ಪ್ರವೃತ್ತಿ. ತಮಸ್ಸು ಮುಂದಾದರೆ ನಿವೃತ್ತಿ ಅಥವಾ ಸ್ಥಿತಿ, ಇದ್ದಂತೆಯೆ ಇರುವುದು. ಎರಡರ ಹಿನ್ನೆಲೆಯಲ್ಲೂ ಸತ್ತ್ವ ಇರಲೇಬೇಕು. ಆದರೆ ಅದನ್ನು ಅಡಗಿಸಿ ಇನ್ನೆರಡು ಗುಣಗಳು ತೋರಿಕೊಳ್ಳುತ್ತವೆ.

ನಮ್ಮ ಶರೀರ ತಮಸ್ಸು, ಇಂದ್ರಿಯಗಳು ರಜಸ್ಸು, ಮನಸ್ಸು ಸತ್ತ್ವ. ಈ ಗುಣಗಳನ್ನು ದಾಟಿದವನು ಆತ್ಮ, ಪುರುಷ, ಗುಣಗಳ ಅಧಿಕಾರ-ವಿರುವುದು ಪ್ರಕೃತಿಯಲ್ಲೇ; ಪುರುಷ ಗುಣಾತೀತ. ಆದರೆ ದೇಹಾಭಿಮಾನ ವಿದ್ದು ದೇಹಿಯೆನಿಸಿಕೊಂಡ ಆತ್ಮನಿಗೆ ಗುಣಗಳ ನಂಟು ಸಹಜವಲ್ಲ-ದಿದ್ದರೂ ಆಗಂತುಕವಾಗಿ ಕೂಡಿಕೊಳ್ಳುತ್ತದೆ. ಆಗ ಅವನ ಆಹಾರ, ಶ್ರದ್ಧೆ, ಕರ್ಮ, ದಾನ, ಯಜ್ಞ, ಕರ್ತೃತ್ವ, ಸುಖ ಎಲ್ಲವೂ ಮೂರು ಗುಣಗಳಿಗೆ ಅನುಸಾರವಾಗಿ ಬೇರ್ಪಡುತ್ತವೆ. ಭಗವದ್ಗೀತೆಯ ಕಡೆಯ ಎರಡು ಅಧ್ಯಾಯಗಳಲ್ಲಿ ಈ ವಿಚಾರ ಬರುತ್ತದೆ.

ರಜಸ್ಸು ಹೆಚ್ಚಾಗಿದ್ದರೆ ವ್ಯಕ್ತಿಯು ಆತಂಕಗೊಂಡ ಅಸ್ಥಿರನಾಗಿರುತ್ತಾನೆ, ಅವನ ಮನಸ್ಸು ಒಂದೆಡೆ ನಿಲ್ಲದೆ ಹರಿದಾಡುತ್ತಲೆ ಇರುತ್ತದೆ. ಚಪಲಚಿತ್ತ. ಉತ್ಸಾಹವಿದ್ದರೂ ನೆಮ್ಮದಿಯೆಂಬುದು ಎಂದೂ ಇರದು. ಇದು ಕ್ಷಿಪ್ತವೆನಿಸಿ ಕೊಳ್ಳುವ ಚಿತ್ತವೃತ್ತಿ. ತಮಸ್ಸು ಹೆಚ್ಚಾಗಿದ್ದರೆ ಮೂಢ. ತಿಳಿವಳಿಕೆ ಇರುವುದಿಲ್ಲ. ಮೊಂಡಾಟ ಇರುತ್ತದೆ. ಮನಸ್ಸಿನಲ್ಲಿ ತಳಮಳ, ಕಳವಳ. ವಿವೇಕವಂತೂ ಕನಸು. ಇವೆರಡು ಚಿತ್ತವೃತ್ತಿಗಳಿದ್ದವರಿಗೆ ಅಧ್ಯಾತ್ಮದಲ್ಲಿ ಒಲವೂ ಇರದು, ಯೋಗ ಅವರಿಗೆ ಸಾಧ್ಯವೂ ಇಲ್ಲ. ರಜಸ್ಸು-ತಮಸ್ಸು ಆಗಾಗ ತಮ್ಮತಮ್ಮ ಮೇಲಾಟ ಮಾಡುತ್ತಿರುವುದೂ ಉಂಟು. ಇದು ವಿಕ್ಷಿಪ್ತವೆಂಬ ಸ್ಥಿತಿ. ಇಂಥವರಿಗೆ ಒಮ್ಮೊಮ್ಮೆ ಉತ್ಸಾಹ, ಒಮ್ಮೊಮ್ಮೆ ಆಲಸ್ಯ. ಚಪಲಚಿತ್ತನೇ ಆದರೂ ಆಗಾಗ ಆಲಸಿಕೆ. ರಜಸ್ಸಿನ ವೇಗವನ್ನು ತಡೆಯು

ವಂತೆ ತಮಸ್ಸು; ತಮಸ್ಸಿನ ಮೋಹವನ್ನು ಮರೆಮಾಡುವಂತೆ ರಜಸ್ಸು. ಯೋಗಕ್ಕೆ ಅಧಿಕಾರಿಗಳು ಇವರು. ಅವರಿಗೆ ಎಂದೋ ಒಮ್ಮೆ ತೋರಿಕೊಂಡ ಅಧ್ಯಾತ್ಮವನ್ನು ಕುದುರಿಸಿಕೊಂಡರೆ ಸತ್ತ್ವದ ಕಡೆಗೆ ಸಾಗುವುದು ಸಾಧ್ಯ; ಯಾವಾಗಲೋ ಯೋಗದ ದಾರಿಯನ್ನು ಹಿಡಿದರೂ ಅವರಿಗೆ ಅನುಕೂಲವಿದ್ದೇ ಇರುತ್ತದೆ.

ಏಕಾಗ್ರಚಿತ್ತವಿರುವವರಲ್ಲಿ ಸತ್ತ್ವಗುಣ ಬಲವಾಗಿರುತ್ತದೆ; ರಜಸ್ಸು, ತಮಸ್ಸುಗಳನ್ನು ಹಿಮ್ಮೆಟ್ಟಿಸಿ ದೋಷಗಳನ್ನು ತೊಡೆದುಹಾಕಿ, ಪ್ರಸಾದ (ಮನಸ್ಸಿನ ನೆಮ್ಮದಿ)ವನ್ನು ಪಡೆದುಕೊಳ್ಳುತ್ತಾರೆ. ಹೀಗಾದರೂ ಪ್ರವೃತ್ತಿಯಿರುತ್ತದೆ. ವ್ಯವಹಾರದಲ್ಲಿ ತೊಡಗಿರುತ್ತಾರೆ. ನಿರುದ್ಧವೆಂಬ ಚಿತ್ತವೃತ್ತಿ-ಯಲ್ಲಾದರೋ ಸತ್ತ್ವಗುಣವೂ ಬಲಹೀನವಾಗಿ, ಯಾವ ಪ್ರವೃತ್ತಿಗೂ ಅವಕಾಶವಿರದು; ಮೂರೂ ಗುಣಗಳು ನಿವೃತ್ತವಾಗಿಬಿಡುತ್ತವೆ. ಇದು ಗುಣಾತೀತಸ್ಥಿತಿ; ಇದನ್ನೆ ಸಮಾಧಿಯೆನ್ನಬಹುದು. ಯೋಗದ ಗುರಿ ಇದೇ.

ಸತ್ತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ ।
ನಿಬಧ್ನಂತಿ ಮಹಾಬಾಹೋ ದೇಹೇ ದೇಹಿನಮವ್ಯಯಂ ॥ (೧೪, ೫)

ಮನುಷ್ಯರು ತಮಗೆ ಬಂಧವೆಂಬ ಅರಿವಾಗಿ ದುಃಖಪಡುತ್ತಾರೆ; ಇದರಿಂದ ಬಿಡುಗಡೆ ಹೊಂದಲು ಹಾತೊರೆಯುತ್ತಾರೆ, ಸಾಧನೆಗಳನ್ನು ಕೈಗೊಳ್ಳುತ್ತಾರೆ. ಅಂಥವರಿಗೆ ಬಂಧನದ ಪ್ರಕಾರ ಏನು, ಗುಣಗಳು ಹೇಗೆ ಬಂಧಿಸುತ್ತವೆ ಎಂಬುದು ತಿಳಿದಿರಬೇಕು. ಹಾಗೆ ತಿಳಿಯದೆ ಅದನ್ನು ಬಿಡುಗಡೆ ಹೇಗೆ ಸಾಧ್ಯವಾದೀತು?

ಸೃಷ್ಟಿಯ ಸಮಯದಲ್ಲೇ ಚಿತ್‌ಪ್ರಕೃತಿಯಿಂದ ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳು ಬೇರ್ಪಟ್ಟು ಹೊರಹೊಮ್ಮಿದವು. ಈ ಚಿತ್ ಪ್ರಕೃತಿಯ ಮೂಲಸ್ಥಿತಿಯಲ್ಲಿ ಗುಣಸಾಮ್ಯ; ಮೂರು ಗುಣಗಳು ಸಮನಾಗಿ ಸೇರಿಕೊಂಡು ಒಂದಾಗಿರುತ್ತವೆ. ಬೇರೆಬೇರೆಯಾಗಿರುವುದಿಲ್ಲ. ಆದರೆ ಬೇರ್ಪಡುವುದೇ, ಸೆಣಸಾಡುವುದೇ ಗುಣಗಳ ಸ್ವಭಾವ. ಇದನ್ನು ಗುಣವೈಷಮ್ಯವೆನ್ನುತ್ತಾರೆ. ಇದರಿಂದಲೇ ಮಹತ್ತು, ಅಹಂಕಾರ, ತನ್ಮಾತ್ರ-ಗಳು, ಸ್ಥೂಲಭೂತಗಳು ಎಲ್ಲವೂ ಸೃಷ್ಟಿಯ ಕ್ರಮದಲ್ಲಿ ಕಾಣಿಸಿಕೊಳ್ಳುತ್ತವೆ. ಇವೆಲ್ಲ ವಿಕಾರಗಳೆನಿಸಿಕೊಳ್ಳುತ್ತವೆ; ಪ್ರಕೃತಿಯ ಆಸರೆಯಲ್ಲಿಯೇ ಈ

ವಿಕಾರಗಳು ಮೈದಳೆಯುವುವು. ವಿಕಾರಗಳು ಗುಣಗಳ ಮೂಲಕವಾಗಿಯೇ.

ಪುರುಷನಲ್ಲಿ(ಎಂದರೆ ಆತ್ಮನಲ್ಲಿ) ಈ ಬಗೆಯ ವಿಕಾರಗಳಿರವು; ಪ್ರಕೃತಿಯಿಂದ ಬೇರೆಯಾದ ತತ್ತ್ವ ತಾನೆ ಅದು?. ಗುಣಗಳ ಸಾಮ್ಯವಾಗಲಿ, ವೈಷಮ್ಯವಾಗಲಿ ಇರುವುದು ಪ್ರಕೃತಿಯಲ್ಲಿಯೇ. ದೇಹ, ಇಂದ್ರಿಯ, ಮನಸ್ಸು, ಇವೆಲ್ಲ ಪ್ರಕೃತಿಯ ಗುಣವೈಷಮ್ಯದಿಂದ ಉಂಟಾದುವು. ದೇಹ-ದಲ್ಲಿ ತಮಸ್ಸಿನ ಅಂಶ ಹೆಚ್ಚು; ಇಂದ್ರಿಯಗಳಲ್ಲಿ ರಜಸ್ಸಿನದು; ಮನಸ್ಸಿನಲ್ಲಿ ಸತ್ತ್ವದ್ದು. ದೇಹವನ್ನು ಹೊಂದಿರುವ ಆತ್ಮನನ್ನು ದೇಹಿಯೆನ್ನುತ್ತಾರೆ. ಆತ್ಮನಿಗೆ ಸ್ವರೂಪದಲ್ಲಿ ಏನೊಂದೂ ಗುಣವಿಕಾರವಿಲ್ಲದಿರುವುದರಿಂದ ಅವನು 'ಅವ್ಯಯ'(ನಿರ್ವಿಕಾರ). ಆದರೆ ದೇಹಿಯೆಂದಾದಾಗ ದೇಹಾಭಿ-ಮಾನ ಸ್ವಭಾವಸಿದ್ಧವಾಗಿ ಅವನಿಗೆ ಬಂದೊದಗುತ್ತದೆ; ಪ್ರಕೃತಿಯ ಸಂಸರ್ಗದಿಂದ ತೋರಿಕೊಂಡದ್ದು ಸ್ವಭಾವ.

ದೇಹಾಭಿಮಾನವುಳ್ಳವನಿಗೆ ಮೂರು ಗುಣಗಳ ನಂಟು ಎಡೆಬಿಡದೆ ತಾಕಿಕೊಳ್ಳುತ್ತವೆ. ಇದನ್ನೆ ಬಂಧನವೆನ್ನುವುದು. ಗುಣಗಳು ತಮ್ಮ ತಮ್ಮ ಕೆಲಸಗಳಿಂದ ದೇಹಿಗೆ ಸುಖ, ದುಃಖ, ಮೋಹಗಳನ್ನು ತರುತ್ತವೆ. ಸತ್ತ್ವದ ಮೇಲಾಟವಿದ್ದಾಗ ಸುಖ, ರಜಸ್ಸಿನ ಏರಾಟವಿದ್ದಾಗ ದುಃಖ, ತಮಸ್ಸಿನ ಹಿಡಿತವಿದ್ದಾಗ ಮೋಹ. ಗುಣಗಳು ಕೆಲಸಮಾಡುವುದು ದೇಹ, ಇಂದ್ರಿಯ ಮನಸ್ಸುಗಳಲ್ಲೇ.

ಮೇಲಿನ ಶ್ಲೋಕದಲ್ಲಿ 'ದೇಹದಲ್ಲಿ(ದೇಹೇ) ದೇಹಾಭಿಮಾನಿಯಾದವನನ್ನು (ದೇಹಿನಂ) ಈ ಗುಣಗಳು ಕಟ್ಟಿಹಾಕುತ್ತವೆ (ನಿಬಧ್ನಂತಿ)' ಎನ್ನುವಾಗ ದೇಹವೆಂಬ ಮಾತಿನಲ್ಲಿ ದೇಹ, ಇಂದ್ರಿಯ, ಮನಸ್ಸು ಮೂರೂ ಸೇರುತ್ತವೆ. ಆತ್ಮನನ್ನು(ದೇಹಾಭಿಮಾನವಿಲ್ಲದವನನ್ನು) ಅವು ಕಟ್ಟಿಹಾಕ-ಲಾರವು ಎನ್ನುವ ಧ್ವನಿಯಿದೆ.

ತತ್ರ ಸತ್ತ್ವಂ ನಿರ್ಮಲತ್ವಾತ್ ಪ್ರಕಾಶಕಮನಾಮಯಮ್ ।
ಸುಖಸಂಗೇನ ಬಧ್ನಾತಿ ಜ್ಞಾನಸಂಗೇನ ಚಾನಘ ॥ (೧೪, ೬)

ಈ ಮೂರು ಗುಣಗಳಲ್ಲಿ ಮೊದಲನೆಯದು ಸತ್ತ್ವ. ಇತರ ಎರಡು ಗುಣಗಳಿಗೂ ಇದೆ ಆಸರೆಯಾಗಿ ಇದ್ದೇ ಇರಬೇಕು; ಮನುಷ್ಯನು

ಕೈಗೊಳ್ಳುವ ಯಾವ ಕೆಲಸದಲ್ಲಾದರೂ ಇದು ಸ್ವಲ್ಪಮಟ್ಟಿಗಾದರೂ ಇರುತ್ತದೆ. ಪ್ರವೃತ್ತಿಗೆ ಇದೇ ಕಾರಣವೆಂದೂ ಹೇಳಬಹುದು. ಆದ್ದರಿಂದಲೇ ಇದನ್ನು ಮೊದಲಲ್ಲೆ ಎಣಿಸುವುದು. ಅಷ್ಟು ಮಾತ್ರವಲ್ಲ. ಗುಣಬಂಧನ ದಿಂದ ಬಿಡಗಡೆಯಾಗಬೇಕಾದರೂ ಸತ್ತ್ವವನ್ನೇ ಹಿಡಿಯಬೇಕು, ಅದನ್ನು ಬಲಪಡಿಸಬೇಕು. ಅದರ ನೆರವನ್ನು ಪಡೆದುಕೊಳ್ಳಬೇಕು. ಪುರುಷನಿಗೆ (ಆತ್ಮನಿಗೆ, ದೇಹಾಭಿಮಾನಿಗೆ) ತುಂಬ ಹತ್ತಿರದಲ್ಲಿರುವ ಪ್ರಕೃತಿಯ ಅಂಶ ಇದು.

ಸತ್ತ್ವದ ಕೆಲಸ ತಿಳಿವಳಿಕೆ; ಇದ್ದುದನ್ನು ಇದ್ದಂತೆಯೇ ತಿಳಿಸಿ ಕೊಡುವುದು. ಇದರಲ್ಲಿ ತಮಸ್ಸಿನ ತೆರೆಯಿಲ್ಲದಿದ್ದಾಗ. ಅದು ವಿವೇಕವನ್ನು ಬೆಳಗುತ್ತದೆ; ರಜಸ್ಸಿನ ವೇಗವಿಲ್ಲದಿದ್ದಾಗ ನೆಮ್ಮದಿಯಿಂದಿರುತ್ತದೆ. ಇವೆರಡೂ ಗುಣಗಳ ನಂಟಿಲ್ಲದಿದ್ದಾಗ, ತಿಳಿಯಾಗಿದ್ದು ಪುರುಷನ ಪ್ರತಿ ಬಿಂಬವನ್ನು ತಳೆದುಕೊಳ್ಳುತ್ತದೆ. ಹೀಗಿರುವುದರಿಂದಲೇ ಅದು ಯೋಗಕ್ಕೆ ನೆರವಾಗಬಲ್ಲದು. ಆತ್ಮಾವಲೋಕನಕ್ಕೆ ಸತ್ತ್ವಗುಣವೇ ದಾರಿಮಾಡಿ ಕೊಡುವುದು.

ಇಂಥ ಸತ್ತ್ವವನ್ನೇ 'ನಿರ್ಮಲ'ವೆಂದು ಕರೆದಿರುವುದು. ರಜಸ್ಸು, ತಮಸ್ಸುಗಳಿಗೆ ಒಳಪಡದೆ ತನ್ನಷ್ಟಕ್ಕೆ ತಾನು ಇರುವುದು ಎಂದರ್ಥ. ಆಗ ತನ್ನ ಕೆಲಸವನ್ನು ತಾನು ಅಚ್ಚುಕಟ್ಟಾಗಿ ನಿರ್ವಹಿಸುತ್ತದೆ. ಅದರ ಕೆಲಸವೇನು ಎಂದರೆ ಬೆಳಗುವುದು (ಪ್ರಕಾಶ). ಬೆಳಗುವಾಗ ಉಪದ್ರವ ವಿಲ್ಲದೆ, ಶಾಂತವಾಗಿರುವುದು 'ಅನಾಮಯ' (ಆಮಯವೆಂದರೆ ರೋಗ, ವ್ಯಾಧಿ, ಉಪದ್ರವ; ಇಲ್ಲದಿರುವುದು ಅನಾಮಯ). ಈ ಸ್ಥಿತಿಯಲ್ಲಿಯೇ ಜ್ಞಾನ ಹೊರಹೊಮ್ಮುವುದು; ಜ್ಞಾನವೂ ಸುಖವೂ ಒಂದುಗೂಡುವುದು ಸತ್ತ್ವ-ಗುಣದಲ್ಲಿಯೇ. ಅದರಲ್ಲಿ ಸುಖಸಂಗವೂ ಇದೆ, ಜ್ಞಾನಸಂಗವೂ ಇದೆ.

ಸಂಗ ಎಂದರೆ ಕೂಡಿಕೊಳ್ಳುವುದು, ಸೇರಿಕೊಳ್ಳುವುದು, ಬಯಸುವುದು, ಆಸಕ್ತಿ ಹೊಂದುವುದು, ಸುಖಸಂಗವೆಂದಾಗ ಸುಖವನ್ನು ಬಯಸುವುದು; ಜ್ಞಾನದೊಂದಿಗೆ ಸೇರಿಕೊಂಡಾಗ, ಸುಖದ ಸಾಧನೆಗಳಿಗೆ, ಜ್ಞಾನದ ಸಾಧನೆ ಗಳಿಗೆ ಕಟ್ಟು ಬೀಳುತ್ತಾನೆ. ಸುಖದ ಹಿಂದೆ ಓಡುತ್ತಾನೆ, ಜ್ಞಾನವನ್ನು ಅರಸುತ್ತಾನೆ. ಸುಖವಿರದಿದ್ದರೆ, ಜ್ಞಾನವಿಲ್ಲದಿದ್ದರೆ ಅವನಿಗೆ ನೆಮ್ಮದಿಯಿರ-

ದೆಂಬ ಕಲ್ಪನೆ. ತಾನು ಸುಖಿ, ಜ್ಞಾನಿ ಎಂಬ ಅನಿಸಿಕೆಗಳು ಅಭಿನಿವೇಶಗಳು; ಬದುಕುವ ಬಯಕೆಗೆ ಅಭಿನಿವೇಶವೇ ತಳಪಾಯ.

ರಜೋ ರಾಗಾತ್ಮಕಂ ವಿದ್ಧಿ ತೃಷ್ಣಾಸಂಗಸಮುದ್ಭವಂ ।
ತನ್ನಿಬಧ್ನಾತಿ ಕೌಂತೇಯ ಕರ್ಮಸಂಗೇನ ದೇಹಿನಂ ॥ (೧೪, ೭)

ರಜೋಗುಣದ ಸ್ವರೂಪದಲ್ಲಿ ರಾಗ ಎದ್ದುನಿಲ್ಲುತ್ತದೆ. ರಾಗವೆಂದರೆ ಬಯಕೆ, ಇಚ್ಛೆ, ವಿಷಯಸುಖಗಳಲ್ಲಿ ಆಸೆ. ರಾಗಕ್ಕೆ 'ಗರ್ಧ'ವೆಂಬ ಪರ್ಯಾಯಪದವಿದೆ; ಇಂಗ್ಲಿಷಿನ 'ಗ್ರೀಡ್' ಇದರಿಂದಲೇ ಬಂದದ್ದು; ಅತಿ ಆಸೆ ಎಂದರ್ಥ. ಇರುವುದರಲ್ಲಿ ತೃಪ್ತಿಪಡದೆ, ಎಷ್ಟು ಬಂದರೂ ಮತ್ತಷ್ಟು ಬೇಕೆಂಬಾಸೆ. ಈ ರಜೋಗುಣವು ಹುಟ್ಟಿಕೊಳ್ಳುವುದಾದರೂ ಹೇಗೆ? ತೃಷ್ಣೆ ಮತ್ತು ಸಂಗ ಇವುಗಳಿಂದ. ತೃಷ್ಣೆಯೆಂದರೆ ಈವರೆಗೆ ದೊರೆಯದಿದ್ದದ್ದು ದೊರಕಬೇಕೆಂಬ ಬಯಕೆ (ಅಪ್ರಾಪ್ತಾಭಿಲಾಷೆ); ಸಂಗವೆಂದರೆ ದೊರೆತ ವಸ್ತುಗಳಲ್ಲಿ ಮಿತಿಮೀರಿದ ಆಸಕ್ತಿ (ಪ್ರಾಪ್ತೇಷು ಪ್ರೀತೀ). ಎರಡೂ ಬಯಕೆ-ಗಳೇ(ಸ್ಪೃಹಾ) ಮನುಷ್ಯನನ್ನು ರಜೋಗುಣವು ಕಟ್ಟಿಹಾಕುವುದು ಈ ಬಯಕೆಗಳ ಮೂಲಕವಾಗಿ. ಬಯಕೆಯಿರುವಾಗ ಅದನ್ನು ಈಡೇರಿಸಿಕೊಳ್ಳಲು ಕೆಲಸ ಮಾಡಬೇಡವೆ? ಕೆಲಸವೂ ಬಯಕೆಯನ್ನು ತೀರಿಸುವಂತಿರಬೇಕು. ಕೆಲಸದಿಂದ ಒಂದು ಬಯಕೆ ತೀರಿತೆನ್ನಿ. ಅಷ್ಟಕ್ಕೆ ಮುಗಿಯಿತೆ? ಮತ್ತೊಂದು ಬಯಕೆ ಎದ್ದುಕೊಳ್ಳುತ್ತದೆ; ಅದನ್ನು ಪೂರೈಸಿಕೊಳ್ಳಲು ಇನ್ನೊಂದು ಕೆಲಸದಲ್ಲಿ ತೊಡಗಬೇಕು. ಹೀಗೆ ರಜಸ್ಸು ಎಂದರೆ ಕೆಲಸದಲ್ಲಿ ಪ್ರವೃತ್ತಿ ಎಂದೇ ಅರ್ಥ. ಕೆಲಸ ಮಾಡಲು ಬೇಕಾದ ಬಲ, ಗೆಲುವು, ಉತ್ಸಾಹ, ಆತಂಕ ಎಲ್ಲವೂ ರಜೋಗುಣದ ಅಂಶಗಳೇ. ಇವೆಲ್ಲ ಇರುವಾಗ ಬಂಧನವಲ್ಲವೆ? ನೆಮ್ಮದಿಯಿಂದ ಇರಲಾಗುತ್ತದೆಯೆ?

ತಮಸ್ತ್ವಜ್ಞಾನಜಂ ವಿದ್ಧಿ ಮೋಹನಂ ಸರ್ವದೇಹಿನಾಂ ।
ಪ್ರಮಾದಾಲಸ್ಯನಿದ್ರಾಭಿಸ್ತನ್ನಿಬಧ್ನಾತಿ ಭಾರತ ॥ (೧೪, ೮)

ಮೂರನೆಯ ಗುಣ ತಮಸ್ಸು; ಅದು ಅಜ್ಞಾನವನ್ನುಂಟುಮಾಡುತ್ತದೆ. ಎಲ್ಲ ಜೀವಿಗಳನ್ನೂ ಮೋಹಗೊಳಿಸುತ್ತದೆ; ಮನುಷ್ಯನನ್ನು ಅದು ಕಟ್ಟಿಹಾಕುವುದು ಅದರ ಲಕ್ಷಣಗಳಾದ ಪ್ರಮಾದ; ಆಲಸ್ಯ, ನಿದ್ರೆಗಳಿಂದ.

ಜ್ಞಾನವೆಂದರೆ ಇರುವುದನ್ನು ಇದ್ದಂತೆಯೆ ಅರಿತುಕೊಳ್ಳುವುದು; ಅದಲ್ಲದ್ದು ಅಜ್ಞಾನ. 'ಅಜ್ಞಾನಜ' ಎನ್ನುವಾಗ ಅಜ್ಞಾನದಿಂದ ಹುಟ್ಟಿದ್ದು ಎಂದರ್ಥವಲ್ಲ; ಅಜ್ಞಾನವನ್ನು ಹುಟ್ಟಿಸುವುದು ಎಂದರ್ಥ. ತಮಸ್ಸಿನಲ್ಲಿ ಆವರಣಶಕ್ತಿಯಿದೆ; ಎಂದರೆ ತಿಳಿವಳಿಕೆಗೆ ತೆರೆ ಹಾಕಿದಂತೆ, ತಿಳಿವಳಿಕೆಯನ್ನು ಮರೆಮಾಡಿದಂತೆ. ವಸ್ತು ಇದ್ದಂತೆ ಅರಿವಿಗೆ ಬರುವುದಿಲ್ಲ; ಇರುವುದಕ್ಕಿಂತ ಬೇರೆಯಾಗಿ ತೋರಿಕೊಳ್ಳುತ್ತದೆ. ವಸ್ತುವಿನ ಬಗ್ಗೆ ಮೋಸ ಹೋಗುತ್ತೇವೆ. ಇದಕ್ಕೆ ವಿಪರ್ಯಯ ಜ್ಞಾನವೆಂದೂ ಹೆಸರಿದೆ. ಒಳ್ಳೆಯ-ದನ್ನು ಕೆಟ್ಟದ್ದು ಎಂದು ತಿಳಿಯುತ್ತೇವೆ; ಕೆಟ್ಟದ್ದನ್ನು ಒಳ್ಳೆಯದು ಎಂದು ಬಗೆಯುತ್ತೇವೆ. ಧರ್ಮವನ್ನು ಅಧರ್ಮದಂತೆ ಕಂಡುಕೊಳ್ಳುತ್ತೇವೆ; ಅಧರ್ಮವನ್ನು ಧರ್ಮವೆಂದು ತಿಳಿಯುತ್ತೇವೆ. ಇದು ತಮಸ್ಸಿ-ನಿಂದುಂಟಾದ ಅಜ್ಞಾನ.

ಮೋಹಗೊಳಿಸುವುದೂ ವಿಪರ್ಯಯಜ್ಞಾನದ ಇನ್ನೊಂದು ಮುಖ. ಇದು ಅಂತಃಕರಣದ ಮಾತು; ಮನಸ್ಸಿನಲ್ಲಿ ಒದಗುವ ಭ್ರಮೆ, ಭ್ರಾಂತಿ. ಯಾವುದು ಹಿತ, ಯಾವುದು ಅಹಿತ ಎಂಬ ವಿವೇಕವನ್ನೇ ಇದು ಮುಚ್ಚಿಬಿಡುತ್ತದೆ. ಬುದ್ಧಿ ಕೆಲಸ ಮಾಡುವುದೇ ಎಲ್ಲ. ಎಲ್ಲ ಮನುಷ್ಯರನ್ನೂ ದಿಕ್ಕು ಕೆಟ್ಟಂತೆ, ದಾರಿ ಕಾಣದಂತೆ ಮಾಡಿಬಿಡುತ್ತದೆ, ಮೋಹ ಎಂಬ ಮಾತಿನ ಮೂಲವಾದ 'ಮುಹ್' ಧಾತುವಿನ ಅರ್ಥ ಗೊಂದಲಕ್ಕೀಡುಮಾಡುವುದು, ಪ್ರಜ್ಞೆ ತಪ್ಪುವುದು, ದಾರಿ ತಪ್ಪುವುದು, ವಸ್ತುಸ್ಥಿತಿಯನ್ನು ಮರೆಮಾಡು-ವುದು, ಏನು ಮಾಡಬೇಕೆಂದು ತೋಚದಂತೆ ಮಾಡಿ ಬಿಡುವುದು.

ಹೀಗೆ ಮಾಡುವ ತಮಸ್ಸು ಮನುಷ್ಯನನ್ನು ಕಟ್ಟಿಹಾಕುವುದು ಹೇಗೆಂದರೆ ಮೊದಲು ಪ್ರಮಾದದಿಂದ. ಪ್ರಮಾದ ಎಂದರೆ ಎಚ್ಚರ ತಪ್ಪುವುದು, ಮನವಿಡದೆ ಇರುವುದು, ತಪ್ಪು ಮಾಡುವುದು, ವಿವೇಚನೆಯಿಲ್ಲದೆ ತೋಚಿದಂತೆ ಮಾಡಿಬಿಡುವುದು, ಅವಧಾನವಿಲ್ಲದೆ ಇರುವುದು, ತಮಸ್ಸಿನ ಒಂದು ಮುಖ್ಯವಾದ ಲಕ್ಷಣ ಇದು. ಆಲಸ್ಯವೆಂದರೆ ಆಸಕ್ತಿಯಾಗಲಿ, ಉತ್ಸಾಹವಾಗಲಿ ಇಲ್ಲದೆ, ಮಾಡಬೇಕಾದ ಕೆಲಸವನ್ನು ಮಾಡದಿರುವುದು, ಕೆಲಸವನ್ನು ಮಾಡುವ ಇಚ್ಛೆಯೂ ಇಲ್ಲದಿರುವುದು, ಯಾವ ಪ್ರವೃತ್ತಿಗಾದರೂ ಅಡ್ಡಿಬರುವ ಸೋಮಾರಿತನ, ಜಡತೆ, ನಿದ್ರೆಯೆನ್ನುವ ಮಾತಿನ ಅರ್ಥ ಇಂದ್ರಿಯಗಳಾಗಲಿ ಮನಸ್ಸಾಗಲಿ ಕೆಲಸಮಾಡದೆ ಇರುವ

ಸ್ಥಿತಿ. ಮಾಡಬೇಕಾದ ಕೆಲಸವನ್ನು ಕೈಬಿಟ್ಟು, ಯಾವ ಚಿಂತೆಯೂ ಇಲ್ಲದೆ ಮಲಗಿ ನಿದ್ದೆ ಹೋಗುವುದು ತಮಸ್ಸಲ್ಲವೆ? ತಮಸ್ಸಿನ ಪರಮಾವಧಿ ಅದು.

ಸರ್ವದ್ವಾರೇಷು ದೇಹೇऽಸ್ಮಿನ್ ಪ್ರಕಾಶ ಉಪಜಾಯತೇ ।
ಜ್ಞಾನಂ ಯದಾ ತದಾ ವಿದ್ಯಾದ್ ವಿವೃದ್ಧಂ ಸತ್ತ್ವಮಿತ್ಯುತ ॥(೧೪, ೧೧)

ಗುಣಗಳು ಇಟ್ಟಂತೆ ಇರುವುದಿಲ್ಲ, ಗಳಿಗೆಗಳಿಗೆಗೂ ಬದಲಾಗುತ್ತವೆ. ಒಮ್ಮೆ ಸತ್ತ್ವ ಮೇಲೆದ್ದುಕೊಂಡರೆ, ಇನ್ನೊಮ್ಮೆ ರಜಸ್ಸು, ಮತ್ತೊಮ್ಮೆ ತಮಸ್ಸು, ಹೀಗೆ ಗುಣವು ಮೇಲೆದ್ದುಕೊಳ್ಳುವುದನ್ನು, ಹೆಚ್ಚುವುದನ್ನು, ಬಲ ಗೊಳ್ಳುವುದನ್ನು 'ವೃದ್ಧಿ' (ಅಥವಾ ವಿವೃದ್ಧಿ) ಎಂದು ಕರೆದಿದ್ದಾರೆ. ಯಾವ ಗುಣ ವೃದ್ಧಿಗೊಂಡಿತು ಎಂದು ತಿಳಿಯಲು ಕೆಲವು ಲಕ್ಷಣಗಳು ನೆರ-ವಾಗುತ್ತವೆ.

ಸತ್ತ್ವಗುಣ ಹೆಚ್ಚಿತೆಂದು, ಬಲಗೊಂಡಿತೆಂದು, ಬೆಳೆಯಿತೆಂದು ಹೇಳು ವುದು ಹೇಗೆ? ಮನುಷ್ಯನು ಹೊರಗಣ ಪ್ರಪಂಚವನ್ನು ತಿಳಿದುಕೊಳ್ಳಲು ಶರೀರದಲ್ಲಿ ಕೆಲವು ಹವಣಿಕೆಗಳಿರುತ್ತವೆ. ಮನೆಗೆ ಬಾಗಿಲು ಕಿಟಕಿಗಳಿರು ವಂತೆ ಇಂದ್ರಿಯಗಳು(ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ) ಮತ್ತು ಮನಸ್ಸು ಇಲ್ಲಿ ಹೇಳಿರುವ ದ್ವಾರಗಳು. ತಾಂತ್ರಿಕ ಭಾಷೆಯಲ್ಲಿ 'ನವದ್ವಾರ'-ಗಳ ಎಣಿಕೆಯಿದೆ. ದೇಹವು ಒಂಬತ್ತು ಬಾಗಿಲುಗಳಿರುವ ಪಟ್ಟಣವೆಂದು ಅಲ್ಲಿನ ಎಣಿಕೆ (ಶ್ವೇತಾಶ್ವತರೋಪನಿಷತ್ತಿನಲ್ಲಿಯೂ **'ನವದ್ವಾರೇ ಪುರೇ ದೇಹೀ'** ಎಂಬ ಒಕ್ಕಣೆಯಿದೆ). ಆದರೆ ಇವು ಒಂಬತ್ತು ರಂಧ್ರಗಳು-ಕಣ್ಣುಗಳೆರಡು, ಕಿವಿಗಳೆರಡು, ಮೂಗಿನ ಹೊಳ್ಳೆಗಳೆರಡು, ಬಾಯಿ, ಗುದ ಮತ್ತು ಉಪಸ್ಥ. ಇಲ್ಲಿ ಹೇಳಿರುವ 'ಸರ್ವದ್ವಾರ'ಗಳೆಂದರೆ ಇವು ಆಗಲಾರವು; ಬೆಳಕು (ಎಂದರೆ ತಿಳಿವಳಿಕೆ) ಒದಗಿ ಬರುವ ಬಾಗಿಲುಗಳು ಎಂದು ಸ್ಪಷ್ಟವಾಗಿಯೇ ಹೇಳಿದೆ. ಎಂದರೆ ಮೇಲೆ ಹೇಳಿದ ಐದು ಇಂದ್ರಿಯಗಳು ಮತ್ತು ಅವುಗಳೊಂದಿಗೆ ಇರಲೇಬೇಕಾದ ಮನಸ್ಸು (ಉಪಲಬ್ಧಿದ್ವಾರಗಳು).

ಯಾವಾಗ ನಮ್ಮ ಇಂದ್ರಿಯಗಳಿಂದಾಗಲಿ ಮನಸ್ಸಿನಿಂದಾಗಲಿ ವಿಷಯ ಗಳನ್ನು ಇದ್ದುದು ಇದ್ದಂತೆಯೇ ತಿಳಿಯುವೆವೋ ಅದು ಸತ್ತ್ವಗುಣ ಕೆಲಸ ಮಾಡುತ್ತಿರುವುದರ ಲಕ್ಷಣ; ರಜಸ್ಸಾಗಲಿ ತಮಸ್ಸಾಗಲಿ ಹಿಂದೆ ಬಿದ್ದಿತೆಂದೇ ಅರ್ಥ.

ಲೋಭಃ ಪ್ರವೃತ್ತಿರಾರಂಭಃ ಕರ್ಮಣಾಮಶಮಃ ಸ್ಪೃಹಾ ।
ರಜಸ್ಯೇತಾನಿ ಜಾಯಂತೇ ವಿವೃದ್ಧೇ ಭರತರ್ಷಭ ॥ (೧೪, ೧೨)

ರಜೋಗುಣ ಹೆಚ್ಚಿತೆಂದು ತಿಳಿಯುವುದು ಹೇಗೆ? ಲೋಭ ಕಾಣಿಸಿ-ಕೊಂಡಾಗ, ಯಾವುದಾದರೂ ಕೆಲಸದಲ್ಲಿ ತೊಡಗಿದಾಗ, ಮಾಡಿದ ಕೆಲಸದಿಂದ ನೆಮ್ಮದಿ ಕಾಣದಾದಾಗ, ಬಯಕೆಗಳು ತೋರಿಕೊಂಡಾಗ ರಜಸ್ಸು ಹೆಚ್ಚಿತೆಂದು ಕಂಡುಕೊಳ್ಳಬಹುದು. ರಜಸ್ಸಿನಿಂದ ಹುಟ್ಟುವುದೇ ಇವೆಲ್ಲ.

ಲೋಭವೆಂದರೆ ಅತ್ಯಾಶೆ. ಬೇರೆಯವರ ಸ್ವತ್ತನ್ನು ತನಗಾಗಿ ಬಯಸುವುದು, ತನ್ನಲ್ಲಿರುವುದನ್ನು ಬೇರೆಯವರಿಗೆ ಒಂದಿಷ್ಟೂ ಕೊಡಲು ಹಿಂಜರಿಯುವುದು, ತಾನೇ ತನ್ನದನ್ನು ಬಳಸಿಕೊಳ್ಳಲು ಹಿಂದೆಮುಂದೆ ನೋಡುವುದು, ಇವೆಲ್ಲ ಲೋಭವೆನಿಸಿಕೊಳ್ಳುತ್ತವೆ. ಕಾರ್ಪಣ್ಯ, ಗರ್ಧ ಎಂದೂ ಪರ್ಯಾಯ ಪದಗಳು. ಬೇರೆಯವರದ್ದನ್ನು ತಾನು ಪಡೆದು-ಕೊಳ್ಳುವ ಆಸೆಯಿದ್ದಾಗ, ತನ್ನದನ್ನು ತಾನು ತನ್ನಲ್ಲೇ ಉಳಿಸಿಕೊಳ್ಳುವ ಹಟವಿದ್ದಾಗ ಅದಕ್ಕಾಗಿ ಪ್ರಯತ್ನಪಡಬೇಡವೇ? ಪ್ರಯತ್ನವೆಂದರೆ ಕೆಲಸ. ಕೆಲಸದಲ್ಲಿ ತೊಡಗದೆ ಇರುವುದು ಲೋಭಿಗೆ ಸಾಧ್ಯವಿಲ್ಲ ಕೆಲಸವೆನ್ನುವುದು ರಜಸ್ಸಿನ ಲಕ್ಷಣವೇ.

ಇಲ್ಲಿ ಪ್ರವೃತ್ತಿಯನ್ನು ಆರಂಭದಿಂದ ಬೇರೆಯಾಗಿ ಕಾಣಿಸಿದ್ದಾರೆ. ಪ್ರವೃತ್ತಿಯೆಂದರೆ ಯಾವುದಾದರೊಂದು ಸದ್ಯದ ಪ್ರಯೋಜನವನ್ನು ಮನಸ್ಸಿನಲ್ಲಿರಿಸಿಕೊಂಡು ಕೆಲಸಮಾಡುವುದು. ಹಾಗಲ್ಲದೆ ಸಾಮಾನ್ಯವಾಗಿ ಎಂದಿನ ಕೆಲಸದಲ್ಲಿ ತೊಡಗುವುದು ಆರಂಭ. ಬೇಸಾಯ, ಅಗ್ನಿಹೋತ್ರ ಇವೆಲ್ಲ ಆರಂಭಗಳು; ಅವುಗಳಲ್ಲಿ ಕಣ್ಣಿನಿಂದ ಕಾಣುವ, ನಿರ್ದಿಷ್ಟ ಪ್ರಯೋಜನ ಇದೆ; ಆದರೆ ಅವು ಒಡನೆಯೇ ಫಲಕೊಡುವ ಕೆಲಸಗಳಲ್ಲ. ಕಾಲಾನುಕಾಲಕ್ಕೆ ಫಲ ಬಂದೀತು, ಅಲ್ಲಿಯವರೆಗೆ ಅದು ಅ-ದೃಷ್ಟವೇ (ಎಂದರೆ ಕಣ್ಣಿಗೆ ಕಾಣಿಸದಿದ್ದರೂ, ಇದ್ದುಕೊಂಡಿರುವ, ಮುಂದೆ ಮಾಗಿ ಫಲ ಕೊಡುವಂಥದು). ಪ್ರವೃತ್ತಿಯದಾದರೆ 'ದೃಷ್ಟ'ಫಲ. ಎರಡೂ ಕೆಲಸಗಳೇ; ಕಾಮನೆಗಳಿರುವಂಥವೇ.

ಕೆಲಸದಲ್ಲಿ ತೊಡಗಿಸಿದನೆನ್ನಿ; ಆಶೆ ಅಷ್ಟರಿಂದ ತೀರಿಹೋದರೆ ಮತ್ತೆ ಕೆಲಸ ಮಾಡಬೇಕಾದುದಿಲ್ಲ; ಕೆಲಸವನ್ನು ನಿಲ್ಲಿಸಿಬಿಟ್ಟರೆ ಅದು ತಮಸ್ಸಾ-

ಯಿತು. ರಜೋಗುಣವಿದ್ದವನು ಕೆಲಸ ಮಾಡುತ್ತಲೆ ಇರಬೇಕು ಎಂದ ಮೇಲೆ, ಮಾಡಿದ ಕೆಲಸದಿಂದ ನೆಮ್ಮದಿಯಿರದೆಂದೇ ಅರ್ಥ. ಇದು **'ಕರ್ಮಣಾಂ ಅಶಮಃ'** ಶಮವೆಂದರೆ ಮನಸ್ಸಿನ ನೆಮ್ಮದಿ; ಅದಿಲ್ಲದಿರುವುದು ಅಶಮ. ಇದು ಬೇಕು, ಅದು ಬೇಕು; ಹೀಗಿರಬೇಕು, ಹಾಗಿರಬೇಕು ಎಂಬ ಮನಸ್ಸಿನ ಮಂಡಿಗೆಗಳಿದ್ದರೇ ಕೆಲಸದಲ್ಲಿ ತೊಡಗುವುದು. ಇವೆಲ್ಲ ಇದ್ದಲ್ಲಿ ನೆಮ್ಮದಿಯೆಲ್ಲಿಯದು?. **'ಚಿತ್ತದ ಅನುಪರತಿ'** ಎಂಬ ಅರ್ಥವನ್ನು ಸೂಚಿಸಿ-ದ್ದಾರೆ. ಸಂತೋಷ, ಸಿಟ್ಟು, ಬೇಸರ, ಬೇಗುದಿ.

'ಸ್ಪೃಹಾ' ಎನ್ನುವ ಮಾತಿಗೆ ಬಯಕೆಗಳು, ಆಶೆಗಳು ಎಂದೇ ಅರ್ಥ. ಆವರೆಗೆ ಇರದ ವಿಷಯಗಳನ್ನೋ ಅವುಗಳಿಂದ ಸುಖವನ್ನೋ ಪಡೆದು ಕೊಳ್ಳುವ ಕಾತರವನ್ನು ಸ್ಪೃಹೆಯೆನ್ನುತ್ತಾರೆ(ಅಪ್ರಾಪ್ತಾಭಿಲಾಷೆ). ಇದೂ ಕೆಲಸದಲ್ಲಿ ತೊಡಗಲು ಇರುವ ಏಏಹಿನ್ನೆಲೆಯೇ. ಅಂತೂ ಮೇಲೆ ಹೇಳಿದ ನಾಲ್ಕೂ ಲಕ್ಷಣಗಳು ಬಯಕೆ-ಕೆಲಸಗಳನ್ನು ಸೂಚಿಸುತ್ತವೆ.

ಅಪ್ರಕಾಶೋಽಪ್ರವೃತ್ತಿಶ್ಚ ಪ್ರಮಾದೋ ಮೋಹ ಏವ ಚ ।
ತಮಸ್ಯೇತಾನಿ ಜಾಯಂತೇ ವಿವೃದ್ಧೇ ಕುರುನಂದನ ॥ (೧೪, ೧೩)

ಇನ್ನು ತಮಸ್ಸು ಹೆಚ್ಚಿತೆಂದು ಹೇಳುವಾಗ, ಸತ್ತ್ವದ ಲಕ್ಷಣಗಳಾಗಲಿ, ರಜಸ್ಸಿನ ಲಕ್ಷಣಗಳಾಗಲಿ ಇರುವುದಿಲ್ಲ. ಸತ್ತ್ವವೆಂದರೆ ಬೆಳಕು, ತಿಳಿವಳಿಕೆ, ರಜಸ್ಸೆಂದರೆ ಕೆಲಸದಲ್ಲಿ ತೊಡಗುವುದು. ತಮಸ್ಸು ಹೆಚ್ಚಾಗಿರುವಾಗ ತಿಳಿವಳಿಕೆಯೂ ಇರುವುದಿಲ್ಲ; ಕೆಲಸಮಾಡುವ ಉತ್ಸಾಹವೂ ಇರುವುದಿಲ್ಲ. ಇದು 'ಅಪ್ರಕಾಶ', 'ಅಪ್ರವೃತ್ತಿ'. ಗುರುಗಳಿದ್ದರೂ, ಉಪದೇಶವನ್ನು ಪಡೆದು ಕೊಳ್ಳುವ ಅವಕಾಶವಿದ್ದರೂ ತಾಮಸಿಗೆ ತಿಳಿವಳಿಕೆಯ ಕಡೆ ಮನಸ್ಸು ಹೋಗುವುದಿಲ್ಲ. ಜ್ಞಾನವನ್ನು ಒದಗಿಸುವ ಸನ್ನಿವೇಶಗಳೆಷ್ಟೇ ಇರಲಿ, ಇವನು ಅವುಗಳಿಂದ ಎಳ್ಳಷ್ಟೂ ಲಾಭವನ್ನು ಪಡೆದುಕೊಳ್ಳುವುದಿಲ್ಲ. ಒಂದು ವೇಳೆ ಒಳ್ಳೆಯ ನಡತೆ, ಕೆಲಸಗಳ ವಿಚಾರ ತಿಳಿದಿದ್ದರೂ ಅವನ್ನು ಕಾರ್ಯಗತಮಾಡಲು ಇವನು ಹೊರಡುವುದಿಲ್ಲ; ಕೆಲಸವೆಂದರೆ ಇವನಿಗೆ ಆಗದು.

ಪ್ರಮಾದವೆಂದರೆ ಯಾವುದು ಸರಿ, ಯಾವುದು ತಪ್ಪು, ಏನನ್ನು ಮಾಡಬೇಕು, ಏನನ್ನು ಮಾಡಬಾರದು ಎಂಬ ವಿವೇಕವಿಲ್ಲದೆ ಇರುವುದು; ತನ್ನ ಕರ್ತವ್ಯವೇನೆಂಬ ಅರಿವಿಲ್ಲದಿರುವುದು. ತಾನು ಮಾಡಿದ ಕೆಲಸ

ದಿಂದ, ಅಥವಾ ತಾನು ಮಾಡಬೇಕಾದ ಕೆಲಸವನ್ನು ಮಾಡದೆ ಇದ್ದುದರಿಂದ ಇತರರಿಗೆ ತೊಂದರೆಯಾದೀತೆಂಬ ಎಣಿಕೆಯೂ ಇಲ್ಲದಿರುವುದು.

ಮೋಹವೆಂದರೆ ಎಚ್ಚರ ತಪ್ಪುವುದು; ಪ್ರಜ್ಞೆಯಿಲ್ಲದಿರುವುದು, ನಿದ್ರೆ, ಆಲಸ್ಯಗಳು ಮೋಹವೇ. ಹಣದ ಮೇಲೆ ಮೋಹ, ಹೆಂಡಿರು ಮಕ್ಕಳ ಮೇಲೆ ಮೋಹ, ಯಶಸ್ಸಿನ ಮೇಲೆ ಮೋಹ, ಭೋಗಜೀವನ ಬೇಕೆಂಬ ಮೋಹ, ಊಟ-ತಿಂಡಿಯ ಮೇಲೆ ಮೋಹ, ಉಡುಗೆ-ತೊಡುಗೆಗಳ ಮೇಲೆ ಮೋಹ ಇವೆಲ್ಲ ಸಂಸಾರದಲ್ಲಿನ ಆಸಕ್ತಿಯನ್ನು ತೋರಿಸುತ್ತವೆ ಅಲ್ಲವೆ? ಕರ್ತವ್ಯವನ್ನು ಕಡೆಗಾಣಿಸಿದಾಗ, ಇತರರ ಅಗತ್ಯವನ್ನು ಅಸಡ್ಡೆಯಿಂದ ಕಂಡಾಗ, ತನ್ನ ಉದ್ಧಾರವನ್ನೇ ತಾನು ಉಪೇಕ್ಷೆ ಮಾಡಿದಾಗ, ಮಿತಿಯನ್ನು ಮರೆತಾಗ, ಅದು ಮೋಹವೆನಿಸಿಕೊಳ್ಳುತ್ತದೆ.

ಊರ್ಧ್ವಂ ಗಚ್ಛಂತಿ ಸತ್ತ್ವಸ್ಥಾ ಮಧ್ಯೇ ತಿಷ್ಠಂತಿ ರಾಜಸಾಃ ।
ಜಘನ್ಯಗುಣವೃತ್ತಿಸ್ಥಾ ಅಧೋ ಗಚ್ಛಂತಿ ತಾಮಸಾಃ ॥ (೧೪, ೧೮)

ಮೂರು ಗುಣಗಳು ಮನುಷ್ಯರನ್ನು ಕ್ರಮವಾಗಿ ಎಲ್ಲಿಗೆ ಒಯ್ಯುತ್ತವೆ ಎಂಬುದು ಈ ಶ್ಲೋಕದ ವಸ್ತು. ಸತ್ತ್ವಗುಣವುಳ್ಳವರು ಮೇಲೆ ಏರುತ್ತಾರೆ; ರಜೋಗುಣವುಳ್ಳವರು ನಡುವೆ, ಎಂದರೆ ಇದ್ದಲ್ಲಿಯೆ, ಇರುತ್ತಾರೆ; ತಮೋಗುಣವುಳ್ಳವರು ಕೆಳಗೆ ಇಳಿಯುತ್ತಾರೆ.

ಮೇಲೆ(**ಊರ್ಧ್ವ**) ಎಂದರೆ ಸ್ವರ್ಗ ಎಂದಾಗಬಹುದು; ಬಂಧನದಿಂದ ಬಿಡುಗಡೆ ಎಂದಾಗಬಹುದು; ಸುಖವೆಂದಾಗಬಹುದು; ನೆಟ್ಟಗೆ ನಿಲ್ಲುವುದು ಎಂದಾಗಬಹುದು. **ಸತ್ತ್ವಗುಣ**ವನ್ನೆ ಹೆಚ್ಚಾಗಿ ಬೆಳೆಸಿಕೊಂಡವರು (**ಸಾತ್ತ್ವಿಕರು**), ಸತ್ತ್ವಗುಣದಲ್ಲೇ ಗಟ್ಟಿಯಾಗಿ ನಿಂತವರು(**ಸತ್ತ್ವಸ್ಥರು**) ಮೇಲೆ ಸಾಗುತ್ತಾರೆ ಎನ್ನುವಾಗ ಇವೆಲ್ಲ ಅರ್ಥಗಳೂ ಹೊಂದುತ್ತವೆ. ಬರುಬರುತ್ತ, ಉತ್ತರೋತ್ತರವಾಗಿ, ಅವರು ಮೇಲುಮೇಲಕ್ಕೆ ಏರುತ್ತಾರೆ. ಪುರುಷಾರ್ಥಗಳಲ್ಲಿ ಮೇಲಿನದು ಎಂದರೆ ಧರ್ಮ. ಸಾತ್ತ್ವಿಕರು ಒಲಿಯುವುದು ಧರ್ಮಕ್ಕೆ. ಇದರಿಂದ ಅಭ್ಯುಧಯ-ನಿಃಶ್ರೇಯಸುಗಳೆರಡನ್ನೂ ಪಡೆದುಕೊಳ್ಳುತ್ತಾರೆ.

ರಜೋಗುಣವನ್ನೇ ಹೆಚ್ಚಾಗಿ ಬೆಳೆಸಿಕೊಂಡವರು ನಡುವೆ ನಿಲ್ಲುತ್ತಾರೆ. ನಡುವೆ ಇರುವುದು ಎಂದರೆ ವ್ಯವಹಾರಪ್ರಪಂಚದಲ್ಲಿ ತೊಡಗಿರುತ್ತ,

ಒಳ್ಳೆಯದು, ಕೆಟ್ಟದ್ದು, ಎರಡನ್ನೂ ಹಿಡಿದು, ಸುಖ-ದುಃಖಗಳೆರಡನ್ನೂ ಅನುಭವಿಸುತ್ತ, ಮೇಲೂ ಏರದೆ ಕೆಳಗೂ ಇಳಿಯದೆ, ಇದ್ದಲ್ಲಿಯೇ ಇದ್ದಂತೆಯೇ ಇರುವುದು. ಅವರು ಮುಂದರಿಯುವುದೂ ಇಲ್ಲ ಹಿಂದೆ ಸರಿಯುವುದೂ ಇಲ್ಲ. ನಡುವೆ ಎಂದರೆ ಸಂಸಾರ. ಪುರುಷಾರ್ಥಗಳಲ್ಲಿ ನಡುವೆ ಇರುವ ಅರ್ಥವನ್ನೆ ಅರಸುತ್ತ, ಅದಕ್ಕಾಗಿ ದುಡಿಯುತ್ತ ಬಾಳನ್ನು ಸವೆಸುವರು.

ತಮೋಗುಣವನ್ನು ಬೆಳೆಸಿಕೊಂಡವರು ಇರುವ ಬಗೆಯನ್ನು 'ಜಘನ್ಯ' ಎಂದು ಕರೆದಿದ್ದಾರೆ. ನಿಂದ್ಯ ಎಂದರ್ಥ. ಇವರು ಹಿಡಿಯುವ ದಾರಿ ಕೆಳಗೆ ಜಾರುತ್ತದೆ. ಅವರ ಬಯಕೆ, ಅಲಸಿಕೆ, ಅಜ್ಞಾನ, ಮೋಹ ಇವೆಲ್ಲ ಅವರನ್ನು ಇದ್ದಲ್ಲಿಯೂ ಇರಗೊಡುವುದಿಲ್ಲ; ಮೇಲೇರುವುದಂತೂ ಹಗಲುಗನಸು. ಪುರುಷಾರ್ಥಗಳಲ್ಲಿ ಅಧಮವೆನಿಸಿದ ಕಾಮವನ್ನು ಇವರು ಅವಲಂಬಿಸಿ ಕೆಳಗಿಳಿಯುತ್ತಾರೆ. ಕೆಳಗೆ ಎಂದರೆ ನರಕ ಎಂದಾಗಬಹುದು, ಬಂಧನವೆಂದಾಗಬಹುದು; ದುಃಖವೆಂದಾಗಬಹುದು; ಬಗ್ಗುವುದೆಂದಾಗ-ಬಹುದು.

ಛಂದೋಗಪರಿಶಿಷ್ಟದಲ್ಲಿ ಆಸೀನ, ಊರ್ಧ್ವ, ಪ್ರಹ್ವ ಎಂಬ ವಿಭಾಗ ಕಂಡುಬರುತ್ತದೆ. ಆಸೀನನೆಂದರೆ ನೆಮ್ಮದಿಯಿಂದ ಕುಳಿತವನು(**ಉಪವಿಷ್ಟಃ**), ಊರ್ಧ್ವನೆಂದರೆ ನೆಟ್ಟಗೆ ಕಟ್ಟಿಗೆಯಂತೆ ನಿಂತವನು(**ದಂಡವಂತ್ ಸ್ಥಿತ**); ಪ್ರಹ್ವ ನೆಂದರೆ ಮುಂದಕ್ಕೆ ಮೈಚಾಚಿದವನು, ಬಾಗಿದವನು(**ಅವನತ ಪೂರ್ವ ಕಾಯ**). **'ತದಾಸೀನೇನ ಕರ್ತವ್ಯಂ ನ ಪ್ರಹ್ವೇನ ನ ತಿಷ್ಠತಾ'**. ಇವರಲ್ಲಿ ಆಸೀನನು ಸಾತ್ತ್ವಿಕ; ಊರ್ಧ್ವ ಎಂದರೆ ನಿಂತವನು, ಕೆಲಸಕ್ಕೆ ಸಿದ್ಧನಾಗಿರುವವನು, ರಾಜಸ; ಪ್ರಹ್ವ ಎಂದರೆ ಬಗ್ಗಿದವನು ತಾಮಸ. ಈ ಮೂವರಲ್ಲಿ ಮೊದಲನೆಯವನೇ ಉತ್ತಮನೆಂದೂ, ಅವನೇ ಪುರುಷಾರ್ಥಗಳನ್ನೆಲ್ಲ ಪಡೆದುಕೊಳ್ಳುವನೆಂದೂ ಈ ಗ್ರಂಥದಲ್ಲಿ ಹೇಳಿದೆ.

ಯತ್ತದಗ್ರೇ ವಿಷಮಿವ ಪರಿಣಾಮೇಽಮೃತೋಪಮಮ್ ।
ತತ್ ಸುಖಂ ಸಾತ್ತ್ವಿಕಂ ಪ್ರೋಕ್ತಮಾತ್ಮಬುದ್ಧಿಪ್ರಸಾದಜಮ್ ॥ (೧೮, ೩೭)

ಸುಖವನ್ನು ಎಲ್ಲರೂ ಅಪೇಕ್ಷಿಸುತ್ತಾರೆ. 'ನನಗೆ ಸುಖ ಇರಬೇಕು; ದುಃಖವು ಸ್ವಲ್ಪವೂ ಇರಬಾರದು' ಎಂದೇ ಎಲ್ಲರ ಬಯಕೆಯಲ್ಲವೆ? ಮನುಷ್ಯರು ಮಾತ್ರವಲ್ಲ, ಪ್ರಾಣಿಗಳೂ ಇದನ್ನೇ ಬಯಸುವುದು. ಆದರೆ

ಸುಖದಲ್ಲಿ ಸಾತ್ತ್ವಿಕ, ರಾಜಸ, ತಾಮಸ, ಎಂಬ ವಿಭಾಗವಿದೆ. ಆಯಾ ಗುಣಗಳು ಉತ್ಕರ್ಷೆಯಲ್ಲಿದ್ದಾಗ ಆಯಾ ಬಗೆಯ ಸುಖ.

ಸಾತ್ತ್ವಿಕವಾದ ಸುಖ ಎಂದರೇನು? ಅದು **'ಆತ್ಮಬುದ್ಧಿಪ್ರಸಾದಜ'** ಎಂದರೆ ತನ್ನ(ಆತ್ಮನಃ) ಬುದ್ಧಿಯ ನೈರ್ಮಲ್ಯದಿಂದ(ಪ್ರಸಾದ) ಉಂಟಾದದ್ದು(ಜ, ಜಾತ). ತನ್ನ ಬುದ್ಧಿಯು ರಜಸ್ಸು ಮತ್ತು ತಮಸ್ಸು ಎಂಬ ಕೊಳೆಗಳಿಂದ ದೂರವಿದ್ದಾಗ ನಿರ್ಮಲವಾಗಿರುತ್ತದೆ, ಸ್ವಚ್ಛವಾಗಿರುತ್ತದೆ. ಇದನ್ನೆ ವ್ಯವಸಾಯಾತ್ಮಿಕವಾದ ಬುದ್ಧಿ ಎಂದು ಗೀತೆ ಕರೆದಿದೆ. ಅದು ವಿಷಯಗಳ ಸೆಳೆತದಿಂದ ನುಚ್ಚುನೂರಾಗಿ ಅತ್ತಿತ್ತ ಹರಿದಾಡುವುದಿಲ್ಲ; ಒಂದೆಡೆ ನೆಮ್ಮದಿ ಇಂದ ನಿಂತಿರುತ್ತದೆ. ಇದರಿಂದ ಉಂಟಾದ ಸುಖ ಸಾತ್ತ್ವಿಕಸುಖ. ಆತ್ಮನೆಂದರೆ ಅಂತರ್ಯಾಮಿಯಾದ ಪರಮಾತ್ಮನೆಂದೂ, ಅವನಲ್ಲಿ ನೆಟ್ಟ ಬುದ್ಧಿ ಅಂತರ್ಮುಖವಾಗಿರುವುದೆಂದೂ, ಇದರಿಂದಾಗಿ ಪ್ರಸನ್ನತೆ ಉಂಟಾಗುವುದೆಂದೂ, ಈ ಪ್ರಸನ್ನತೆಯಿಂದ ಹೊರಹೊಮ್ಮಿದ ಸುಖ ನಿರತಿಶಯಾನಂದರೂಪವಾದುದೆಂದೂ ಇನ್ನೊಂದು ವಿವರಣೆಯಿದೆ.

ಏನಾಗಲಿ, ಇದು ವಿಷಯಾನುಭವದಿಂದ, ಉಂಟಾದ ಸುಖವಲ್ಲ; ಸ್ವಾಭಾವಿಕವಾಗಿ ಬರುವುದೂ ಅಲ್ಲ. ಇದನ್ನು ಪಡೆದುಕೊಳ್ಳಲು ಪ್ರಯತ್ನ ಪಡಬೇಕು, ಸಾಧನೆ ಮಾಡಬೇಕು. ಸಾಧನೆ ಮಾಡುವಾಗ ಲೋಕಸಹಜ-ವಾದ ಸುಖಗಳನ್ನು ಬಿಡಬೇಕಾಗುತ್ತದೆ. ಇಂದ್ರಿಯಗಳನ್ನೂ ಮನಸ್ಸನ್ನೂ ಬಿಗಿಹಿಡಿಯಬೇಕಾಗುತ್ತದೆ. ಇದರಿಂದ ಶ್ರಮ, ಆಯಾಸಗಳು ತಪ್ಪಿದ್ದಲ್ಲ. 'ಅಗ್ರೇ' ಎಂದರೆ ಮೊದಲಲ್ಲಿ, ಯೋಗಸಾಧನೆಯಲ್ಲಿ ಅಡಿಯಿಡುವಾಗ, ತೊಡಗುವಾಗ, ಲೌಕಿಕಸುಖಗಳನ್ನು ಕೈಬಿಟ್ಟದ್ದರಿಂದ ವಿಷದಂತೆಯೆ ಕಹಿಯಾಗಿ, ಕಟುವಾಗಿ ತೋರಿಕೊಳ್ಳುತ್ತದೆ. ಆದರೆ ಕಡೆಯಲ್ಲಿ, ಎಂದರೆ ಯೋಗಸಾಧನೆಯು ಮುಗಿಯುವಾಗ ಅದರ ಫಲವಾಗಿ(ಪರಿಣಾಮೇ) ಬರುವ ಸುಖ ಅಮೃತದಂತೆ ಆಪ್ಯಾಯಮಾನವಾಗಿರುತ್ತದೆ; ಏಕೆಂದರೆ, ಸಾಧನೆಯ ಫಲವಾಗಿ ದೇಹ, ಇಂದ್ರಿಯ, ಮನಸ್ಸುಗಳಿಂದ ಬೇರೆಯಾದ, ಮೂರು ಗುಣಗಳ ಆಡಳಿತಕ್ಕೆ ಸೇರದ, ಆತ್ಮನನ್ನು(ವಿವಿಕ್ತಾತ್ಮನನ್ನು) ನೇರವಾಗಿ ಕಂಡುಕೊಳ್ಳುವುದಾಗುತ್ತದೆ.

ವಿಷಯೇಂದ್ರಿಯಸಂಯೋಗಾದ್ಯತ್ತದಗ್ರೇಽಮೃತೋಪಮಮ್ ।
ಪರಿಣಾಮೇ ವಿಷಮಿವ ತತ್ಸುಖಂ ರಾಜಸಂ ಸ್ಮೃತಮ್ ॥ (೧೮, ೩೮)

ರಾಜಸವೆಂಬಂಥ ಸುಖವಾದರೋ ಹೊರಗಣ ವಿಷಯಗಳು ಮತ್ತು ನಮ್ಮ ಇಂದ್ರಿಯಗಳು ಜೊತೆಗೂಡಿದಾಗ ಉಂಟಾಗುತ್ತದೆ. ಇದು ಲೋಕದ ಜನರಿಗೆ ಪರಿಚಿತವಾದ ಸುಖವೇ. ವ್ಯವಹಾರದಲ್ಲಿ ಸುಖವೆಂದರೆ ಈ ಬಗೆಯದೇ ತಾನೆ? ಮೇಲೆ ಹೇಳಿದಂತೆ 'ಆತ್ಮಬುದ್ಧಿಪ್ರಸಾದ'ದಿಂದ ಉಂಟಾದದ್ದಲ್ಲ.

ಈ ಬಗೆಯ ಲೌಕಿಕ ಸುಖವನ್ನು ಅನುಭವಿಸುವಾಗ ಅಮೃತ ದಂತೆಯೇ ಆಪ್ಯಾಯಮಾನವಾಗಿರುತ್ತದೆ. ಆದರೆ ಪರಿಣಾಮದಲ್ಲಿ ಈ ಪ್ರೀತಿ ಉಳಿಯುವುದಿಲ್ಲ. ವಿಷದಂತೆ ಆಗಿಬಿಡುತ್ತದೆ. ಭೋಗದಿಂದ ರೋಗ ತಪ್ಪಿದ್ದಲ್ಲ. ಎಷ್ಟು ಸುಖವನ್ನುಂಡರೂ ತೃಪ್ತಿಯೆಂಬುದಿದೆಯೆ? ಬೆಂಕಿ ಎಷ್ಟು ಕಟ್ಟಿಗೆಯನ್ನೊಡ್ಡಿದರೂ ಸುಟ್ಟು ಇನ್ನೂ ಬೇಕೆಂದು ಹಾತೊರೆಯುವು-ದಿಲ್ಲವೆ? ಹಾಗೆ ಸುಖದ ಅನುಭವದ ಬೆನ್ನಲ್ಲೇ ಬಯಕೆಯಿರುತ್ತದೆ. ಆತಂಕವೂ ತೋರಿಕೊಳ್ಳುವುದು ಸಹಜ. ಇದು ರಾಜಸ ಸುಖದ ಸ್ವರೂಪ.

ಯದಗ್ರೇ ಚಾನುಬಂಧೇ ಚ ಸುಖಂ ಮೋಹನಮಾತ್ಮನಃ ।
ನಿದ್ರಾಲಸ್ಯಪ್ರಮಾದೋತ್ಥಂ ತತ್ ತಾಮಸಮುದಾಹೃತಮ್ ॥ (೧೮, ೩೯)

ತಾಮಸ ಸುಖವು ಇನ್ನೂ ವಿಲಕ್ಷಣವಾದುದು. ಅದು ಮೊದಲಾಗು-ವಾಗಲೂ ಎಚ್ಚರ ತಪ್ಪಿಸುತ್ತದೆ; ಕಡೆಯಲ್ಲೂ ಎಚ್ಚರ ತಪ್ಪಿಸುತ್ತದೆ. ಮೊದ-ಲಿಂದ ಕಡೆಯವರೆಗೂ ಮನುಷ್ಯನ ಬುದ್ಧಿಯನ್ನು ಮಂಕುಕವಿಸುತ್ತದೆ. ಯಾವುದು ಹಿತ. ಯಾವುದು ಅಹಿತ; ಎಷ್ಟು ಮಿತ, ಎಷ್ಟು ಅತಿ ಎಂಬ ವಿವೇಕವೇ ತಾಮಸ ಗುಣವುಳ್ಳವರಿಗೆ ಇರುವುದಿಲ್ಲ.

ಈ ತಾಮಸ ಸುಖ ಎಲ್ಲಿಂದ ಒದಗಿಬರುತ್ತದೆ? ನಿದ್ರೆಯಿಂದ, ಆಲಸ್ಯ ದಿಂದ, ಪ್ರಮಾದದಿಂದ. ನಿದ್ರೆಯಲ್ಲಿ ಇಂದ್ರಿಯಗಳೂ ಮನಸ್ಸೂ ಕೆಲಸ ಮಾಡುವುದಿಲ್ಲ; ಹೊರಗೂ ಕತ್ತಲೆ, ಒಳಗೂ ಕತ್ತಲೆ. ಯಾವ ತಿಳಿ-ವಳಿಕೆಯೂ ಇಲ್ಲ, ಯಾವ ಕೆಲಸವೂ ಇಲ್ಲ. ತಾಮಸಗುಣವಿದ್ದವರಿಗೆ ಇದೇ ಸುಖ. ಆಲಸ್ಯವೆಂದರೆ ಸೋಮಾರಿತನ, ಆಲಸಿಕೆ. ಶರೀರದಲ್ಲಿ ಲವ ಲವಿಕೆಯಿಲ್ಲದಿರುವುದು, ಇಂದ್ರಿಯಗಳು ಮಂಕಾಗಿರುವುದು, ಮನಸ್ಸು ಮುದುಡಿಕೊಂಡಿರುವುದು. ಪ್ರಮಾದವೆಂದರೆ ಇಲ್ಲಿ ಅಧರ್ಮದಲ್ಲಿಯೇ ಆಸಕ್ತಿ. ಇವುಗಳಿಂದ ಬುದ್ಧಿಯು ಮೋಹಗೊಂಡಿತು. ನಿದ್ರೆಯೇ ಸುಖ,

ಆಲಸ್ಯದಿಂದ ಸುಖ, ಅಧರ್ಮದಲ್ಲಿ ಸುಖ ಎಂಬುದು ತಾಮಸ ಬಗೆಯ ಸುಖ.

ಪ್ರವೃತ್ತಿಂ ಚ ನಿವೃತ್ತಿಂ ಚ ಕಾರ್ಯಾಕಾರ್ಯೇ ಭಯಾಭಯೇ ।
ಬಂಧಂ ಮೋಕ್ಷಂ ಚ ಯಾ ವೇತ್ತಿ ಬುದ್ಧಿಃ ಸಾ ಪಾರ್ಥ ಸಾತ್ತ್ವಿಕೀ ॥(೧೮, ೩೦)

ಇನ್ನು ಬುದ್ಧಿಯ ವಿಚಾರದಲ್ಲಿಯೂ ಸಾತ್ತ್ವಿಕ, ರಾಜಸ, ತಾಮಸ ಎಂಬ ವಿಂಗಡಣೆ ಸಾಧ್ಯ. ಬುದ್ಧಿಯೆಂದರೆ ಯಾವುದರಿಂದ ನಾವು ಎಲ್ಲವನ್ನೂ ತಿಳಿಯುವೆವೋ ಅದು; ಅದು ವಿವೇಚನೆಯ ರೂಪದ್ದು. ಅದರಿಂದ ಉಂಟಾಗುವುದು ಜ್ಞಾನ. ಇದನ್ನು ಮನೀಷೆ, ಧೀ, ಧಿಷಣೆ, ಪ್ರಜ್ಞೆ, ಪ್ರೇಕ್ಷಾ(ಕಂಡುಕೊಳ್ಳುವುದು), ಜ್ಞಪ್ತಿ, ಚಿತ್, ಸಂವಿತ್, ಪ್ರತಿಪತ್ತಿ, ಮನನ ಎಂಬೆಲ್ಲ ಮಾತುಗಳಿಂದ ಗುರುತಿಸುತ್ತಾರೆ. ತನಗೆ ಬೇಕಾದುದು (ಇಷ್ಟ), ಬೇಡವಾದುದು(ಅನಿಷ್ಟ), ಇವನ್ನು ತಿಳಿಯುವುದು, ತನ್ನನ್ನು ತಾನೇ ನೀಗಿಸಿ ಕೊಳ್ಳುವುದು(ವಿಪತ್ತಿ, ನಿದ್ರೆ), ಉತ್ಸಾಹಗೊಳ್ಳುವುದು(ವ್ಯವಸಾಯ), ಏಕಾಗ್ರತೆ ಯಿಂದ ಇರುವುದು(ಸಮಾಧಿ, ಚಿತ್ತಸ್ಥೈರ್ಯ ಅಥವಾ ಚಿತ್ತವೃತ್ತಿ ನಿರೋಧ), ಅದೋ-ಇದೋ, ಹಾಗೋ-ಹೀಗೋ ಎಂದು ಸಂದೇಹಪಡುವುದು (ಸಂಶಯ), ಪ್ರತ್ಯಕ್ಷ-ಅನುಮಾನಗಳನ್ನು ಬಳಸಿಕೊಂಡು ಸರಿಯಾಗಿ ತಿಳಿದುಕೊಳ್ಳುವುದು(ಪ್ರತಿಪತ್ತಿ) ಇವು ಬುದ್ಧಿಯ ಗುಣಗಳೆಂದು ಮಹಾ-ಭಾರತದಲ್ಲಿ(ಮೋಕ್ಷಧರ್ಮಪರ್ವ) ಹೇಳಿದೆ. ಗೀತೆಯು ಬುದ್ಧಿಯನ್ನು ಶರೀರವೆಂಬ ರಥದ ಸಾರಥಿಯೆಂದು ಕರೆದಿದೆ. ಇಂದ್ರಿಯಗಳನ್ನು ಮೀರಿದುದು ಮನಸ್ಸು; ಮನಸ್ಸಿಲ್ಲದೆ ಇಂದ್ರಿಯಗಳ ಕೆಲಸ ಕೈಗೂಡ-ಲಾರದು. ಮನಸ್ಸಿಗಿಂತ ಮಿಗಿಲಾದುದು ಬುದ್ಧಿ; ಬುದ್ಧಿಯ ಬೆಳಕಿನಲ್ಲಿಯೇ ಮನಸ್ಸು ಕೆಲಸಮಾಡಬೇಕು. ಆದರೆ ಬುದ್ಧಿಯನ್ನು ಸತ್ತ್ವ, ರಜಸ್ಸು, ತಮಸ್ಸು ಎಂಬ ಗುಣಗಳು ಆಳುತ್ತವೆ. ಒಂದೊಂದು ಗುಣ ಆಳುವಾಗ ಬುದ್ಧಿಯ ಬಣ್ಣ ಬದಲಾಗುತ್ತದೆ.

ಸತ್ತ್ವಗುಣವು ಬುದ್ಧಿಯ ಮೇಲೆ ಒಡೆತನವನ್ನು ಇರಿಸಿಕೊಂಡಾಗ ಯಾವುದರಲ್ಲಿ ತೊಡಗಬೇಕು, ಯಾವುದರಿಂದ ಹಿಂಜರಿಯಬೇಕು. ಯಾವುದು ಮಾಡತಕ್ಕ ಕೆಲಸ. ಯಾವುದು ಮಾಡಬಾರದ್ದು, ಯಾವುದಕ್ಕೆ ಹೆದರಬೇಕು, ಯಾವುದರಿಂದ ಹೆದರುವ ಕಾರಣವಿಲ್ಲ, ಯಾವುದು

ಬಂಧಕವಾದೀತು, ಯಾವುದು ಮೋಚಕವಾದೀತು ಎಂಬುದನ್ನು ಬುದ್ಧಿಯು ಸರಿಯಾಗಿ ಅರಿತುಕೊಳ್ಳುತ್ತದೆ.

ಧರ್ಮ, ಅರ್ಥ, ಕಾಮಗಳೆಂಬ ಮೂರು ಪುರುಷಾರ್ಥಗಳಿವೆಯಲ್ಲ? ಅವನ್ನು ಶಾಸ್ತ್ರವಿಹಿತವಾದ, ಸಮಾಜಸಮ್ಮತವಾದ ರೀತಿಯಲ್ಲಿ ಪಡೆದು-ಕೊಳ್ಳಲು ತೊಡಗುವುದು ಪ್ರವೃತ್ತಿ. ಇದೇ ಧರ್ಮವೆನಿಸಿಕೊಳ್ಳುತ್ತದೆ. ಅದರಿಂದ ನಿವೃತ್ತಿ; ಎಂದರೆ ಅಧರ್ಮದಿಂದ, ನಿಷಿದ್ಧವಾದದ್ದರಿಂದ ನಿವೃತ್ತಿ, ಧರ್ಮದಲ್ಲಿ ವಿಹಿತವಾದುದರಲ್ಲಿ ಪ್ರವೃತ್ತಿ. ಹಾಗೆಯೇ ಸಂಸಾರ ದಲ್ಲಿ ಕಾಲುಜಾರದಂತೆ, ತನ್ನ ಹೊಣೆಯನ್ನು ಹೊರುವಂತೆ, ತನ್ನ ಮತ್ತು ಇತರರ ಹಿತವನ್ನು ಸಾಧಿಸುವಂತೆ ಮಾಡುವ ಕೆಲಸಗಳು ಕಾರ್ಯ ಎಂದರೆ ಕರ್ತವ್ಯ. ಹಾಗೆಯೇ ಕಾಲುಜಾರುವಂತೆ, ಕುಸಿದು ಬೀಳುವಂತೆ ಮಾಡುವ ಕೆಲಸಗಳೂ ಇರುತ್ತವೆ; ಅವನ್ನು ಮಾಡಬಾರದು. ಇದು ಅಕಾರ್ಯ, ಇಷ್ಟಸಾಧನೆ, ಅನಿಷ್ಟನಿವೃತ್ತಿ ಎಂಬೆರಡೂ ಗುರಿಗಳನ್ನು ಬುದ್ಧಿ ಸಾಧಿಸಬೇಕು. ಇದು ವೈದಿಕವೆಂಬಂಥ (ಅಗ್ನಿಹೋತ್ರ, ಹೋಮ, ಹವನ, ಯಜ್ಞ ಇತ್ಯಾದಿ) ವಿಧಿಗಳಿಗೂ ಅನ್ವಯಿಸುತ್ತದೆ; ಲೌಕಿಕವಾದ (ದ್ರವ್ಯಾರ್ಜನೆ, ಗೃಹನಿರ್ಮಾಣ, ವ್ಯಾಪಾರ, ಉದ್ಯೋಗ, ಕುಟುಂಬಭರಣ ಇತ್ಯಾದಿ) ಕ್ರಿಯೆ-ಗಳಿಗೂ ಅನ್ವಯಿಸುತ್ತದೆ.

ಕಾರ್ಯಾಕಾರ್ಯಗಳಿಂದಾಗಿ ಭಯಾಭಯಗಳೊದಗುತ್ತವೆ. ಕಾರ್ಯ ದಿಂದ ಅಭಯ; ಮಾಡಬೇಕಾದದ್ದನ್ನು ಮಾಡಿದಾಗ ಭಯವೆಲ್ಲಿಯದು? ಮಾಡಬೇಕಾದುದನ್ನು ಮಾಡದೆ ಇರುವುದೂ ಅಕಾರ್ಯವೆ, ಮಾಡ ಬಾರದ್ದನ್ನು ಮಾಡುವುದೂ ಅಕಾರ್ಯವೇ, ಅಕಾರ್ಯದಿಂದ ಭಯ ಇದ್ದದ್ದೇ. ಕೆಡುಕು ಯಾವಾಗ ತಟ್ಟುವುದೋ, ಯಾವ ರೂಪದಲ್ಲಿ ಬರುವುದೋ, ಅದರ ಪರಿಣಾಮವೇನೋ ಎಂಬ ಭಯ. ಭಯವನ್ನು ಸಂಸಾರವೆಂದೂ ಅಭಯವನ್ನು ಮೋಕ್ಷವೆಂದೂ ಕೆಲವೊಮ್ಮೆ ನಿರ್ದೇಶಿ-ಸುವುದುಂಟು. ಆದರೆ ಮುಂದಿನ ಜೋಡಿಯೇ ಬಂಧ-ಮೋಕ್ಷ. ಬಂಧ-ವೆಂದರೆ ಸಂಸಾರದ ಬಂಧನವೇ. ಅವಿದ್ಯೆಗೆ ಒಳಗಾಗಿ, ಆತ್ಮನನ್ನು ಅರಿಯದೆ, ಶರೀರೇಂದ್ರಿಯಮನಸ್ಸುಗಳೇ ತಾನೆಂದು ತಿಳಿದು, ಪ್ರಾಪಂಚಿಕ ವಸ್ತುಗಳು ತನ್ನವೆಂದು ಬಗೆದು, ತೊಳಲಾಡುವುದು ಬಂಧನ. ಬುದ್ಧಿಯ ಬಲದಿಂದ ಬಂಧನದ ಕಾರಣವನ್ನೂ ಸ್ವರೂಪವನ್ನೂ ತಿಳಿದು, ಬಂಧನ

ದಿಂದ ಬಿಡುಗಡೆ ಹೊಂದುವುದು ಹೇಗೆಂಬುದನ್ನು ತಿಳಿಯಬಹುದು. ಇದು ಮೋಕ್ಷೋಪಾಯದ ಅರಿವು.

ಹೀಗೆ ಸಾತ್ತ್ವಿಕವಾದ ಬುದ್ಧಿ ನಮ್ಮನ್ನು ಸರಿಯಾಗಿ ದಾರಿಯಲ್ಲಿ ನಡೆಸುತ್ತದೆ. ಮನುಷ್ಯನಿಗೆ ಬೇಕಾದ ಲೌಕಿಕಸುಖಸಂಪತ್ತು(ಅಭ್ಯುಧಯ) ಮತ್ತು ಪಾರಮಾರ್ಥಿಕ ಹಿತ(ನಿಃಶ್ರೇಯಸ) ಎರಡನ್ನೂ ಕೈಗೂಡಿಸುತ್ತದೆ.

ಯಯಾ ಧರ್ಮಮಧರ್ಮಂ ಚ ಕಾರ್ಯಂ ಚಾಕಾರ್ಯಮೇವ ಚ ।
ಅಯಥಾವತ್ ಪ್ರಜಾನಾತಿ ಬುದ್ಧಿಃ ಸಾ ಪಾರ್ಥ ರಾಜಸೀ ॥ (೧೮, ೩೧)

ರಜಸ್ಸು ಹೆಚ್ಚಾಗಿರುವ ಬುದ್ಧಿಯಿಂದಾಗಿ ಮೇಲೆ ಹೇಳಿದ ಧರ್ಮ, ಅಧರ್ಮ, ಕಾರ್ಯ, ಅಕಾರ್ಯಗಳ ವಿಚಾರವಾಗಿ ಗೊಂದಲವುಂಟಾಗು-ತ್ತದೆ. ಇದ್ದದ್ದು ಇದ್ದಂತೆ ತಿಳಿಯುವುದಿಲ್ಲ; ಹೀಗೋ–ಹಾಗೋ ಎಂಬ ಸಂಶಯವೇಳುತ್ತದೆ. ಯಾವುದು ಧರ್ಮ, ಯಾವುದು ಅಧರ್ಮ, ಏನನ್ನು ಮಾಡಬೇಕು, ಏನನ್ನು ಬಿಡಬೇಕು ಎಂದು ತಿಳಿಯದೆ ಪೇಚಾಡುವಂತೆ ಆಗುತ್ತದೆ. ಅರ್ಜುನನಿಗೆ ಇದ್ದದ್ದು ರಾಜಸ ಬುದ್ಧಿಯೇ. ಅದರಿಂದಲೇ ಅವನು ಧರ್ಮ ಸಮ್ಮೂಢನಾದದ್ದು. ಅವನು ಅನುಭವಿಸಿದ ವಿಷಾದಕ್ಕೆ ರಾಜಸಬುದ್ಧಿಯೇ ಕಾರಣ. ಸತ್ತ್ವದ ಉತ್ಕರ್ಷಯಿರುವಾಗ ಮನಸ್ಸಿನಲ್ಲಿ ಗೊಂದಲವಿರುವುದಿಲ್ಲ, ವಿಷಾದವೂ ಇರುವುದಿಲ್ಲ. ತಾಮಸ ಸ್ವಭಾವವಿದ್ದ ರಂತೂ ಧರ್ಮದ ಸೊಲ್ಲೇ ಇಲ್ಲ, ಅದರ ವಿಚಾರವಾಗಿ ಕುತೂಹಲ ವಾಗಲಿ ಇರಲಾರದು. ಸಾತ್ತ್ವಿಕರಿಗೆ ಉಪದೇಶದ ಅಗತ್ಯವಿಲ್ಲ; ತಾಮಸರಿಗೆ ಉಪದೇಶದಿಂದ ಪ್ರಯೋಜನವಿಲ್ಲ. ಅರ್ಜುನನ ಸ್ವಭಾವ ರಾಜಸವಾಗಿದ್ದು ದರಿಂದ ಸತ್ತ್ವದ ಕಡೆಗಾಗಲಿ ತಮಸ್ಸಿನ ಕಡೆಗಾಗಲಿ ಒಲಿಯುವುದು ಸಾಧ್ಯವಿದ್ದಿತು. ಸತ್ತ್ವದ ಕಡೆಗೇ ತಿರುಗಿಸಬೇಕೆಂಬುದು ಕೃಷ್ಣನ ಉದ್ದೇಶ.

ಅಧರ್ಮಂ ಧರ್ಮಮಿತಿ ಯಾ ಮನ್ಯತೇ ತಮಸಾಽವೃತಾ ।
ಸರ್ವಾರ್ಥಾನ್ ವಿಪರೀತಾಂಶ್ಚ ಬುದ್ಧಿಃ ಸಾ ಪಾರ್ಥ ತಾಮಸಿ ॥(೧೮, ೩೨)

ತಾಮಸಗುಣವು ಬುದ್ಧಿಯನ್ನು ವಶಪಡಿಸಿಕೊಂಡಾಗ ಹೇಗಿರುತ್ತದೆ? ತಮಸ್ಸೆಂದರೆ ಕವಿಯುವ ಕತ್ತಲೆ; ಮುಸುಕುವ ಮಂಜು. ಅದು ಬಂದು ಮೇಲೆ ಮೂಡಿಕೊಂಡಾಗ, ಬುದ್ಧಿಯು ತನಗೆ ಸಹಜವಾದ ಕೆಲಸವನ್ನು ಹೇಗೆ ತಾನೆ ಮಾಡೀತು? ಬುದ್ಧಿಯ ಬೆಳಕೇ ಇರುವುದಿಲ್ಲವಲ್ಲ?

ಸಾಮಾನ್ಯವಾಗಿ ಜನರ ಪರಿಸ್ಥಿತಿ ಹೀಗೆಯೆ ಇರುತ್ತದೆ. ಹೊರಗಣ ವಿಷಯಗಳಿಗೇ ಒಲಿದ ಮನಸ್ಸು ಬುದ್ಧಿಗೆ ಒದಗಿಸುವುದು ವಿಪರೀತವಾದ ನೋಟವನ್ನೇ. ವಿಪರೀತವೆಂದರೆ ಸರಿಯಲ್ಲದುದು, ದಿಟದಿಂದ ದೂರ-ವಾದುದು, ತಿರುಗುಮುರುಗಾಗಿರುವುದು. ಶಾಸ್ತ್ರವಾಗಲಿ, ಹಿರಿಯರಾಗಲಿ, ಹಿತೈಷಿಗಳಾಗಲಿ ಯಾವುದನ್ನು ಅಧರ್ಮವೆಂದೂ ಮಾಡಬಾರದ್ದೆಂದೂ ಹೇಳುವರೋ ಆ ಬುದ್ಧಿಯುಳ್ಳವರು ಅದನ್ನೆ ಧರ್ಮವೆಂದು ಬಗೆಯು-ತ್ತಾರೆ, ಅದನ್ನೆ ಮಾಡುತ್ತಾರೆ. ತಮೋಗುಣವು ಅವರ ಬುದ್ಧಿಯನ್ನು ಸುತ್ತುವರಿದು ಮರೆಮಾಚಿಬಿಟ್ಟಿರುವುದೇ ಕಾರಣ. ತಮಸ್ಸಿನ ಗುಣವೇ ಇದು; ಇಲ್ಲದಿರುವುದನ್ನು ಇದೆಯೆಂದೂ, ಇರುವುದನ್ನು ಇಲ್ಲವೆಂದೂ, ಸರಿಯಾದುದನ್ನು ತಪ್ಪೆಂದೂ ತಪ್ಪಾದುದನ್ನು ಸರಿಯೆಂದೂ, ಗುಣವನ್ನು ದೋಷವೆಂದೂ, ದೋಷವನ್ನು ಗುಣವೆಂದೂ ಬಗೆಯುವುದು.

ಮುಕ್ತಸಂಗೋಽನಹಂವಾದೀ ಧೃತ್ಯುತ್ಸಾಹಸಮನ್ವಿತಃ ।
ಸಿದ್ಧ್ಯಸಿದ್ಧ್ಯೋರ್ನಿರ್ವಿಕಾರಃ ಕರ್ತಾ ಸಾತ್ತ್ವಿಕ ಉಚ್ಯತೇ ॥ (೧೮, ೨೬)

ಕೆಲಸ ಮಾಡುವವನು ಕರ್ತೃ (ಅಥವಾ ಕರ್ತಾ) ಎನಿಸಿಕೊಳ್ಳುತ್ತಾನೆ. ಇವನು ಸತ್ತ್ವಗುಣದ ವಶವಾಗಿರಬಹುದು; ರಾಜಸಗುಣ ಇವನನ್ನು ಆಳುತ್ತಿರಬಹುದು; ಇಲ್ಲವೆ, ತಮಸ್ಸು ಇವನನ್ನು ಮುಸುಕಿರಬಹುದು. ಇವನ ಕೆಲಸ ಲೌಕಿಕವಾಗಿರಲಿ ವೈದಿಕವಾಗಿರಲಿ ಈ ಗುಣಗಳ ಪ್ರಭಾವ ಕೆಲಸ ಮಾಡುವವನು ಸಂವಿಧಾನ, ಸ್ವರೂಪ, ಸ್ವಭಾವಗಳ ಮೇಲೆ ಕಾಣಿಸಿ ಕೊಳ್ಳುತ್ತವೆ.

ಸತ್ತ್ವಗುಣವೇ ಹೆಚ್ಚಾಗಿರುವ ಕರ್ತೃವು ಕೆಲಸಮಾಡುವಾಗ 'ಮುಕ್ತಸಂಗ' ನಾಗಿರುತ್ತಾನೆ. ಎಂದರೆ ಸಂಗದಿಂದ ಬಿಡಲ್ಪಟ್ಟವನಾಗಿರುತ್ತಾನೆ. ಸಂಗ ವೆಂದರೆ ಕೆಲಸದ ಪ್ರಯೋಜನದಲ್ಲೇ ನೆಟ್ಟ ಮನಸ್ಸು, ತಾನು ಮಾಡುತ್ತಿದ್ದೇ ನೆಂಬ ಅನಿಸಿಕೆ. ಮೊದಲನೆಯ ಫಲಾಭಿಸಂಧಿ; ಎರಡನೆಯದು ಕರ್ತೃ-ತ್ವಾಭಿಮಾನ. ಎರಡನ್ನೂ ಬಿಟ್ಟವನು ಮುಕ್ತಸಂಗ. ತಾನು ಮಾಡಬೇಕಾದ ಕೆಲಸ ಎಂಬಷ್ಟು ಕಾರಣದಿಂದ ಮಾಡುತ್ತಾನೆ; ಫಲದಕಡೆ ಗಮನ ಕಡಮೆ. ಫಲಕ್ಕಾಗಿ ಕೆಲಸ ಮಾಡುವುದಲ್ಲ; ಕೆಲಸದಿಂದ ಫಲ ತಾನಾಗಿ ಬರಬೇಕು.

ಮತ್ತೆ ಅವನು 'ಅನಹಂವಾದಿ'ಯಾಗಿರುತ್ತಾನೆ. 'ಅಹಂ' ಎಂದರೆ ನಾನು. ನಾನು ಎಂಬ ಎಣಿಕೆ 'ಅಹಂವಾದ'. ಕೆಲಸ ಮಾಡುವಾಗ ತಾನೇ

ಸಮರ್ಥ, ಗುಣವಂಥ, ಯೋಗ್ಯ ಎಂಬ ಜಂಬವಿದ್ದರೆ ಅವನು ಅಹಂ-ವಾದಿ; ಇಲ್ಲದಿದ್ದರೆ 'ಅನಹಂವಾದಿ'. ಸ್ವಾಭಿಮಾನ ಮಿತಿಮೀರಿದಾಗ ಗರ್ವವೆನಿಸಿಕೊಳ್ಳುತ್ತದೆ; ಇದೇ ಅಹಂವಾದ; ತನ್ನ ಹೆಗ್ಗಳಿಕೆಯನ್ನೇ ಎಲ್ಲರೆದುರು ಹೇಳಿಕೊಳ್ಳುತ್ತಿರುವುದು, ಎಲ್ಲರೂ ತನ್ನನ್ನು ಮೆಚ್ಚಿಕೊಳ್ಳಲೆಂದು ಹಾತೊರೆ-ಯುತ್ತಿರುವುದು. ಇದು ಸಾತ್ತ್ವಿಕ ಗುಣವಲ್ಲ.

ಸಾತ್ತ್ವಿಕನಾದ ಕರ್ತೃವಿಗೆ ಧೃತಿ ಇರುತ್ತದೆ; ಅದನ್ನು ಧಾರಣೆಯೆನ್ನು-ತ್ತಾರೆ. ಎಂದರೆ ತನ್ನ ಕೆಲಸದ ನಡುವೆ ಅಡ್ಡಿ ಆತಂಕಗಳು ಬಂದರೂ, ದುಃಖ ಬಂದಡರಿದರೂ, ಅವನ್ನು ಧೈರ್ಯದಿಂದ ತಾಳಿಕೊಂಡು. ಹಿಡಿದ ಕೆಲಸವನ್ನು ಬಿಡದೆ ಮುಗಿಸುತ್ತಾನೆ. ಅವನಿಗೆ ಉತ್ಸಾಹವೂ ಇರುತ್ತದೆ. ಹಿಡಿದ ಕೆಲಸವನ್ನು ಯಶಸ್ವಿಯಾಗಿ ಮುಗಿಸುವ ತವಕ. ಕೆಲಸಮಾಡುವಾಗ ಲವಲವಿಕೆ, ಉತ್ಸಾಹದ ಲಕ್ಷಣಗಳು(ಚಿಕೀರ್ಷಾವೇಗ).

ಕೆಲಸ ಮಾಡುವವನನ್ನು ಸಾಮಾನ್ಯವಾಗಿ ಕಾಡುವ ಚಿಂತೆ, ಕೆಲಸ ಕೈಗೂಡುವುದೋ ಇಲ್ಲವೋ ಎಂಬುದು. ಕೈಗೂಡಿದರೆ ಸಿದ್ಧಿ, ಕೈಗೂಡ-ದಿದ್ದರೆ ಅಸಿದ್ಧಿ. ಸಿದ್ಧಿಯಿಂದ ಸಮಾಧಾನ, ಸಂತೋಷ; ಅಸಿದ್ಧಿಯಿಂದ ನಿರಾಶೆ, ದುಗುಡ, ಬೇಗುದಿ. ಇವೆಲ್ಲ ವಿಕಾರಗಳು. ಸತ್ತ್ವಗುಣವೇ ಮೇಲಿರುವ ಕರ್ತೃವು ಕೆಲಸಮಾಡುವುದನ್ನು ಬಿಡುವುದಿಲ್ಲ ಮಾತ್ರವಲ್ಲ, ಕೆಲಸ ಕೈಗೂಡಲಿ ಬಿಡಲಿ ಅದರಿಂದ ಅವನ ಮನಸ್ಸು ವಿಕಾರಕ್ಕೆ ಒಳಗಾಗುವುದಿಲ್ಲ. ಎಂದಿನಂತೆಯೇ ನೆಮ್ಮದಿಯಿಂದಿರುತ್ತಾನೆ. ಕೆಲಸ ತನ್ನದು; ಅದರ ಸಿದ್ಧಿಯ, ಅಸಿದ್ಧಿಯ ಗೊಡವೆ ತನಗೇಕೆ? ಮಾಡಬೇಕಾ-ದುದನ್ನು ತಾನು ಪ್ರಾಮಾಣಿಕವಾಗಿ ಮಾಡಿಬಿಟ್ಟರಾಯಿತು. ಕೆಲಸ ಕೈಗೂಡಲು ಐದು ಕಾರಣಗಳಿವೆಯಲ್ಲವೆ(೧೮, ೧೪)? ಫಲಾಫಲಗಳು. ಈಶ್ವರೇಚ್ಛೆಯೆಂದಾದರೂ ಹೇಳಿ. ತನಗಂತೂ ಸಿದ್ಧಿಯಿಂದ ಸಂತೋಷವೂ ಇಲ್ಲ, ಅಸಿದ್ಧಿಯಿಂದ ವಿಷಾದವೂ ಇಲ್ಲ.

ರಾಗೀ ಕರ್ಮಫಲಪ್ರೇಪ್ಸುರ್ಲುಬ್ಧೋ ಹಿಂಸಾತ್ಮಕೋಽಶುಚಿಃ ।
ಹರ್ಷಶೋಕಾನ್ವಿತಃ ಕರ್ತಾ ರಾಜಸಃ ಪರಿಕೀರ್ತಿತಃ ॥ (೧೮, ೨೭)

ರಾಜಸಗುಣವೇ ಹೆಚ್ಚಾಗಿರುವ ಕರ್ತೃವು ಹೇಗಿರುತ್ತಾನೆ? ಅವನು 'ರಾಗಿ', ಎಂದರೆ ರಾಗವುಳ್ಳವನು. ಇಂದ್ರಿಯಗಳಿಂದ ಸುಖವನ್ನನುಭವಿಸಬೇಕೆಂಬ ತೀವ್ರವಾದ ಬಯಕೆ ರಾಗ ಅಥವಾ ಕಾಮ. ಅವನು ಕೆಲಸ

ಮಾಡಲು ತೊಡಗುವುದೇ ಅದರಿಂದ ಒದಗಿಬರುವ ಸುಖವನ್ನನುಭವಿಸಲು. ಹೀಗಾಗಿ ಅವನು 'ಕರ್ಮಫಲಪ್ರೇಪ್ಸು' (ಕೆಲಸದ ಫಲವನ್ನು ಪಡೆದುಕೊಳ್ಳಲು ಕಾತರನಾಗಿರುವವನು). ಅಷ್ಟು ಮಾತ್ರವಲ್ಲ, ಕೆಲಸ ಕಡಮೆಯಿದ್ದು ಫಲ ಹೆಚ್ಚಾಗಿದ್ದರೆ ಅವನಿಗೆ ಸಂತೋಷವೇ. ಅಲ್ಪವಾದ ಶ್ರಮ; ಬಹುವಾದ ಫಲ. ಹೀಗೆ ಅಲೋಚಿಸುವವನು 'ಲುಬ್ಧ'; ಅವನದ್ದು ಅತ್ಯಾಶೆ. ಈ ಮಾತಿನಲ್ಲಿ ಇನ್ನೂ ಒಂದು ಧ್ವನಿಯಿದೆ. ಅವನು ಲೋಭಿ. ಬೇರೆಯವರ ದ್ರವ್ಯವನ್ನು ಬಯಸುತ್ತಾನೆ, ತನ್ನದೇ ದ್ರವ್ಯವನ್ನು ಅಗತ್ಯವಾದುದಕ್ಕೆ ವೆಚ್ಚಮಾಡಲೂ ಹಿಂದೆಮುಂದೆ ನೋಡುತ್ತಾನೆ. ಬೇರೆಯವರ ಹಣವಾದರೆ ಇವನು ಪ್ರಯೋಜನದ ಕಡೆ ಗಮನವಿಡದೆ ಕೆಲಸ ಮಾಡಿಯಾನು, ತನ್ನದೇ ಹಣವಾದರೆ ಪ್ರಯೋಜನದ ಕಡೆಯೇ ಕಣ್ಣು.

ಇನ್ನು ತಾನು ಕೆಲಸಮಾಡುವಾಗ ಯಾರಿಗೆ ಏನು ತೊಂದರೆಯಾದೀತು ಎಂಬ ಎಣಿಕೆ ಇವನಿಗಿರದು. ಇತರರಿಗೆ ಹಿಂಸೆಯಾದರೆ ಇವನಿಗೇನು ಅಳುಕಿಲ್ಲ. ಮೇಲಾಗಿ, ಬೇರೆಯವರಿಗೆ ಕಷ್ಟಕೊಟ್ಟು ತನ್ನ ಕೆಲಸವನ್ನು ಮಾಡಿಕೊಳ್ಳುವುದು ಇವನಿಗೆ ವಾಡಿಕೆಯೇ. ಇತರರಿಗೆ ಶ್ರಮವಾದರೆ ತನಗೆ ಸುಖವಲ್ಲವೆ? ಇದರ ಜೊತೆಗೆ ಅವನು 'ಅಶುಚಿ'ಯೂ ಹೌದು. ಹಣದ ವಿಚಾರದಲ್ಲಿ, ನಡವಳಿಕೆಯ ವಿಚಾರದಲ್ಲಿ ಇವನು ಶುದ್ಧಿಗೆ ಅಷ್ಟು ಬೆಲೆ ಕಟ್ಟುವವನಲ್ಲ. ಹಣ ಬಂದರಾಯಿತು, ಹೇಗೆ ಬಂದಿತೆಂಬುದು ಮುಖ್ಯ ಅಲ್ಲ. ಗುರಿ ಮುಟ್ಟಬೇಕಾದರೆ ಯಾವುದಾದರೂ ದಾರಿಯಾದೀತು! ದಾರಿ ಶುದ್ಧವಾಗಿದೆಯೆ ಎಂದು ನೋಡುತ್ತ ಹೊರಟರೆ ಗುರಿ ಮುಟ್ಟುವುದೇ ಇಲ್ಲ, ಎಂದಿವನ ಎಣಿಕೆ.

ತನಗೆ ಬೇಕಾದದ್ದು ದೊರೆತಾಗ ಸಂತೋಷ; ದೊರೆಯದಿದ್ದಾಗ ದುಃಖ. ಇದ್ದು ಪ್ರಿಯವಾದದ್ದು ದೂರವಾದರೆ ದುಗುಡ; ಇಲ್ಲದ್ದು ಅಪ್ರಿಯವಾದದ್ದು ಹತ್ತಿರ ಬಂದರೆ ಆಗಲೂ ದುಗುಡ. ಸಂತೋಷವಾದರೆ ಕುಣಿದು ಕುಪ್ಪಳಿಸುವನು; ದುಃಖವಾದರೆ ಅವನ ಅಳಲು ಊರಗಲ ಹರಡಿಕೊಳ್ಳುವುದು. ಇದು ರಾಜಸ ಗುಣದ ಕರ್ತೃವಿನ ಸ್ಥಿತಿ.

ಅಯುಕ್ತಃ ಪ್ರಾಕೃತಃ ಸ್ತಬ್ಧಃ ಶಠೋ ನೈಷ್ಕೃತಿಕೋಽಲಸಃ ।
ವಿಷಾದೀ ದೀರ್ಘಸೂತ್ರೀ ಚ ಕರ್ತಾ ತಾಮಸ ಉಚ್ಯತೇ ॥ (೧೮, ೨೮)

ತಾಮಸ ಕರ್ತೃವಿನ ರೀತಿನೀತಿಗಳು ಈ ಶ್ಲೋಕದಲ್ಲಿ ಬರುತ್ತವೆ. ಅವನು 'ಅಯುಕ್ತ' ಎಂದರೆ ಯೋಗವಿಲ್ಲದವನು; ಸಮಾಹಿತನಲ್ಲದವನು. ತಾನು ಮಾಡಬೇಕಾದ ಕೆಲಸಗಳನ್ನು, ವಿಷಯಸುಖದಲ್ಲಿ ಮೈಮರೆತು, ಕೈ ಬಿಡುವನು. ಹಿಂದೆಮುಂದೆ ನೋಡಿಕೊಂಡು, ಆಲೋಚನೆ ಮಾಡಿ ಕೆಲಸ ಮಾಡುವುದು ಅವನಿಂದ ಸಾಧ್ಯವಿಲ್ಲ. ಅವನು 'ಪ್ರಾಕೃತ'. ಪ್ರಕೃತಿ-ಯೆಂದರೆ ಸ್ವಭಾವ; ಸ್ವಭಾವದಿಂದ ಸಿದ್ಧವಾದುದನ್ನೆ ಮಾಡಿಯಾನು. ಸಂಸ್ಕಾರದ ಲಾಭ ಅವನ ಪಾಲಿಗಿಲ್ಲ; ವಿದ್ಯೆಯನ್ನು ಕಲಿಯುವ ಕಷ್ಟ ಅವನಿಗೆ ಬೇಡ. ಹುಟ್ಟಿದಂತೆಯೆ ಬೆಳೆದುಬಿಟ್ಟವನು. ವಯಸ್ಸಾದಂತೆ ಬುದ್ಧಿಯೇನು ಬಲಿಯುವುದಿಲ್ಲ. ಹೀಗಾದುದರಿಂದ 'ಸ್ತಬ್ಧ'; ಕಟ್ಟಿಗೆಯಂತೆ ಸೆಟೆದು ನಿಲ್ಲುವವ. ಯಾರೆದುರೂ ವಿನಯದಿಂದ ಬಾಗುವವನಲ್ಲ. ಯಾರೆಷ್ಟು ಹೇಳಿದರೂ ಕೆಲಸವನ್ನು ಮೊದಲು ಮಾಡುವುದೇ ಇಲ್ಲ; ಇತರರ ಮಾತು ಕೇಳಿಬಿಟ್ಟರೆ ಹೇಗೆ? ಇಷ್ಟರ ಮೇಲೆ, ಅವನು 'ಶಠ'. ಅವನನ್ನು ನಂಬುವುದಾಗದು, ಹೇಳಿಕೇಳಿ ಅವನು ವಂಚಕ, ಮೋಸಗಾರ; ಧೂರ್ತ, ಕಪಟಿ.

ಅವನ ಕತೆ ಇಷ್ಟಕ್ಕೆ ಮುಗಿಯುವುದಿಲ್ಲ. ಅವನು 'ನೈಷ್ಕೃತಿಕ'; ಎಂದರೆ ಬೇರೆಯವರ ಬುಡವನ್ನೆ ಕತ್ತರಿಸುವ ಜಾಣತನ ಅವನದ್ದು. ಇತರರ ಕೆಲಸವನ್ನು ಕೆಡಿಸಲು ಏನು ಬೇಕೋ ಎಲ್ಲವನ್ನೂ ಮಾಡುವವ. ಯಾರ-ನ್ನಾದರೂ ಸ್ವಾರ್ಥಕ್ಕೆ ಬಳಸಿಕೊಳ್ಳುವವ; ಬಳಸಿಕೊಂಡ ಮೇಲೆ ಅವರನ್ನು ತಿಪ್ಪೆಗೆ ಬಿಸಾಡುವವ. ಇಷ್ಟಾದರೂ, ತಾನಾದರೂ ಕೆಲಸ ಮಾಡುವವನೇ ಎಂದರೆ, ಅಲ್ಲ. 'ಅಲಸ', ಎಂದರೆ ಕೆಲಸಕ್ಕೆ ತೊಡಗುವುದೇ ಇಲ್ಲ; ಮೊದಲುಮಾಡಿದ ಕೆಲಸ ಮುಗಿಯವುದೇ ಇಲ್ಲ. ಕೆಲಸಕ್ಕೂ ಅವನಿಗೂ ಎಣ್ಣೆ-ಸೀಗೇಕಾಯಿ ನಂಟು.

ವಿಷಾದದಲ್ಲಿ ಎಂದೂ ಮುಂದು. ಏನಾದರೂ ದುಗುಡವೇ, ಬೇಸರವೇ, ಬೇಸರಿಕೆಯೇ, ದುಮ್ಮಾನವೇ. ಯಾವುದೂ ಇವನನ್ನು ತೃಪ್ತಿಗೊಳಿಸ ಲಾರದು. ನೆಮ್ಮದಿಯೆಂಬುದು ಅವನ ಕನಸುಮನಸಿನಲ್ಲಿಯೂ ಇರದು. 'ದೀರ್ಘಸೂತ್ರೀ' ಎನ್ನುವ ಲಕ್ಷಣವೂ ತಾಮಸಕರ್ತೃವಿನದೇ. ಆ ಮಾತಿನ ಅರ್ಥ ಸರಳವಾಗಿಯೇ ಇದೆ. ಮಂದಸ್ವಭಾವದವನಾದ್ದರಿಂದ ಏನೊಂದು ಕೆಲಸವನ್ನು ಮಾಡಿದರೂ ಅತಿನಿಧಾನವಾಗಿ ಮಾಡುವವ; ಹಿಡಿದ

ಕೆಲಸವನ್ನು ಮುಗಿಸಿಬಿಡಲು ಅವನಿಗೆ ಅಂಜಿಕೆ. ಏನೋ ಸಂದೇಹ, ಯಾವುದೋ ಅಳುಕು, ಕೆಲಸ ಮುಂದರಿಯುವುದೇ ಇಲ್ಲ. ಬೇರೆಯವರು ಒಂದು ದಿನದಲ್ಲಿ ಮಾಡಬಹುದಾದ ಕೆಲಸವನ್ನು ಅವನು ಒಂದು ತಿಂಗಳಾದರೂ ಮಾಡುತ್ತಲೆ ಇರುತ್ತಾನೆ. 'ದೀರ್ಘಸೂತ್ರ' ಎನ್ನುವ ಮಾತಿಗೆ ಇನ್ನೊಂದು ಅರ್ಥವೂ ಇದೆ, ಅದೂ ಇವನಿಗೆ ಒಪ್ಪುತ್ತದೆ. ಅವನು ಅನುಸರಿಸುವ ದಾರಿ ತುಂಬ ಬಳಸಿನದು, ನೇರವಾದುದಲ್ಲ. ಅವನ ಆಳವೇನೆಂದು ಜನ ತಿಳಿಯಲಾರದು. ಎಲ್ಲಿ, ಯಾರಿಗೆ, ಯಾವಾಗ ಕತ್ತರಿಯಿಡುವನೋ ಅದರ ಸುಳಿವು ತಿಳಿಯುವುದಿಲ್ಲ. ಒಳಗೊಳಗೇ ಅವನು ಬೀಸುವ ಬಲೆ ದೊಡ್ಡ ಹರವಿನದು; ಇದು ದೀರ್ಘಸೂತ್ರ.

ದಾತವ್ಯಮಿತಿ ಯದ್ದಾನಂ ದೀಯತೇऽನುಪಕಾರಿಣೇ ।
ದೇಶೇ ಕಾಲೇ ಚ ಪಾತ್ರೇ ಚ ತದ್ದಾನಂ ಸಾತ್ತ್ವಿಕಂ ಸ್ಮೃತಮ್ ॥ (೧೭, ೨೦)

ಇನ್ನು ದಾನದ ವಿಚಾರ ಹೇಳುತ್ತಾರೆ. ಇದರಲ್ಲೂ ಸಾತ್ತ್ವಿಕ, ರಾಜಸ, ತಾಮಸ ಎಂದು ಮೂರು ಬಗೆಗಳು. ದಾನವೆಂದರೆ 'ಸಂವಿಭಾಗ'ವೆಂಬರ್ಥವಿದೆ. ನಮ್ಮ ಸಂಪತ್ತನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವುದು ದಾನದ ಮೂಲಾರ್ಥ. ನಮ್ಮಲ್ಲಿರುವುದೆಲ್ಲ ನಮ್ಮ ಬಳಕೆಗೇ ಅಲ್ಲ; ನಮ್ಮ ಸುತ್ತ ಇರುವವರ ನೆರವಿಗೂ ಅದು ಬರಬೇಕು. ಬಡವರಿಗೆ ದ್ರವ್ಯದಾನ ಮಾಡುತ್ತಾರೆ; ವಿದ್ಯಾವಂತರು ಅದಿಲ್ಲದವರಿಗೆ ವಿದ್ಯಾದಾನ ಮಾಡುತ್ತಾರೆ. ಆರೋಗ್ಯವಂತರು ರೋಗಿಗಳಿಗೆ ಉಪಚರಿಸಿ ಮದ್ದನ್ನು ಕೊಡುವುದು ಭೇಷಜದಾನ. ಹೀಗೆಯೇ ವಸ್ತ್ರದಾನ, ಭೂದಾನ, ಹಿರಣ್ಯದಾನ, ಗೋದಾನ ಮುಂತಾದುವು. ಯಾವುದೇ ದಾನವಾಗಲಿ, ಅದರಲ್ಲಿ ಮುಖ್ಯವಾದುದು ಪಾತ್ರಾಪಾತ್ರವಿವೇಕ; ಯಾರು ದಾನವನ್ನು ತೆಗೆದುಕೊಳ್ಳಲು ಯೋಗ್ಯತೆಯುಳ್ಳವರು, ಯಾರಿಗೆ ಈ ದಾನದ ಅಗತ್ಯವಿದೆ, ಯಾರು ಈ ದಾನದಿಂದ ಪ್ರಯೋಜನವನ್ನು ಪಡೆದುಕೊಳ್ಳುತ್ತಾರೆ ಎಂಬುದೇ ವಿವೇಚನೆ. ದಾನಕ್ಕೆ ಯೋಗ್ಯರಾದವರು ಪಾತ್ರರು; ಹಾಗಲ್ಲದವರು ಅಪಾತ್ರರು.

ಸಾತ್ತ್ವಿಕದಾನವೆನ್ನುವಾಗ, ದಾನಮಾಡುವವನು ದಾನ ಮಾಡುವ ನಿರ್ಧಾರವನ್ನು ಮಾಡಿ, ತುಂಬುಮನಸ್ಸಿನಿಂದ, ಶ್ರದ್ಧೆಯಿಂದ ದಾನಮಾಡುತ್ತಾನೆ. ಯಾರಿಗೆ? ಮುಂದೆ ತನಗೆ ಏನೊಂದು ಉಪಕಾರ ಮಾಡಲೂ

ಇವನಿಂದ ಸಾಧ್ಯವಿಲ್ಲ ಎಂಬುದನ್ನು ಮನವರಿಕೆಮಾಡಿಕೊಂಡು, ಅಂಥ ದೀನನಿಗೆ, ದುರ್ಬಲನಿಗೆ ದಾನಮಾಡುತ್ತಾನೆ. ದೇಶಕಾಲಗಳನ್ನು ನಿರೀಕ್ಷಿಸಿ ದಾನ ನಡೆಯುತ್ತದೆ. ಪುಣ್ಯಸ್ಥಳದಲ್ಲಿ ಮಾಡಿದ ದಾನ; ಗ್ರಹಣಕಾಲ, ಸಂಕ್ರಾಂತಿ, ಮಾಘಮಾಸ ಮುಂತಾದ ವೇಳೆ ಮಾಡಿದ ದಾನ ಪುಣ್ಯಪ್ರದ ವೆಂದು ನಂಬಿಕೆ.

ಪಾತ್ರರಿಗೆ ದಾನಮಾಡುವುದು ಇನ್ನೊಂದು ವಿವರ. ಈ ಮಾತು ಮೊದಲೆ ಬಂದಿತು. ಹಸಿದವನಿಗೆ ಅನ್ನ ಕೊಡಬೇಕು, ಬಾಯಾರಿದವನಿಗೆ ನೀರು ಕೊಡಬೇಕು, ಬಡವನಿಗೆ ಹಣ ಕೊಡಬೇಕು. ಇದು ಸರಿಯಾದ ಪಾತ್ರದಲ್ಲಿ ದಾನ. ಆದರೆ ಕುಡುಕನಾದವನಿಗೆ, ತುಡುಗನಿಗೆ, ಲಂಪಟನಿಗೆ ದಾನ ಮಾಡಿದರೆ ಅದು ವ್ಯರ್ಥವಾಗುತ್ತದೆ; ಏಕೆಂದರೆ ಅದು ಅಪಾತ್ರದಲ್ಲಿ ದಾನ. 'ಕೇವಲ ವಿದ್ಯೆಯಿಂದಾಗಲಿ, ಬರಿಯ ಹುಟ್ಟಿನಿಂ(ಜಾತಿಯಿಂ)ದಾಗಲಿ ಯಾರಿಗೂ ಪಾತ್ರತೆ ಬರುವುದಿಲ್ಲ; ಪಾತ್ರತೆ ಬರುವುದು ನಡತೆಯಿಂದ ಮಾತ್ರ' ಎಂದು ಯಾಜ್ಞವಲ್ಕ್ಯಸ್ಮೃತಿಯ(೧,೨೦೦) ಮಾತಿದೆ. ದಾನವನ್ನು ತೆಗೆದುಕೊಂಡವನು ತನ್ನನ್ನೂ ದಾನಕೊಟ್ಟವನನ್ನೂ ಕಾಪಾಡುವಂಥ ತಪಃ ಶಕ್ತಿಯನ್ನು ಪಡೆದಿರಬೇಕಂತೆ.

ಯತ್ತು ಪ್ರತ್ಯುಪಕಾರಾರ್ಥಂ ಫಲಮುದ್ದಿಶ್ಯ ವಾ ಪುನಃ ।
ದೀಯತೇ ಚ ಪರಿಕ್ಲಿಷ್ಟಂ ತದ್ರಾಜಸಮುದಾಹೃತಮ್ ॥ (೧೭, ೨೧)

ದಾನವು ರಾಜಸವೆನಿಸಿಕೊಳ್ಳುವುದು ಯಾವಾಗ? ತಾನು ಇವನಿಗೆ ದಾನ ಮಾಡಿದರೆ ಅದಕ್ಕೆ ಪ್ರತಿಯಾಗಿ ಯಾವಾಗಲಾದರೂ ಇವನು ತನಗೆ ಏನಾದರೊಂದು ಉಪಕಾರವನ್ನು ಮಾಡುತ್ತಾನೆ ಎಂಬ ನಿರೀಕ್ಷೆಯಿಂದ ದಾನಮಾಡುವುದು ರಾಜಸದಾನ. ಅಥವಾ ದಾನ ಮಾಡಿದರೆ ತನಗೆ ಪ್ರಯೋಜನವುಂಟು ಎಂಬುದನ್ನು ಕಂಡುಕೊಂಡು ಅದಕ್ಕಾಗಿಯೇ ದಾನ ಮಾಡುವುದೂ ಇದೇ ಬಗೆಯದು. ದಾನಕ್ಕಾಗಿ ದಾನವಲ್ಲ, ಫಲಕ್ಕಾಗಿ ದಾನ. ಫಲದಲ್ಲಿ ಈ ಲೋಕದಲ್ಲಿ ಈಗ ಪಡೆಯುವ ಪ್ರಯೋಜನವೇ ಇರಬಹುದು (ಐಹಿಕ), ಅಥವಾ ಮುಂದಿನ ಜನ್ಮದಲ್ಲಿ ಬೇರೊಂದು ಲೋಕದಲ್ಲಿ ಒದಗುವಂಥದೇ ಇರಬಹುದು (ಆಮುಷ್ಮಿಕ).

ರಾಜಸದಾನದಲ್ಲಿ ದಾನವಾಗಿ ಕೊಡುವ ದ್ರವ್ಯವೂ ಅನ್ಯಾಯದಿಂದ ತನಗೆ ಬಂದಿದ್ದಿರಬಹುದು; ಬೇರೆಯವರಿಗೆ ಕಷ್ಟಕೊಟ್ಟು ಬೇರೆಯವರನ್ನು

ಮೋಸಮಾಡಿ ತಾನು ಪಡೆದುಕೊಂಡದ್ದಿರಬಹುದು. ಅದು ಸರಿಯಾದ ದಾನವಾಗುವುದಿಲ್ಲ. ಅದನ್ನು 'ಪರಿಕ್ಲಿಷ್ಟ' ಎನ್ನುತ್ತಾರೆ. ತನ್ನದಾದದ್ದನ್ನು, ತಾನು ನ್ಯಾಯವಾಗಿ ಕಷ್ಟಪಟ್ಟು ಸಂಪಾದಿಸಿದ್ದನ್ನು, ದಾನಮಾಡಬೇಕು; ಅದು ಸರಿಯಾದ ದಾನ. 'ಪರಿಕ್ಷಿಷ್ಟ'ವಾದ ದಾನ ಎನ್ನುವಾಗ ಇನ್ನೊಂದು ಅರ್ಥವೂ ಇದೆ. 'ಅಯ್ಯೋ, ಇದನ್ನು ಕೊಟ್ಟುಬಿಡಬೇಕಲ್ಲ, ಹೋಯಿತೇ'!; ಎಂದು ದುಗುಡದಿಂದ ಮಾಡುವ ದಾನವೂ ಪರಿಕ್ಲಿಷ್ಟವೇ, ಮನಸ್ಸಿಲ್ಲದೆ ಮಾಡುವ ದಾನ; ಚಿತ್ತಕ್ಲೇಶದಿಂದ ಮಾಡುವ ದಾನ. ಇದು ತಾಮಸದಾನ.

ಅದೇಶಕಾಲೇ ಯದ್ದಾನಮಪಾತ್ರೇಭ್ಯಶ್ಚ ದೀಯತೇ ।
ಅಸತ್ಕೃತಮವಜ್ಞಾತಂ ತತ್ತಾಮಸಮುದಾಹೃತಂ ॥ (೧೭, ೨೨)

ತಾಮಸದಾನದಲ್ಲಿ ಸರಿಯಾದ ದೇಶ-ಕಾಲಗಳ ಗಣನೆಯೇ ಇರುವುದಿಲ್ಲ. ಎಲ್ಲಿ, ಯಾವಾಗ ದಾನಮಾಡಿದರೆ ಸರಿಯೆಂಬ ವಿವೇಕವಿರುವುದಿಲ್ಲ. ಬಹಿರಂಗವಾಗಿ, ಎಲ್ಲರೆದುರು ತುಂಬಿದ ಸಭೆಯಲ್ಲಿ, ನೆರೆದ ಜನಜಂಗುಳಿಯಲ್ಲಿ ದಾನಮಾಡುವುದು ಸರಿಯಲ್ಲ; ಶ್ಮಶಾನ, ವಧ್ಯಸ್ಥಾನ ಮುಂತಾದ ಕಡೆಯೂ ಮಾಡಬಾರದು. ಮತ್ತು ತಾನು ಅಶುಚಿಯಾಗಿದ್ದಾಗ, ಸೂತಕ ಮುಂತಾದ ಕಾಲಗಳಲ್ಲಿ ದಾನ ಮಾಡುವುದೂ ಸರಿಯಲ್ಲ. ಮತ್ತೆ, ದಾನ ತೆಗೆದುಕೊಳ್ಳುವವರು ಅಪಾತ್ರರಾಗಿದ್ದರೆ ದಾನ ತಾಮಸವೇ. ಕಳ್ಳರು, ದರೋಡೆಕೋರರು, ದಡ್ಡರು, ಶೀಲವಿಲ್ಲದವರು, ಕಪಟಿಗಳು, ಜೂಜು-ಗಾರರು ಇವರೆಲ್ಲ ದಾನಕ್ಕೆ ಪಾತ್ರರಾಗುವುದಿಲ್ಲ. ಇಂಥವರಿಗೆ ದಾನ ಕೊಡುವ ಮನಸ್ಸು ಬರುವುದು ತಾಮಸಗುಣ ಹೆಚ್ಚಾಗಿದ್ದರೇನೆ.

ಇನ್ನೊಂದು ವಿಶೇಷವಾದ ಅಂಶ ದಾನದಲ್ಲಿದೆ. ದಾನ ಕೊಡುವವನ ಕೈ ಮೇಲಿರುತ್ತದೆ, ದಾನ ತೆಗೆದುಕೊಳ್ಳುವವನ ಕೈ ಕೆಳಗಿರುತ್ತದೆ. ಅವನು ದಾನಿ, ಇವನು ಯಾಚಕನೆನ್ನಬಹುದೆ? ಅವನ ಸ್ಥಿತಿ ಉತ್ತಮವಾದುದು, ಇವನದ್ದು ಕೀಳಾದುದು ಎನ್ನಬಹುದೆ? ಎಂದರೆ, ದಾನದಲ್ಲಿ ಈ ಎಣಿಕೆ ಇರಬಾರದು. ದಾನಿಯಲ್ಲಿ ಸಂಪತ್ತಿರಬಹುದು; ದಾನಪಾತ್ರನಲ್ಲಿ ವಿದ್ಯೆ, ತಪಸ್ಸು, ಶೀಲ ಮುಂತಾದ ಗುಣಗಳಿರಬಹುದು. ಯಾರು ಹೆಚ್ಚು, ಯಾರು ಕಡಮೆ? ದಾನ ಮಾಡುವಾಗ ದಾನ ತೆಗೆದುಕೊಳ್ಳುವವನನ್ನು ಗೌರವದಿಂದ ಕಾಣಬೇಕೆಂದು ವಿಧಿ; ಅವನನ್ನು ಉಪಚರಿಸಿ ಸಂತೋಷಪಡಿಸಿದ

ನಂತರವೇ ದಾನಮಾಡತಕ್ಕದ್ದು. 'ದಾನವನ್ನು ಸ್ವೀಕರಿಸಿ ನನ್ನನ್ನು ಉದ್ಧಾರ ಮಾಡಿ' ಎಂದು ಕೇಳಿಕೊಳ್ಳಬೇಕು.

ತಾಮಸದಾನದಲ್ಲಿ ದಾನಿಗೆ ಈ ವಿವೇಕವಿರುವುದಿಲ್ಲ. ದಾನತೆಗೆದು ಕೊಳ್ಳಲು ಬಂದವನನ್ನು ದಾನಿಯು ಕೀಳಾಗಿ ಕಾಣುತ್ತಾನೆ; ಅವನನ್ನು ಆದರಿಸಿ, ಕುಳ್ಳಿರಿಸಿ ಸತ್ಕರಿಸುವುದಿಲ್ಲ. ದಾನಿಯು ತನ್ನ ಸಿರಿ, ಔದಾರ್ಯ, ಹಿರಿಮೆಗಳನ್ನೇ ಎತ್ತಿ ಕಾಣಿಸುತ್ತ ದಾನವನ್ನು ಬಿಸಾಡಿದಂತೆ ಕೊಡುತ್ತಾನೆ. ಮತ್ತೆ ಕೆಲವು ತಾಮಸ ದಾನಿಗಳು ದಾನ ತೆಗೆದುಕೊಳ್ಳಲು ಬಂದವನನ್ನು ತಿರಸ್ಕಾರದಿಂದಲೇ ಕಂಡು, ಅವನ ಬಡತನವನ್ನು ಎತ್ತಿ ಆಡಿ, ಬೇರೆಯವ ರೆದುರು ಅವನಿಗೆ ಅವಮಾನ ಮಾಡಿ, ಅವನ ಮನಸ್ಸನ್ನು ನೋಯಿಸಿ ದಾನ ಮಾಡುತ್ತಾರೆ. **'ಅಸತ್‌ಕೃತಂ ಅವಜ್ಞಾತಂ'** ಎಂಬ ಮಾತುಗಳ ಅರ್ಥ ಇದು.

೧೧. ಗುಣಗಳ ಹಿಡಿತದಿಂದ ತಪ್ಪಿಸಿಕೊಳ್ಳುವುದು

ಪ್ರಕೃತಿ ತ್ರಿಗುಣಾತ್ಮವಾದದ್ದು, ಎಂದರೆ ಸತ್ತ್ವ, ರಜಸ್ಸು, ತಮಸ್ಸು ಎಂಬು ಮೂರು ಗುಣಗಳ ಒಕ್ಕೂಟ. ಇದನ್ನೆ ಪಾರಿಭಾಷಿಕವಾಗಿ ಕ್ಷೇತ್ರ ಎಂದು ಗೀತೆ ಕರೆದಿದೆ. ಇದನ್ನರಿಯುವವನು ಮತ್ತು ಇದಕ್ಕಿಂತ ಬೇರೆಯಾಗಿರು- ವವನು ಪುರುಷ (ಕ್ಷೇತ್ರಜ್ಞ). ಪ್ರಕೃತಿಯಲ್ಲಿ ಪುರುಷನಿದ್ದಾಗ ಪ್ರಕೃತಿಯ ಗುಣಗಳನ್ನು ಅನುಭವಿಸುತ್ತಾನೆ. ನಡೆಯುವ ಕೆಲಸವೆಲ್ಲ ಪ್ರಕೃತಿಯಿಂದಲೆ, ಎಂದರೆ ಪ್ರಕೃತಿಯಲ್ಲಿ ಪುರುಷನಿರುವುದರಿಂದಲೇ. ಇದನ್ನು ಕ್ಷೇತ್ರ-ಕ್ಷೇತ್ರಜ್ಞ ಸಂಯೋಗ ಎನ್ನುತ್ತಾರೆ. ಯಾವ ಕೆಲಸವಾಗಬೇಕಾದರೂ ಐದು ಕಾರಣ ಗಳಿರುತ್ತವೆ ಎಂದು ಹೇಳಿದೆವಲ್ಲ? ಈ ಐದು ಎರಡರಲ್ಲಿ ಸೇರುವುದು ಹೇಗೆ? ಅಧಿಷ್ಠಾನ(ಶರೀರ), ಕರಣ(ಇಂದ್ರಿಯಗಳು), ಚೇಷ್ಟಾ(ಮನಸ್ಸು) ಇವು ಮೂರು ಪ್ರಕೃತಿಯಲ್ಲಿ(ಎಂದರೆ ಕ್ಷೇತ್ರದಲ್ಲಿ) ಅಂತರ್ಗತವಾಗುತ್ತವೆ; ಕರ್ತಾ (ಜೀವ) ಮತ್ತು ದೈವ(ಪರಮಾತ್ಮ) ಇವೆರಡು ಪುರುಷತತ್ತ್ವದಲ್ಲಿ ಸೇರುತ್ತವೆ. ಕೆಲಸಗಳಲ್ಲಿ ಪ್ರಕೃತಿಯೊಂದಿಗೆ ಸೇರುವವನು ಕರ್ತಾ. ಈ ಕರ್ತೃವಾದ ಜೀವನಿಗೂ ಅಂತರ್ಯಾಮಿಯಾಗಿ ಪರಮಪುರುಷನೆನಿಸಿಕೊಂಡ ಪರಮಾತ್ಮನಾದರೋ ಪ್ರಕೃತಿವ್ಯಾಪಾರವನ್ನೆಲ್ಲ ನೋಡುತ್ತಿರುವವನು (ಉಪ ದ್ರಷ್ಟಾ), ತನ್ನ ಬರಿಯ ಇರವಿನಿಂದ ಕ್ಷೇತ್ರಕ್ಷೇತ್ರಜ್ಞ ಸಂಯೋಗಕ್ಕೆ ಅನುಕೂಲವಾಗಿರುವವನು(ಅನುಮಂತಾ), ಗುಣಗಳನ್ನು ಅನುಭವಿಸುತ್ತಿರು ವಂತೆ ತೋರಿದರೂ ಗುಣಗಳಿಗೆ ಒಡೆಯನಾಗಿರುವವನು. ದಿಟವಾಗಿ ಪರಮಾತ್ಮನೇ ಗುಣಾತೀತ; ಗುಣಗಳ ಸೋಂಕು ಸ್ವಲ್ಪವೂ ಇಲ್ಲದವನು, ನಿರ್ಗುಣ. ಇವನು ಅಕರ್ತೃ; ಆತ್ಮ.

ದಿಟವಾಗಿ ಕರ್ತನೆನ್ನುವವನೂ ಅಕರ್ತೃವೇ; ಆದರೆ ಪ್ರಕೃತಿಯಲ್ಲಿ ತೊಡಗಿರುವಾಗ ತಾನೇ ಕರ್ತನೆಂಬ ಅಭಿಮಾನ ಬಂದೊದಗುತ್ತದೆ. ಪ್ರಕೃತಿಯತ್ತ ಹೊರಳಿದಾಗ ದೈವ ಮರೆಯಾಗುತ್ತದೆ. ದೈವದ ಕಡೆ ಹೊರಳಿದಾಗ ಪ್ರಕೃತಿಯ ಹಿಡಿತ ಸಡಿಲವಾಗುತ್ತದೆ. ದೈವವನ್ನು ಮರೆತು ಪ್ರಕೃತಿಯಲ್ಲಿ ತೊಡಗಿದರೆ ಅದು ದುಃಖಕ್ಕೆ ಕಾರಣ. ಇದನ್ನು ಕುರಿತಂತೆ ಉಪನಿಷತ್ತಿನಲ್ಲೊಂದು ರೂಪಕವಿದೆ ಒಂದೇ ಮರದ ಮೇಲೆ ಒಂದೇ ತೆರನಾದ, ಎಂದೂ ಎಡೆಬಿಡದೆ ಒಟ್ಟಿಗಿರುವ, ಮಿರಿಮಿರಿ ಮಿಂಚುವ ಎರಡು ಹಕ್ಕಿಗಳು. ಅವುಗಳಲ್ಲೊಂದು ಮರದ ಹಣ್ಣುಗಳನ್ನು ತಿನ್ನುತ್ತ,

ಸವಿಯನ್ನೊ ಕಹಿಯನ್ನೊ ಅನುಭವಿಸಿ ತೊಳಲಾಡುತ್ತಿದೆ. ಇನ್ನೊಂದು ಹಕ್ಕಿ ಹಣ್ಣುಗಳಿಗೆ ಬಾಯಿ ಹಾಕದೆ, ಸುಮ್ಮನೆ ನೋಡುತ್ತ ಕುಳಿತಿದೆ. ಇಲ್ಲಿ ಮರವೆಂದರೆ ಪ್ರಕೃತಿ. ಹಕ್ಕಿಗಳು ಜೀವ, ಪರಮಾತ್ಮರು; ಮೇಲಿನ ಎಣಿಕೆಯಂತೆ, ಕರ್ತಾ ಮತ್ತು ದೈವ. ಹಣ್ಣುಗಳನ್ನು ತಿನ್ನುವ ಹಕ್ಕಿ ಗುಣಬದ್ಧ; ತಿನ್ನದೆ ನೋಡುವ ಹಕ್ಕಿ ಗುಣಾತೀತ. ಜೀವವನ್ನು ಪುರುಷನೆಂದರೆ ಪರಮಾತ್ಮ ಪುರುಷೋತ್ತಮ, **'ಪುರುಷಃ ಪರಃ'**.

ಈ ರೂಪಕದ ತಾತ್ಪರ್ಯವಿದು. ಪ್ರಕೃತಿಯ ಗುಣಗಳನ್ನು ಅನುಭವಿಸಿ, ಅವುಗಳ ಹಿಡಿತದಲ್ಲಿ ಸಿಕ್ಕು ಕಷ್ಟಸುಖಗಳನ್ನು ಪಡೆದುಕೊಳ್ಳುತ್ತಿರುವ ಜೀವನು ಪರಮಾತ್ಮನ ನೆಮ್ಮದಿಯಲ್ಲಿ ಪಾಲ್ಗೊಳ್ಳುವುದು ಸಾಧ್ಯ. ಜೀವನು ಕ್ರಮಕ್ರಮವಾಗಿ ಗುಣಗಳ ಹಿಡಿತದಿಂದ ತಪ್ಪಿಸಿಕೊಂಡು, ಪರಮಾತ್ಮನೊಂದಿಗೆ 'ಸಾಧರ್ಮ್ಯ'ವನ್ನು ಪಡೆದುಕೊಳ್ಳುವುದನ್ನು ಗೀತೆ ಸೂಚಿಸಿದೆ (೧೪, ೨). ಇದನ್ನೇ ಯೋಗವೆಂದೂ ಕರೆದಿದೆ. ಗುಣಗಳ ಪರಿಣಾಮ ಕಟ್ಟುಪಾಡು; ಗುಣಗಳನ್ನು ದಾಟಿದಾಗ (ಗುಣನಿವೃತ್ತಿ) ಬಿಡುಗಡೆ. ಗುಣನಿವೃತ್ತಿಗೆ ಉಪಾಯವಾಗಿ ಗುಣಗಳ ಸ್ವರೂಪ, ನೆಲೆ, ವಿಭಾಗ, ಹರವು, ಪರಿಣಾಮಗಳನ್ನು ಮೊದಲು ತಿಳಿಯಬೇಕು (ಜ್ಞಾನ). ಗುಣಗಳು ಗುಣಗಳಲ್ಲೆ ಇರುವಂಥವು ಎಂಬುದನ್ನು ಕಂಡುಕೊಳ್ಳಬೇಕು, ಕರ್ತೃತ್ವ (ಮಾಡುವೆನೆಂಬುದು), ಭೋಕ್ತೃತ್ವ(ಅನುಭವಿಸುವೆನೆಂಬುದು) ಎರಡೂ ಗುಣಗಳ ಹರವಿನಲ್ಲೇ ಇರುವುವು. ಇದನ್ನೆ 'ಸಂಗ'ವೆಂದೂ ಗುಣಾತೀತನಾದವನನ್ನು 'ಮುಕ್ತಸಂಗ'ನೆಂದೂ ಗೀತೆ ನಿರ್ದೇಶಿಸಿದೆ.

ಗುಣಾನೇತಾನತೀತ್ಯ ತ್ರೀನ್ ದೇಹೀ ದೇಹಸಮುದ್ಭವಾನ್ ।
ಜನ್ಮಮೃತ್ಯುಜರಾದುಃಖೈರ್ವಿಮುಕ್ತೋಽಮೃತಮಶ್ನುತೇ ॥ (೧೪, ೨೦)

ದೇಹದ ವ್ಯಾಪಾರಗಳಲ್ಲಿ, ಇಂದ್ರಿಯಗಳ ಪ್ರವೃತ್ತಿಗಳಲ್ಲಿ, ಮನಸ್ಸಿನ ವೃತ್ತಿಗಳಲ್ಲಿ ಹೊರಹೊಮ್ಮುವ ಈ ಮೂರೂ ಗುಣಗಳನ್ನು (ಎಂದರೆ ಪ್ರಕೃತಿಯ ಮೂಲಸ್ವರೂಪವಾದ ಸತ್ತ್ವ, ರಜಸ್ಸು, ತಮಸ್ಸು ಇವುಗಳನ್ನು) ದೇಹವನ್ನು ಹೊಂದಿರುವ ಜೀವನು ದಾಟಿದನೆಂದರೆ (ಅವುಗಳ ಹಿಡಿತದಿಂದ ತಪ್ಪಿಸಿಕೊಂಡನೆಂದರೆ) ಈ ಗುಣಗಳ ವಿಕಾರಗಳಾದ ಹುಟ್ಟು, ಸಾವು, ಮುಪ್ಪು ಮೊದಲಾದ ದುಃಖಗಳಿಂದ ಬಿಡಿಸಿಕೊಂಡು ಮುಕ್ತನಾಗುತ್ತಾನೆ.

ಜೀವನಾದವನು ಹುಟ್ಟುತ್ತಾನೆ, ಬೆಳೆದು ಮುದಿಯಾಗುತ್ತಾನೆ, ಬಗೆಬಗೆಯಾಗಿ ದುಃಖಪಡುತ್ತಾನೆ, ಸಾಯುತ್ತಾನೆ. ಇವೆಲ್ಲ ಪ್ರಕೃತಿಯ ವಿಕಾರಗಳು. ಪರಿಣಾಮಗಳು; ಮೃತ್ಯುವಿನ ಹಲವು ತೋರಿಕೆಗಳು. ಮೂರು ಗುಣಗಳೇ ಇಲ್ಲಿ ಕೆಲಸಮಾಡುತ್ತಿರುವುವು. ಗುಣಗಳ ಹಿಡಿತದಿಂದ ತಪ್ಪಿಸಿಕೊಂಡವನಿಗೆ ಮೃತ್ಯು ಎಲ್ಲಿಯದು? ಅವನು 'ಅಮೃತ'ನೇ; ಎಂದರೆ ಸಾವು ಮೊದಲಾದ ಯಾವ ವಿಕಾರವೂ ಇರದವನು. ಅಮೃತನೆಂದರೆ ಮುಕ್ತ, ಗುಣಗಳಿಂದ ಬಿಡುಗಡೆ ಹೊಂದಿದವನು, ಪ್ರಕೃತಿಯ ಕಟ್ಟುಪಾಡುಗಳನ್ನು ಕಿತ್ತೊಗೆದವನು. ಅವನನ್ನು ಶಾಸ್ತ್ರವು ಆತ್ಮನೆಂದೇ ಕರೆಯುತ್ತದೆ.

ಬದುಕಿರುವಾಗಲೇ ಈ ಬಿಡುಗಡೆಯನ್ನು ಪಡೆದುಕೊಳ್ಳವುದು ಯೋಗದ ಗುರಿ. ಗೀತೆ ಹೇಳುವುದು ಇದನ್ನು. 'ಅಮೃತ'ದ ಸ್ಥಿತಿಯನ್ನು ಅನರ್ಥನಿವೃತ್ತಿಯೆಂದು ಬಣ್ಣಿಸುತ್ತಾರೆ. ಪ್ರಕೃತಿಯ ಕೆಲಸದಿಂದ ಬಂದೊದಗುವ ಕಷ್ಟನಿಷ್ಠುರಗಳೆಲ್ಲ ತೊಲಗಿಹೋಗುವ ಸ್ಥಿತಿಯಿದು. ಬದುಕಿದ್ದಾಗಲೇ ಇದರ ಸ್ವಾರಸ್ಯವಲ್ಲವೆ?

ಸಮದುಃಖಸುಖಃ ಸ್ವಸ್ಥಃ ಸಮಲೋಷ್ಟಾಶ್ಮ ಕಾಂಚನಃ ।
ತುಲ್ಯಪ್ರಿಯಾಪ್ರಿಯೋ ಧೀರಸ್ತುಲ್ಯನಿಂದಾತ್ಮ ಸಂಸ್ತುತಿಃ ॥ (೧೪, ೨೪)

ಸುಖವು ರಜಸ್ಸಿನ ವಿಕಾರ, ದುಃಖವು ತಮಸ್ಸಿನ ವಿಕಾರ. ಗುಣಗಳಿಗೆ ಅಂಟಿಕೊಂಡವನು ಸುಖಬಂದಾಗ ಉಬ್ಬುತ್ತಾನೆ, ದುಃಖ ಒದಗಿದಾಗ ಕುಗ್ಗುತ್ತಾನೆ. ಗುಣಗಳ ಹಿಡಿತದಲ್ಲೆ ಇರುವವನಷ್ಟೆ? ಆದರೆ ಗುಣಾತೀತನಾದವನಿಗೆ ಸುಖವೇನು, ದುಃಖವೇನು ಎರಡೂ ಸಮವೇ. ಮನಸ್ಸಿಗೆ 'ಇದು ಬೇಕು. ಇದು ದೊರಕಿತು' ಎನ್ನುವಾಗ ಸುಖ; 'ಇದು ಬೇಡ, ಆದರೆ ಬಂದಿತು' ಎನ್ನುವಾಗ ದುಃಖ. ಬೇಕಾದುದೂ ಇಲ್ಲ, ಬೇಡವಾದುದೂ ಇಲ್ಲ ಎಂದಮೇಲೆ ಸುಖವೂ ಇಲ್ಲ ದುಃಖವೂ ಇಲ್ಲ.

ಪುರುಷನು ಪ್ರಕೃತಿಯಲ್ಲಿದ್ದಾಗ, ಗುಣಗಳ ಕೆಲಸದಲ್ಲಿ ತೊಡಗಿದ್ದಾಗ, ಸುಖದುಃಖಗಳು ಅನುಭವಕ್ಕೆ ಬಂದೇ ಬರುತ್ತವೆ. ಆದರೆ ಪ್ರಕೃತಿಯಿಂದ ದೂರ ಸರಿದು ಪುರುಷನು ತನ್ನಲ್ಲೇ ತಾನು ನೆಲೆಯಾಗಿ ನಿಂತಾಗ ಇಂಥ ವಿಕಾರಗಳಿರುವುದಿಲ್ಲ. ಈ ಸ್ಥಿತಿಯನ್ನು 'ಸ್ವ–ಸ್ಥ' ಎಂದು ಕರೆದಿದ್ದಾರೆ. ಇವನ ನೆಲೆ ತನ್ನೊಳಗೇ ಇರುತ್ತದೆ. ಹೊರಗೆ (ಮನೆ, ಮಠ, ಬಂಧು, ಬಳಗ, ಹಣ, ಕಾಸು ಇವುಗಳಲ್ಲಿ) ಇರುವುದಿಲ್ಲ. ಹೀಗಿರುವವನಿಗೆ ಮಣ್ಣಿನ

ಹೆಂಟೆಯೂ ಒಂದೇ, ಕಲ್ಲುಹರಳೂ ಒಂದೇ, ಚಿನ್ನದ ಗಟ್ಟಿಯೂ ಒಂದೇ. ಮೂರೂ ನೆಲದ ವಿಕಾರಗಳೇ, ನೆಲವೆಂಬುದು ಪ್ರಕೃತಿಯ ಒಂದು ಅಂಶ. ಪ್ರಕೃತಿಯ ಕಟ್ಟುಪಾಡಿನಿಂದ ಹೊರಗೆ ಬಂದವನಿಗೆ ಇವೆಲ್ಲ ಏತರ ಎಣಿಕೆ? ಒಂದನ್ನು ಕಿತ್ತೊಗೆಯಬೇಕು(ಹೇಯ), ಇನ್ನೊಂದನ್ನು ಜೋಪಾನ ಮಾಡ ಬೇಕು(ಉಪಾದೇಯ) ಎಂಬುದು ಗುಣಬಂಧನದಲ್ಲಿರುವವರಿಗೆ; ಗುಣಾ-ತೀತನಿಗಲ್ಲ. ಯಾವುದರಲ್ಲಿಯೂ ಆಸಕ್ತಿಯಿಲ್ಲದಿರುವುದರಿಂದ ಅವನು ವಿರಕ್ತ.

ಇನ್ನು 'ಇವನು ತನಗೆ ಬೇಕಾದವನು', 'ಅವನು ನನಗೆ ಆಗದವನು', 'ಇದು ನನಗೆ ಇಷ್ಟ', 'ಅದು ನನಗೆ ಇಷ್ಟವಿಲ್ಲ' ಎಂಬ ವಿಂಗಡಣೆಯೂ ಇಲ್ಲಿ ಸಲ್ಲದು. ಬೇಕು-ಬೇಡಗಳೇ ಇಲ್ಲವಾದ ಮೇಲೆ ಈ ವಿಕಾರಗಳೆಲ್ಲಿ ಯವು? ಗುಣಾತೀತನಾದವನು ನಿರ್ವಿಕಾರ. ಹಾಗೆಯೆ, ಹೊಗಳುವವರು ಹೊಗಳಲಿ, ತೆಗಳುವವರು ತೆಗಳಲಿ. ತನಗಾಗಬೇಕಾದುದೇನು? ತನ್ನಿಂದ ಹೋಗುವುದೇನು? ಯಾವುದಕ್ಕೂ ಬಯಸಿ ಬಾಯಿಬಿಡುವುದಿಲ್ಲ; ಏನು ಬಂದರೂ ಬೇಸರ ಪಡುವುದಿಲ್ಲ. 'ಬಂದದ್ದೆಲ್ಲ ಬರಲಿ, ಗೋವಿಂದನ ದಯೆಯೊಂದಿರಲಿ' ಎನ್ನುವವನು.

ಇಂಥವನೀಗ 'ಧೀರ', ಉಪನಿಷತ್ತಿನಲ್ಲಾಗಲಿ ಗೀತೆಯಲ್ಲಾಗಲಿ ಈ ಮಾತಿಗೆ ವಿಶೇಷವಾದ ಒಂದು ಅರ್ಥವಿದೆ. 'ಧೀ' ಎಂದರೆ ಬುದ್ಧಿ; ಅದನ್ನು ಬಿಗಿಹಿಡಿದು ನೆಲೆಯಾಗಿ ಒಂದೆಡೆ ನಿಲ್ಲಿಸುವವನು ಧೀರ (**'ಧೀಯಂ ರಾತಿ'**) ಅವನ ಬುದ್ಧಿಯು ಬರ್ಹಿಮುಖವಾಗಿ ಅತ್ತಿತ್ತ ಅಲೆ-ದಾಡದೆ, ಅಂತಃಪ್ರಾವಣ್ಯನ್ನು(ಎಂದರೆ ಒಳಗೆ ಹರಿಯುವ ಒಲವನ್ನು) ಪಡೆದುಕೊಂಡು, ಆತ್ಮನಲ್ಲೇ ನೆಲೆಸುತ್ತದೆ. ಧೀರನೆಂದರೆ ಸ್ಥಿತಪ್ರಜ್ಞನೇ; ಗುಣಾತೀತನೇ.

ಮಾನಾಪಮಾನಯೋಸ್ತುಲ್ಯಸ್ತುಲ್ಯೋ ಮಿತ್ರಾರಿಪಕ್ಷಯೋಃ ।
ಸರ್ವಾರಂಭಪರಿತ್ಯಾಗೀ ಗುಣಾತೀತಃ ಸ ಉಚ್ಯತೇ ॥ (೧೪, ೨೫)

ಗುಣಾತೀತನ ವರ್ಣನೆಯೆ ಮುಂದರಿಯುತ್ತದೆ. ಮಾನ-ಅಪಮಾನ ಗಳೆರಡೂ ಇವನಿಗೆ ಸಮವೇ. ತನ್ನನ್ನು ಇತರರು ಸತ್ಕರಿಸಲಿ, ತಿರಸ್ಕರಿಸಲಿ ಇವನಲ್ಲೇನು ಉಬ್ಬರವಿಳಿತವಿರದು. ಕೊಂಡಾಡುವವರು ಕೊಂಡಾಡಲಿ, ಕಡೆಗಾಣಿಸುವವರು ಕಡೆಗಾಣಿಸಲಿ, ಇವನ ನೆಮ್ಮದಿಯೇನು ಕದಲುವುದಿಲ್ಲ

ಹಾಗೆಯೇ ಸ್ನೇಹಿತರು, ಶತ್ರುಗಳು ಎಂಬ ಎಣಿಕೆಯೂ ಇರದು ಇವನಿಗೆ. ಒಲವು, ಹಗೆತನ ಎಂಬ ಭೇದವನ್ನೆಣಿಸುವುದಿಲ್ಲ ಇವನು. ಎಲ್ಲರೂ ಒಂದೇ.

ಶ್ರಮವಹಿಸಿ ಉದ್ದೇಶದಿಂದ ಮೊದಲುಮಾಡುವ ಕೆಲಸ 'ಆರಂಭ'ವೆನಿಸಿ ಕೊಳ್ಳುತ್ತದೆ. ಇದರಲ್ಲಿ 'ದೃಷ್ಟ'(ಎಂದರೆ ಈಗಲೇ ಇಲ್ಲಿಯೇ ಫಲಕೊಡುವಂಥ ಸಾಮಗ್ರಿ, ಕಣ್ಣಿನಿಂದ ಕಾಣುವಂಥದು), ಅಥವಾ 'ಅದೃಷ್ಟ'(ಮುಂದೆಂದೋ ಫಲ ಕೊಡುವಂಥದು, ಇಂದು ಕಣ್ಣಿಗೆ ಕಾಣಿಸಿಕೊಳ್ಳದಿದ್ದರೂ ಇದ್ದುಕೊಂಡಿರುವ ಸಾಮಗ್ರಿ) ಪ್ರಯೋಜನವಿರಬಹುದು. ಇಂಥ ಬಗೆಬಗೆಯ ಕೆಲಸಗಳು ಗುಣಗಳ ಹಿಡಿತಕ್ಕೆ ನಮ್ಮನ್ನು ಒಡ್ಡುತ್ತವೆ; ಪ್ರಾಪಂಚಿಕ ವ್ಯವಹಾರದಲ್ಲಿ ನಮ್ಮನ್ನು ತೊಡಗಿಸುತ್ತವೆ, ಗುಣಾತೀತನಿಗಾದರೋ ಇಂಥ ಕೆಲಸಗಳ ಅಗತ್ಯವೇ ಕಾಣುವುದಿಲ್ಲ. ಇವನ್ನೆಲ್ಲ ಬಿಟ್ಟೇಬಿಡುತ್ತಾನೆ. ಅವನಿಗೆ ಇಲ್ಲಿ, ಈ ಲೋಕದಲ್ಲಿ, ಆಗಬೇಕಾದದ್ದೂ ಇರುವುದಿಲ್ಲ; ಮುಂದೆ ಮುಂದಿನ ಜನ್ಮ-ದಲ್ಲೋ ಬೇರೆಯ ಲೋಕದಲ್ಲೋ, ಆಗಬೇಕೆನ್ನುವುದೋ ಇರುವುದಿಲ್ಲ. ಕೆಲಸವನ್ನೆ ಮಾಡದಿದ್ದರೆ ಬದುಕಿರುವುದು ಹೇಗೆ? ಗುಣಾತೀತನೇನು ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ! ಬದುಕಿರಲು ಏನನ್ನು ಮಾಡಬೇಕೋ ಅಷ್ಟನ್ನು, ಅಷ್ಟನ್ನು ಮಾತ್ರ, ಮಾಡುತ್ತಾನೆ. ಹೆಚ್ಚಿನ ಬಯಕೆಗಳ ಬೆನ್ನುಹತ್ತಿ ಯಾವ ಕೆಲಸವನ್ನೂ ಮಾಡುವುದಿಲ್ಲವೆಂದರ್ಥ.

ಕಾಮ ಏಷ ಕ್ರೋಧ ಏಷ ರಜೋಗುಣಸಮುದ್ಭವಃ ।
ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಂ ॥ (೩, ೩೭)

ರಜೋಗುಣದಿಂದ ಮೊಟ್ಟಮೊದಲು ತೋರಿಕೊಳ್ಳುವುದು ಕಾಮ, ಎಂದರೆ ಬಯಕೆ. ಎಲ್ಲ ಪ್ರವೃತ್ತಿಗಳಿಗೂ ಇದು ಮೂಲ. ಇದು ತೋರಿ-ಕೊಂಡ ಮೇಲೆ ರಜೋಗುಣ ಇನ್ನಷ್ಟು ದೃಢವಾಗುತ್ತದೆ. ರಜೋಗುಣದ ಪರಿಣಾಮವೂ ಹೌದು, ಕಾರಣವೂ ಹೌದು. ಕಾಮದಿಂದ ಕಾಣಿಸಿ-ಕೊಳ್ಳುವುದು ಕ್ರೋಧ(ಸಿಟ್ಟು) **'ಕಾಮಾತ್ ಕ್ರೋಧೋಽಭಿಜಾಯತೇ'** ಎನ್ನುವ ಮಾತು ಗೀತೆಯಲ್ಲೇ ಇದೆ. ಬಯಕೆಯಿದ್ದು ಅದು ಈಡೇರದೆ ಹೋದಾಗ ಸಿಟ್ಟು ಸಹಜವಾಗಿಯೆ ಬರುತ್ತದೆ. ರಾಗ-ದ್ವೇಷಗಳು ಸಾಮಾನ್ಯಜನರಲ್ಲಿ ಇರುವುವು ತಾನೆ? ರಾಗದ ಪೂರ್ವಾವತಾರ(ಮೊದಲ ಹಂತ) ಕಾಮ;

ದ್ವೇಷದ ಪೂರ್ವಾವತಾರ ಕ್ರೋಧ. ಕ್ರೋಧವೂ ಒಂದು ಬಗೆಯ ಕಾಮವೇ. ಕಾಮವನ್ನು ಗೆದ್ದರೆ ಕ್ರೋಧವನ್ನೂ ಗೆದ್ದಂತೆ.

ಕಾಮವೇ ಕ್ರೋಧವೆಂದಾದರೂ ಅವುಗಳ ಆಕಾರ ಬೇರೆಬೇರೆ. ಕಾಮವನ್ನು 'ಮಹಾಶನ' ಎಂದೂ ಕ್ರೋಧವನ್ನೂ 'ಮಹಾಪಾಪ್ಮ'ವೆಂದೂ ಕರೆದು ವಿಂಗಡಿಸಿರುವುದು ಕಾಣುತ್ತದೆ. ಮಹಾಶನ ಎಂದರೆ ಎಲ್ಲವನ್ನೂ ತಿಂದು ಮುಗಿಸುವುದು; ಎಷ್ಟು ಕೊಟ್ಟರೂ ಸಾಕಾಗುವುದಿಲ್ಲ. ಕಾಮ ಇಂಥದು. ಯಾವ ಬಯಕೆಯಿದ್ದರೂ ಅದನ್ನು ಪೂರೈಸುವುದು ಕಷ್ಟವೇ; ಇನ್ನು ಬಯಕೆ ತೀರಿತು ಎನ್ನುವಂತಿಲ್ಲ. ಉರಿಯುತ್ತಿರುವ ಬೆಂಕಿಗೆ ಕಟ್ಟಿಗೆ ಒಡ್ಡಿದಂತೆ; ಒಡ್ಡಿದಂತೆಲ್ಲ ಉರಿಯೂ ಹೆಚ್ಚುತ್ತದೆ. ಬಯಕೆಯೂ ಹಾಗೆಯೆ. ಕಾಮವು ಕ್ರೋಧವೆನಿಸಿಕೊಂಡಾಗ ಅದು ಮಹಾಪಾಪ್ಮ. ಪಾಪ್ಮ ಎಂದರೆ ಪಾಪದಲ್ಲಿ ತೊಡಗಿಸುವುದು, ಪಾಪಕ್ಕೆ ಕಾರಣವಾಗುವುದು. ಬಯಕೆಗೆ ಅಡ್ಡಿಯಾದಾಗ ಬರುವ ಸಿಟ್ಟಿನಿಂದ ಯಾವ ಕೆಟ್ಟಕೆಲಸವಾದರೂ ನಡೆದು ಹೋದೀತಲ್ಲವೆ? 'ಕೋಪವೆಂಬುನರ್ಥಸಾಧನ' ತಾನೆ?

ಹೀಗಾಗಿ ಇದನ್ನು ಮನುಷ್ಯನಿಗೆ, ಅದರಲ್ಲೂ ಅಧ್ಯಾತ್ಮದಲ್ಲಿ ಮುಂದರಿಯ ಬಯಸುವ ಸಾಧಕನಿಗೆ, ಶತ್ರುವೆಂದು ಬಣ್ಣಿಸಲಾಗಿದೆ. ಕಾಮವೇ ಕ್ರೋಧವೆಂದುದರಿಂದ ಏಕವಚನದಲ್ಲೇ 'ವೈರಿ' ಎಂಬ ಮಾತು. ಪಾಪದಲ್ಲಿ ತೊಡಗಿಸುವುದು ಶತ್ರುವಲ್ಲದೆ ಮಿತ್ರನೆ? ಎಲ್ಲರಿಗೂ ಇದು ಶತ್ರುವೇ; ಯಾರಾದರೂ ಯಾವ ಪುರುಷಾರ್ಥವನ್ನಾಗಲಿ ಸಾಧಿಸಿ-ಕೊಳ್ಳಲು ಇದು ಅಡ್ಡಿಯಾಗುತ್ತದೆ. ಶ್ರೇಯೋಮಾರ್ಗದಲ್ಲಿ ಅಡಿಯಿಡ-ಗೊಡುವುದಿಲ್ಲ. ಮತ್ತೆ, ಶರೀರದ ಒಳಗೇ ಇದ್ದುಕೊಂಡು ಕಾಡುವ ಹಗೆ. ಗುಣಾತೀತನಾಗಲು ಬಯಸುವವನು ಇದನ್ನು ತಿಳಿದುಕೊಳ್ಳಬೇಕು.

ಇಂದ್ರಿಯಾಣಿ ಮನೋಬುದ್ಧಿರಸ್ಯಾಧಿಷ್ಠಾನಮುಚ್ಯತೇ ।
ಏತೈರ್ವಿಮೋಹಯತ್ಯೇಷ ಜ್ಞಾನಮಾವೃತ್ಯ ದೇಹಿನಂ ॥ (೩, ೪೦)

ಕಾಮವೆಂಬ ಈ ಶತ್ರುವಿನ ನೆಲೆ ಯಾವುದೆಂದು ತಿಳಿದರೆ ಅದ-ರೊಂದಿಗೆ ಹೋರಾಡಬಹುದಲ್ಲವೆ? ನಮ್ಮ ಇಂದ್ರಿಯಗಳು, ಮನಸ್ಸು, ಬುದ್ಧಿ ಇವುಗಳಲ್ಲೇ ಇದು ಇರುವುದು. ಇಂದ್ರಿಯಗಳು ರಜಸ್ಸಿನ ಪರಿಣಾಮಗಳಾಗಿದ್ದ ಹೊರಗಣ ವಿಷಯಗಳತ್ತ ಪ್ರವೃತ್ತವಾಗುತ್ತವೆ; ಇಂದ್ರಿಯಗಳು ಒದಗಿಸಿದ ಸಾಮಗ್ರಿಯಿಂದ ಸತ್ತ್ವಗುಣದ ಮನಸ್ಸು ಸಂಕಲ್ಪ-

ವಿಕಲ್ಪಗಳಲ್ಲಿ ತೊಡಗುತ್ತದೆ; ಮನಸ್ಸಿನ ಈ ವೃತ್ತಿಗಳನ್ನು ವಿವೇಚನೆ ಮಾಡಿ, ನಿಶ್ಚಯಿಸಿಕೊಳ್ಳುವುದು ಬುದ್ಧಿ. ಇಂದ್ರಿಯಗಳು ರಾಜಸವಾದಾಗ ಮನಸ್ಸು ಸತ್ತ್ವವಾದಂತೆಯೆ, ಮನಸ್ಸು ರಾಜಸವಾದಾಗ ಬುದ್ಧಿ ಸತ್ತ್ವವಾಗುತ್ತದೆ. ಈ ಒಕ್ಕೂಟದಲ್ಲಿ ಕಾಮ ಹುಟ್ಟಿಕೊಳ್ಳುತ್ತದೆ. ಅದರ ಅಧಿಷ್ಠಾನ (ಆಸರೆ) ಈ ಒಕ್ಕೂಟವೇ.

ಕಾಮವು ಮನುಷ್ಯನನ್ನು ಮಂಕುಮಾಡಿ, ಮೋಸಮಾಡುವುದು ಈ ಒಕ್ಕೂಟದ ವಿವರಗಳಿಂದಲೇ (ಇಂದ್ರಿಯ, ಮನಸ್ಸು, ಬುದ್ಧಿಗಳಿಂದ), '**ವಿಮೋಹಯತಿ**' ಎಂಬ ಮಾತಿನಲ್ಲಿ ಬಗೆಬಗೆಯಾಗಿ ಮರಳುಮಾಡುವುದೆಂಬ ಧ್ವನಿಯಿದೆ(**ವಿವಿಧಂ ಮೋಹಯತಿ**). ಇದು ನಮ್ಮ ಭ್ರಾಂತಿಗಳು ಅನೇಕ ವಿಧವಾಗಿರುವುದನ್ನು ಹೇಳುತ್ತದೆ. ಅವರವರಿಗೆ ಅವರವರ ತೆವಲು. ಎಲ್ಲವನ್ನೂ ಮಾಡಿಸುವುದು ಕಾಮವೇ (ಕ್ರೋಧವೇ).

ಮೋಹವೆಂದರೆ ಇದ್ದುದ್ದನ್ನು ಇದ್ದ ಹಾಗೆ ಕಾಣಿಸದೆ ಬೇರೆ ಬಗೆಯಾಗಿ ಕಾಣಿಸುವುದು. ಇದ್ದುದ್ದನ್ನು ಇದ್ದಂತೆಯೇ ತಿಳಿಸಿದರೆ ಅದು ಜ್ಞಾನವಾಯಿತು. ಕಾಮವು ಈ ಜ್ಞಾನವನ್ನು ಮುಸುಕಿಬಿಡುತ್ತದೆ. ದೇಹಾಭಿಮಾನ ಇದ್ದರೆ ಸಾಕು. ಕಾಮವು ಮೇಲೆದ್ದುಕೊಂಡು, ಹೊಗೆಯು ಬೆಂಕಿಯನ್ನು ಮುಚ್ಚಿದಂತೆ, ಜ್ಞಾನವನ್ನು ಮರೆಮಾಡಿಬಿಡುತ್ತದೆ. ಇಂದ್ರಿಯಗಳಾಗಲಿ, ಮನಸ್ಸಾಗಲಿ, ಬುದ್ಧಿಯಾಗಲಿ ಯಥಾರ್ಥಜ್ಞಾನಕ್ಕೆ ಸಾಧನಗಳೇ. ಆದರೆ ಕಾಮದ ಕಾವಿನಲ್ಲಿ ಇದು ಸಾಧ್ಯವಾಗುವುದಿಲ್ಲ. ವಿಷಯಗಳ ಕಡೆ ಓಡಿ ಅಲ್ಲಿಯೇ ತೊಡಗಿಬಿಡುತ್ತವೆ.

ತಸ್ಮಾತ್ತ್ವಮಿಂದ್ರಿಯಾಣ್ಯಾದೌ ನಿಯಮ್ಯ ಭರತರ್ಷಭ ।
ಪಾಪ್ಮಾನಂ ಪ್ರಜಹಿ ಹ್ಯೇನಂ ಜ್ಞಾನವಿಜ್ಞಾನನಾಶನಂ ॥ (೩, ೪೧)

ಹೀಗಿರುವುದರಿಂದ, ಮೊಟ್ಟಮೊದಲು ಇಂದ್ರಿಯಗಳನ್ನೆ ಹಿಡಿತದಲ್ಲಿಟ್ಟುಕೊಳ್ಳಬೇಕು. ಇಂದ್ರಿಯಗಳಾಚೆ ಮನಸು, ಮನಸ್ಸಿನಾಚೆ ಬುದ್ಧಿ, ಇಂದ್ರಿಯಗಳು ನಮ್ಮ ವಶದಲ್ಲಿದ್ದರೆ ಮನಸ್ಸನ್ನು ಬಿಗಿಹಿಡಿಯುವುದು ಸುಲಭ; ಮನಸ್ಸು ವಶವಾದರೆ ಬುದ್ಧಿಯನ್ನು ನೆಟ್ಟಗಿರಿಸಿಕೊಳ್ಳುವುದು ಸುಲಭ. ಆದ್ದರಿಂದಲೇ 'ಆದೌ'(ಮೊದಲಲ್ಲೇ) ಎಂಬ ಮಾತು; ಮನಸ್ಸನ್ನೂ ಬುದ್ಧಿಯನ್ನೂ ಅದು ವಶಮಾಡಿಕೊಳ್ಳುವ ಮೊದಲೆ. ಏಕೆಂದರೆ ರಾಗದ್ವೇಷಗಳು ಮೊದಲಾಗುವುದೇ ಇಂದ್ರಿಯಗಳಲ್ಲಿ. ಅವನ್ನು ವಶಮಾಡಿಕೊಳ್ಳುವು

ದೆಂದರೆ, ಅವನ್ನು ವಿಷಯಗಳಿಂದ ಹಿಂದಕ್ಕೆ ಸೆಳೆದುಕೊಂಡು ಬಿಗಿಹಿಡಿಯುವುದು. ಇದನ್ನೆ ಪಾತಂಜಲಯೋಗದ ಪರಿಭಾಷೆಯಲ್ಲಿ ಪ್ರತ್ಯಾ-ಹಾರವೆನ್ನುವುದು. ಸ್ವಾಭಾವಿಕವಾಗಿ ಇಂದ್ರಿಯಗಳು ಅವುಗಳ ವಿಷಯಗಳನ್ನು ಗ್ರಹಿಸುವುದರಲ್ಲೇ ತೊಡಗಿರುತ್ತವೆ – ಕಣ್ಣು ರೂಪವನ್ನು, ಕಿವಿ ಶಬ್ದವನ್ನು, ನಾಲಗೆ ರಸವನ್ನು, ಮೂಗು ಗಂಧವನ್ನು, ಚರ್ಮ ಸ್ಪರ್ಶವನ್ನು, ಹಾಗಿರುವ ಅವನ್ನು ಬಿಗಿಹಿಡಿಯುವುದೇನು ಸುಲಭವಲ್ಲ. ಆದರೆ ಅವನ್ನು ಬಿಗಿಹಿಡಿಯದೆ ಹರಿಯುವ ಮನಸ್ಸನ್ನು ನಿಲ್ಲಿಸುವುದು ಸಾಧ್ಯವಿರದು.

ಇಂದ್ರಿಯಗಳನ್ನು ನಿಗ್ರಹಿಸಿಕೊಳ್ಳುವ ಉದ್ದೇಶವೇನು? ಕಾಮವೆಂಬ ಶತ್ರುವನ್ನು ಸದೆಬಡಿಯುವುದು, ಕಾಮವನ್ನು ಇಲ್ಲಿ 'ಪಾಪ್ಮಾ' ಎಂದು ಕರೆದಿದ್ದಾರೆ; ಪಾಪಕ್ಕೆ ಕಾರಣವಾಗುವುದು ಎಂದರ್ಥ. ಕಾಮವಿದ್ದರಲ್ಲವೆ ಕೆಟ್ಟಕೆಲಸಗಳು ನಡೆಯುವುದು? ಕಾಮದ ದೋಷವೇನು ಎಂಬುದನ್ನೂ ಇಲ್ಲಿ ಹೇಳಿದೆ. ಅದು ಜ್ಞಾನವನ್ನೂ ವಿಜ್ಞಾನವನ್ನೂ ನಾಶಮಾಡುತ್ತದೆ. ಜ್ಞಾನ–ವಿಜ್ಞಾನವೆಂಬೆರಡು ಮಾತುಗಳು ಗೀತೆಯಲ್ಲಿ ಮತ್ತೆ ಮತ್ತೆ ಒಟ್ಟಿಗೆ ಬರುತ್ತವೆ. ಎರಡೂ ಬುದ್ಧಿಯ ಪರಿಣಾಮಗಳೇ. ಮನಸ್ಸು ಎಚ್ಚೆತ್ತಿದ್ದಾಗ, ಜ್ಞಾನವೆಂಬುದು ತಿಳಿವಳಿಕೆ; ಪ್ರತ್ಯಕ್ಷ, ಅನುಮಾನಗಳಿಂದ ಹೊರಗಣ ಪದಾರ್ಥಗಳನ್ನೂ, ಶಾಸ್ತ್ರದ ಶ್ರವಣದಿಂದ ಮತ್ತು ಮನನದಿಂದ ತತ್ತ್ವವನ್ನೂ ಅರಿತುಕೊಳ್ಳುವುದು ಜ್ಞಾನ. ಈ ಜ್ಞಾನವೇ ಆತ್ಮದ ಕಡೆ ಹೊರಳಿ-ದಾಗ, ನಿಧಿಧ್ಯಾಸನವನ್ನು (ಎಂದರೆ ಧ್ಯಾನವನ್ನು) ಕೈಗೊಂಡಾಗ, ಪರತತ್ತ್ವವನ್ನು ಅನುಭವಕ್ಕೆ ತಂದುಕೊಂಡಾಗ ಅದು ವಿಜ್ಞಾನವೆನಿಸಿಕೊಳ್ಳುತ್ತದೆ. ಕಾಮವು ಬುದ್ಧಿಯ ಇವೆರಡೂ ಪರಿಣಾಮಗಳು ಆಗದಂತೆ ತಡೆಯುವುದರಿಂದ ಕಾಮವು ನಮ್ಮ ಪುರುಷಾರ್ಥಸಾಧನೆಗೆ ಶತ್ರು. ಶ್ರೇಯಸ್ಸಿಗೆ ಆತಂಕಕಾರಿ. ಇಂಥ ಕಾಮವನ್ನು ಚೆನ್ನಾಗಿ ಹೊಡೆದುಹಾಕು (ಪ್ರಜಹಿ) ಎಂದು ಇಲ್ಲಿನ ಉಪದೇಶ. ಚೆನ್ನಾಗಿ ('ಪ್ರ' ಎಂಬ ಉಪಸರ್ಗ) ಎಂದರೆ, ಮತ್ತೆ ಅದು ತಲೆಯೆತ್ತದಂತೆ ಎಂದರ್ಥ.

ಇಂದ್ರಿಯಾಣಿ ಪರಾಣ್ಯಾಹುರಿಂದ್ರಿಯೇಭ್ಯಃ ಪರಂ ಮನಃ ।
ಮನಸಸ್ತು ಪರಾ ಬುದ್ಧಿರ್ಯೋ ಬುದ್ಧೇಃ ಪರತಸ್ತು ಸಃ ॥ (೩, ೪೨)

ಇಂದ್ರಿಯಗಳು ಹೆಚ್ಚಿನವು? ಯಾವ ಅರ್ಥದಲ್ಲಿ? ಮೇಲೆ ಹೇಳಿದಂತೆ ಜ್ಞಾನವನ್ನೂ ವಿಜ್ಞಾನವನ್ನೂ ನಾಶಮಾಡುವ ವಿಚಾರದಲ್ಲಿ ಇಂದ್ರಿಯಗಳದ್ದೇ ಮೇಲುಗೈ. ಇನ್ನೂ ಒಂದರ್ಥದಲ್ಲಿ ಅವುಗಳ ಮೇಲ್ಮೈ ಸ್ಥೂಲವಾದ ಶರೀರಕ್ಕಿಂತ ಸೂಕ್ಷ್ಮವಾದುವು ಇಂದ್ರಿಯಗಳು. ಶರೀರದಲ್ಲಿ ಸಂವೇದನಾಶೀಲತೆ (ತಿಳಿವಳಿಕೆ) ಕಡಮೆ; ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮಗಳು ರೂಪ, ಶಬ್ದ, ಗಂಧ, ರಸ, ಸ್ಪರ್ಶಗಳನ್ನು ತಿಳಿಸುವಂಥವು. ಹೊರಗಣ ಜಗತ್ತಿಗೆ ಇವು ಬೆಳಕುಗಳಿದ್ದಂತೆ.

ಇಂದ್ರಿಯಗಳಿಗಿಂತಲೂ ಮನಸ್ಸು ಹೆಚ್ಚಿನದು. ಇಂದ್ರಿಯಗಳಾದರೆ ಅವುಗಳಿಗೆ ತಕ್ಕಂಥ ವಿಷಯಗಳು ಮಾತ್ರ ಗ್ರಹಿಸುತ್ತವೆ. ಕಣ್ಣು ರೂಪವನ್ನು, ಕಿವಿ ಶಬ್ದವನ್ನು, ಹೀಗೆ. ಕಣ್ಣು ಶಬ್ದವನ್ನು ಗ್ರಹಿಸಲಾರದು. ಕಿವಿ ರೂಪವನ್ನು ಗ್ರಹಿಸಲಾರದು. ಮನಸ್ಸಾದರೋ ಎಲ್ಲ ಇಂದ್ರಿಯಗಳ ವಿಷಯಗಳನ್ನೂ ಗ್ರಹಿಸುತ್ತದೆ. ಅಷ್ಟು ಮಾತ್ರವಲ್ಲ. ಮನಸ್ಸಿನ ನೆರವಿಲ್ಲದೆ ಇಂದ್ರಿಯಗಳು ತಂತಮ್ಮ ಕೆಲಸಗಳನ್ನು ಮಾಡಲಾರವು. 'ನಾನು ನೋಡಲಿಲ್ಲ, ಮನಸ್ಸು ಎಲ್ಲಿಯೋ ಇದ್ದೀತು' ಎಂದು ಹೇಳುವರಲ್ಲವೆ? ಕಣ್ಣು ತೆರೆದುಕೊಂಡಿತ್ತು; ಆದರೆ ನೋಡುವುದಾಗಲಿಲ್ಲ. ಇದು ಮನಸ್ಸಿನ ಹೆಚ್ಚುಗಾರಿಕೆ. ಮನಸ್ಸಿದ್ದರೇ ಇಂದ್ರಿಯವ್ಯಾಪಾರ ಸಾರ್ಥಕವಾಗುವುದು.

ಮನಸ್ಸಿಗೂ ಮಿಗಿಲಾದುದು ಬುದ್ಧಿ. ಬುದ್ಧಿಯ ಬೆಳಕಿಲ್ಲದೆ ಮನಸ್ಸು ಇಂದ್ರಿಯಸಂವೇದನೆಗೆ ಪ್ರೇರಕವೂ ಆಗಲಾರದು, ಪ್ರವರ್ತಕವೂ ಆಗಲಾರದು. ಮನಸ್ಸಿನ ವೃತ್ತಿಗಳಿಗೆ ನಿಶ್ಚಿತ ಜ್ಞಾನದ ಕಳೆಯನ್ನು ಕೂಡಿಸುವುದು ಬುದ್ಧಿಯೇ. ಅದರ ಕೆಲಸ ಅಧ್ಯವಸಾಯ(ಖಚಿತವಾಗಿ ತಿಳಿಯುವುದು). ಗೀತೆಯಲ್ಲಿ ಕಾಣಸಿಗುವ ರಥರೂಪಕದಲ್ಲಿ ಬುದ್ಧಿಯು ಶರೀರವೆಂಬ ರಥದಸಾರಥಿ; ಮನಸ್ಸು ಇಂದ್ರಿಯಗಳೆಂಬ ಕುದುರೆಗಳಿಗೆ ಕಡಿವಾಣ ಅಷ್ಟೆ.

ಬುದ್ಧಿಗಿಂತ ಮಿಗಿಲಾದುದು ಯಾವುದು? 'ಸಃ' (ಅದು) ಎಂಬ ನಿರ್ದೇಶನವಿದೆ. ಅದೆಂದರೆ ಆತ್ಮ. ಬುದ್ಧಿಯನ್ನೂ 'ನೋಡುವವನು' (ಬುದ್ಧೇಃ ದ್ರಷ್ಟಾ); ಸಾಕ್ಷಿಯಾಗಿ ಇರುವವನು(ಶಂಕರಾಚಾರ್ಯರು). ಇದು ಜೀವನವಲ್ಲ. ಪರಮಾತ್ಮನೇ ಎಂದು ಇನ್ನೊಂದು ವಿವರಣೆ (ಮಧ್ವಾಚಾರ್ಯರದ್ದು). **'ಬುದ್ಧೇರಾತ್ಮಾ ಮಹಾನ್ ಪರಃ'** ಎಂಬ ಮಾತೇ ಇದೆಯಲ್ಲ? ಅದಕ್ಕಿಂತ ಮಿಗಿಲಾದುದು ಮತ್ತೊಂದಿಲ್ಲ. ಮತ್ತೊಂದು ವಿವರಣೆಯ

ಪ್ರಕಾರ(ರಾಮಾನುಜಾಚಾರ್ಯರದ್ದು) ಇಲ್ಲಿ 'ಸಃ'(ಅದು, ಬುದ್ಧಿಯ ಆಚೆ ಇರುವುದು) ಎಂಬ ಮಾತು ಹಿಂದಿನ ಶ್ಲೋಕದಲ್ಲಿ ಪ್ರಸ್ತಾಪಕ್ಕೆ ಬಂದಿರುವ ಕಾಮವನ್ನೇ ಹೇಳುತ್ತದೆ. ಬುದ್ಧಿಯನ್ನೆ ಅದು ಮರುಳುಮಾಡುವುದರಿಂದ ಬುದ್ಧಿಗಿಂತ ಹೆಚ್ಚಿನದು ಎಂಬ ಅರ್ಥದಲ್ಲಿ.

ಏವಂ ಬುದ್ಧೇಃ ಪರಂ ಬುದ್ಧ್ವಾ ಸಂಸ್ತಭ್ಯಾತ್ಮಾನಮಾತ್ಮನಾ ।
ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಂ ॥ (೩, ೪೩)

ಈ ರೀತಿಯಾಗಿ ಬುದ್ಧಿಗಿಂತ ಮಿಗಿಲಾದ ತತ್ತ್ವವನ್ನು(ಆತ್ಮನನ್ನು) ಅರಿತುಕೊಂಡು(ಎಂದರೆ ಸಾಕ್ಷಾತ್ಕರಿಸಿಕೊಂಡು, ಅನುಭವಕ್ಕೆ ತಂದುಕೊಂಡು) ಆತ್ಮವನ್ನು(ಮನಸ್ಸನ್ನು) ಆತ್ಮದಿಂದ(ಬುದ್ಧಿಯಿಂದ) ನಿಲ್ಲಿಸಿಕೊಂಡು ಪ್ರಬಲ–ವಾದ, ಗೆಲ್ಲಲು ಕಷ್ಟಸಾಧ್ಯವಾದ ಕಾಮವೆಂಬ ಶತ್ರುವನ್ನು ಕೊಲ್ಲಬೇಕು.

ಬುದ್ಧಿಯೆಂದರೆ ಸಾಂಖ್ಯರು ಹೇಳುವ ಅವ್ಯಕ್ತವಾದ ಮಹತ್ತತ್ತ್ವವೆಂದೂ ಅದಕ್ಕಿಂತ ಮಿಗಿಲಾದುದು ಆತ್ಮತತ್ತ್ವವೆಂದೂ ಒಂದು ವಿವರಣೆಯಿದೆ. ಇಲ್ಲಿ ಅತ್ಮತತ್ತ್ವವೆಂದರೆ ಮೂಲಪ್ರಕೃತಿಯಿಂದ(ಗುಣಸಾಮ್ಯದಿಂದ) ಪ್ರತ್ಯೇಕ–ವಾಗಿರದ ಪುರುಷನೇ.

ಆತ್ಮನೆಂಬ ಮಾತಿಗೆ ಅನೇಕಾರ್ಥಗಳಿವೆ; ಸಂದರ್ಭಕ್ಕೆ ಸರಿಯಾಗಿ ಅರ್ಥವನ್ನು ಹೇಳಬೇಕಾಗುತ್ತದೆ. ತಾನು, ಯತ್ನ, ಚೈತನ್ಯ, ಶರೀರ, ಪ್ರಾಣ, ಮನಸ್ಸು, ವಿಜ್ಞಾನ, ಬುದ್ಧಿ, ಜೀವ, ಪ್ರತ್ಯಗಾತ್ಮ, ಪರಮಾತ್ಮ, ಧೃತಿ, ಸ್ವಭಾವ, ಬ್ರಹ್ಮ, ವಿಷ್ಣು ಎಂಬೆಲ್ಲ ಅರ್ಥಗಳಿವೆ. ಆತ್ಮ ಎನ್ನುವ ಸಂಸ್ಕೃತಮಾತು 'ಯಾವಾಗಲೂ ಇರುವುದು, ವ್ಯಾಪಿಸಿಕೊಂಡಿರುವುದು'(**ಅತ ಸಾತತ್ಯ–ಗಮನೇ**) ಎಂಬ ಧಾತುವಿನಿಂದ ಆದದು. ಎಚ್ಚರ, ಕನಸು, ನಿದ್ರೆಗಳಲ್ಲಿ ಎಡೆಬಿಡದೆ ಇರುವುದು ಎಂಬರ್ಥದಲ್ಲಿ ಜೀವ, ಪ್ರತ್ಯಗಾತ್ಮ ಎಂಬುದು ವಾಡಿಕೆಯಲ್ಲಿರುವ ಅರ್ಥ. ಉಳಿದ ಅರ್ಥಗಳಲ್ಲಿಯೂ ಬಳಕೆಯಿದೆ. ಇಲ್ಲಿ **'ಬುದ್ಧೇಃ ಪರಂ'** ಎನ್ನುವಾಗಲೂ ಆತ್ಮನನ್ನೇ ಹೇಳಿರುವುದು; ಒಡನೆಯೇ ಅವನನ್ನು 'ತಿಳಿದುಕೊಂಡು' (ಬುದ್ಧ್ವಾ) ಎಂಬ ಮಾತನ್ನು ಆತ್ಮಜ್ಞಾನ ಎಂಬರ್ಥದಲ್ಲಿ ಹೇಳಿದ್ದಾರೆ. ಮುಂದೆ ಆತ್ಮಜ್ಞಾನದ ಉಪಾಯವಾಗಿ 'ಆತ್ಮನಿಂದ ಆತ್ಮನನ್ನು ಹಿಡಿದು ನಿಲ್ಲಿಸಿಕೊಂಡು' (**ಆತ್ಮನಾ ಆತ್ಮನಾಂ ಸಂಸ್ತಭ್ಯ**) ಎಂಬ ಒಕ್ಕಣೆಯಿದೆ. ಮಾಡಬೇಕಾದ ಕೆಲಸವನ್ನು 'ಸಂಸ್ತಭ್ಯ' ಎನ್ನುವ ಕ್ರಿಯಾಪದದಲ್ಲಿ ಹೇಳಿದ್ದಾರೆ; 'ಸಮ್ಯಕ್‌ಸ್ತಂಭನ' ಎಂದರೆ ಚೆನ್ನಾಗಿ

ನಿಲ್ಲಿಸಿ, ತಡೆಹಿಡಿದು, ಅಲುಗಾಡದಂತೆ ಮಾಡಿ(ನಿಶ್ಚಲಂ ಕೃತ್ವಾ) ಎಂದರ್ಥ. ಗ್ರಂಥಲಿಪಿಯ ಪ್ರಾಚೀನ ಹಸ್ತಪ್ರತಿಯೊಂದರಲ್ಲಿ 'ಸಂಯಮ್ಯ' ಎಂದೇ ಪಾಠಾಂತರವಿದೆ. ಮನಸ್ಸನ್ನು(ಆತ್ಮಾನಾಂ) ಬುದ್ಧಿಯಿಂದ(ಆತ್ಮನಾ) ಬಿಗಿ–ಹಿಡಿದು ಎಂಬರ್ಥ ಹೊರಡುತ್ತದೆ. ಬುದ್ಧಿಯು ಮನಸ್ಸನ್ನು ಆಳಬೇಕು; ಸರಿಯಾದ ದಾರಿಯಲ್ಲಿ ಮನಸ್ಸನ್ನು ನಡೆಸಬೇಕು. ಇದು ತನ್ನಿಂದಲೇ ಆಗಬೇಕಾದ ಕೆಲಸ. ಶಾಸ್ತ್ರವಾಗಲಿ ಗುರುವಾಗಲಿ ದಾರಿ ಯಾವುದೆಂದು ಹೇಳಬಹುದು ಅಷ್ಟೆ. 'ಆತ್ಮನಾ' ಎಂಬುದಕ್ಕೆ ಈ ಧ್ವನಿಯೂ ಇದೆ.

ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ ।
ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾದೇತತ್ತ್ರಯಂ ತ್ಯಜೇತ್॥(೧೬, ೨೧)

ನರಕಕ್ಕೆ ಮೂರು ದಾರಿಗಳಂತೆ. ನರಕವೆಂದರೆ ದುರ್ಗತಿ, ದುಃಖ; ಅಸುರ ಸ್ವಭಾವ. ಮಾರ್ಕಂಡೇಯ ಪುರಾಣದಲ್ಲೊಂದು ಒಕ್ಕಣೆಯಿದೆ. ಅಧರ್ಮ ಮತ್ತು ಹಿಂಸೆ ಇವರ ಮಗಳು ನಿಋತಿ(ಎಂದರೆ ಹಾಳಾಗು–ವುದು, ದುಗುಡ, ಅಳಲು). ನಿಋತಿಯ ಗಂಡ ಅನೃತ(ಎಂದರೆ ಸುಳ್ಳು, ಋತವಲ್ಲದ್ದು) ಇವರಿಬ್ಬರ ಮಗ ನರಕ(ದುಃಖವನ್ನನುಭವಿಸುವ ಎಡೆ). ನರಕನಿಗೆ ಮೂವರು ಸೋದರರು. ಭಯ, ಮಹಾಭಯ ಮತ್ತು ಮೃತ್ಯು (ಸಾವು). ಕಲ್ಪನೆಯ ಸ್ವಾರಸ್ಯ ತಿಳಿಯಿತಲ್ಲವೆ? ನರಕವೆಂಬುದೊಂದು ಲೋಕವೆಂದೂ, ಪಾಪಿಗಳು ಸತ್ತಮೇಲೆ ಇಲ್ಲಿ ಯಾತನೆಯನ್ನು ಅನುಭವಿಸುವರೆಂದೂ ವಾಡಿಕೆಯ ನಂಬಿಕೆ. ನರಕವಿರುವುದು ಕೆಳಗಡೆ, ಸ್ವರ್ಗವಿರುವುದು ಮೇಲ್ಗಡೆ; ನಾವಿರುವುದು ನಡುವೆ. ಗೀತೆಯಲ್ಲಿಯೇ ಸಾತ್ತ್ವಿಕರು ಮೇಲೆ (ಊರ್ಧ್ವಂ) ಏರುವರೆಂದೂ, ತಾಮಸರು ಕೆಳಗೆ (ಅಧಃ) ಇಳಿಯುವರೆಂದೂ, ರಾಜಸರು ನಡುವೆ ಇರುವರೆಂದೂ ಹೇಳಿದೆಯಲ್ಲವೆ? ನರಕವೆಂದರೆ ತಾಮಸ ಜನರ ಸ್ಥಳ, ಸ್ಥಿತಿ, ಗತಿ. ಇದಕ್ಕೊಂದು ವಿಶೇಷಣವೂ ಇದೆ – **'ನಾಶನಂ ಆತ್ಮನಃ'**, ತನ್ನನ್ನು ಹಾಳುಮಾಡಿಕೊಳ್ಳುವುದು (ಇಲ್ಲಿ 'ಆತ್ಮ' ಎಂದರೆ ತಾನು ಎಂದರ್ಥ) ಎಂದರೆ ಬದುಕಿನ ಯಾವ ಪುರುಷಾರ್ಥವನ್ನೂ ಸಾಧಿಸಲಾಗದಿರುವುದು; ಜೀವದ ಸ್ವರೂಪ ನಾಶವೆನ್ನಬಹುದು. ತಪ್ಪುದಾರಿ ಹಿಡಿದು ಹಾಳಾಗುವುದೇ ನರಕ; ಅನರ್ಥಪ್ರಾಪ್ತಿ.

ಮೂರು ದಾರಿಗಳು ಯಾವುವು? ಶ್ಲೋಕದಲ್ಲಿ ಹೇಳಿರುವುದು ಒಂದೇ ಬಾಗಿಲು (ದ್ವಾರ), ಅದರ ಮೂರು ಬಗೆಗಳು (ತ್ರಿವಿಧ). 'ದ್ವಾರ'ವೆಂದರೆ ದಾರಿಯೂ ಆಗುತ್ತದೆ, ದಾರಿಗಿಳಿಯುವ ಬಾಗಿಲೂ ಆಗುತ್ತದೆ; ನರಕದ ಒಳಕ್ಕೆ ಹೋಗುವ ಬಾಗಿಲು ಎನ್ನಿ. ಈ ಬಾಗಿಲನ್ನು ಹೊಕ್ಕಮೇಲೆ ಹಾಳಾಗುವುದು ತಪ್ಪದು. ತಾಮಸಸ್ವಭಾವ ಬೇರೂರುವುದಕ್ಕೆ ಕಾರಣಗಳನ್ನು ಇಲ್ಲಿ ಪಟ್ಟಿ ಮಾಡಿದ್ದಾರೆ – ಕಾಮ(ರಾಗ), ಕ್ರೋಧ(ದ್ವೇಷ) ಮತ್ತು ಲೋಭ(ಅತ್ಯಾಶೆ, ದುರಾಶೆ, ಮೋಹ). ಗೀತೆಯಲ್ಲಿ ದೈವೀಸಂಪತ್ತು(ಸಾತ್ವಿಕರದ್ದು), ಆಸುರೀಸಂಪತ್ತು(ತಾಮಸರದ್ದು) ಎಂಬ ವಿಭಾಗವಿದೆ. ಆಸುರೀ-ಸಂಪತ್ತಿನ ಮೂಲವೇ ಕಾಮ; ಬಯಕೆ; ವಿಷಯಗಳನ್ನು ಕುರಿತಂತೆ ಆಸಕ್ತಿ, ರಾಗ, ರಕ್ತಿ, ಸಂಗ, ಅದರ ಇನ್ನೊಂದು ಮುಖ ಕ್ರೋಧ(ಸಿಟ್ಟು, ಹಗೆತನ, ಒಳಗುದಿ, ಉರಿ), ಇವೆರಡನ್ನೂ ಎತ್ತಿನಿಲ್ಲಿಸುವುದು ಲೋಭ(ಬೇರೆಯವರ ದ್ರವ್ಯವನ್ನು ತನ್ನದಾಗಿ ಮಾಡಿಕೊಳ್ಳುವ ಹವಣಿಕೆ. ತನ್ನದಾದ ಮೇಲೆ ಅದನ್ನು ಕಾಪಿಟ್ಟುಕೊಳ್ಳುವ ಹಟ). ಒಂದೇ ದಾರಿಗೆ ಇವು ಮೂರು ಒಳದಾರಿಗಳು; ಒಂದನ್ನು ಬಿಟ್ಟು ಇನ್ನೊಂದು ಇರಲಾರದು. ಹಾಗೆಂದೇ ಏಕವಚನಪ್ರಯೋಗ.

ಅಧ್ಯಾತ್ಮದಲ್ಲಿ ಮುಂದರಿಯಬೇಕೆನ್ನುವವರು ಈ ಮೂರನ್ನು ಬಿಡ-ಬೇಕೆಂದು ಬೇರೆ ಹೇಳಬೇಕೇ? ರಾಜಸಸ್ವಭಾವದವರಿಗೆ ಹೇಳಬೇಕಾಗುತ್ತದೆ; ಇಲ್ಲವಾದರೆ ತಿಳಿಯುವುದಿಲ್ಲ.

ರಾಗದ್ವೇಷವಿಯುಕ್ತೈಸ್ತು ವಿಷಯಾನಿಂದ್ರಿಯೈಶ್ಚರನ್ ।
ಆತ್ಮವಶ್ಯೈರ್ವಿಧೇಯಾತ್ಮಾ ಪ್ರಸಾದಮಧಿಗಚ್ಛತಿ ॥ (೨, ೬೪)

ಇಲ್ಲಿ ಬಿಡಬೇಕಾದುದನ್ನು ರಾಗ–ದ್ವೇಷ ಎಂಬೆರಡಾಗಿ ಹೇಳಿದ್ದಾರೆ. ಕಾಮ, ಕ್ರೋಧ ಎಂಬ ಮಾತುಗಳಿಗೆ ಪರ್ಯಾಯಪದಗಳು. ಮೇಲೆ ಹೇಳಿದ ಲೋಭವೆಂಬ ಇನ್ನೊಂದು ನರಕದ ದಾರಿಯನ್ನು ಕಾಮದಲ್ಲೇ ಅಡಗಿಸಿದ್ದಾರೆನ್ನಬಹುದು. ರಾಜಸಿಕ ಸ್ವಭಾವದಲ್ಲಿ ಎದ್ದುಕಾಣುವುದು ರಾಗ–ದ್ವೇಷ. ಇವನ್ನು ಬಿಟ್ಟರೆ, ತಡೆಗಟ್ಟಿದರೆ, ರಜೋಗುಣಕ್ಕೆ ಪೆಟ್ಟು ಬಿದ್ದಂತೆ. ರಾಗ–ದ್ವೇಷಗಳು ಮನೆಮಾಡಿಕೊಳ್ಳುವುದು, ಮೊದಲಾಗುವುದು ಇಂದ್ರಿಯಗಳಲ್ಲಿ. ಆದ್ದರಿಂದ ಇಂದ್ರಿಯವ್ಯಾಪಾರದಲ್ಲೇ ರಾಗ–ದ್ವೇಷಗಳನ್ನು

ಬಿಡಬೇಕು. ಇವನ್ನು ಬಿಟ್ಟಮೇಲೆ ಇಂದ್ರಿಯಗಳು ತಮಗೆ ಸಹಜವಾದ, ಸ್ವಾಭಾವಿಕವಾದ ಪ್ರವೃತ್ತಿಗಳಲ್ಲಿ ತೊಡಗುತ್ತವೆ.

ಇಂದ್ರಿಯವ್ಯಾಪಾರಗಳನ್ನೆ ಬಿಡಬೇಕೆಂದು ಹೇಳಿಲ್ಲ; ಹಾಗೆ ಬಿಡುವುದು ಸಾಧ್ಯವೂ ಇಲ್ಲ. ಬದುಕಿಗೆ ಬೇಕಾದ ವಿಷಯಗಳಲ್ಲಿ ಇಂದ್ರಿಯಗಳು ಪ್ರವೃತ್ತವಾಗಿಲ್ಲದಿದ್ದರೆ ಹೇಗೆ? ದೇಹ ಉಳಿಯಬೇಕಲ್ಲ? ದೇಹದ ಅಗತ್ಯ ಗಳಾದರೂ ತೀರಬೇಕಲ್ಲ? ಆದ್ದರಿಂದಲೇ ಶ್ಲೋಕದ ಮೊದಲ ಸಾಲು **'ರಾಗದ್ವೇಷವಿಯುಕ್ತೈಃ ಇಂದ್ರಿಯೈಃ ವಿಷಯಾನ್ ಚರನ್'** ಎಂದಿದೆ. ಇಂದ್ರಿಯ ವ್ಯಾಪಾರವಿರಲಿ, ಇರಲೇಬೇಕು. ಆದರೆ ಇಂದ್ರಿಯಗಳು ರಾಗ–ದ್ವೇಷ ಗಳಿಂದ ಕೂಡಿರಬಾರದು.

ಮತ್ತೆ, ಇಂದ್ರಿಯವ್ಯಾಪಾರಕ್ಕೆ ಇನ್ನೊಂದು ವಿಶೇಷಣವನ್ನೂ ಹೇಳಿದ್ದಾರೆ. **'ಆತ್ಮವಶ್ಯೈಃ ಇಂದ್ರಿಯೈಃ'** ಎಂದು. ಇಂದ್ರಿಯಗಳು ತನ್ನ ವಶದಲ್ಲಿರಬೇಕು; ತಾನು ಇಂದ್ರಿಯಗಳ ವಶದಲ್ಲಿದ್ದರೆ ಹೇಗೆ? ಇಲ್ಲಿ 'ತನ್ನ' ಎಂದರೆ ಮನಸ್ಸಿನ ಎಂದರ್ಥ. ಇಂದ್ರಿಯಗಳು ತಾವು ಹೋದ ದಾರಿಯಲ್ಲಿ ಮನಸ್ಸನ್ನು ಎಳೆದುಕೊಂಡು ಹೋದರೆ ಅನರ್ಥ ತಪ್ಪಿದಲ್ಲ; ರಾಗ–ದ್ವೇಷಗಳು ಕೂಡಿಕೊಳ್ಳುತ್ತವೆ. ಆದ್ದರಿಂದ ಮನಸ್ಸು ಇಂದ್ರಿಯಗಳ ಮೇಲೆ ಅಂಕೆಯನ್ನಿರಿಸಿಕೊಳ್ಳಬೇಕು. ಶರೀರವೆಂಬ ರಥಕ್ಕೆ ಹೂಡಿದ ಕುದುರೆಗಳು ಇಂದ್ರಿಯಗಳು. ಅವನ್ನು ಬಿಗಿಹಿಡಿಯುವ, ಸರಿಯಾದ ದಾರಿಯಲ್ಲಿ ನಡೆಸುವ ಕಡಿವಾಣ ಮನಸ್ಸು. ಅಷ್ಟು ಸಾಲದು, ಮನಸ್ಸಾಗಲಿ ಸ್ವೇಚ್ಛೆ–ಯಾಗಿ ಹರಿದಾಡದಿರುವಂತೆ ಬುದ್ಧಿಗೆ(ಸಾರಥಿಗೆ) ಅದು ವಿಧೇಯವಾಗಿರ ಬೇಕು, ಬುದ್ಧಿಯ ಎಣಿಕೆಗೆ ತಗ್ಗಿಬಗ್ಗಿ ನಡೆದುಕೊಳ್ಳಬೇಕು. ಇದು 'ವಿಧೇಯಾತ್ಮಾ' (ಕಿಂಕರೀಕೃತಮನಃ) ಎಂಬ ಮಾತಿನ ತಾತ್ಪರ್ಯ.

ಹೀಗೆ ಮಾಡಿದ್ದರಿಂದ ಬರುವುದೇನು? ಪ್ರಸಾದ. ಎಂದರೆ ಜೀವದ ನೆಮ್ಮದಿ, ಚಿತ್ತದ ಪ್ರಸನ್ನತೆ, ಅಂತಃಕರಣದ ನೈರ್ಮಲ್ಯ. (ಅಂತಃಕರಣ ಶುದ್ಧಿ), ಶ್ರಮವಿಲ್ಲದಂತೆ, ಪ್ರಯತ್ನದ ಅಗತ್ಯವಿಲ್ಲದಂತೆ ಪ್ರಶಾಂತಿಯ ಸ್ಥಿತಿ ಕೈಗೊಡುತ್ತದೆ. ಪ್ರಸಾದವೆಂದರೆ ಭಗವತ್ ಪ್ರಸಾದವೆಂದಾದರೂ ಆದೀತು. 'ವಿಧೇಯತ್ಮಾ' ಎಂಬ ಮಾತಿನಲ್ಲಿ ಆತ್ಮನೆಂದರೆ ಬುದ್ಧಿಯೆಂದಿಟ್ಟುಕೊಳ್ಳ ಬೇಕು. ಅದು ವಿಷಯಾಭಿಮುಖವಾಗದೆ ಅಂತರ್ಮುಖವಾದಾಗ ಆತ್ಮನ

ಬೆಳಕು ಅದರ ಮೇಲೆ ಬೀಳುತ್ತದೆ. ಇದೇ ಆತ್ಮನ (ಎಂದರೆ ಪರಮಾತ್ಮನ) ಅನುಗ್ರಹ.

ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪಜಾಯತೇ ।
ಪ್ರಸನ್ನಚೇತಸೋ ಹ್ಯಾಶು ಬುದ್ಧಿಃ ಪರ್ಯವತಿಷ್ಠತೇ ॥ (೨, ೬೫)

ಒಮ್ಮೆ ಚಿತ್ತಪ್ರಸನ್ನತೆ(ಜೀವದ ನೆಮ್ಮದಿ) ಒದಗಿತೆಂದರೆ ಎಲ್ಲ ದುಗುಡ–ಗಳೂ ಹುಟ್ಟಡಗಿ ಮರೆಯಾಗುತ್ತವೆ. ಎಲ್ಲ ದುಃಖಗಳು ಎನ್ನುವಾಗ ಆಧ್ಯಾತ್ಮಿಕ(ಶರೀರದ ರೋಗರುಜಿನಗಳು, ಮನಸ್ಸಿನ ಶಂಕೆ, ಆತಂಕಗಳು) ಆಧಿ ಭೌತಿಕ(ಪರಿಸರದಿಂಜ ಎರಗಿಬರುವ ಕಷ್ಟಗಳು), ಆಧಿದೈವಿಕ(ಪ್ರಕೃತಿಯ ಪ್ರಕೋಪದಿಂದ ಕಾಣಿಸಿಕೊಳ್ಳುವ ಕಷ್ಟಗಳು) ಎಂಬ ಮೂರು ಬಗೆಯ ದುಃಖ ಗಳು ಸೇರುತ್ತವೆ. ಇವನ್ನೆ ತಾಪತ್ರಯವೆನ್ನುವುದು. ಪ್ರಕೃತಿಯ ಸಂಪರ್ಕ–ವಿದ್ದಾಗಲೇ ಪುರುಷನಿಗೆ ದುಃಖ. ನೆಮ್ಮದಿಯೆಂದಾಗ ಪುರುಷ ತನ್ನ ಪಾಡಿಗೆ ತಾನು ಇರುತ್ತಾನೆ; ಪ್ರಕೃತಿಯ ಗೊಡವೆಯಿರುವುದಿಲ್ಲ. ಆಗ ದುಃಖವೆಲ್ಲಿಯದು?

ಯಾವನ ಚಿತ್ತವು ಹೀಗೆ ನೆಮ್ಮದಿಯಿಂದಿರುವುದೋ ಅವನ ಬುದ್ಧಿಯು ಎತ್ತೆತ್ತಲೂ ನೆಲೆಯಾಗಿ ನಿಲ್ಲುತ್ತದೆ(ಪರಿ ಅವತಿಷ್ಠತೇ). ಇಲ್ಲಿ ಬುದ್ಧಿ ಎಂದರೆ ಪ್ರಜ್ಞೆ, ಬ್ರಹ್ಮನ ಅಪರೋಕ್ಷಜ್ಞಾನ. ಹಿಂದಿನ ಶ್ಲೋಕದಲ್ಲಿ ಮನಸ್ಸಿನ ಅನುಗ್ರಹದಿಂದ ಒದಗುವ ಅಂತಃಕರಣಶುದ್ಧಿಯ ವಿಚಾರ ಬಂದಿತು; ಈ ಶ್ಲೋಕ ಅಂತಃಕರಣಶುದ್ಧಿಯಿಂದ ಅಪರೋಕ್ಷಜ್ಞಾನವುಂಟಾಗುವುದನ್ನು ತಿಳಿಸುತ್ತದೆ. ಅಪರೋಕ್ಷಜ್ಞಾನದಿಂದ ಮೋಕ್ಷ. ಜ್ಞಾನದಲ್ಲಿ ಪರೋಕ್ಷ ಮತ್ತು ಅಪರೋಕ್ಷ ಎಂಬೆರಡು ಬಗೆಗಳು. ಮೊದಲನೆಯದು ಹೊರಗಣ ವಿಷಯ ಗಳನ್ನು ಇಂದ್ರಿಯಗಳಿಂದ ಮತ್ತು ಮನಸ್ಸಿನಿಂದ ತಿಳಿದುಕೊಳ್ಳುವುದು. ಎರಡನೆಯದು ನೇರಾಗಿ ಆತ್ಮನನ್ನು ಕಂಡುಕೊಳ್ಳುವುದು. ಆತ್ಮನ ಅಂತರ್ಯಾಮಿಯಾದ ಪರಮಾತ್ಮನನ್ನು ಹೀಗೆಯೇ ನೇರ ಅನುಭವ ದಿಂದ ಸಾಕ್ಷಾತ್ಕರಿಸಿಕೊಳ್ಳುವುದು ಬ್ರಹ್ಮಾಪರೋಕ್ಷ. ಈ ಅರಿವಾದಾಗ ಆತ್ಮತತ್ತ್ವವು ಆಕಾಶದಂತೆ ಎಲ್ಲ ಕಡೆಯೂ ('ಪರಿ') ನೆಲೆಗೊಂಡಿರುವುದು ತಿಳಿಯುತ್ತದೆ. ದುಃಖಗಳು ತೊಲಗುವುದು ಮಾತ್ರವಲ್ಲ; ಸುಖವೂ ತೋರಿಕೊಳ್ಳುತ್ತದೆ.

ನಾಸ್ತಿ ಬುದ್ಧಿರಯುಕ್ತಸ್ಯ ನ ಚಾಯುಕ್ತಸ್ಯ ಭಾವನಾ ।
ನ ಚಾಭಾವಯತಃ ಶಾಂತಿರಶಾಂತಸ್ಯ ಕುತಃ ಸುಖಂ ॥ (೨, ೬೬)

ಈ ಬಗೆಯ ಚಿತ್ತಪ್ರಸನ್ನತೆ (ಬುದ್ಧಿಯ ನೆಮ್ಮದಿಯಲ್ಲಿ ನೆಲೆಗೊಳ್ಳುವುದು) ಯೋಗವಿಲ್ಲದವನಿಗೆ ಬರಲಾರದು. ಯೋಗವುಳ್ಳವನು 'ಯುಕ್ತ'. ಯೋಗವೆಂದರೆ ತನ್ನ ಚಿತ್ತವನ್ನು ವಶಮಾಡಿಕೊಳ್ಳುವುದು, ಚಿತ್ತವೃತ್ತಿಗಳ ನಿರೋಧ. ಹೊರಗೆ ಹೋಗುವ ಮನಸ್ಸನ್ನು ತಡೆಗಟ್ಟಿ, ಬುದ್ಧಿಯೊಂದಿಗೆ ಹೊಂದಿಸಿಕೊಂಡು ಆತ್ಮನನ್ನು ಕಂಡುಕೊಳ್ಳುವುದು. ಈ ಸಾಧನೆಯನ್ನು ಹಿಡಿಯದವನಿಗೆ ಹಿಂದಿನ ಶ್ಲೋಕದಲ್ಲಿ ಹೇಳಿದ 'ಪ್ರಸಾದ' ಕೈಗೂಡುವುದಿಲ್ಲ.

ಹೀಗೆ ಯೋಗದ ದಾರಿ ಹಿಡಿಯದಿದ್ದರೆ ಭಾವನೆಯಿರದು. ಈವರೆಗೆ ಇಲ್ಲದಿರುವುದನ್ನು ಈಗ ಉಂಟುಮಾಡುವುದು ಭಾವನೆ; ಕಲ್ಪನೆ, ಚಿಂತನೆ. ಧ್ಯಾನ ಎಂದರೂ ಅದೇ. ಚಿತ್ತವೃತ್ತಿನಿರೋಧ ಮಾಡಿದ್ದರ ಫಲವೇನೆಂದರೆ ಧ್ಯಾನಕ್ಕೆ ಅನುಕೂಲತೆ. ಧ್ಯಾನಮಾಡುವುದರ ಫಲ ಶಾಂತಿ(ಚಿತ್ತದ ಉಪ-ಶಮ); ವಿಷಯಗಳಿಂದ ಮನಸ್ಸನ್ನು ಹಿಂದಿರುಗಿಸಿ ಆತ್ಮನಲ್ಲಿ ನಿಲ್ಲಿಸಿಕೊಳ್ಳುವುದು(ಉಪರತಿ). ಶಾಂತಿಯಲ್ಲಿ ಅಪರೋಕ್ಷಜ್ಞಾನವು ಸಿದ್ಧಿಸುತ್ತದೆ. ಇದರಿಂದಾಗಿ ಮುಕ್ತಿಯ ಸುಖ ಅನುಭವಕ್ಕೆ ಬರುತ್ತದೆ.

ಇದನ್ನೇ ಈ ಶ್ಲೋಕವು ಹೀಗೆ ಹೇಳುತ್ತದೆ – ಮನಸ್ಸಿನ ನಿಗ್ರಹ(ಯೋಗ) ವಿಲ್ಲದ್ದಿದ್ದರೆ ಧ್ಯಾನ(ಭಾವನೆ) ಇಲ್ಲ; ಧ್ಯಾನವಿಲ್ಲದಿದ್ದರೆ ಅಪರೋಕ್ಷಜ್ಞಾನ (ಶಾಂತಿ) ಇಲ್ಲ; ಅಪರೋಕ್ಷಜ್ಞಾನವಿಲ್ಲದಿದ್ದರೆ ಮುಕ್ತಿ(ಸುಖ) ಇಲ್ಲ.

ಬುದ್ಧಿಯೆಂದರೆ ಅಪರೋಕ್ಷಜ್ಞಾನವೆಂದಿಟ್ಟುಕೊಂಡಾಗ ಭಾವನೆಯೆಂಬ ಧ್ಯಾನವು ಇರದಿದ್ದರೆ ಬುದ್ಧಿಯೂ ಇರದು. ಯೋಗವಿಲ್ಲದವನಿಗೆ ಬುದ್ಧಿ ಇಲ್ಲ; ಏಕೆಂದರೆ ಯೋಗವಿಲ್ಲದವನಿಗೆ ಧ್ಯಾನವೂ ಇಲ್ಲ. **'ಅಯುಕ್ತಸ್ಯ ಭಾವನಾ ನಾಸ್ತಿ; ಅಭಾವಯತಃ ಬುದ್ಧಿರ್ನಾಸ್ತಿ'** ಎಂಬುದು ಯೋಜನೆ. ಧ್ಯಾನರಹಿತನಾದವನಿಗೆ ಅಪರೋಕ್ಷಜ್ಞಾನವೂ ಇರದು.

ಭೋಗೈಶ್ವರ್ಯಪ್ರಸಕ್ತಾನಾಂ ತಯಾಪಹೃತಚೇತಸಾಂ ।
ವ್ಯವಸಾಯಾತ್ಮಿಕಾ ಬುದ್ಧಿಃ ಸಮಾಧೌ ನ ವಿಧೀಯತೇ ॥ (೨, ೪೪)

ಇಲ್ಲಿ ವ್ಯವಸಾಯದ ಸ್ವರೂಪವನ್ನು ಪಡೆದುಕೊಂಡ ಬುದ್ಧಿಯ ವಿಚಾರ ಬಂದಿದೆ. ಇದನ್ನು ವ್ಯವಸಾಯಾತ್ಮಿಕಾಬುದ್ಧಿಯೆಂದು ಕರೆಯಲಾಗಿದೆ.

ವ್ಯವಸಾಯವೆಂಬ ಮಾತಿಗೆ ಪ್ರಯತ್ನ, ಶ್ರಮ, ನಿಶ್ಚಯ, ಕ್ರಿಯೆ, ಉದ್ಯಮ ಎಂಬರ್ಥಗಳಿವೆ. ಯಾವ ಬುದ್ಧಿಯಲ್ಲಿ ನಿಶ್ಚಯವಿರುವುದೋ ಅದು ವ್ಯವಸಾಯಾತ್ಮಕವಾದದ್ದು. ಆತ್ಮನನ್ನೆ ಕಂಡುಕೊಳ್ಳುವ ತವಕವನ್ನು ಸೂಚಿಸುತ್ತದೆ. ಆತ್ಮನನ್ನು ಕಂಡುಕೊಂಡು, ಅದರಲ್ಲೆ ನೆಲೆಗೊಂಡರೆ ಅದು ಸಮಾಧಿ. ವ್ಯವಸಾಯಾತ್ಮಕವಾದ ಬುದ್ಧಿಯು ಸಹಜವಾಗಿ ಸಮಾಧಿಯಲ್ಲಿ ಮುಗಿಯಬೇಕು.

ಆದರೆ ಇದಕ್ಕೆ ಅಡ್ಡಿಯಾಗಿ ಚಿತ್ತವೃತ್ತಿಯಿರುವುದು ಸಾಧ್ಯ. ಇಂದ್ರಿಯ ಗಳಿಗೆ ಇಷ್ಟವೆನಿಸಿದ್ದು, ಮನಸ್ಸಿಗೆ ಬೇಕೆನಿಸಿದ್ದು ಭೋಗ. ಅದಕ್ಕೆ ಬೇಕಾದ ದ್ರವ್ಯಾನುಕೂಲತೆ, ಸಾಮಗ್ರಿಗಳ ಸಿದ್ಧತೆಗಳನ್ನು ಐಶ್ವರ್ಯವೆನ್ನುತ್ತಾರೆ (ಒಡೆತನ). ಭೋಗ, ಐಶ್ವರ್ಯಗಳಲ್ಲೇ ಮುಳುಗಿದ ಮನಸ್ಸು, ಅಂಥ ಮನಸ್ಸಿಗೆ ಒಳಪಟ್ಟ ಬುದ್ಧಿ. ಈ ಬುದ್ಧಿಯಲ್ಲಿಯೂ ನಿಶ್ಚಯವಿರಬಹುದು. ಭೋಗವೇ ಬೇಕಾದದ್ದೆಂಬ ನಿಶ್ಚಯ. ಆಗ ಅದೂ ವ್ಯವಸಾಯಾತ್ಮಕವಾದ ಬುದ್ಧಿಯೇ ಎನ್ನಬೇಕು. ಆದರೆ ಅದರಿಂದ ಸಮಾಧಿ ದೊರಕಲಾರದು; ಅಂಥ ಬುದ್ಧಿಯನ್ನು ಸಮಾಧಿಯಲ್ಲಿ ತೊಡಗಿಸುವುದಾಗದು.

ಕರ್ಮಕಾಂಡದಲ್ಲಿ ಅನುರಕ್ತಿಯುಳ್ಳವರು ಕಾಮ್ಯಕರ್ಮಗಳಲ್ಲಿ ತೊಡಗುವು ದುಂಟು. ಅವರು ಕಾಮ್ಯಕರ್ಮಗಳಿಂದ ಬಯಸುವುದು ಭೋಗ, ಐಶ್ವರ್ಯಗಳನ್ನೇ. ಇವುಗಳಿಂದಲೇ ಕರ್ಮಕಾಂಡಿಗಳು ಕದ್ದೊಯ್ಯಲ್ಪಡು-ವರು; ಅವರ ಮನಸ್ಸೆಲ್ಲ ಇದರಲ್ಲೆ ಇರುತ್ತದೆ. ಮನಸ್ಸು ಎರಡು ಬಗೆಯದು-ಅಶುದ್ಧ, ಎಂದರೆ ಬಯಕೆಗಳಿಂದ ಕೂಡಿದ್ದು; ಶುದ್ಧ, ಎಂದರೆ ಬಯಕೆಗಳನ್ನು ಬಿಟ್ಟದ್ದು. ಬಯಕೆಗಳಿಂದ ಕೂಡಿದ್ದು ಬಹಿ-ರ್ಮುಖ; ಹೊರಗಣ ಪ್ರವೃತ್ತಿಗಳು ಅಲ್ಲಿ ಮುಖ್ಯ. ಬಯಕೆಗಳನ್ನು ಬಿಟ್ಟಿದ್ದು ಅಂತರ್ಮುಖಪ್ರವಣ; ಒಳಗೆ ಹರಿಯುವ ಒಲವುಳ್ಳದ್ದು. ಅಂತರ್ಮುಖ ಪ್ರಾವಣ್ಯವಿಲ್ಲದೆ ಸಮಾಧಿಯು ಸಾಧ್ಯವಿಲ್ಲ.

ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ ।
ಬಹುಶಾಖಾ ಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಂ ॥ (೨, ೪೧)

ನಿಶ್ಚಯವಿರುವ ಬುದ್ಧಿಯು ಈ ಕರ್ಮಾನುಷ್ಠಾನದ ನೆಲೆಯಲ್ಲಿ (ಎಂದರೆ ಜೀವಲೋಕದಲ್ಲಿ) ಒಂದೇ. ಎಲ್ಲ ಅಧ್ಯಾತ್ಮರಸಿಕರೂ ಬಯಸುವುದು ಸಮಾಧಿ ಸುಖವನ್ನೆ; ಮೋಕ್ಷವೆಂದರೆ ಅದೇ. ಅದಕ್ಕೆ ಇರುವುದು ಒಂದೇ

ದಾರಿ. ಆತ್ಮನ ಸ್ವರೂಪವನ್ನು ಯಥಾವತ್ತಾಗಿ(ಎಂದರೆ ಇದ್ದುದನ್ನು ಇದ್ದಂತೆಯೆ) ತಿಳಿಯುವುದು ಆ ದಾರಿ. ಅದನ್ನು ಬಿಟ್ಟು ಬೇರೆದಾರಿ ಇರದು. ಅದರಿಂದಲೇ ಶ್ರೇಯಸ್ಸು ಹೀಗೆ ಯಾವುದನ್ನು ಪಡೆದುಕೊಳ್ಳ ಬೇಕು(ಉಪೇಯ), ಅದನ್ನು ಪಡೆದುಕೊಳ್ಳುವ ಬಗೆ ಹೇಗೆ(ಉಪಾಯ) ಎಂಬುದನ್ನು ವಿವೇಕದಿಂದ ನಿಶ್ಚಯಿಸಿಕೊಂಡದ್ದು 'ವ್ಯವಸಾಯಾತ್ಮಿಕಾ ಬುದ್ಧಿ'.

ಈ ವಿವೇಕಬುದ್ಧಿಯಿಲ್ಲದವರು 'ಅವ್ಯವಸಾಯಿ'ಗಳು. ಅವರು ಕರ್ಮ ಕಾಂಡವನ್ನು ನಂಬಿದವರು. ಅವರ ಬಯಕೆಗಳು ನೂರಾರು, ಅವನ್ನು ತೀರಿಸಿಕೊಳ್ಳಲು ಅವರು ಹಿಡಿಯುವ ದಾರಿಗಳೂ ಹತ್ತಾರು. ಎಂದಮೇಲೆ ಅವರ ಬುದ್ಧಿ 'ಒಂದೇ' ಆಗಿರುವುದು ಹೇಗೆ? ಅನೇಕ ರೆಂಬೆಕೊಂಬೆ ಗಳಿರುವ ಮರದಂತೆ ಅವರ ಬುದ್ಧಿ. ಕಾಮ್ಯಕರ್ಮಗಳಲ್ಲಿ ತೊಡಗಿರು-ವವರು ಬಹಿರ್ಮುಖಿಗಳು. ಹೊರಗಣ ವಿಷಯಗಳಿಗೆ ಕೊನೆಯೆಂಬು-ದಿದೆಯೇ? ಅವರು ವಿಷಯಗಳನ್ನೆ ಅರಸಿ ಹೋಗುವಾಗ ಬುದ್ಧಿಯೂ ಎಣಿಕೆಗೆ ಸಿಗದಷ್ಟು ಬಗೆಗಳಲ್ಲಿ ಒಡೆದುಹೋಗುತ್ತದೆ. ಅವರ ದಾರಿ ಶ್ರೇಯಸ್ಸಿನದಲ್ಲ(ಜೀವಕ್ಕೆ ಹಿತವೆನಿಸುವುದಿಲ್ಲ); ಪ್ರೇಯಸ್ಸಿನದು (ವಿಷಯ ಸುಖ ಗಳನ್ನಷ್ಟೆ ಬಯಸುವಂಥದು).

ಸರ್ವದ್ವಾರಾಣಿ ಸಂಯಮ್ಯ ಮನೋ ಹೃದಿ ನಿರುಧ್ಯ ಚ ।
ಮೂರ್ಧ್ನ್ಯಾಧಾಯಾऽऽತ್ಮನಃ ಪ್ರಾಣಮಾಸ್ಥಿತೋ ಯೋಗಧಾರಣಾಮ್॥(೮, ೧೨)

ವ್ಯವಸಾಯಾತ್ಮಕವಾದ ಬುದ್ಧಿ ಒಂದೆಂದೆವಲ್ಲ, ಅದು ಯೋಗಧಾರಣ ದಿಂದ ಒದಗಿಬರುತ್ತದೆ. ಯೋಗವೆಂಬ ಧಾರಣೆ. ಧಾರಣೆಯೆಂದರೆ ಎತ್ತಿ ಹಿಡಿಯುವುದು, ನಿಲ್ಲಿಸುವುದು. ಯೋಗವೆಂದರೆ ಸಮಾಧಿ; ಸಮಾಧಿ ಯನ್ನು ಎತ್ತಿಹಿಡಿಯುವುದು ಯೋಗದ ಬಲ. ಯೋಗಧಾರಣೆಯಿಂದ ಎನ್ನುವಾಗ ಯೋಗದ ಬಲದಿಂದ ಎಂದೇ ಅರ್ಥ. ಅದರ ವಿವರಗಳನ್ನು ಇಲ್ಲಿ ಪ್ರಸ್ತಾಪಿಸುತ್ತಾರೆ.

ಎಲ್ಲ ಬಾಗಿಲುಗಳನ್ನೂ ಅನಗತ್ಯವಾದುದಕ್ಕೆ ಮುಚ್ಚಿ, ಮನಸ್ಸನ್ನು ಹೃದಯದಲ್ಲಿ ನಿಲ್ಲಿಸಿ, ತನ್ನ ಪ್ರಾಣವಾಯುಗಳನ್ನು ಮೇಲೆ ಒಯ್ದು ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವುದು ಯೋಗಧಾರಣೆಯಿಂದ, ಎಂದು ಈ ಶ್ಲೋಕದ ಅರ್ಥ.

ಬಾಗಿಲುಗಳೆಂದರೆ ಇಂದ್ರಿಯಗಳು; ವಿಷಯಾನುಭವದ ಬಾಗಿಲುಗಳು. ಇವನ್ನು ಬಿಗಿಹಿಡಿದು(ಸಂಯಮ್ಯ), ಎಂದರೆ ಎಷ್ಟು ಅಗತ್ಯವೋ ಅಷ್ಟು ತೊಡಗಿಸಿ, ಉಳಿದಂತೆ ಯಾವ ವಿಷಯವೂ ಒಳನುಗ್ಗದಂತೆ ಮುಚ್ಚಿ ಎಂದರ್ಥ. ಇದನ್ನೇ ಪಾತಂಜಲಯೋಗದ ಪರಿಭಾಷೆಯಲ್ಲಿ ಪ್ರತ್ಯಾಹಾರವೆನ್ನುವರು; ಇಂದ್ರಿಯಗಳನ್ನು ಹಿಂದಕ್ಕೆ ಸೆಳೆದುಕೊಳ್ಳುವುದು, ಹೊರಗೆ ಹರಿಯದಂತೆ ತಡೆಹಿಡಿಯುವುದು. ಮನಸ್ಸನ್ನು ಹೃದಯದಲ್ಲಿ ನಿಲ್ಲಿಸುವುದೆಂದರೆ ಧಾರಣ-ಧ್ಯಾನಗಳು. ಇವೂ ಪಾತಂಜಲಯೋಗದ ಪರಿಭಾಷೆ-ಗಳೇ. ಆದರೆ ಇಲ್ಲಿ ಹೃದಯವೆಂದರೆ ನಾವು ಸಾಮಾನ್ಯವಾಗಿ ತಿಳಿದಿರುವ ಶರೀರದ ಅವಯವವಿಶೇಷವಲ್ಲ. ಶರೀರದ ಕೇಂದ್ರಸ್ಥಾನ. ಶರೀರದ ಎಲ್ಲ ವ್ಯಾಪಾರಗಳೂ ಎಲ್ಲಿ ಕಲೆಯುವುವೋ ಆ ಸ್ಥಾನ(ಹ್ರೀಯತೇ ಜಗತ್). ಅಲ್ಲಿ ಮನಸ್ಸನ್ನು ಅತ್ತಿತ್ತ ಅಲುಗದಂತೆ, ಹೊರಗೆ ಹರಿದಾಡದಂತೆ ನಿಲ್ಲಿಸುವುದು ಧಾರಣೆ, ಮನೋನಿರೋಧ.

'ಆತ್ಮನಃ'(ತನ್ನ) 'ಪ್ರಾಣಂ'(ಪ್ರಾಣವಾಯುವನ್ನು), 'ಮೂರ್ಧ್ನಿ'(ತಲೆಯಲ್ಲಿ), 'ಆಧಾಯ'(ಒಯ್ದು ನಿಲ್ಲಿಸಿ) ಎಂಬುದು ಶ್ಲೋಕದ ಎರಡನೆಯ ಸಾಲಿನ ಮೊದಲ ಭಾಗ. ಮೂರ್ಧ ಎನ್ನುವ ಮಾತಿಗೆ ತಲೆ, ತಲೆಯೋಡೆ, ಹಣೆ, ಪ್ರಧಾನವಾದ ಅಂಗ, ಎಲ್ಲಕ್ಕಿಂತ ಮೇಲಿರುವುದು, ಎತ್ತರದಲ್ಲಿರುವುದು, ಮೊದಲಾಗಿರುವುದು, ಮುಖ್ಯವಾದುದು ಎಂಬರ್ಥಗಳಿವೆ. ಪ್ರಸ್ತುತ ಸಂದರ್ಭದಲ್ಲಿ, ಪ್ರಾಣವಾಯುಗಳನ್ನು ಒಯ್ಯಬಹುದಾದ ಶರೀರದ ಅತಿ ಎತ್ತರದ ಭಾಗವೆಂದರೆ ಭ್ರೂಮಧ್ಯೆ(ಹುಬ್ಬುಗಳ ನಡುವೆ ಇರುವ ಆಜ್ಞಾಚಕ್ರ); ಇದು ಸುಷುಮ್ನಾನಾಡಿಯ ಮೇಲ್ತುದಿಯೂ ಹೌದು. ಸುಷುಮ್ನಾನಾಡಿಯು ಎಲ್ಲ ಶಾರೀರಿಕ, ಮಾನಸ ಕ್ರಿಯೆಗಳಿಗೂ ದ್ವಾರರೂಪವಾಗಿರುವುದು. ಇದರ ಮೇಲ್ಭಾಗದಲ್ಲಿ ಬ್ರಹ್ಮರಂಧ್ರ. ಹೀಗೆ ಕ್ರಿಯಾದ್ವಾರವಾದ ಪ್ರಾಣವಾಯುವನ್ನು ಯೋಗಬಲದಿಂದ ಮೇಲುಮೇಲಕ್ಕೆ ಒಯ್ದು ಭ್ರೂಮಧ್ಯದಲ್ಲಿ ನಿಲ್ಲಿಸಿದಾಗ ಆತ್ಮಸಾಕ್ಷಾತ್ಕಾರವು ಸಾಧ್ಯವಾಗುತ್ತದೆ.

ಯೋಗಧಾರಣೆಯಲ್ಲಿ ಬಾಹ್ಯೇಂದ್ರಿಯಗಳ ನಿರೋಧ ಮೊದಲ ಹೆಜ್ಜೆ ಮನೋನಿರೋಧ ಎರಡನೆಯದು, ಪ್ರಾಣನಿಗ್ರಹಣ ಮೂರನೆಯದು.

ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ ।
ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾಸಮತ್ವಂ ಯೋಗ ಉಚ್ಯತೇ ॥ (೨, ೪೮)

ಯೋಗದಲ್ಲೆ ನೆಲೆನಿಂತು, ಮಾಡಬೇಕಾದ ಕೆಲಸಗಳನ್ನು ಮಾಡಬೇಕು. ಹಿಂದೆ ಹೇಳಿದ ಯೋಗಧಾರಣೆಯಲ್ಲಿ ಇಂದ್ರಿಯನಿಗ್ರಹ, ಪ್ರಾಣವಾಯು ನಿಗ್ರಹಣಗಳು ಸೇರುತ್ತವೆ. ಹೀಗೆ ಯೋಗಸಾಧನೆಯಲ್ಲಿ ತೊಡಗಿರುವುದೇ ಯೋಗದಲ್ಲಿ ನೆಲೆನಿಲ್ಲುವುದು(**ಯೋಗ-ಸ್ಥ**). ಇನ್ನು 'ಕೆಲಸಗಳನ್ನು ಮಾಡು' (ಕುರು ಕರ್ಮಾಣಿ) ಎನ್ನುವಾಗ ದೇಹಧಾರಣೆಗೆ, ಬದುಕಿಗೆ ಅಗತ್ಯವಾಗಿ ಮಾಡಲೇಬೇಕಾದ ಕೆಲಸಗಳೆಂದು ತಿಳಿಯಬೇಕು; ಕಾಮ್ಯಕರ್ಮಗಳೆಲ್ಲ ಇದರಲ್ಲಿ ಸೇರುವುದಿಲ್ಲ. ನಿತ್ಯನೈಮಿತ್ತಿಕವೆಂಬಂಥ ಕ್ರಿಯೆಗಳು ಸೇರುತ್ತವೆ. ಶಾರೀರಿಕವಾದ ವ್ಯಾಪಾರಗಳೂ ಸೇರುತ್ತವೆ. ದೈಹಿಕ, ವಾಚನಿಕ, ಮಾನಸಿಕ ಮೂರುಬಗೆಯ ಕೆಲಸಗಳಿರುವುದರಿಂದ 'ಕರ್ಮಾಣಿ' ಎಂಬ ಬಹುವಚನ ಪ್ರಯೋಗ.

ಮಾಡಬೇಕಾದುದು ಹೇಗೆ ಎಂಬುದನ್ನು ಹೇಳುವುದು ಶ್ಲೋಕದ ಉದ್ದೇಶ. 'ಸಂಗವನ್ನು ಬಿಟ್ಟು' ಮಾಡಬೇಕು. ಸಂಗವೆಂದರೆ ಕೆಲಸದ ಪ್ರಯೋಜನದೊಂದಿಗೆ ತನ್ನ ಪ್ರಯತ್ನವನ್ನು ತೆಕ್ಕೆಹಾಕಿಕೊಳ್ಳುವುದು (ಫಲವನ್ನು ಬಯಸಿ ಕೆಲಸಮಾಡುವುದು ಫಲಸ್ನೇಹ; ಫಲದಲ್ಲೇ ಕಣ್ಣಿಟ್ಟಿರುವುದು ಫಲಾಭಿನಿವೇಶ). ಅಷ್ಟೇ ಅಲ್ಲ, ತಾನು ಮಾಡುವವನು, ತನ್ನಿಂದ ಕೆಲಸ ನಡೆಯುತ್ತಿದೆ ಎಂಬ ಅನಿಸಿಕೆಯೂ ಸಂಗವೇ; ಕರ್ತೃತ್ವಾಭಿಮಾನ. ಇದನ್ನು ಬಿಟ್ಟು ಎಂದರ್ಥ. ಮಾಡಿದ ಕೆಲಸ ಕೈಗೂಡಬೇಕು; ಅದು ಸಿದ್ಧಿ. ಕೈಗೂಡದಿದ್ದರೆ ಅಸಿದ್ಧಿ. ಸಿದ್ಧಿಯಾದರೆ ಸಂತೋಷ, ಅಸಿದ್ಧಿಯಿಂದ ದುಗುಡ. ಕೆಲಸ ಮಾಡುವಾಗ ಸಿದ್ಧಿಯ ಕಡೆ ಗಮನವಿರಬೇಕು. ಆದರೆ ಯಾವುದಾದರೂ ಕೆಲಸ ಕೈಗೂಡುವುದು ಐದು ಕಾರಣಗಳಿಂದ ಎಂದು ಹಿಂದೆಯೇ ಹೇಳಿದೆವಲ್ಲ? ಆದುದರಿಂದ ಮಾಡಿದ ಕೆಲಸ ಸಿದ್ಧಿಸಿಯೇ ಸಿದ್ಧಿಸುತ್ತದೆ ಎನ್ನುವಂತಿಲ್ಲ. ಕೆಲಸ ಮುಗಿದ ಮೇಲೆ, ಕೆಲಸ ಕೈಗೂಡಿತೋ ಇಲ್ಲವೋ ಅದಕ್ಕೆ ತಲೆಕೆಡಿಸಿಕೊಳ್ಳಬಾರದು. ಸಿದ್ಧಿ-ಅಸಿದ್ಧಿಗಳಲ್ಲಿ ಸಮನಾಗಿ ಇರುವುದು ಯೋಗದ ದಾರಿ.

ಯೋಗವೆಂದರೇನು? ಈ ಬಗೆಯ ಸಮತ್ವವೇ ಯೋಗ. ಸಮತ್ವ ಎನ್ನುವ ಮಾತಿನಲ್ಲಿ ಸಿದ್ಧಿಯಾದರೇನು ಆಗದಿದ್ದರೇನು ಒಂದೇ, ಲಾಭವೇನು ನಷ್ಟವೇನು ಒಂದೇ, ಗೆಲುವೇನು ಸೋಲೇನು ಒಂದೇ ಎಂಬ ದೃಷ್ಟಿ ಕಾಣುತ್ತದೆ. ಯಾವುದರಿಂದಲೂ ನೆಮ್ಮದಿಯನ್ನು ಕೆಡಿಸಿಕೊಳ್ಳ-

ದಿರುವುದು; ಚಿತ್ತಸಮಾಧಾನ; ನಿರ್ವಿಕಾರತೆ. ಅದರ ಹಿನ್ನೆಲೆಯಲ್ಲಿ ಫಲದ ಚಿಂತೆಯನ್ನು ಬಿಡುವುದು, ಕರ್ತೃತ್ವಾಭಿಮಾನವನ್ನು ಬಿಡುವುದು ಇರುತ್ತದೆ; ಇದು ತ್ಯಾಗ. ಈ ಬಗೆಯ ತ್ಯಾಗದಿಂದ ಕೂಡಿದ ಸಮತ್ವವನ್ನೆ ಇಲ್ಲಿ ಯೋಗವೆಂದು ಕರೆದಿರುವುದು. ಯೋಗದಲ್ಲಿ ಕೆಲಸಗಳನ್ನು ಮಾಡುವುದರ ತ್ಯಾಗವಿಲ್ಲ; ಕೆಲಸಮಾಡುವುದಗಲ್ಲಿ ಬೇಕಾದ ಜಾಣತನ(ಕೌಶಲ)ವನ್ನು ಹೇಳುವಾಗ ಸಂಗತ್ಯಾಗವನ್ನು ಸೂಚಿಸಲಾಗಿದೆ. 'ಕುರು ಕರ್ಮಾಣಿ' ಎಂಬುದರ ಜೊತೆಜೊತೆಗೇ **'ಸಂಗಂ ತ್ಯಕ್ತ್ವಾ'** ಎಂದು ಹೇಳಿರುವುದನ್ನು ಗಮನಿಸಬೇಕು.

ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಮ್ ।
ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ ॥ (೬, ೩೫)

ಮನಸ್ಸು ಚಂಚಲವೆಂಬುದನ್ನು ಯಾರರಿಯರು? ಇಂದ್ರಿಯಗಳಿಗಾದರೆ ನಿರ್ದಿಷ್ಟ ಸ್ಥಾನಗಳಿವೆ; ಅವುಗಳ ವೃತ್ತಿಗಳು ಆಯಾ ಸ್ಥಾನಗಳಲ್ಲಿ ಅಷ್ಟೆ. ಬೇರೆ ವಿಷಯಗಳ ಗೊಡವೆ ಒಂದೊಂದು ಇಂದ್ರಿಯಕ್ಕೆ ಇಲ್ಲ. ಆದ್ದರಿಂದ ಅವು ಅಷ್ಟು ಸ್ವೇಚ್ಛೆಯಾಗಿ ಕೆಲಸಮಾಡುವಂತಿಲ್ಲ. ಶಬ್ದವಿದ್ದಾಗ ಕಿವಿಯ ಕೆಲಸ; ಕಣ್ಣು ತೆಪ್ಪಗಿರುತ್ತದೆ. ಮನಸ್ಸಿಗಾದರೋ ಶರೀರದಲ್ಲೆಲ್ಲೂ ಅದಕ್ಕೆಂದೇ ಒಂದು ಸ್ಥಾನವಿಲ್ಲ. ಎಲ್ಲ ಇಂದ್ರಿಯಗಳ ವೃತ್ತಿಗಳೂ ಅದರ ವೃತ್ತಿಗಳೇ. ಒಂದೆಡೆ ನಿಲ್ಲದೆ ಅತ್ತಿತ್ತ ಅಲೆದಾಡುವುದೇ ಅದರ ಸ್ವಭಾವ. ಅದು ಒಂದೆಡೆ ನಿಂತುಬಿಟ್ಟಿತೆಂದರೆ ಇಂದ್ರಿಯಗಳು ಕೆಲಸಮಾಡುವುದು ಹೇಗೆ?

ಹೀಗೆ ಸದಾ ಓಡಿಯಾಡುತ್ತಿರುವ ಮನಸ್ಸನ್ನು ಬಿಗಿಹಿಡಿಯಬೇಕೆಂದರೆ ಆದೀತೆ? ಅದನ್ನು ತಡೆಹಿಡಿಯುವುದು ಕಷ್ಟವೇ. ಎಲ್ಲ ಸಾಧಕರಿಗೂ ಇದೊಂದು ದೊಡ್ಡ ತೊಡಕು. ಮೊದಲು ಮನಸ್ಸನ್ನು ಬಿಗಿಹಿಡಿಯದಿದ್ದರೆ, ಅದರ ಓಡಿಯಾಟವನ್ನು ನಿಲ್ಲಿಸದಿದ್ದರೆ, ಮುಂದಿನ ಸಾಧನೆಯೆಲ್ಲ ವ್ಯರ್ಥವೇ. ಹಾಗೆ ಬಿಗಿಹಿಡಿಯುವುದು, ನಿಲ್ಲಿಸುವುದು ಏನೇನೂ ಸುಲಭ ವಲ್ಲ. ಮನಸ್ಸನ್ನು ಒಮ್ಮೆಲೆ ಬಿಗಿಹಿಡಿದು ಬಿಡುತ್ತೇನೆ ಎಂದು ಭಾವಿಸುವವನು ದಡ್ಡ; ಅದಕ್ಕೆ ಹೊರಡುವವನು ಹುಚ್ಚ. ಆದರೆ ಅದು ಸಾಧ್ಯವೇ ಇಲ್ಲವೆನ್ನುವಂತಿಲ್ಲ. ಅದು ಸಾಧ್ಯವಿರದಿದ್ದರೆ ಚಿತ್ತವೃತ್ತಿ ನಿರೋಧಕ್ಕಾಗಿ ಯೋಗ, ಚಿತ್ತದ ಏಕಾಗ್ರತೆಗೆ ಸಾಧನೆ ಎಂದೆಲ್ಲ ಹೇಳುವುದೇತಕ್ಕೆ?

ಸಾಧ್ಯವಲ್ಲದ್ದನ್ನು ಶಾಸ್ತ್ರ ಹೇಳಿದರೆ ಅದನ್ನೊಪ್ಪುವವರು ಯಾರು? ಅದರಂತೆ ನಡೆಯುವವರು ಯಾರು? ಶಾಸ್ತ್ರದ ಬೆಲೆಯಾದರೂ ಏನು? ಪ್ರಯೋಜನವೇನು? ಮನೋನಿಗ್ರಹವು ಸಾಧ್ಯವೆಂದು ಶಾಸ್ತ್ರದ ನಿರ್ಣಯ; ಅದು ಅಗತ್ಯವೆಂದು ಯೋಗದ ಎಣಿಕೆ.

ಹರಿದಾಡುವ ಮನಸ್ಸನ್ನು ನಿಲ್ಲಿಸುವ ಉಪಾಯವೇನು? ತಾನಾಗಿ ಯಂತೂ ಎಂದೂ ಅದು ನಿಲ್ಲುವುದಿಲ್ಲ. ಅದನ್ನು ಹಿಡಿದಿಡಲು ಪ್ರಯತ್ನ ಪಡಬೇಕು. ಉಪಾಯವೊಂದನ್ನು ಬಳಸಿಕೊಳ್ಳಬೇಕು. ಗೀತೆಯೂ ಪಾತಂಜಲಯೋಗಸೂತ್ರವೂ ಅಭ್ಯಾಸ, ವೈರಾಗ್ಯಗಳನ್ನು ಉಪಾಯವಾಗಿ ಸೂಚಿಸಿವೆ. ಗೀತೆಯ ಮೇಲಿನ ಮಾತಿಗೆ ಸಂವಾದಿಯಾಗಿ ಯೋಗಸೂತ್ರ ದಲ್ಲಿ **'ಅಭ್ಯಾಸವೈರಾಗ್ಯಾಭ್ಯಾಂ ತನ್ನಿರೋಧಃ'** ಎಂಬ ಮಾತಿದೆ. ಅಭ್ಯಾಸವೆಂದರೆ ಮತ್ತೆ ಮತ್ತೆ ಮಾಡುವುದು, ಕೈಗೂಡುವವರೆಗೆ ಮಾಡುತ್ತಲೆ ಇರುವುದು. ಮೆಲ್ಲಮೆಲ್ಲಗೆ, ಹಂತಹಂತವಾಗಿ, ಕ್ರಮವೊಂದನ್ನು ಹಿಡಿದು ಮನಸ್ಸನ್ನು ವಿಷಯಗಳಿಂದ ಬಿಡಿಸಿ, ಹಿಂದಿರುಗಿಸಿ, ಆತ್ಮದ ಕಡೆಗೆ ತಿರುಗಿಸುವುದು ಅಭ್ಯಾಸ. ಇದನ್ನು ಧ್ಯಾನಾಭ್ಯಾಸವೆಂದೂ ಕರೆಯುತ್ತಾರೆ. ಇದರಿಂದ ಕ್ರಮವಾಗಿ ಮನೋನಿಗ್ರಹವಾಗುತ್ತದೆ.

ಅಭ್ಯಾಸವು ಕೈಗೂಡಬೇಕಾದರೆ ವೈರಾಗ್ಯದ ನೆರವಿರಬೇಕು. ವೈರಾಗ್ಯ ವೆಂದರೆ ಕಾಡಿಗೆ ಓಡುವುದು, ಕಾವಿ ತೊಡುವುದು ಎಂದರ್ಥವಲ್ಲ. ಮನಸ್ಸು ಆತ್ಮದ ಕಡೆಗೆ ತಿರುಗಬೇಕು, ಅಲ್ಲಿ ನಿಲ್ಲಬೇಕು. ಆದರೆ ಇತರ ವಿಷಯಗಳ ಕಡೆಗೇ ಒಲಿದ ಮನಸ್ಸು, ಆತ್ಮನನ್ನು ಹೊರತಾದ ಯಾವ ವಿಷಯದ ಕಡೆಗೂ ಒಲಿಯದಂತೆ ಮಾಡುವುದು ವೈರಾಗ್ಯ; ವಿಷಯ ಗಳಿಂದ ದೂರ ಬರುವುದು, ವಿಷಯಗಳ ಸೆಳೆತವನ್ನು ಸಡಿಲಗೊಳಿಸು ವುದು, ವಿಷಯಗಳ ವಿಚಾರವಾಗಿ ಇದ್ದ ಆಸಕ್ತಿಯನ್ನು ಹೋಗಲಾಡಿಸಿ ಕೊಳ್ಳುವುದು. **ವಿ-ರಾಗ**ವೆಂದರೆ ಆಸಕ್ತಿಗೆ ವಿರುದ್ಧವಾದ ಅನಾಸಕ್ತಿ; ವಿರಾಗದ ಭಾವ ವೈರಾಗ್ಯ.

ಬರಿಯ ಹೊರಗಣ ವಿಷಯಗಳದ್ದೇ ಸೆಳೆತವೆಂದಲ್ಲ; ನಮ್ಮ ಮನಸ್ಸಿನಲ್ಲೇ ಅವುಗಳ ಸೆಳೆತಕ್ಕೆ ಅನುಕೂಲವಾದ ವಾಸನೆಗಳಿರುತ್ತವೆ. ಈ ವಾಸನೆಗಳನ್ನೂ ಕಳೆದುಕೊಳ್ಳಲು ಅಭ್ಯಾಸ-ವೈರಾಗ್ಯಗಳು ನೆರವಾಗುತ್ತವೆ.

ನಾತ್ಯಶ್ನತಸ್ತು ಯೋಗೋಽಸ್ತಿ ನ ಚೈಕಾಂತಮನಶ್ನತಃ ।
ನ ಚಾತಿಸ್ವಪ್ನಶೀಲಸ್ಯ ಜಾಗ್ರತೋ ನೈವ ಚಾರ್ಜುನ ॥ (೬, ೧೬)

ಅಭ್ಯಾಸ-ವೈರಾಗ್ಯಗಳೇ ಯೋಗಸಾಧನೆಗಳೆಂದಾಗಲಿ, ಆದರೆ ಇದು ಯಾರಿಗೆ ಸಾಧ್ಯವಾಗುತ್ತದೆ? ಇದನ್ನು ಹೇಳುವ ಮೊದಲು ಯಾರಿಗೆ ಸಾಧ್ಯವಾಗುವುದಿಲ್ಲ ಎಂಬುದನ್ನು ತಿಳಿಯಬೇಕು.

ಹೆಚ್ಚಾಗಿ ತಿನ್ನುವವನಿಗೆ, ತಿಂಡಿಪೋತನಿಗೆ ಯೋಗವು ಸಾಧ್ಯವಾಗುವುದಿಲ್ಲ. ಅಗತ್ಯಕ್ಕಿಂತ ಹೆಚ್ಚಾಗಿ ತಿಂದರೆ, ತನ್ನ ಮಿತಿಯನ್ನರಿಯದೆ ತಿಂದರೆ, ಬಾಯಿರುಚಿಗೆ ಮರಳಾಗಿ ಹಸಿವಿಲ್ಲದಿದ್ದರೂ ತಿಂದರೆ, ಅಜೀರ್ಣವಾಗದೆ ಇರುತ್ತದೆಯೇ? ಉಂಡದ್ದು ಅರಗದಿದ್ದರೆ ರೋಗ ಬಾರದೆ ಇರುತ್ತದೆಯೆ? ಮೈಯಲ್ಲಿ ರೋಗವಿದ್ದಾಗ ಯೋಗವೆಂಬುದು ಸಾಧ್ಯವಾದೀತೆ? ಸಾಧನೆ ಮಾಡುತ್ತೇವೆಂದುಕೊಂಡು, ಸರಿಯಾಗಿ ಶಾಸ್ತ್ರವಿಧಿಗಳನ್ನರಿತುಕೊಳ್ಳದೆ, ಉಪವಾಸವು ಅಗತ್ಯವಾದ ಕ್ರಿಯೆಯೆಂದು ಭಾವಿಸಿ ಊಟವನ್ನು ಮಾಡದೇನೆ ಇದ್ದರೆ, ಅದೂ ಯೋಗಕ್ಕೆ ನೆರವಾಗದು. ದೇಹದ ರಸ-ಗಳನ್ನು ಕಾಪಾಡಲು ಸರಿಯಾದ ಊಟ ಬೇಕೇಬೇಕು. ಉಪವಾಸದಿಂದಲೂ ದೇಹ ದುರ್ಬಲವಾಗುತ್ತದೆ. ಮನಸ್ಸು ಮಂಕಾಗುತ್ತದೆ, ಇಂದ್ರಿಯಪಾಟವ ಕಡಮೆಯಾಗುತ್ತದೆ. ಹೆಚ್ಚಾಗಿ ತಿಂದರೆ ರಜೋಗುಣ ಹೆಚ್ಚುತ್ತದೆ; ತಿನ್ನದೆ ಇದ್ದರೆ ತಮೋಗುಣ ಹೆಚ್ಚುತ್ತದೆ. ಎರಡೂ ಯೋಗಕ್ಕೆ ಅಡ್ಡಿಗಳೇ.

ಹಾಗೆಯೇ ಅತಿಯಾಗಿ ನಿದ್ರೆಮಾಡುವವನಿಗೆ ಯೋಗ ದೂರವೇ. ಶರೀರ ನಿದ್ರಿಸುವಾಗ ಮನಸ್ಸೂ ತಮಸ್ಸಿನಲ್ಲಿ ಮರೆಯಾಗುತ್ತದೆ. ತಮಸ್ಸನ್ನು ಹೆಚ್ಚಿಸಿಕೊಂಡರೆ ಯೋಗವೆಲ್ಲಿಯದು? ಯೋಗಿಗಳು ನಿದ್ರೆಕೆಡಬೇಕೆಂಬ ಭ್ರಮೆಯಿಂದ ಕೆಲವರು ಎಚ್ಚರವಾಗಿಯೆ ಇದ್ದುಬಿಡುತ್ತಾರೆ. ನಿದ್ರೆ ಬಂದರೂ ಇದಕ್ಕೆ ಅವಕಾಶಕೊಡದೆ ಧ್ಯಾನವೋ ಮತ್ತೊಂದೋ ಮಾಡುತ್ತಲೆ ಇರುತ್ತಾರೆ. ಇದರಿಂದ ರಜಸ್ಸು ಹೆಚ್ಚಾಗುವುದಷ್ಟೇ ಫಲ. ಯೋಗವೇನೂ ಕೈಗೂಡುವುದಿಲ್ಲ.

'ಅತಿ ಸರ್ವತ್ರ ವರ್ಜಯೇತ್' ಎನ್ನುವ ಸುಭಾಷಿತವೊಂದೆಯಲ್ಲ? ಯಾವುದನ್ನೂ ಅತಿಯಾಗಿ ಮಾಡಬಾರದು. ಮಿತಿಯನ್ನರಿತುಕೊಳ್ಳಬೇಕು.

೧೨. ವಿಷ್ಣುತೀರ್ಥರು

ಕನ್ನಡನಾಡಿನ ಸಂತವರೇಣ್ಯರಲ್ಲಿ ವಿಷ್ಣುತೀರ್ಥರು(೧೭೫೬-೧೮೦೬) ಒಬ್ಬರು ಅವರು ಅಡವೀಸ್ವಾಮಿಗಳೆಂದೇ ಪ್ರಸಿದ್ಧರು. ಇದು ಸಂನ್ಯಾಸಿಗಳಾದ ಮೇಲಣ ಹೆಸರು. ಮೊದಲಿಗೆ ಜಯತೀರ್ಥರು; ಅಡವೀ ಆಚಾರ್ಯರು. ಅಡವಿಯಲ್ಲೇ ಹೆಚ್ಚಾಗಿ ಅವರು ಇರುತ್ತಿದ್ದುದು; ವಿರಕ್ತರು, ಅವಧೂತರು. ಶಾಸ್ತ್ರಹೇಳುವ ನಾಲ್ಕು ಆಶ್ರಮಗಳನ್ನು ಪಾಲಿಸಿದರು. ಹುಟ್ಟಿದ್ದು ಕೃಷ್ಣಜನ್ಮಾಷ್ಟಮಿಯಂದು; ಸವಣೂರಿನ ಬಳಿ ಸಿದ್ದಾಪುರದಲ್ಲಿ. ತೀರಿಕೊಂಡದ್ದು ಮಹಾಶಿವರಾತ್ರಿಯಲ್ಲಿ; ಕಿನ್ಹಾಳು ಬಳಿ ಮಾದನೂರಿನಲ್ಲಿ. ಅವರ ವಿದ್ಯಾಗುರುಗಳು ಐಜೀಸ್ವಾಮಿಗಳೆಂದು ಹೆಸರಾದ ವೆಂಕಟರಾಮಾ-ಚಾರ್ಯರು(ವ್ಯಾಸತತ್ತ್ವಜ್ಞರೆಂದು ಅವರ ಯತ್ಯಾಶ್ರಮನಾಮ). ಗುರುಗಳಂತೆ ಇವರೂ ಚತುಃಶಾಸ್ತ್ರಪಂಡಿತರು. ಪಾಠಪ್ರವಚನದಲ್ಲಿ ಕಡೆಯ ಗಳಿಗೆಯವರೆಗೂ ತೊಡಗಿದ್ದವರು. ಇಬ್ಬರೂ ಅಧ್ಯಾತ್ಮ ರಸಿಕರು; ಹರಿದಾಸರು, ಕನ್ನಡದಲ್ಲಿ ಹಾಡುಗಳನ್ನು ರಚಿಸಿದವರು. ವಿಷ್ಣುತೀರ್ಥರು ಸಂಸ್ಕೃತದಲ್ಲಿ ಇಪ್ಪತಕ್ಕೂ ಮಿಕ್ಕು ಉದ್ಗ್ರಂಥಗಳನ್ನು ಬರೆದಿದ್ದಾರೆ. ಅವರು ಭಾಗವತದ ಭಕ್ತರು; ಭಾಗವತಸಾರೋದ್ಧಾರ ಅವರ ಕೃತಿಗಳಲ್ಲಿ ಮೌಲಿಕವಾದುದು. ಗೀತೆಯನ್ನು ಬದುಕಿನಲ್ಲಿ ಅನ್ವಯಮಾಡಿಕೊಂಡು ಸ್ಥಿತಪ್ರಜ್ಞರೇ ಆದವರು. ಭಗವದ್ಗೀತೆಯ ೧೮ ಅಧ್ಯಾಯಗಳ ಸಾರಸ್ವರೂಪವಾಗಿರುವ ೧೮ ಶ್ಲೋಕಗಳನ್ನು(ಮೊದಲನೆಯ ಅಧ್ಯಾಯವನ್ನು ಬಿಟ್ಟು, ಎರಡರಿಂದ ೧೭ನೆಯ ಅಧ್ಯಾಯದವರೆಗೆ ಪ್ರತಿ ಅಧ್ಯಾಯದ ತಿರುಳಾಗಿ ಒಂದೊಂದು ಶ್ಲೋಕ, ೧೮ನೆಯ ಅಧ್ಯಾಯದಿಂದ ಎರಡು ಶ್ಲೋಕಗಳು) ಸಂಕಲನಮಾಡಿ, ಇದಕ್ಕೆ **ಮುಕ್ತಾಮಾಲಾ** ಎಂದು ಹೆಸರಿಟ್ಟರು; ಆಣಿಮುತ್ತುಗಳ ಮಾಲೆಯೆಂದರ್ಥ. ಇದನ್ನು **ಭಗವದ್ಗೀತಾಸರೋದ್ಧಾರವೆಂದೂ** ಕರೆಯುವುದಿದೆ. ಮೊದಲಲ್ಲಿ ಕಡೆಯಲ್ಲಿ ತಮ್ಮದೇ ಎರಡು ಶ್ಲೋಕಗಳನ್ನು ಸೇರಿಸಿದ್ದಾರೆ. ಒಟ್ಟು ಇಪ್ಪತ್ತು ಶ್ಲೋಕಗಳ ಈ ಸಂಕಲನವನ್ನು ಇಲ್ಲಿ ಕೊಟ್ಟಿದೆ. ಅವರು ಸಂನ್ಯಾಸಿಗಳಾಗುವ ಮೊದಲೇ ಮಾಡಿದ ರಚನೆ ಇದು.

ವಿಷ್ಣುತೀರ್ಥರ ಗೀತಾಸಾರೋದ್ಧಾರ

ಮುಕ್ತಾಮಾಲಾ

ಬುಧಾನಾಮಬುಧಾನಾಂ ವಾ ಮೋಕ್ಷಮಾರ್ಗಪ್ರವೇಶಿನಾಂ ।
ಅಲಂಕಾರಪ್ರದೀಪೋಽಯಂ ತನ್ಯತೇ ರುಚಿಕಾರಕಃ ॥೧॥

(ಮೋಕ್ಷದ ಹಾದಿಯನ್ನು ಹಿಡಿಯಬೇಕೆನ್ನುವವರಿಗೆ, ಅವರು ಪಂಡಿತರಾಗಲಿ ಪಾಮರರಾಗಲಿ, ಇದೊಂದು ಸೊಗಸಾದ ಕೈದೀವಟಿಗೆ. ಹಾದಿಯಲ್ಲಿ ರುಚಿಯನ್ನು ಮೂಡಿಸುವಂಥದು.)

ಎರಡನೆಯ ಅಧ್ಯಾಯ (೨, ೫೦)

ಬುದ್ಧಿಯುಕ್ತೋ ಜಹಾತೀಹ ಉಭೇ ಸುಕೃತದುಷ್ಕೃತೇ ।
ತಸ್ಮಾದ್ಯೋಗಾಯ ಯುಜ್ಯಸ್ವ ಯೋಗಃ ಕರ್ಮಸು ಕೌಶಲಂ ॥೨॥

(ಬುದ್ಧಿಯಿಂದೊಡಗೂಡಿದವನು ಸಂಸಾರದಲ್ಲಿ ಒಳಿತನ್ನೂ ಕೆಡುಕನ್ನೂ ಎರಡನ್ನೂ ಕೈಬಿಡುತ್ತಾನೆ; ನೆಮ್ಮದಿಯಿಂದಿರುತ್ತಾನೆ. ಆದ್ದರಿಂದ ಬುದ್ಧಿಯನ್ನು ಪಡೆದುಕೊಳ್ಳಲೆಂದು ಯೋಗವನ್ನು ಬದುಕಿಗೆ ಜೋಡಿಸಿಕೊಳ್ಳಬೇಕು. ಮಾಡುವ ಕೆಲಸದಲ್ಲಿ ಜಾಣತನವೇ ಯೋಗ.)

ಮೂರನೆಯ ಅಧ್ಯಾಯ (೩, ೩೦)

ಮಯಿ ಸರ್ವಾಣಿ ಕರ್ಮಾಣಿ ಸಂನ್ಯಸ್ಯಾಧ್ಯಾತ್ಮಚೇತಸಾ ।
ನಿರಾಶೀರ್ನಿರ್ಮಮೋ ಭೂತ್ವಾ ಯುಜ್ಯಸ್ವ ವಿಗತಜ್ವರಃ ॥೩॥

(ಆತ್ಮಸಾಕ್ಷಾತ್ಕಾರವನ್ನು ಪಡೆದುಕೊಳ್ಳಬೇಕೆಂಬ ಮನಸ್ಸಿನಿಂದ ತಾನು ಮಾಡುವ ಎಲ್ಲ ಕೆಲಸಗಳನ್ನೂ ಪರಮಾತ್ಮನಿಗೆ ಅರ್ಪಿಸಿಬಿಡುತ್ತಾನೆ. ಯಾವ ಬಯಕೆಗಳೂ ಇರದೆ, ತಾನು ತನ್ನದೆಂಬ ಅಭಿಮಾನವನ್ನು ಹೊರದೂಡಿ, ರಾಗದ್ವೇಷಾದಿಗಳೆಂಬ ಜ್ವರವಿಲ್ಲದೆ, ಕರ್ತವ್ಯಕರ್ಮಗಳಲ್ಲಿ ತೊಡಗಬೇಕು.)

ನಾಲ್ಕನೆಯ ಅಧ್ಯಾಯ (೪, ೧೮)

ಕರ್ಮಣ್ಯಕರ್ಮ ಯಃ ಪಶ್ಯೇದಕರ್ಮಣಿ ಚ ಕರ್ಮ ಯಃ ।
ಸ ಬುದ್ಧಿಮಾನ್ ಮನುಷ್ಯೇಷು ಸ ಯುಕ್ತಃ ಕೃತ್ಸ್ನಕರ್ಮಕೃತ್ ॥೪॥

(ಮಾಡುವ ಕೆಲಸದಲ್ಲಿ ತೊಡಗಿರುತ್ತ, ಮಾಡದೆ ಇರುವಂತೆಯೆ ಇದ್ದುಕೊಂಡು, ಮಾಡದೆ ಇರುವುದರಲ್ಲಿಯೇ ಎಲ್ಲವನ್ನೂ ಮಾಡುವಂತಿದ್ದವನು ಬುದ್ಧಿವಂತ. ಅವನೇ ಯೋಗವನ್ನು ಬದುಕಿಗೆ ಜೋಡಿಸಿಕೊಂಡವನು. ಮಾಡುವ ಕೆಲಸವನ್ನೆಲ್ಲ ಚೆನ್ನಾಗಿ, ಸಮಗ್ರವಾಗಿ ಮಾಡಬಲ್ಲವನು.)

ಐದನೆಯ ಅಧ್ಯಾಯ (೫, ೧೦)

ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಗಂ ತ್ಯಕ್ತ್ವಾ ಕರೋತಿ ಯಃ ।
ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ ॥೫॥

(ಮಾಡುವ ಎಲ್ಲ ಕೆಲಸವನ್ನೂ ಬ್ರಹ್ಮನಲ್ಲಿ, ಎಂದರೆ ಜೀವನೊಳಗೆ ಚೇತನವಾಗಿ, ಆಧಾರವಾಗಿ, ಆತ್ಮನಾಗಿ, ನಿರ್ಗುಣನಾಗಿ, ನಿರಾಕಾರನಾಗಿ, ಅವ್ಯಕ್ತನಾಗಿರುವ ಪರತತ್ತ್ವದಲ್ಲಿ, ಇಟ್ಟುಬಿಟ್ಟು ಕರ್ಮದ ಫಲಾಸಕ್ತಿಯಿಲ್ಲದೆ ಯಾವನು ಕೆಲಸಗಳನ್ನು ಮಾಡುವನೋ ಅವನನ್ನು ಯಾವ ಕೊಳೆಯೂ ಮುಟ್ಟಲಾರದು; ಎಂದೂ ನೀರೊಳಗಿರುವ ತಾವರೆಯ ಎಲೆ ಒದ್ದೆ-ಯಾಗದೆ ಇರುವಂತೆ.)

ಆರನೆಯ ಅಧ್ಯಾಯ (೬, ೪೭)

ಯೋಗಿನಾಮಪಿ ಸರ್ವೇಷಾಂ ಮದ್ಗತೇನಾಂತರಾತ್ಮನಾ ।
ಶ್ರದ್ಧಾವಾನ್ ಭಜತೇ ಯೋ ಮಾಂ ಸ ಮೇ ಯುಕ್ತತಮೋ ಮತಃ ॥೬॥

(ಎಲ್ಲ ಯೋಗಿಗಳಲ್ಲಿಯೂ, ಯಾವನು ಪರಮಾತ್ಮನಲ್ಲೇ ನೆಟ್ಟ ಮನಸ್ಸುಳ್ಳವನಾಗಿ, ಶ್ರದ್ಧೆಯಿಂದ ಕೂಡಿ ಪರಮಾತ್ಮನನ್ನು ಕೂಡಿಕೊಳ್ಳಲು ತವಕದಿಂದಿರುವನೋ ಅವನೀಗ ಯೋಗಿಗಳಲ್ಲಿ ಅತ್ಯುತ್ತಮನು.)

ಏಳನೆಯ ಅಧ್ಯಾಯ (೭, ೨೮)

ಯೇಷಾಂ ತ್ವಂತಗತಂ ಪಾಪಂ ಜನಾನಾಂ ಪುಣ್ಯಕರ್ಮಣಾಮ್ ।
ತೇ ದ್ವಂದ್ವಮೋಹವಿನಿರ್ಮುಕ್ತಾ ಭಜಂತೇ ದೃಢವ್ರತಾಃ ॥೭॥

(ಯಾವ ಭಾಗ್ಯಶಾಲಿಗಳು ಪಾಪಗಳನ್ನೆಲ್ಲ ಕೊನೆಗಾಣಿಸಿಕೊಂಡು, ರಾಗ ದ್ವೇಷಗಳೆಂಬ ಭ್ರಾಂತಿಯನ್ನು ತೊಲಗಿಸಿಕೊಳ್ಳುವರೋ ಅವರು ನಿಶ್ಚಲವಾದ ಶ್ರದ್ಧೆಯಿಂದ ಪರಮಾತ್ಮನನ್ನು ಸೇರುವರು.)

ಎಂಟನೆಯ ಅಧ್ಯಾಯ (೮, ೧೪)

ಅನನ್ಯಚೇತಾಃ ಸತತಂ ಯೋ ಮಾಂ ಸ್ಮರತಿ ನಿತ್ಯಶಃ ।
ತಸ್ಯಾಹಂ ಸುಲಭಃ ಪಾರ್ಥ ನಿತ್ಯಯುಕ್ತಸ್ಯ ಯೋಗಿನಃ ॥೮॥

(ಯಾರು ಬೇರೆಲ್ಲಿಯೂ ಗಮನವನ್ನು ಹರಿಸದೆ, ಪರಮಾತ್ಮನನ್ನೆ ಎಡೆ ಬಿಡದೆ ನೆನಪಿಗೆ ತಂದುಕೊಳ್ಳುವರೋ, ಅಂಥ ನಿತ್ಯಯೋಗಿಗೆ ಪರಮಾತ್ಮನನ್ನು ಸೇರುವುದು ತುಂಬ ಸುಲಭ.)

ಒಂಬತ್ತನೆಯ ಅಧ್ಯಾಯ (೯, ೨೨)

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ ॥೯॥

(ಯಾರು ಎಡೆಬಿಡದೆ ಪರಮಾತ್ಮನನ್ನೇ ಮನಸ್ಸಿನಲ್ಲಿ ನಿಲ್ಲಿಸಿಕೊಂಡು ಭಕ್ತಿಭಾವದಿಂದ ಉಪಾಸನೆ ಮಾಡುವರೋ, ಅವರ ಯೋಗಕ್ಷೇಮದ ಹೊಣೆ ಪರಮಾತ್ಮನದು.)

ಹತ್ತನೆಯ ಅಧ್ಯಾಯ (೧೦, ೧೦)

ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್ ।
ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾಂತಿ ತೇ ॥೧೦॥

(ಯಾರು ತಮ್ಮನ್ನು ಪರಮಾತ್ಮನಲ್ಲಿ ಎಡೆಬಿಡದೆ ತೊಡಗಿಸಿಕೊಂಡು ಪ್ರೇಮರೂಪವಾದ ಭಕ್ತಿಯಿಂದ ಅರ್ಚಿಸುವರೋ ಅವರಿಗೆ ಪರಮಾತ್ಮನು ಬುದ್ಧಿಯೋಗವನ್ನು ನೀಡುವನು; ಅದರಿಂದ ಅವರು ಪರಮಾತ್ಮನನು ಸೇರುವರು.)

ಹನ್ನೊಂದನೆಯ ಅಧ್ಯಾಯ (೧೧, ೫೪)

ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂ ವಿಧೋಽರ್ಜುನ ।
ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ ॥೧೧॥

(ಬೇರೊಂದರೆಡೆ ಮನಸ್ಸನ್ನು ಹರಿಯಬಿಡದ ಭಕ್ತಿಯಿಂದಲೇ ಪರಮಾತ್ಮನನ್ನು ಅರಿತುಕೊಳ್ಳಲು, ನೇರವಾಗಿ ಕಂಡುಕೊಳ್ಳಲು, ಪರಮಾತ್ಮತತ್ತ್ವದಲ್ಲಿ ಸೇರಿಕೊಳ್ಳಲು ಸಾಧ್ಯವಾಗುತ್ತದೆ.)

ಹನ್ನೆರಡನೆಯ ಅಧ್ಯಾಯ (೧೨, ೮)

ಮಯ್ಯೇವ ಮನ ಆಧತ್ಸ್ವಮಯಿ ಬುದ್ಧಿಂ ನಿವೇಶಯ ।
ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನ ಸಂಶಯಃ ॥೧೨॥

(ಪರಮಾತ್ಮನಲ್ಲೆ ಮನಸ್ಸನ್ನಿರಿಸು; ಪರಮಾತ್ಮನಲ್ಲೆ ಬುದ್ಧಿಯನ್ನು ನೆಲೆಗೊಳಿಸು. ಹಾಗೆ ಮಾಡಿದೆಯಾದರೆ ಇನ್ನು ಮುಂದೆ ಪರಮಾತ್ಮನಲ್ಲಿಯೆ ವಾಸಿಸುವೆ. ಇದಕ್ಕೆ ಸಂಶಯವಿಲ್ಲ.)

ಹದಿಮೂರನೆಯ ಅಧ್ಯಾಯ (೧೩, ೨೯)

ಪ್ರಕೃತ್ಯೈವ ಚ ಕರ್ಮಾಣಿ ಕ್ರಿಯಮಾಣಾನಿ ಸರ್ವಶಃ ।
ಯಃ ಪಶ್ಯತಿ ತಥಾऽऽತ್ಮಾನಮಕರ್ತಾರಂ ಸ ಪಶ್ಯತಿ ॥೧೩॥

(ಎಲ್ಲೆಲ್ಲಿಯೂ ಕೆಲಸಗಳು ನಡೆಯುತ್ತಿರುವಲ್ಲಿ, ಪ್ರಕೃತಿಯಿಂದಲೇ ಅವು ನಡೆಸಲ್ಪಡುವುವು; ಆತ್ಮನು ಏನನ್ನೂ ಮಾಡುವುದೂ ಇಲ್ಲ, ಮಾಡಿಸು-ವುದೂ ಇಲ್ಲ, ಹೀಗೆಂದು ಯಾವನು ಕಾಣುವನೋ ಅವನದ್ದೆ ದಿಟವಾದ ಕಾಣ್ಕೆ.)

ಹದಿನಾಲ್ಕನೆಯ ಅಧ್ಯಾಯ (೧೪, ೨೬)

ಮಾಂ ಚ ಯೋऽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ ।
ಸ ಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ ॥೧೪॥

(ಯಾವನು ಪರಮಾತ್ಮನನ್ನು ಎಡೆಬಿಡದೆ, ಬೇರೆ ಆಲೋಚನೆಯಿಲ್ಲದೆ, ಭಕ್ತಿಯನ್ನು ಬುದ್ಧಿಯಲ್ಲಿ ಹೊಂದಿಸಿಕೊಂಡು ಉಪಾಸನೆ ಮಾಡುವನೋ ಅವನು ಮೂರೂ ಗುಣಗಳನ್ನು ಎಂದರೆ ಪ್ರಕೃತಿಯನ್ನು ದಾಟಿ ಬ್ರಹ್ಮನಾಗುವ ಸಾಮರ್ಥ್ಯವನ್ನು ಪಡೆದುಕೊಳ್ಳುವನು.)

ಹದಿನೈದನೆಯ ಅಧ್ಯಾಯ (೧೫, ೯)

ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ ರಸನಂ ಘ್ರಾಣಮೇವ ಚ ।
ಅಧಿಷ್ಠಾಯ ಮನಶ್ಚಾಯಂ ವಿಷಯಾನುಪಸೇವತೇ ॥೧೫॥

(ಕಿವಿ, ಕಣ್ಣು, ಚರ್ಮ, ನಾಲಗೆ, ಮೂಗು ಇವುಗಳನ್ನು ಆಸರೆಯಾಗಿ ಮಾಡಿಕೊಂಡು ಮನಸ್ಸು ವಿಷಯಗಳನ್ನು ಅನುಭವಿಸುತ್ತದೆ.)

ಹದಿನಾರನೆಯ ಅಧ್ಯಾಯ (೧೬, ೫)

ದೈವೀ ಸಂಪದ್ವಿಮೋಕ್ಷಾಯ ನಿಬಂಧಾಯಾಸುರೀ ಮತಾ ।
ಮಾ ಶುಚಃ ಸಂಪದಂ ದೈವೀಮಭಿಜಾತೋಽಸಿ ಪಾಂಡವ ॥೧೬॥

(ದೈವೀಸಂಪತ್ತಿರುವುದು ಮುಕ್ತಿಗೆ ಕಾರಣವಾಗುತ್ತದೆ; ಆಸುರೀ ಸಂಪತ್ತೆಂಬುದು ಬಂಧನಕ್ಕೆ ಕಾರಣವಾಗುತ್ತದೆ. ಗೀತಾಶ್ರವಣಕ್ಕೆ ಅಧಿಕಾರಿಯಾದ ಅರ್ಜುನನಿಗೆ ಇದ್ದದ್ದು ದೈವೀಸಂಪತ್ತೇ. ಅದರಿಂದ ದುಃಖ ಎಂದೂ ಒದಗದು.)

ಹದಿನೇಳನೆಯ ಅಧ್ಯಾಯ (೧೭, ೩)

ಸತ್ತ್ವಾನುರೂಪಾ ಸರ್ವಸ್ಯ ಶ್ರದ್ಧಾ ಭವತಿ ಭಾರತ ।
ಶ್ರದ್ಧಾಮಯೋಽಯಂ ಪುರುಷೋ ಯೋ ಯಚ್ಛ್ರದ್ಧಃ ಸ ಏವ ಸಃ ॥೧೭॥

(ಅವರವರ ಸತ್ತ್ವಕ್ಕೆ, ಎಂದರೆ ಮನೋಧರ್ಮಕ್ಕೆ, ಅನುಗುಣವಾಗಿ ಶ್ರದ್ಧೆ ಒದಗಿಬರುತ್ತದೆ. ಮನುಷ್ಯನಲ್ಲಿ ಶ್ರದ್ಧೆಯೇ ಪ್ರಚುರವಾದುದು. ಅವನ ಶ್ರದ್ಧೆ ಹೇಗೋ ಅವನು ಹಾಗೆಯೇ ಇರುವನು.)

ಹದಿನೆಂಟನೆಯ ಅಧ್ಯಾಯ (೧೮, ೪೬)

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಂ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದಂತಿ ಮಾನವಾಃ ॥೧೮॥

(ಯಾರಿಂದ ಎಲ್ಲ ಪ್ರಾಣಿಗಳೂ ಬದುಕುವುವೋ, ಯಾರಿಂದ ಇವೆಲ್ಲವೂ ವ್ಯಾಪಿಸಲ್ಪಟ್ಟಿದೆಯೋ ಆ ಪರಮಾತ್ಮನನ್ನು ಮನುಷ್ಯರು ತಮ್ಮ ಕೆಲಸಗಳಿಂದಲೇ ಪೂಜಿಸಿ ಸಿದ್ಧಿಯನ್ನು ಪಡೆದುಕೊಳ್ಳುವರು.)

ಅನುಬಂಧ ಒಂದು

ಭಗವದ್ಗೀತೆಯ ಹಸ್ತಪ್ರತಿಗಳಲ್ಲಿ ಅಧ್ಯಾಯದ ಹೆಸರುಗಳು ಒಂದೇ ತೆರನಾಗಿಲ್ಲ. ಮುಖ್ಯ ಪಾಠಭೇದಗಳನ್ನು ಇಲ್ಲಿ ಕಾಣಿಸಿದೆ. ಮೊದಲನೆಯದು ಈಗ ಎಲ್ಲೆಡೆ ಬಳಕೆಯಲ್ಲಿರುವ ಹೆಸರುಗಳು.

ದೇ–	ದೇವನಾಗರಿ	ಬಂ–	ಬಂಗಾಳೀ ಪಾಠ
ಗ್ರಂ–	ಗ್ರಂಥಲಿಪಿ	ತಂ –	ತಂಜಾವೂರು ಪ್ರತಿ
ಶಾ–	ಶಾರದಾಲಿಪಿ	ನೀ –	ಭಾರತಕ್ಕೆ ಟೀಕಾಕಾರನಾದ ನೀಲಕಂಠ
ನೇ–	ನೇಪಾಳೀಪಾಠ	ಮ –	ಮಧುಸೂದನ ಸರಸ್ವತಿ
ಕಾ–	ಕಾಶ್ಮೀರದ ಪಾಠ	ದೈ –	ದೈವಜ್ಞಪಂಡಿತಸೂರ್ಯ
ಮ–	ಮಲಯಾಳದ ಪಾಠ		

ಅಧ್ಯಾಯ ೧ : ಅರ್ಜುನವಿಷಾದಯೋಗಃ; ಸೈನ್ಯದರ್ಶನಯೋಗಃ(ದೇ); ಅರ್ಜುನ ಪರಿಖೇದಯೋಗಃ; ಅರ್ಜುನಶೋಕವರ್ಣನ ಉಪೋದ್ಘಾತಃ(ಕಾ).

ಅಧ್ಯಾಯ ೨ : ಸಾಂಖ್ಯಯೋಗಃ; ಕರ್ಮಯೋಗಃ(ಕಾ); ಇಂದ್ರಿಯಸಂಯಮ ಯೋಗಃ(ನೇ); ಯೋಗಶಾಸ್ತ್ರನಿರ್ಣಯಃ(ಗ್ರಂ); ಗೀತಾಸಂಗ್ರಹಾರ್ಥ ಪ್ರಕಾಶಃ(ಕಾ).

ಅಧ್ಯಾಯ ೩ : ಕರ್ಮಯೋಗಃ; ಕರ್ಮಪ್ರತಿಷ್ಠಾಯೋಗಃ; ಕರ್ಮಪ್ರಶಂಸಾಯೋಗಃ; ಕರ್ಮನಿರೂಪಣಯೋಗಃ(ಕಾ); ಕರ್ಮಬ್ರಹ್ಮಯೋಗಃ(ಗ್ರಂ); ಜ್ಞಾನ ನಿಷ್ಠಾವರ್ಣನಂ(ಮ).

ಅಧ್ಯಾಯ ೪ : ಜ್ಞಾನಕರ್ಮಸಂನ್ಯಾಸಯೋಗಃ; ಕರ್ಮಸಂನ್ಯಾಸಯೋಗಃ(ದೇ); ಬ್ರಹ್ಮಾರ್ಪಣಯೋಗಃ(ಕಾ); ಬ್ರಹ್ಮಜ್ಞಾನಪ್ರಶಂಸಾಯೋಗಃ(ಕಾ); ಜ್ಞಾನಕರ್ಮಸಂನ್ಯಾಸವಿವಿಧಯಜ್ಞವಿಭಾಗಃ(ಕಾ); ವಿವಸ್ವತಯೋಗಃ (ನೇ); ಸಂಧ್ಯಾಸಯೋಗಃ(ಬಂ); ವಿವಸ್ವಜ್‌ಜ್ಞಾನಯೋಗಃ(ತಂ); ಯಜ್ಞವಿಭಾಗಯೋಗಃ(ನೀ); ಜ್ಞಾನಯೋಗಃ(ಕಾ); ಬ್ರಹ್ಮಾರ್ಪಣ–ಯೋಗ(ಮ).

ಅಧ್ಯಾಯ ೫ : ಕರ್ಮಸಂನ್ಯಾಸಯೋಗಃ; ಯೋಗಗರ್ಭಃ(ಶಾ); ಯೋಗಸಮು–ಚ್ಚಯಃ(ಬಂ); ಸಂನ್ಯಾಸಯೋಗಃ(ನೇ); ಸಾಂಖ್ಯಯೋಗಃ(ಗ್ರಂ);

ಪ್ರಕೃತಿಯೋಗಃ(ದೇ); ಸ್ವರೂಪವಿಜ್ಞಾನಂ(ಮ).

ಅಧ್ಯಾಯ ೬ : ಆತ್ಮಸಂಯಮಯೋಗಃ; ಧ್ಯಾನಯೋಗಃ (ದೇ); ಆತ್ಮಸಂಯಮ ಯೋಗಃ(ಕಾ); ಯೋಗಗರ್ಭಃ(ನೇ); ಸ್ವರೂಪಯೋಗಃ(ಕಾ); ಆತ್ಮಯೋಗಃ (ಗ್ರಂ); ಅಧ್ಯಾತ್ಮಯೋಗಃ(ಮ).

ಅಧ್ಯಾಯ ೭ : ಜ್ಞಾನವಿಜ್ಞಾನಯೋಗಃ; ವಿಜ್ಞಾನಯೋಗಃ(ಕಾ); ಗುಣವಿಜ್ಞಾನ-ಯೋಗಃ ಸಮಗ್ರದರ್ಶನಃ(ಬಂ); ಪರಾಪರಯೋಗಃ(ಬಂ); ಪರಮ ಸಹಯೋಗಃ(ನೇ); ಜ್ಞಾನವಿಜ್ಞಾನವರ್ಣನಯೋಗಃ(ದೇ); ಪರಮ ಹಂಸವಿಜ್ಞಾನ ಬ್ರಹ್ಮಯೋಗಃ(ತಂ); ಪರಾವರಪ್ರಕೃತಿಯೋಗಃ(ಗ್ರಂ); ಜ್ಞೇಯಧ್ಯೇಯಪ್ರತಿಪಾದ್ಯತತ್ತ್ವ ಬ್ರಹ್ಮನಿರೂಪಣಂ(ಮ).

ಅಧ್ಯಾಯ ೮ : ಅಕ್ಷರಬ್ರಹ್ಮಯೋಗಃ; ಪ್ರಯಾಣಕಾಲಯೋಗಃ(ಶಾ); ಮಹಾಪುರುಷ ಯೋಗಃ(ಕಾ); ಅಕ್ಷರಬ್ರಹ್ಮಜ್ಞಾನೇನ ಪರಮಗತಿಪ್ರಾಪ್ತಿನಿರೂಪಣಂ (ಕಾ); ಪುರುಷೋತ್ತಮಯೋಗಃ(ದೇ); ಧಾರಣಾಯೋಗಃ(ಬಂ); ಆತ್ಮಯೋಗಃ(ನೇ); ಅಕ್ಷರಬ್ರಹ್ಮಯೋಗಃ(ತಂ, ಗ್ರಂ); ತಾರಕಬ್ರಹ್ಮ ಯೋಗಃ(ದೇ); ಅಧಿಕಾರಿಭೇದೇನ ಅಕ್ಷರಪರಬ್ರಹ್ಮವಿವರಣಂ(ಮ).

ಅಧ್ಯಾಯ ೯: ರಾಜವಿದ್ಯಾರಾಜಗುಹ್ಯಯೋಗಃ; ರಾಜಗುಹ್ಯರಾಜಯೋಗಃ(ಕಾ); ಪ್ರಕೃತಿಯೋಗಃ(ಬಂ); ಪ್ರಕೃತಿಪುರುಷಯೋಗಃ(ಬಂ); ಆತ್ಮ-ನಿರ್ಣಯಯೋಗಃ(ದೇ); ಅಧಿಕಾರಿಭೇದೇನ ರಾಜವಿದ್ಯಾರಾಜಗುಹ್ಯ ಯೋಗಃ(ಮ).

ಅಧ್ಯಾಯ ೧೦: ವಿಭೂತಿಯೋಗಃ; ಭಗವದ್ವಿಭೂತಿಯೋಗಃ(ತಂ); ಸ್ವೈಶ್ವರ್ಯ ಯೋಗಃ(ಕಾ); ಭಗವತ್ತತ್ತ್ವಯೋಗಃ(ನೇ); ಅಧಿಕಾರಿಭೇದೇನ ವಿಭೂತಿಯೋಗಃ(ಮ).

ಅಧ್ಯಾಯ ೧೧: ವಿಶ್ವರೂಪದರ್ಶನಯೋಗಃ; ಅದೇ(ಕಾ.ಸೇ); ವಿಶ್ವರೂಪದರ್ಶನನಿ-ರೂಪಣಂ(ಮ); ವಿಶ್ವರೂಪಾಖ್ಯಮಧ್ಯಮಪ್ರಮಾಣನಿರೂಪಣಂ(ದೈ).

ಅಧ್ಯಾಯ ೧೨: ಭಕ್ತಿಯೋಗಃ; ಭಗವದ್‌ಧ್ಯಾನಯೋಗಃ(ಕಾ); ತತ್‌ಪದಾರ್ಥ ವಿವೇಕಃ(ನೀ); ಅಧಿಕಾರಿಭೇದೇನ ಭಕ್ತಿಯೋಗವಿವರಣಂ(ಮ).

ಅಧ್ಯಾಯ ೧೩: ಕ್ಷೇತ್ರಕ್ಷೇತ್ರಜ್ಞವಿಭಾಗಯೋಗಃ; ಕ್ಷೇತ್ರನಿರ್ದೇಶಃ(ಕಾ); ಕ್ಷೇತ್ರಕ್ಷೇತ್ರಜ್ಞ ದರ್ಶನಯೋಗಃ(ತಂ); ಪುರುಷಪ್ರಕೃತಿ ವಿಭಾಗಯೋಗಃ(ನೇ. ಕಾ); ಪ್ರಕೃತಿಪುರುಷವಿವೇಕಃ (ತಂ. ದೈ); ಕ್ಷೇತ್ರಪ್ರಕೃತಿಯೋಗಃ (ಬಂ);

ಕ್ಷೇತ್ರಾಭಿದರ್ಶನಯೋಗಃ(ದೇ); ಕ್ಷೇತ್ರಕ್ಷೇತ್ರಜ್ಞವಿವೇಕಃ (ಮ).

ಅಧ್ಯಾಯ ೧೪: ಗುಣತ್ರಯವಿಭಾಗಯೋಗಃ; ಭಗವತ್‌ಪ್ರಾಪ್ತ್ಯುಪಾಯಯೋಗಃ (ತಂ); ಮಹದ್‌ಬ್ರಹ್ಮಯೋಗಃ(ನೇ); ಪ್ರಕೃತಿಗುಣತ್ರಯವಿಭಾಗಃ (ಮ); ಗುಣಾತೀತತತ್ವನಿಷ್ಠಾ(ಮ).

ಅಧ್ಯಾಯ ೧೫: ಪುರುಷೋತ್ತಮಯೋಗಃ (ಸಾಮಾನ್ಯವಾಗಿ ಎಲ್ಲೆಡೆಯೂ ಇದೇ ಹೆಸರು ಕಾಣುತ್ತದೆ)

ಅಧ್ಯಾಯ ೧೬: ದೈ(ದೇ)ವಾಸುರಸಂಪದ್ವಿಭಾಗಯೋಗಃ (ಸಾಮಾನ್ಯವಾಗಿ); ದೈವಾಸುರಸಂಪತ್ತಿವಿವೇಕಃ (ದೈ).

ಅಧ್ಯಾಯ ೧೭: ಶ್ರದ್ಧಾತ್ರಯವಿಭಾಗಯೋಗಃ; ಶ್ರದ್ಧಾತ್ರಯವಿಭಾಗಯೋಗ ವಿವರಣಂ (ಮ); ತತ್ತ್ವಜ್ಞಾನಾಧಿಕಾರಃ(ಕಾ); ಶ್ರದ್ಧಾದಿತ್ರೈವಿಧ್ಯ ನಿರೂಪಣಂ (ಧನಪತಿ); ಶ್ರದ್ಧಾವಿವೇಕ;(ದೈ).

ಅಧ್ಯಾಯ ೧೮: ಮೋಕ್ಷಸಂನ್ಯಾಸಯೋಗಃ; ನಿರ್ಣಯಸಂನ್ಯಾಸಯೋಗಃ(ಕಾ); ಪರಮಾರ್ಥನಿರ್ಣಯಃ(ಕಾ); ಬ್ರಹ್ಮಪ್ರಾಪ್ತಿಯೋಗಃ(ನೇ); ಪರಮಾರ್ಥನಿರ್ಗುಣಬ್ರಹ್ಮಯೋಗಃ(ನೇ); ಭಿನ್ನಸಂಶಯಯೋಗಃ (ಬಂ); ಸಕಲವೇದಶಾಸ್ತ್ರಪುರಾಣ ಸಂಗ್ರಹಮೋಕ್ಷಯೋಗಃ(ತಂ); ಸರ್ವೋಪನಿಷದರ್ಥಪ್ರತಿಪಾದನ ಮೋಕ್ಷಯೋಗಃ(ದೇ); ಸಂನ್ಯಾಸ ಯೋಗಃ(ತಂ. ಗ್ರಂ); ಸಂನ್ಯಾಸಯೋಗ ಪ್ರತಿಪಾದನಂ(ಮ); ಮೋಕ್ಷಯೋಗಃ(ದೇ); ಗೀತಾರ್ಥನಿಷ್ಠಾತ್ರಯೋಪಸಂಹಾರ ವರ್ಣನಂ (ಸದಾನಂದ); ಬ್ರಹ್ಮಾರ್ಪಣಸಂನ್ಯಾಸಯೋಗಃ(ದೈ).

ನೇಪಾಳಿ ಪಾಠದಲ್ಲಿ ಈ ಅಧ್ಯಾಯದ ಕಡೆಯಲ್ಲಿ (೭೮ನೇ ಶ್ಲೋಕ ಆದ ಮೇಲೆ) ಮುಂದೆ ಕಾಣಿಸಿರುವ ಸಂಗ್ರಹಶ್ಲೋಕವಿದೆ --

ಭಗವದ್ಭಕ್ತಿಯುಕ್ತಸ್ಯ ತತ್ಪ್ರಸಾದಾತ್ಮಬೋಧತಃ ।
ಸುಖಂ ಬಂಧವಿಮುಕ್ತಿಃ ಸ್ಯಾದಿತಿ ಗೀತಾರ್ಥಸಂಗ್ರಹಃ ॥

ಅನುಬಂಧ ಎರಡು

ಭಗವದ್ಗೀತೆಯ ಮೇಲೆ ನೂರಾರು ಭಾಷ್ಯಗಳೂ, ಟೀಕೆಗಳೂ ಇವೆ. ಮುಖ್ಯವಾದುವನ್ನು(ಎಂದರೆ ನಾನು ನೋಡಿರುವುದನ್ನು) ಇಲ್ಲಿ ಪಟ್ಟಿಮಾಡ-ಲಾಗಿದೆ.

೧ ಶಂಕರಾಚಾರ್ಯರ	ಗೀತಾಭಾಷ್ಯ
೨. ಆನಂದಗಿರಿಯ	ಗೀತಾಭಾಷ್ಯಟೀಕಾ
೩. ರಾಮಾನುಜಾಚಾರ್ಯರ	ಗೀತಾಭಾಷ್ಯ
೪. ವೇದಾಂತದೇಶಿಕರ	ತಾತ್ಪರ್ಯಚಂದ್ರಿಕಾ
೫. ಮಧ್ವಾಚಾರ್ಯರ	ಗೀತಾಭಾಷ್ಯ
೬. ಜಯತೀರ್ಥರ	ಪ್ರಮೇಯದೀಪಿಕಾ
೭. ರಾಘವೇಂದ್ರತೀರ್ಥರ	ಅರ್ಥಸಂಗ್ರಹ; ಗೀತಾವಿವೃತಿ
೮. ಹನೂಮತ್ಕೃತ	ಪೈಶಾಚಭಾಷ್ಯ
೯. ವೇಂಕಟನಾಥರ	ಬ್ರಹ್ಮಾನಂದಗಿರಿ
೧೦. ವಲ್ಲಭಾಚಾರ್ಯರ	ಸತ್ತತ್ತ್ವದೀಪಿಕಾ
೧೧. ಪುರುಷೋತ್ತಮತೀರ್ಥರ	ಅಮೃತತರಂಗಿಣೀ
೧೨. ನೀಲಕಂಠ ಸೂರಿಯ	ಭಾರತಭಾವದೀಪ(ಗೀತಾರ್ಥಪ್ರಕಾಶ)
೧೩. ಕೇಶವಕಾಶ್ಮೀರಿಯ	ತತ್ತ್ವಪ್ರಕಾಶಿಕಾ
೧೪. ಮಧುಸೂದನಸರಸ್ವತಿಗಳ	ಗೂಢಾರ್ಥದೀಪಿಕಾ
೧೫. ಶಂಕರಾನಂದರ	ತಾತ್ಪರ್ಯಬೋಧಿನೀ
೧೬. ಶ್ರೀಧರಸ್ವಾಮಿಗಳ	ಸುಬೋಧಿನೀ
೧೭. ಸದಾನಂದಯತಿಯ	ಭಾವಪ್ರಕಾಶ
೧೮. ಧನಪತಿಸೂರಿಯ	ಭಾಷ್ಯೋತ್ಕರ್ಷದೀಪಿಕಾ
೧೯. ದೈವಜ್ಞಪಂಡಿತಸೂರ್ಯನ	ಪರಮಾರ್ಥಪ್ರಪಾ
೨೦. ರಾಜಾನಕರಾಮಕಂಠನ	ಸರ್ವತೋಭದ್ರ
೨೧. ಅಭಿನವಗುಪ್ತರ	ಗೀತಾಸಂಗ್ರಹ
೨೨. ಭಾಸ್ಕರಾಚಾರ್ಯರ	ಭಗವದಾಶಯಾನುಸರಣ
೨೩. ಆನಂದವರ್ಧನರ	ಜ್ಞಾನಕರ್ಮಸಮುಚ್ಚಯ
೨೪. ನಿಂಬಾರ್ಕಾಚಾರ್ಯರ	ತತ್ತ್ವಪ್ರಕಾಶಿಕಾ

ಅನುಬಂಧ ಮೂರು

ಗೀತೆಯಲ್ಲಿನ ಸುಭಾಷಿತಗಳು

(ಗೀತೆಯಲ್ಲಿನ ಮಾತುಗಳೆಲ್ಲ ಸುಭಾಷಿತಗಳೇ. ಅವುಗಳಲ್ಲಿ ಕೆಲವು ನೆನಪಿಟ್ಟುಕೊಳ್ಳಲು ಅನುಕೂಲವಾದ ಒಕ್ಕಣೆಗಳು; ಮತ್ತೆ ಮತ್ತೆ ಮನನ-ಮಾಡಲು ಯೋಗ್ಯವಾದುವು; ಕ್ಲೇಶದ ಸಂದರ್ಭದಲ್ಲಿ ನೆರವಿಗೆ ಬರು-ವಂಥವು. ಇವು ಕತ್ತಲಲ್ಲಿ ದಾರಿದೀಪಗಳಂತೆ ಬೆಳಗುವುವು. ಅವುಗಳಲ್ಲಿ ಕೆಲವನ್ನು ಇಲ್ಲಿ ಸಂಗ್ರಹಿಸಲಾಗಿದೆ.

೧. ಅಂತದಂತ ಇಮೇ ದೇಹಾಃ (೨, ೧೮)

(ನಮ್ಮ ಶರೀರಾದಿಗಳೆಲ್ಲ ಒಂದಲ್ಲ ಬಾರಿ ತೀರಿಕೊಳ್ಳುವ ಸ್ವಭಾವ ಉಳ್ಳವು)

೨. ಜಾತಸ್ಯ ಹಿ ಧ್ರುವೋ ಮೃತ್ಯುಃ (೨, ೨೭)

(ಹುಟ್ಟಿದವನಿಗೆ ಸಾವು ಎಂಬುದು ಕಟ್ಟಿಟ್ಟದ್ದು)

೩. ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತನಿಶ್ಚಯಃ (೨, ೩೭)

(ಆದ್ದರಿಂದ ಅರ್ಜುನ, ಎದ್ದು ನಿಲ್ಲು, ಮಾಡಬೇಕಾದುದನ್ನು ಮಾಡಿಯೇ ತೀರುವೆನು ಎನ್ನು)

೪.ಸುಖದುಃಖೇ ಸಮೇ ಕೃತ್ವಾ (೨, ೩೮)

(ಮಾಡಬೇಕಾದುದನ್ನು ಮಾಡುವಾಗ, ಸುಖವೇ ಬರಲಿ, ದುಃಖವೇ ಆಗಲಿ, ಎರಡನ್ನೂ ಸಮನಾಗಿ ಕಾಣು)

೫.ವ್ಯವಸಾಯಾತ್ಮಿಕಾ ಬುದ್ಧಿರೇಕಾ (೨, ೪೧)

(ಹದಗೊಂಡ ಬುದ್ಧಿಯ ಒಮ್ಮುಖವಾಗಿರುತ್ತದೆ)

೬.ಕರ್ಮಣ್ಯೇವಾಧಿಕಾರಸ್ತೇ (೨, ೪೭)

(ಕೆಲಸಮಾಡುವುದಷ್ಟೇ ನಿನ್ನ ಹೊಣೆಗಾರಿಕೆ, ಅದು ಯಾವ ಫಲವನ್ನು ನೀಡೀತು ಎನ್ನುವುದು ನಿನಗೆ ಸೇರಿದ್ದಲ್ಲ)

೭.ಯೋಗಸ್ಥಃ ಕುರು ಕರ್ಮಾಣಿ (೨, ೪೮)

(ಯೋಗದಲ್ಲಿ, ಎಂದರೆ ಸಮತೆಯಲ್ಲಿ, ನೆಲೆನಿಂತು ಕೆಲಸಗಳಲ್ಲಿ ತೊಡಗು)

೮.ಬುದ್ಧೌ ಶರಣಮನ್ವಿಚ್ಛ (೨, ೪೯)

(ಬುದ್ಧಿಯಲ್ಲಿ, ಸಮತಾಬುದ್ಧಿಯಲ್ಲಿ, ನಿನ್ನ ನೆಲೆಯನ್ನು ಕಂಡುಕೋ)

೯.ಯೋಗಃ ಕರ್ಮಸು ಕೌಶಲಂ (೨, ೫೦)

(ಯೋಗವೆಂದರೆ ಮಾಡುವ ಕೆಲಸಗಳಲ್ಲಿ ಜಾಣತನ)

೧೦. ನಾಭಿನಂದತಿ ನ ದ್ವೇಷ್ಟಿ (೨, ೫೭)

(ಸುಖ ಬಂದರೆ ಹಿಗ್ಗುವುದಿಲ್ಲ, ದುಃಖ ಒದಗಿದರೆ ಕುಗ್ಗುವುದಿಲ್ಲ)

೧೧. ಇಂದ್ರಿಯಾಣಿ ಪ್ರಮಾಥಾನಿ (೨, ೬೦)

(ಇಂದ್ರಿಯಗಳ ಸ್ವಭಾವವೇ ಕದಡುವುದು)

೧೨. ನಾಸ್ತಿ ಬುದ್ಧಿರಯುಕ್ತಸ್ಯ (೨, ೬೬)

(ಯೋಗವಿಲ್ಲದವನಿಗೆ ಬುದ್ಧಿಯೂ ಇರದು)

೧೩. ನಿಯತಂ ಕುರು ಕರ್ಮ ತ್ವಂ (೩, ೮)

(ನಿನಗೆ ಕರ್ತವ್ಯವಾಗಿ ಒದಗಿಬಂದ ಕೆಲಸವನ್ನು ಮಾಡಿಯೇ ಮಾಡು)

೧೪. ಭುಂಜತೇ ತೇ ತ್ವಘಂ ಪಾಪಾ ಯೇ ಪಚಂತ್ಯಾತ್ಮಕಾರಣಾತ್ (೩, ೧೩)

(ತಮ್ಮ ಸಲುವಾಗಿ ಮಾತ್ರ ಅಡುಗೆಮಾಡಿಕೊಂಡವರು ಪಾಪವನ್ನೇ ಉಣ್ಣಬೇಕಾದೀತು)

೧೫. ಮೋಘಂ ಪಾರ್ಥ ಸ ಜೀವತಿ (೩, ೧೬)

(ಅವನ ಬದುಕು ಪ್ರಯೋಜನವಿಲ್ಲದ್ದು; ನಿರರ್ಥಕವಾಗಿ ಬದುಕುತ್ತಾನೆ ಅಷ್ಟೆ)

೧೬. ಆತ್ಮನ್ಯೇವ ಚ ಸಂತುಷ್ಟಃ (೩. ೧೭)

(ತನ್ನಲ್ಲೆಯೇ ಸಂತೋಷವನ್ನು ಕಂಡುಕೊಳ್ಳುವವನು ಜ್ಞಾನಿ)

೧೭. ಲೋಕಸಂಗ್ರಹಮೇವಾಪಿ ಸಂಪಶ್ಯನ್ (೩, ೨೦)

(ಲೋಕದ ಹಿತವನ್ನು ಸಾಧಿಸುವ ದೃಷ್ಟಿಯಿಂದ ಜ್ಞಾನಿಯು ಕರ್ಮದಲ್ಲಿ ತೊಡಗಿರುವನು)

೧೮. ನ ಬುದ್ಧಿಭೇದಂ ಜನಯೇದಜ್ಞಾನಾಂ (೩, ೨೬)

(ತಿಳಿವಳಿಕೆಯಿಲ್ಲದ ಜನರಿಗೆ ಉಪದೇಶಮಾಡಿ ಅವರ ಬುದ್ಧಿಯಲ್ಲಿ ಒಡಕನ್ನುಂಟುಮಾಡಬಾರದು)

೧೯. ಅಹಂಕಾರ ವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ (೩, ೨೭)

(ಅಹಂಕಾರದಿಂದ ಭ್ರಾಂತಿಗೊಂಡವನು 'ನಾನೇ ಮಾಡುತ್ತಿದ್ದೇನೆ' ಎಂದು-ಕೊಳ್ಳುವನು)

೨೦. ಗುಣಾ ಗುಣೇಷು ವರ್ತಂತೇ (೩, ೩೮)

(ಗುಣಗಳು ಗುಣಗಳಲ್ಲಿಯೇ ವ್ಯವಹರಿಸುವುದು)

೨೧. ಯುಧ್ಯಸ್ವ ವಿಗತಜ್ವರಃ (೩, ೩೦)

(ರಾಗದ್ವೇಷಗಳಿಲ್ಲದೆ ನಿನ್ನ ಕರ್ತವ್ಯಕರ್ಮಗಳನ್ನು ಮಾಡು)

೨೨. ನಿಗ್ರಹಃ ಕಿಂ ಕರಿಷ್ಯತಿ (೩, ೩೩)

(ಪ್ರಕೃತಿಯನ್ನು ತಡೆದರೆ ಏನಾದೀತು?)

೨೩. ಸ್ವಧರ್ಮೇ ನಿಧನಂ ಶ್ರೇಯಃ (೩, ೩೫)

(ನಿನಗೊಪ್ಪುವ ಧರ್ಮದಲ್ಲೇ ನಿಲ್ಲು; ಅದರಲ್ಲಿ ನೀನು ತೀರಿಕೊಂಡರೂ ಒಳ್ಳೆಯದೇ)

೨೪. ಸಂಭವಾಮ್ಯಾತ್ಮಮಾಯಯಾ (೪. ೬)

(ಭಗವಂತನು ತನ್ನ ಮಾಯಾಶಕ್ತಿಯಿಂದ ಬಗೆಬಗೆಯಾಗಿ ತೋರಿಕೊಳ್ಳುವನು)

೨೫. ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ತದಾತ್ಮಾನಂ ಸೃಜಾಮ್ಯಹಂ (೪.೭)

(ಯಾವಾಗ ಧರ್ಮ ಕಳೆಗುಂದುವುದೋ ಆಗ ಭಗವಂತನು ತೋರಿ-ಕೊಳ್ಳುವನು)

೨೬. ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥ (೪. ೮)

(ಒಳ್ಳೆಯವರನ್ನು ಕಾಪಾಡಲು, ಕೆಟ್ಟವರನ್ನು ಕೊನೆಗಾಣಿಸಲು, ಧರ್ಮವನ್ನು ಎತ್ತಿನಿಲ್ಲಿಸಲು ಯುಗಯುಗದಲ್ಲೂ ಭಗವಂತನು ಕಾಣಿಸಿಕೊಳ್ಳುವನು)

೨೭. ವೀತರಾಗಭಯಕ್ರೋಧಾಃ (೪, ೧೦)

(ಬಯಕೆ, ಹೆದರಿಕೆ, ಸಿಟ್ಟು ಮೂರನ್ನೂ ಬಿಟ್ಟವರು)

೨೮. ಜ್ಞಾನಾಗ್ನಿದಗ್ಧಕರ್ಮಾಣಂ (೪, ೧೯)

(ತಿಳಿವಳಿಕೆಯೆಂಬ ಬೆಂಕಿಯಲ್ಲಿ ಕರ್ಮಗಳನ್ನೆಲ್ಲ ಸುಟ್ಟುಹಾಕಿದವರು)

೨೯. ಯದೃಚ್ಛಾಲಾಭ ಸಂತುಷ್ಟಃ (೪, ೨೨)

(ತಾನಾಗಿ ಒದಗಿಬಂದುದರಲ್ಲಿ ತೃಪ್ತನಾದವನು)

೩೦. ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ (೪, ೩೪)

(ತಿಳಿವಳಿಕೆಯನ್ನು ಪಡೆದುಕೊಳ್ಳಲು ಜ್ಞಾನಿಗಳ ಬಳಿ ವಿನಯದಿಂದ ಹೋಗು; ಅವರ ಸೇವೆ ಮಾಡು; ಅವರಲ್ಲಿ ನಿನ್ನ ಸಂದೇಹಗಳನ್ನು ಹೇಳಿಕೋ)

೩೧. ನ ಹಿ ಜ್ಞಾನೇನ ಸದೃಶಂ ಪವಿತ್ರಂ (೪, ೩೮)

(ಆತ್ಮಜ್ಞಾನದಂತೆ ಪವಿತ್ರವಾದುದು ಮತ್ತೊಂದಿರದು)

೩೨. ಶ್ರದ್ಧಾವಾನ್ ಲಭತೇ ಜ್ಞಾನಂ (೪, ೩೯)

(ಶ್ರದ್ಧೆಯಿದ್ದವನು ಜ್ಞಾನವನ್ನು ಪಡೆದುಕೊಳ್ಳುವನು)

೩೩. ಸಂಶಯಾತ್ಮಾ ವಿನಶ್ಯತಿ (೪, ೪೦)

(ಸಂಶಯಗಳಿಗೊಡ್ಡಿದ ಮನಸ್ಸು ನಾಶದ ಕಡೆಗೆ ಒಲಿಯುತ್ತದೆ)

೩೪. ಯೋಗಮಾತಿಷ್ಠೋತ್ತಿಷ್ಠ (೪, ೪೨)

(ಎದ್ದು ನಿಲ್ಲು, ಯೋಗದಲ್ಲಿ ತೊಡಗು)

೩೫. ಕುರ್ವನ್ನಪಿ ನ ಲಿಪ್ಯತೇ (೫, ೭)

(ಜ್ಞಾನಿಯಾದವನು ಕರ್ಮದಲ್ಲಿ ತೊಡಗಿದ್ದರೂ ಕರ್ಮ ಅವನಿಗೆ ಅಂಟಿ-ಕೊಳ್ಳುವುದಿಲ್ಲ)

೩೬. ಇಂದ್ರಿಯಾಣೀಂದ್ರಿಯಾರ್ಥೇಷು (೫, ೯)

(ಇಂದ್ರಿಯಗಳಿರುವುದು ತಂತಮ್ಮ ವಿಷಯಗಳನ್ನು ಗ್ರಹಿಸಲೆಂದೇ)

೩೭. ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ (೫, ೧೦)

(ಕೊಳದಲ್ಲಿರುವ ತಾವರೆಯು ನೀರಿನಿಂದ ಒದ್ದೆಯಾಗದಿರುವಂತೆ, ಜ್ಞಾನಿಯು ವ್ಯವಹಾರದಲ್ಲಿದ್ದರೂ ಅದರ ಕೊಳೆ ಅವನಿಗೆ ಅಂಟಲಾರದು)

೩೮. ಸ್ವಭಾವಸ್ತು ಪ್ರವರ್ತತೆ (೫, ೧೪)

(ಮನುಷ್ಯನ ಸ್ವಭಾವದ್ದೇ ಮೇಲುಗೈ; ಅದನ್ನು ಮಾರ್ಪಡಿಸುವುದು ಕಷ್ಟ)

೩೯. ಜ್ಞಾನನಿರ್ಧೂತಕಲ್ಮಷಾಃ (೫, ೧೭)

(ತಿಳಿವಳಿಕೆಯಿಂದ ಕೊಳೆಗಳನ್ನೆಲ್ಲ ತೊಳೆದುಕೊಂಡವರು)

೪೦. ಸರ್ವಭೂತಹಿತೇ ರತಾಃ (೫, ೨೫)

(ಎಲ್ಲ ಪ್ರಾಣಿಗಳ ಒಳಿತನ್ನೇ ಬಯಸುತ್ತಿರುವವರು)

೪೧. ವಿಗತೇಚ್ಛಾ ಭಯಕ್ರೋಧಃ (೫, ೨೮)

(ಬಯಕೆ, ಭಯ, ಸಿಟ್ಟುಗಳನ್ನು ಬಿಟ್ಟವರು)

೪೨. ಉದ್ಧರೇದಾತ್ಮನಾತ್ಮಾನಂ (೬, ೫)

(ತನ್ನನ್ನು ತಾನೇ ಮೇಲೆತ್ತಿಕೊಳ್ಳಬೇಕು)

೪೩. ಸಮಲೋಷ್ಟಾಶ್ಮಕಾಂಚನಃ (೬, ೮)

(ಮಣ್ಣಿನ ಹೆಂಟೆ, ಕಲ್ಲಿನ ಚೂರು, ಚಿನ್ನದ ಗಟ್ಟಿ ಎಲ್ಲವನ್ನು ಸಮನಾಗಿ ಕಾಣುವವನು)

೪೪. ಸಮಬುದ್ಧಿರ್ವಿಶಿಷ್ಯತೇ (೬, ೯)

(ಎಲ್ಲದರಲ್ಲೂ ಒಂದೇ ಬುದ್ಧಿ, ಸಮತಾಬುದ್ಧಿ, ಇರುವುದು ಹೆಚ್ಚು)

೪೫. ಯುಂಜ್ಯಾದ್ಯೋಗಮಾತ್ಮವಿಶುದ್ಧಯೇ (೬, ೧೨)

(ತನ್ನ ಒಡಲನ್ನು ಶುದ್ಧಿಗೊಳಿಸಿಕೊಳ್ಳಲೆಂದು ಯೋಗದಲ್ಲಿ ತೊಡಗಬೇಕು)

೪೬. ಯೋಗೋ ಭವತಿ ದುಃಖಹಾ (೬, ೧೭)

(ಯೋಗವು ದುಃಖವನ್ನು ದೂರ ಅಟ್ಟುತ್ತದೆ)

೪೭. ಸರ್ವತ್ರ ಸಮದರ್ಶನಃ (೬, ೨೯)

(ಎಲ್ಲೆಡೆಯೂ ಸಮಾನವಾದ ನೋಟವುಳ್ಳವನು)

೪೮. ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ (೬, ೩೨)

(ತನ್ನಂತೆಯೇ ಎಲ್ಲರೂ ಎಂದುಕೊಂಡು ಎಲ್ಲೆಲ್ಲಿಯೂ ಸಮದರ್ಶಿ-ಯಾಗಿರುವವನು)

೪೯. ಚಂಚಲಂ ಹಿ ಮನಃ ಕೃಷ್ಣ (೬, ೩೪)

(ಮನಸ್ಸು ಹರಿದಾಡುವ ಸ್ವಭಾವವುಳ್ಳದ್ದು, ಒಂದೆಡೆ ನಿಲ್ಲುವಂಥದಲ್ಲ)

೫೦. ನ ಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂ ತಾತ ಗಚ್ಛತಿ (೬, ೪೦)

(ಒಳ್ಳೆಯದನ್ನು ಮಾಡಿದವನು ಯಾವನೂ ಕೆಡಕನ್ನು ಪಡೆದುಕೊಳ್ಳುವುದಿಲ್ಲ)

೫೧. ಸೂತ್ರೇ ಮಣಿಗಣಾ ಇವ (೭, ೭)

(ದಾರದಲ್ಲಿ ಪೋಣಿಸಿದ ಹಲವು ಮಣಿಗಳಂತೆ)

೫೨. ಮಾಮನುಸ್ಮರ ಯುಧ್ಯ ಚ (೮, ೭)

(ಎಲ್ಲಕಾಲಗಳಲ್ಲೂ ಪರಮಾತ್ಮನನ್ನು ನೆನೆದುಕೊಂಡು ನಿನ್ನ ಕರ್ತವ್ಯವನ್ನು ಮಾಡು)

೫೩. ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ (೯, ೪)

(ಇಡೀ ಜಗತ್ತೆಲ್ಲ ಅವ್ಯಕ್ತನಾದ ಪರಮಾತ್ಮನಿಂದಲೇ ವ್ಯಾಪಿಸಲ್ಪಟ್ಟಿದೆ)

೫೪. ಉದಾಸೀನವದಾಸೀನಂ (೯, ೯)

(ಯಾವುದರಲ್ಲೂ ರಾಗದ್ವೇಷಗಳಿಲ್ಲದೆ ಮಧ್ಯಸ್ಥಭಾವದಿಂದ ಇರುವವನು)

೫೫. ಯೋಗಕ್ಷೇಮಂ ವಹಾಮ್ಯಹಂ (೯, ೨೨)

(ಭಕ್ತರ ಯೋಗಕ್ಷೇಮದ ಹೊಣೆಯನ್ನು ಪರಮಾತ್ಮನು ಹೊರುವನು)

೫೬. ಪತ್ರಂ, ಪುಷ್ಪಂ, ಫಲಂ, ತೋಯಂ (೯, ೨೬)

(ಭಕ್ತರು ಎಲೆ, ಹೂ, ಹಣ್ಣು, ನೀರು ಏನನ್ನು ಕೊಟ್ಟರೂ ಪರಮಾತ್ಮನು ಸಂತೋಷದಿಂದ ಸ್ವೀಕರಿಸುವನು)

೫೭. ಕುರುಷ್ವಮದರ್ಪಣಂ

(ಮಾಡುವ ಕೆಲಸಗಳನ್ನು ಪರಮಾತ್ಮನಿಗೆ ಅರ್ಪಿಸಿಬಿಟ್ಟು ನಿರಾತಂಕದಿಂದಿರು)

೫೮. ಸಮೋಽಹಂ ಸರ್ವಭೂತೇಷು (೯, ೨೯)

(ಎಲ್ಲ ಪ್ರಾಣಿಗಳಲ್ಲೂ ಪರಮಾತ್ಮನು ಸಮಾನನಾಗಿಯೆ ಇರುವನು)

೫೯. ನ ಮೇ ಭಕ್ತಃ ಪ್ರಣಶ್ಯತಿ (೯, ೩೧)

(ಭಕ್ತರಿಗೆ ಎಂದೂ ಯಾವ ಕೇಡೂ ಒದಗಲಾರದು)

೬೦. ಮನ್ಮನಾ ಭವ ಮದ್ಭಕ್ತಃ (೯, ೩೪)

(ಪರಮಾತ್ಮನಲ್ಲೇ ಮನಸ್ಸನ್ನಿಡಬೇಕು; ಪರಮಾತ್ಮನು ಬುದ್ಧಿಯೋಗವನ್ನು ನೀಡುವನು)

೬೧. ದದಾಮಿ ಬುದ್ಧಿಯೋಗಂ ತೇ (೧೦, ೧೦)

(ಭಕ್ತನಲ್ಲಿ ಪ್ರಸನ್ನನಾದರೆ ಅವನಿಗೆ ಪರಮಾತ್ಮನು ಬುದ್ಧಿಯೋಗವನ್ನು ನೀಡುವನು)

೬೨. ಯಜ್ಞಾನಾಂ ಜಪಯಜ್ಞೋಽಸ್ಮಿ (೧೦, ೨೫)

(ಬಗೆಬಗೆಯ ಯಜ್ಞಗಳಲ್ಲಿ ಪರಮಾತ್ಮನು ಜಪಯಜ್ಞರೂಪವಾಗಿರುವನು)

೬೩. ಅಧ್ಯಾತ್ಮವಿದ್ಯಾ ವಿದ್ಯಾನಾಂ (೧೦, ೩೨)

(ವಿದ್ಯೆಗಳಲ್ಲೆಲ್ಲ ಅಧ್ಯಾತ್ಮವಿದ್ಯೆ ಶ್ರೇಷ್ಠವಾದುದು)

೬೪. ನಿಮಿತ್ತಮಾತ್ರಂ ಭವ ಸವ್ಯಸಾಚಿನ್ (೧೧, ೩೩)

(ನೆಪಮಾತ್ರಕ್ಕೆ ನೀನಾಗು, ಎಲ್ಲ ಆಗುವುದೂ ಪರಮಾತ್ಮನಿಂದಲೇ)

೬೫. ಸಮಃ ಸಂಗವಿವರ್ಜಿತಃ (೧೨, ೧೮)

(ಸರ್ವವನ್ನೂ, ಸರ್ವರನ್ನೂ ಸಮನಾಗಿ ಕಂಡುಕೊಂಡು, ಅಭಿಮಾನ ಫಲಸಂಗಗಳಿರದೆ)

೬೬. ದೇಹೇಽಸ್ಮಿನ್ ಪುರುಷಃ ಪರಃ (೧೩, ೨೩)

(ಈ ಶರೀರದಲ್ಲಿ ಆತ್ಮನೇ ಹೆಚ್ಚಿನವನು, ಬೇರೆಯವನು)

೬೭. ನ ಕರೋತಿ ನ ಲಿಪ್ಯತೇ (೧೩, ೨೩)

(ಮಾಡುವುದೂ ಇಲ್ಲ, ಮಾಡಿದ್ದರಿಂದ ಅಂಟಿಕೊಳ್ಳುವುದೂ ಇಲ್ಲ)

೬೮. ಅಧೋ ಗಚ್ಛಂತಿ ತಾಮಸಾಃ (೧೪, ೧೮)

(ತಾಮಸ ಸ್ವಭಾವದವರು ಕೆಳಗಿನ ನೆಲೆಗಳಿಗೆ ಸಾಗುವರು)

೬೯. ಕರ್ಮಾನುಬಂಧೀನಿ ಮನುಷ್ಯಲೋಕೇ (೧೫, ೨)

(ಮನುಷ್ಯರ ವ್ಯವಹಾರದಲ್ಲಿ ಕರ್ಮಕ್ಕೆ ಕಟ್ಟುಬಿದ್ದ ವಿವರಗಳೇ ಹೆಚ್ಚು)

೭೦. ಪಶ್ಯಂತಿ ಜ್ಞಾನಚಕ್ಷುಷಃ (೧೫, ೧೦)

(ತಿಳಿವಳಿಕೆಯ ಕಣ್ಣುಗಳಿದ್ದವರು ಮಟ್ಟಿಗೆ ಕಾಣುತ್ತಾರೆ)

೭೧. ನೈನಂ ಪಶ್ಯಂತ್ಯಚೇತಸಃ (೧೫, ೧೧)

(ಪರಮಾತ್ಮನನ್ನು ಬುದ್ಧಿಯಿಲ್ಲದಿದ್ದವರು ಕಾಣಲಾರರು)

೭೨. ವೈದೈಶ್ಚ ಸರ್ವೈರಹಮೇವ ವೇದ್ಯಃ (೧೫, ೧೫)

(ಎಲ್ಲ ವೇದಗಳಿಂದಲೂ ತಿಳಿಯಲ್ಪಡಬೇಕಾದವನು ಪರಮಾತ್ಮನೊಬ್ಬನೇ)

೭೩. ದೈವೀ ಸಂಪದ್ವಿಮೋಕ್ಷಾಯ ನಿಬಂಧಾಯಾಽಸುರೀ ಮತಾ (೧೬, ೫)

(ದೈವೀಸಂಪತ್ತಿದ್ದರೆ ಮುಕ್ತಿಗೆ ಕಾರಣವಾಗುವುದು; ಆಸುರೀ ಸಂಪತ್ತಿನಿಂದ ಬಂಧನವೇ)

೭೪. ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ (೧೬, ೨೪)

(ಮಾಡಬೇಕಾದುದರಲ್ಲಿ ಬಿಡಬೇಕಾದುದರಲ್ಲಿ ಶಾಸ್ತ್ರವೇ ನಮಗೆ ಪ್ರಮಾಣ)

೭೫. ಸತ್ತ್ವಾನುರೂಪಾ ಸರ್ವಸ್ಯ ಶ್ರದ್ಧಾ (೧೭, ೩)

(ಅವರವರ ಮನಸ್ಸಿಗನುಗುಣವಾಗಿ ಅವರವರ ಶ್ರದ್ಧೆ)

೭೬. ಯೋ ಯಚ್ಛ್ರದ್ಧಃ ಸ ಏವ ಸಃ (೧೭, ೧೫)

(ಯಾರಿಗೆ ಯಾವ ಶ್ರದ್ಧೆಯೋ ಅದರಂತೆಯೇ ಅವನು)

೭೭. ಅನುದ್ವೇಗಕರಂ ವಾಕ್ಯಂ (೧೭, ೧೫)

(ಬೇರೆಯವರಿಗೆ ಉದ್ವೇಗವನ್ನುಂಟುಮಾಡದೆ ಇರುವಂತೆ ಮಾತನಾಡಬೇಕು)

೭೮. ಓಂ ತತ್ಸದಿತಿ ನಿರ್ದೇಶೋ ಬ್ರಹ್ಮಣಃ (೧೭, ೨೩)

(ಓಂ ತತ್‌ಸತ್ ಎಂಬ ಮೂರು ಮಾತುಗಳು ಬ್ರಹ್ಮನನ್ನು ತಿಳಿಸುತ್ತವೆ)

೭೯. ಯಜ್ಞದಾನತಪಃ ಕರ್ಮ ನ ತ್ಯಾಜ್ಯಂ (೧೮, ೫)

(ಯಜ್ಞ, ದಾನ, ತಪಸ್ಸು ಇವನ್ನು ಎಂದಿಗೂ ಬಿಡಬಾರದು)

೮೦. ಯಸ್ತು ಕರ್ಮಫಲತ್ಯಾಗೀ ಸ ತ್ಯಾಗೀತ್ಯಭಿಧೀಯತೇ (೧೮, ೧೧)

(ಕೆಲಸವನ್ನು ಮಾಡಿ ಅದರ ಫಲದ ಚಿಂತೆಯನ್ನು ಬಿಟ್ಟವನೇ ದಿಟವಾದ ತ್ಯಾಗಿ, ಎಂದರೆ ಕೆಲಸವನ್ನೇ ಕೈಬಿಟ್ಟ ಜ್ಞಾನಿ)

೮೧. ಸ್ವೇ ಸ್ವೇ ಕರ್ಮಣ್ಯಭಿರತಃ (೧೮, ೪೫)

(ಜನರು ತಮ್ಮ ತಮ್ಮ ಕರ್ತವ್ಯಕರ್ಮಗಳಲ್ಲಿ ತೊಡಗಿರಬೇಕು)

೮೨. ಸ್ವಕರ್ಮಣಾ ತಮಭ್ಯರ್ಚ್ಯ (೧೮, ೪೬)

(ತಾವು ಮಾಡುವ ಕರ್ಮಗಳಿಂದಲೇ ಭಗವಂತನ ಪೂಜೆಯನ್ನು ಮಾಡುವವರು ಜ್ಞಾನಿಗಳು)

೮೩. ಶ್ರೇಯಾನ್ ಸ್ವಧರ್ಮಃ (೧೮, ೪೭)

(ಸ್ವಧರ್ಮವೇ ನಮಗೆ ಒಳಿತನ್ನುಂಟುಮಾಡುವುದು)

೮೪. ಸಮಃ ಸರ್ವೇಷು ಭೂತೇಷು (೧೮, ೫೪)

(ಎಲ್ಲ ಜೀವಿಗಳಲ್ಲೂ ಸಮನಾಗಿದ್ದು ಕೊಂಡವನು)

೮೫. ಪ್ರಕೃತಿಸ್ತ್ವಾಂ ನಿಯೋಕ್ಷ್ಯತಿ (೧೮, ೫೯)

(ಪ್ರಕೃತಿಯೇ ಎಲ್ಲರನ್ನೂ ನಿಯೋಜಿಸುವುದು)

೮೬. ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ (೧೮, ೬೧)

(ಪರಮಾತ್ಮನು ಎಲ್ಲ ಪ್ರಾಣಿಗಳ ಹೃದಯದಲ್ಲಿರುವನು)

೮೭. ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ (೧೮, ೬೬)

(ಎಲ್ಲ ಧರ್ಮಗಳನ್ನೂ ಬಿಟ್ಟು ಪರಮಾತ್ಮನೊಬ್ಬನಲ್ಲಿ ಆಸರೆಯನ್ನು ಪಡೆದುಕೋ)

ಅನುಬಂಧ ನಾಲ್ಕು

ಬಾಲಿದ್ವೀಪದಲ್ಲಿ ಗೀತಾಪಾಠ

(ಇಂಡೋನೇಶಿಯ ಗಣರಾಜ್ಯಕ್ಕೆ ಸೇರಿರುವ ಬಾಲಿದ್ವೀಪವು ಭಾರತೀಯ ಸಂಸ್ಕೃತಿಯ ಸಂಪರ್ಕವನ್ನು ಕ್ರಿಸ್ತಾಬ್ದ ಮೊದಲ ಶತಕಗಳಲ್ಲಿಯೇ ಪಡೆದುಕೊಂಡಿತು. ಇದರ ನೆರೆಯಲ್ಲಿಯೆ ಇರುವ ಜಾವಾದ್ವೀಪದಲ್ಲಿಯೂ ಭಾರತೀಯ ಸಂಸ್ಕೃತಿ ಹರಡಿಕೊಂಡಿತು. ಇವೆರಡೂ ದ್ವೀಪಗಳಲ್ಲಿ ಬಳಕೆಯಲ್ಲಿದ್ದ ಭಗವದ್ಗೀತೆಯ ಪಾಠಗಳು ನಮಗಿಂದು ದೊರಕುತ್ತವೆ. ಜಾವಾದ್ವೀಪದಲ್ಲಿ ಸಂಸ್ಕೃತ ಮೂಲದೊಂದಿಗೆ ಜಾವಾನೀ ಭಾಷೆಯ ಅನುವಾದವೂ ಇದೆ. ಮೂಲ ಸಂಸ್ಕೃತ ಪಾಠದಲ್ಲಿ ೮೧ ಶ್ಲೋಕಗಳೂ, ಜಾವಾನೀ ಭಾಷೆಯಲ್ಲಿ ೫೬ ಪದ್ಯಗಳೂ ಇವೆ. ಇವನ್ನು ಜೆ.ಹೋಂಡಾ ಎಂಬ ವಿದ್ವಾಂಸರು ೧೯೫೫ರಲ್ಲಿ ಕಂಡುಹಿಡಿದು ಪ್ರಕಟಿಸಿದರು. ಬಾಲಿದ್ವೀಪದಲ್ಲಿಯಾದರೋ ಸಂಸ್ಕೃತ ಮೂಲಶ್ಲೋಕಗಳನ್ನಷ್ಟೆ ಉಳಿಸಿಕೊಂಡಿದ್ದಾರೆ. ಪುಣೆಯ ಎನ್.ಜಿ.ಸರದೇಸಾಯರು ಇದನ್ನು ಪತ್ತೆಮಾಡಿ ಪ್ರಕಟಿಸಿದರು ಈ ಗೀತಾಪಾಠದಲ್ಲಿ ೮೭ ಶ್ಲೋಕಗಳು. ನಮ್ಮಲ್ಲಿ ಬಳಕೆಯಲ್ಲಿರುವ ಗೀತಾಧ್ಯಾಯಗಳಲ್ಲಿ ೧೨, ೧೫, ೧೬, ೧೭ನೇ ಅಧ್ಯಾಯಗಳನ್ನು ಇಲ್ಲಿ ಪೂರ್ಣವಾಗಿ ಕೈಬಿಟ್ಟಿರುವುದು ಕಾಣುತ್ತದೆ. ಉಳಿದ ಅಧ್ಯಾಯಗಳಿಂದಲೂ ಕಡಮೆ ಸಂಖ್ಯೆಯ ಶ್ಲೋಕಗಳು ಇಲ್ಲಿ ಸೇರಿವೆ. ಈ ಗೀತಾಪಾಠವೇ ಮೂಲಪಾಠ ಇದ್ದೀತೋ ಎಂಬ ಸಂಶಯಕ್ಕೆ ಅವಕಾಶ ಇದೆ. ಈ ಪಾಠವನ್ನು ಮುಂದೆಕೊಡಲಾಗಿದೆ. ಇದರಲ್ಲಿ ಅಧ್ಯಾಯಗಳ ವಿಭಜನೆಯಿರದು. ಅಧ್ಯಯನ ಸೌಕರ್ಯಕ್ಕಾಗಿ ನಾನು ಶ್ಲೋಕಗಳ ಮುಂದೆ ಕಂಸಗಳಲ್ಲಿ ನಮ್ಮ ಪಾಠದ ಅಧ್ಯಾಯ-ಶ್ಲೋಕಗಳನ್ನು ನಿರ್ದೇಶಿಸಿದ್ದೇನೆ.)

ಅರ್ಜುನ ಉವಾಚ –

೧. **ದೃಷ್ಟ್ವೇಮಂ ಸ್ವಜನಂ ಕೃಷ್ಣ ಯುಯುತ್ಸುಂ ಸಮುಪಸ್ಥಿತಂ ॥** (೧, ೨೮ ಪೂರ್ವಾರ್ಧ)

೨. **ನ ಚ ಶ್ರೇಯೋಽನುಪಶ್ಯಾಮಿ ಹತ್ವಾ ಸ್ವಜನಮಾಹವೇ ।**

೩. **ನ ಕಾಂಕ್ಷೇ ವಿಜಯಂ ಕೃಷ್ಣ ನ ಚ ರಾಜ್ಯಂ ಸುಖಾನಿ ಚ ॥** (೧, ೩೧-೩೨)

೪. **ಯದಿ ಮಾಮಪ್ರತೀಕಾರಂ ಅಶಸ್ತ್ರಂ ಶಸ್ತ್ರಪಾಣಯಃ ।**
ಧಾರ್ತರಾಷ್ಟ್ರಾ ರಣೇ ಹನ್ಯುಃ ತನ್ಮೇ ಕ್ಷೇಮತರಂ ಭವೇತ್ ॥ (೧, ೪೬)

ಭಗವಾನುವಾಚ --

೫. ಕ್ಲೈಬ್ಯಂ ಮಾ ಸ್ಮ ಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೇ ।
ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ॥ (೨, ೦೩)

೬. ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ ।
ಗತಾಸೂನಗತಾಸೂಂಶ್ಚ ನಾನುಶೋಚಂತಿ ಪಂಡಿತಾಃ ॥ (೨, ೧೧)

೭. ದೇಹಿನೋಽಸ್ಮಿನ್ಯಥಾ ದೇಹೇ ಕೌಮಾರಂ ಯೌವನಂ ಜರಾ ।
ತಥಾ ದೇಹಾಂತರಪ್ರಾಪ್ತಿರ್ಧೀರಸ್ತತ್ರ ನ ಮುಹ್ಯತಿ ॥ (೨, ೧೩)

೮. ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ।
ಉಭಯೋರಪಿ ದೃಷ್ಟೋಽಂತಸ್ತ್ವನಯೋಸ್ತತ್ತ್ವದರ್ಶಿಭಿಃ ॥ (೨, ೧೬)

೯. ಅಂತವಂತ ಇಮೇ ದೇಹಾ ನಿತ್ಯಸ್ಯೋಕ್ತಾಃ ಶರೀರಿಣಃ ।
ಅನಾಶಿನೋಽಪ್ರಮೇಯಸ್ಯ ತಸ್ಮಾದ್ಯುಧ್ಯಸ್ವ ಭಾರತ ॥ (೨, ೧೮)

೧೦. ಯ ಏನಂ ವೇತ್ತಿ ಹಂತಾರಂ ಯಶ್ಚೈನಂ ಮನ್ಯತೇ ಹತಂ ।
ಉಭೌ ತೌ ನ ವಿಜಾನೀತೋ ನಾಯಂ ಹಂತಿ ನ ಹನ್ಯತೇ ॥ (೨, ೧೯)

೧೧. ಸ್ವಧರ್ಮಮಪಿ ಚಾವೇಕ್ಷ್ಯ ನ ವಿಕಂಪಿತುಮರ್ಹಸಿ ।
ಧರ್ಮ್ಯಾದ್ಧಿ ಯುದ್ಧಾ ಚ್ಛ್ರೇಯೋಽನ್ಯತ್ ಕ್ಷತ್ರಿಯಸ್ಯ ನ ವಿದ್ಯತೇ ॥ (೨, ೩೧)

೧೨. ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾ ವಾ ಭೋಕ್ಷ್ಯಸೇ ಮಹೀಂ ।
ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತನಿಶ್ಚಯಃ ॥ (೨, ೩೭)

೧೩. ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।
ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಽಸ್ತ್ವಕರ್ಮಣಿ ॥ (೨, ೪೭)

೧೪. ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ॥ (೨, ೪೮ ಉತ್ತರಾರ್ಧ)

೧೫. ಶ್ರುತಿವಿಪ್ರತಿಪನ್ನಾ ತೇ ಯದಾ ಸ್ಥಾಸ್ಯತಿ ನಿಶ್ಚಲಾ ।
ಸಮಾಧಾವಚಲಾ ಬುದ್ಧಿಸ್ತದಾ ಯೋಗಮವಾಪ್ಸ್ಯಸಿ ॥ (೨, ೫೩)

೧೬. ಪ್ರಜಹಾತಿ ಯದಾ ಕಾಮಾನ್ ಸರ್ವಾನ್ ಪಾರ್ಥ ಮನೋಗತಾನ್ ।
ಆತ್ಮನ್ಯೇವಾತ್ಮನಾ ತುಷ್ಟಃ ಸ್ಥಿತಪ್ರಜ್ಞಸ್ತದೋಚ್ಯತೇ ॥ (೨, ೫೫)

೧೭. ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ ।
ವೀತರಾಗಭಯಕ್ರೋಧಃ ಸ್ಥಿತಧೀರ್ಮುನಿರುಚ್ಯತೇ ॥ (೨, ೫೬)

೧೮. ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ ।
ರಸವರ್ಜಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ ॥ (೨, ೫೭)

೧೯. ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ ।
ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ॥ (೨, ೬೯)

೨೦. ದೇವಾನ್ ಭಾವಯತಾನೇನ ತೇ ದೇವಾ ಭಾವಯಂತು ವಃ ।
ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ ॥ (೩, ೧೧)

೨೧. ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ ।
ಭುಂಜತೇ ತೇ ತ್ವಘಂ ಪಾಪಾ ಯೇ ಪಚಂತ್ಯಾತ್ಮಕಾರಣಾತ್ ॥ (೩, ೧೩)

೨೨. ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ।
ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥ (೩, ೩೫)

೨೩. ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವ ಚಾರ್ಜುನ ।
ತಾನ್ಯಹಂ ವೇದ ಸರ್ವಾಣಿ ನ ತ್ವಂ ವೇತ್ಥ ಪರಂತಪ ॥ (೪, ೦೫)

೨೪. ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥ (೪, ೦೭)

೨೫. ಜನ್ಮ ಕರ್ಮ ಚ ಮೇ ದಿವ್ಯಮೇವಂ ಯೋ ವೇತ್ತಿ ತತ್ತ್ವತಃ ।
ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ ॥ (೪, ೦೯)

೨೬. ಕರ್ಮಣ್ಯಕರ್ಮ ಯಃ ಪಶ್ಯೇದಕರ್ಮಣಿ ಚ ಕರ್ಮ ಯಃ ।
ಸ ಬುದ್ಧಿಮಾನ್ ಮನುಷ್ಯೇಷು ಸ ಯುಕ್ತಃ ಕೃತ್ಸ್ನಕರ್ಮಕೃತ್ ॥ (೪, ೧೮)

೨೭. ಯದೃಚ್ಛಾಲಾಭಸಂತುಷ್ಟೋ ದ್ವಂದ್ವಾತೀತೋ ವಿಮತ್ಸರಃ ।
ಸಮಃ ಸಿದ್ಧಾವಸಿದ್ಧೌ ಚ ಕೃತ್ವಾಪಿ ನ ನಿಬಧ್ಯತೇ ॥ (೪, ೨೨)

೨೮. ದ್ರವ್ಯಯಜ್ಞಾಸ್ತಪೋಯಜ್ಞಾ ಯೋಗಯಜ್ಞಾಸ್ತಥಾಪರೇ ।
ಸ್ವಾಧ್ಯಾಯಜ್ಞಾನಯಜ್ಞಾಶ್ಚ ಯತಯಃ ಸಂಶಿತವ್ರತಾಃ ॥ (೪, ೨೮)

೨೯. ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ । (೪, ೩೩ ಉತ್ತರಾರ್ಧ)

೩೦. ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ॥ (೪, ೩೪ ಪೂರ್ವಾರ್ಧ)

೩೧. ಸಂನ್ಯಾಸಃ ಕರ್ಮಯೋಗಶ್ಚ ನಿಃಶ್ರೇಯಸಕರಾವುಭೌ ।
ತಯೋಸ್ತು ಕರ್ಮಸಂನ್ಯಾಸಾತ್ ಕರ್ಮಯೋಗೋ ವಿಶಿಷ್ಯತೇ ॥ (೫, ೦೨)

೩೨. ಯೋಗಯುಕ್ತೋ ಮುನಿರ್ಬ್ರಹ್ಮ ನ ಚಿರೇಣಾಧಿಗಚ್ಛತಿ । (೫, ೬ ಉತ್ತರಾರ್ಧ)

೩೩. ಸರ್ವಭೂತಾತ್ಮಭೂತಾತ್ಮಾ ಕುರ್ವನ್ನಪಿ ನ ಲಿಪ್ಯತೇ ॥ (೫, ೭ ಉತ್ತರಾರ್ಧ)

೩೪. ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ ।
ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ ॥ (೬, ೫)

೩೫. ಏಕಾಕೀ ಯತಚಿತ್ತಾತ್ಮಾ ನಿರಾಶೀರಪರಿಗ್ರಹಃ ॥ (೬, ೧೦ ಉತ್ತರಾರ್ಧ)

೩೬. ಸಮಂ ಕಾಯಶಿರೋಗ್ರೀವಂ ಧಾರಯನ್ನಚಲಂ ಸ್ಥಿರಃ ।
ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್ ॥ (೬, ೧೩)

೩೭. ಯಥಾ ದೀಪೋ ನಿವಾತಸ್ಥೋ ನೇಂಗತೇ ಸೋಪಮಾ ಸ್ಮೃತಾ ॥ (೬, ೧೯ ಪೂ.)

೩೮. ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ ।
ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ ॥ (೬, ೩೦)

೩೯. ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋಽರ್ಜುನ ।
ಸುಖಂ ವಾ ಯದಿ ವಾ ದುಃಖಂ ಸ ಯೋಗಿ ಪರಮೋ ಮತಃ ॥ (೬, ೩೨)

೪೦. ಭೂಮಿರಾಪೋಽನಲೋ ವಾಯುಃ ಖಂ ಮನೋ ಬುದ್ಧಿರೇವ ಚ ।
ಅಹಂಕಾರ ಇತೀಯಂ ಮೇ ಭಿನ್ನಾ ಪ್ರಕೃತಿರಷ್ಟಧಾ ॥ (೭, ೪)

೪೧. ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ ॥ (೭, ೬ ಉತ್ತರಾರ್ಧ)

೪೨. ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ ।
ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ॥ (೭, ೭)

೪೩. ರಸೋಽಹಮಪ್ಸು ಕೌಂತೇಯ ಪ್ರಭಾಸ್ಮಿ ಶಶಿಸೂರ್ಯಯೋಃ ।
ಪ್ರಣವಃ ಸರ್ವವೇದೇಷು ಶಬ್ದಃ ಖೇ ಪೌರುಷಂ ನೃಷು ॥ (೭, ೮)

೪೪. ಪುಣ್ಯೋ ಗಂಧಃ ಪೃಥಿವ್ಯಾಂ ಚ ತೇಜಶ್ಚಾಸ್ಮಿ ವಿಭಾವಸೌ ।
ಜೀವನಂ ಸರ್ವಭೂತೇಷು ತಪಶ್ಚಾಸ್ಮಿ ತಪಸ್ವಿಷು ॥ (೭, ೯)

೪೫. ಬುದ್ಧಿರ್ಬುದ್ಧಿಮತಾಮಸ್ಮಿ ತೇಜಸ್ತೇಜಸ್ವಿನಾಮಹಮ್ ॥ (೭, ೧೦ ಉತ್ತರಾರ್ಧ)

೪೬. ಬಲಂ ಬಲವತಾಂ ಚಾಹಂ ಕಾಮರಾಗವಿವರ್ಜಿತಮ್ ॥ (೭, ೧೧ ಪೂರ್ವಾರ್ಧ)

೪೭. ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥ (೭, ೧೬ ಉತ್ತರಾರ್ಧ)

೪೮. ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ ॥ (೭, ೧೯ ಉತ್ತರಾರ್ಧ)

೪೯. ಜರಾಮರಣಮೋಕ್ಷಾಯ ಮಾಮಾಶ್ರಿತ್ಯ ಯತಂತಿ ಯೇ ।
ತೇ ಬ್ರಹ್ಮ ತದ್ವಿದುಃ ಕೃತ್ಸ್ನಮಧ್ಯಾತ್ಮಂ ಕರ್ಮ ಚಾಖಿಲಮ್ ॥ (೭, ೨೯)

೫೦. ಅಂತಕಾಲೇ ಚ ಮಾಮೇವ ಸ್ಮರನ್ ಮುಕ್ತ್ವಾ ಕಲೇವರಮ್ ।
ಯಃ ಪ್ರಯಾತಿ ಸ ಮದ್ಭಾವಂ ಯಾತಿ ನಾಸ್ತ್ಯತ್ರ ಸಂಶಯಃ ॥ (೮, ೫)

೫೧. ತಸ್ಮಾತ್ಸರ್ವೇಷು ಕಾಲೇಷು ಮಾಮನುಸ್ಮರ ಯುಧ್ಯ ಚ ।
ಮಯ್ಯರ್ಪಿತಮನೋಬುದ್ಧಿರ್ಮಾಮೇವೈಷ್ಯಸ್ಯಸಂಶಯಃ ॥ (೮, ೭)

೫೨. ಸರ್ವದ್ವಾರಾಣಿ ಸಂಯಮ್ಯ ಮನೋ ಹೃದಿ ನಿರುಧ್ಯ ಚ ।
ಮೂರ್ಧ್ನ್ಯಾಧಾಯಾತ್ಮನಃ ಪ್ರಾಣಮಾಸ್ಥಿತೋ ಯೋಗಧಾರಣಮ್ ॥ (೮, ೧೨)

೫೩. ಇದಂ ತಂ ತೇ ಗುಹ್ಯತಮಂ ಪ್ರವಕ್ಷ್ಯಾಮ್ಯನಸೂಯವೇ ।
ಜ್ಞಾನಂ ವಿಜ್ಞಾನಸಹಿತಂ ಯಜ್‌ಜ್ಞಾತ್ವಾ ಮೋಕ್ಷ್ಯಸೇಽಶುಭಾತ್ ॥ (೯, ೧)

೫೪. ಅಹಂ ಕ್ರತುರಹಂ ಯಜ್ಞಃ ಸ್ವಧಾಹಮಹಮೌಷಧಮ್ ।
ಮಂತ್ರೋಽಹಮಹಮೇವಾಜ್ಯಮಹಮಗ್ನಿರಹಂ ಹುತಮ್ ॥ (೯, ೧೬)

೫೫. ವೇದ್ಯಂ ಪವಿತ್ರಮೋಂಕಾರ ಋಕ್ಸಾಮ ಯಜುರೇವ ಚ ॥ (೯, ೧೭ ಉತ್ತರಾರ್ಧ)

೫೬. ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಂ ॥ (೯. ೨೭)

೫೭. ಆದಿತ್ಯಾನಾಮಹಂ ವಿಷ್ಣುರ್ಜ್ಯೋತಿಷಾಮಹಮಂಶುಮಾನ್ ।
(ನಮ್ಮ ಪಾಠ, *ಜ್ಯೋತಿಷಾಂ ರವಿರಂಶುಮಾನ್*)
ಮರೀಚಿರ್ಮರುತಾಮಸ್ಮಿ ನಕ್ಷತ್ರಾಣಾಮಹಂ ಶಶೀ ॥ (೧೦, ೨೧)

೫೮. ರುದ್ರಾಣಾಂ ಶಂಕರಶ್ಚಾಸ್ಮಿ ವಿತ್ತೇಶೋ ಯಕ್ಷರಕ್ಷಸಾಮ್ ।
ವಸೂನಾಂ ಪಾವಕಶ್ಚಾಸ್ಮಿ ಮೇರುಃ ಶಿಖರಿಣಾಮಹಮ್ ॥ (೧೦, ೨೩)

೫೯. ಮಹರ್ಷೀಣಾಂ ಭೃಗುರಹಂ ಗಿರಾಮಸ್ಮ್ಯೇಕಮಕ್ಷರಮ್ ॥(೧೦, ೨೫ ಪೂರ್ವಾರ್ಧ)

೬೦. ಅಶ್ವತ್ಥಃ ಸರ್ವವೃಕ್ಷಾಣಾಂ ದೇವರ್ಷೀಣಾಂ ಚ ನಾರದಃ ।
ಗಂಧರ್ವಾಣಾಂ ಚಿತ್ರರಥಃ ಸಿದ್ಧಾನಾಂ ಕಪಿಲೋ ಮುನಿಃ ॥ (೧೦, ೨೬)

೬೧. ಉಚ್ಚೈಃಶ್ರವಸಮಶ್ವಾನಾಂ ವಿದ್ಧಿ ಮಾಮಮೃತೋದ್ಭವಂ ।
ಐರಾವತಂ ಗಜೇಂದ್ರಾಣಾಂ ನರಾಣಾಂ ಚ ನರಾಧಿಪಂ ॥ (೧೦, ೨೭)

೬೨. ಆಯುಧಾನಾಮಹಂ ವಜ್ರಂ ಧೇನೂನಾಮಸ್ಮಿ ಕಾಮಧುಕ್ ।
ಪ್ರಜನಶ್ಚಾಸ್ಮಿ ಕಂದರ್ಪಃ ಸರ್ಪಾಣಾಮಸ್ಮಿ ವಾಸುಕೀ ॥ (೧೦, ೨೮)

೬೩. ಅನಂತಶ್ಚಾಸ್ಮಿ ನಾಗಾನಾಂ ವರುಣೋ ಯಾದಸಾಮಹಂ ।
ಪಿತೃಣಾಮರ್ಯಮಾ ಚಾಸ್ಮಿ ಯಮಃ ಸಂಮಯಮತಾಮಹಂ ॥ (೧೦, ೨೯)

೬೪. ಪ್ರಹ್ಲಾದಶ್ಚಾಸ್ಮಿ ದೈತ್ಯಾನಾಂ ಕಾಲಃ ಕಲಯತಾಮಹಂ ।
ಮೃಗಾಣಾಂ ಚ ಮೃಗೇಂದ್ರೋಽಹಂ ವೈನತೇಯಶ್ಚ ಪಕ್ಷಿಣಾಂ ॥ (೧೦, ೩೦)

೬೫. ಪವನಃ ಪವತಾಮಸ್ಮಿ ರಾಮಃ ಶಸ್ತ್ರಭೃತಾಮಹಂ ॥ (೧೦, ೩೧ ಪೂರ್ವಾರ್ಧ)

೬೬. ಅಕ್ಷರಾಣಾಮಕಾರೋಽಸ್ಮಿ ದ್ವಂದ್ವಃ ಸಾಮಾಸಿಕಸ್ಯ ಚ ॥ (೧೦, ೩೩ ಪೂರ್ವಾರ್ಧ)

೬೭. ಮಾಸಾನಾಂ ಮಾರ್ಗಶೀರ್ಷೋಽಹಂ ಋತೂನಾಂ ಕುಸುಮಾಕರಃ ॥
(೧೦, ೩೫ ಉತ್ತರಾರ್ಧ)

೬೮. ವೃಷ್ಣೀನಾಂ ವಾಸುದೇವೋಽಸ್ಮಿ ಪಾಂಡವಾನಾಂ ಧನಂಜಯಃ ।
ಮುನೀನಾಮಪ್ಯಹಂ ವ್ಯಾಸಃ ಕವೀನಾಮುಶನಾ ಕವಿಃ ॥ (೧೦, ೩೭)

೬೯. ನಾಂತೋಽಸ್ತಿ ಮಮ ದಿವ್ಯಾನಾಂ ವಿಭೂತೀನಾಂ ಪರಂತಪ ॥ (೧೦, ೪೦ ಪೂ)

೭೦. ದಿವ್ಯಂ ದದಾಮಿ ತೇ ಚಕ್ಷುಃ ಪಶ್ಯ ಮೇ ಯೋಗಮೈಶ್ವರಂ ॥(೧೧, ೮ ಉತ್ತರಾರ್ಧ)

ಸಂಜಯ ಉವಾಚ --

೭೧. ಅನೇಕ ವಕ್ತ್ರನಯನಮನೇಕಾದ್ಭುತದರ್ಶನಂ ।
ಅನೇಕ ದಿವ್ಯಾಭರಣಂ ದಿವ್ಯಾನೇಕೋದ್ಯತಾಯುಧಂ ॥ (೧೧, ೧೦)

ಅರ್ಜುನ ಉವಾಚ --

೭೨. ಯಥಾ ನದೀನಾಂ ಬಹವೋಽಂಬುವೇಗಾಃ
ಸಮುದ್ರಮೇವಾಭಿಮುಖಾ ದ್ರವಂತಿ ।
ತಥಾ ತವಾಮಿ ನರಲೋಕವೀರಾ
ವಿಶಂತಿ ವಕ್ತ್ರಾಣ್ಯಭಿವಿಜ್ವಲಂತಿ ॥ (೧೧, ೨೮)

೭೩. ಯಥಾ ಪ್ರದೀಪ್ತಂ ಜ್ವಲನಂ ಪತಂಗಾ
ವಿಶಂತಿ ನಾಶಾಯ ಸಮೃದ್ಧವೇಗಾಃ ।
ತಥೈವ ನಾಶಾಯ ವಿಶಂತಿ ಲೋಕಾ
ಸ್ತವಾಪಿ ವಕ್ತ್ರಾಣಿ ಸಮೃದ್ಧವೇಗಾಃ ॥ (೧೧, ೨೯)

೭೪. ಆಖ್ಯಾಹಿ ಮೇಕೋ ಭವಾನುಗ್ರರೂಪೋ ॥ (೧೧, ೩೧ ಪೂರ್ವಾರ್ಧಪೂರ್ವಭಾಗ)

ಭಗವಾನುವಾಚ --

೭೫. ಲೋಕಾನ್ ಸಮಾಹರ್ತುಮಿಹ ಪ್ರವೃತ್ತಃ ॥ (೧೧, ೩೨ ಪೂರ್ವಾರ್ಧ ಉತ್ತರಭಾಗ)

ಅರ್ಜುನ ಉವಾಚ --

೭೬. ನಮೋ ನಮಸ್ತೇಸ್ತು ಸಹಸ್ರಕೃತ್ವಃ ॥ (೧೧, ೩೯ ಉತ್ತರಾರ್ಧ ಪೂರ್ವಭಾಗ)

೭೭. ನಮಃ ಪುರಸ್ತಾದಥ ಪೃಷ್ಠತಸ್ತೇ ॥ (೧೧, ೪೦ ಪೂರ್ವಾರ್ಧ ಪೂರ್ವಭಾಗ)

ಭಗವಾನುವಾಚ --

೭೮. ನಾಹಂ ವೇದೈರ್ನ ತಪಸಾ ನ ದಾನೇನ ನ ಚೇಽಜ್ಯಯಾ ।
ಶಕ್ಯ ಏವಂ ವಿಧೋ ದ್ರಷ್ಟುಂ ದೃಷ್ಟವಾನಿನಸಿ ಮಾಂ ಯಥಾ ॥ (೧೧, ೫೩)

೭೯. ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಃ ಸಂಗವರ್ಜಿತಃ ।
ನಿರ್ವೈರಃ ಸರ್ವಭೂತೇಷು ಯಃ ಸ ಮಾಮೇತಿ ಪಾಂಡವ ॥

೮೦. ಯಥಾ ಸರ್ವಗತಂ ಸೌಕ್ಷ್ಮ್ಯಾದಾಕಾಶಂ ನೋಪಲಿಪ್ಯತೇ ।
ಸರ್ವತ್ರಾವಸ್ಥಿತೋ ದೇಹೇ ತಥಾತ್ಮಾ ನೋಪಲಿಪ್ಯತೇ ॥ (೧೩, ೩೨)

೮೧. ಯಥಾ ಪ್ರಕಾಶಯತ್ಯೇಕಃ ಕೃತ್ಸ್ನಂ ಲೋಕಮಿಮಂ ರವಿಃ ।
ಕ್ಷೇತ್ರಂ ಕ್ಷೇತ್ರೀ ತಥಾ ಕೃತ್ಸ್ನಂ ಪ್ರಕಾಶಯತಿ ಭಾರತ ॥ (೧೩, ೩೩)

೮೨. ಸತ್ತ್ವಂ ಸುಖೇ ಸಂಜಯತಿ ರಜಃ ಕರ್ಮಣಿ ಭಾರತ ।
ಜ್ಞಾನಮಾವೃತ್ಯ ತು ತಮಃ ಪ್ರಮಾದೇ ಸಂಜಯತ್ಯುತ ॥ (೧೪, ೦೯)

೮೩. ಊರ್ಧ್ವಂ ಗಚ್ಛಂತಿ ಸತ್ತ್ವಸ್ಥಾ ಮಧ್ಯೇ ತಿಷ್ಠಂತಿ ರಾಜಸಾಃ ।
ಜಘನ್ಯಗುಣವೃತ್ತಿಸ್ಥಾ ಅಧೋ ಗಚ್ಛಂತಿ ತಾಮಸಾಃ ॥ (೧೪, ೧೮)

೮೪. ಸಮದುಃಖಸುಖಃ ಸ್ವಸ್ಥಃ ಸಮಲೋಷ್ಟಾಶ್ಮ ಕಾಂಚನಃ ।
ತುಲ್ಯಪ್ರಿಯಾಪ್ರಿಯೋ ಧೀರಸ್ತುಲ್ಯನಿಂದಾತ್ಮಸಂಸ್ತುತಿಃ ॥ (೧೪, ೨೪)

೮೫. ಮಾನಾಪಮಾನಯೋಸ್ತುಲ್ಯಸ್ತುಲ್ಯೋ ಮಿತ್ರಾರಿಪಕ್ಷಯೋಃ ।
ಸರ್ವಾರಂಭಪರಿತ್ಯಾಗೀ ಗುಣಾತೀತಃ ಸ ಉಚ್ಯತೇ ॥ (೧೪, ೨೫)

೮೬. ಮಾಂ ಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ ।
ಸ ಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ ॥ (೧೪, ೨೬)

೮೭. ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥ (೧೮, ೬೬)

GANDHI CENTRE'S PUBLICATIONS

Human Values in Haridasa Literature	10-00
Human Values in Vachana Literature	15-00
Human Values in Vedas and Upanishats	15-00
Human Values in Tamil and Telugu Literature	15-00
Human Values in Bengalee and Punjabi Literature	15-00
Human Values in Manusmrti and Bhagavadgita	20-00
Human Values in Zoroastrian Religion	20-00
Human Values in Code of Manu and Kautilya	25-00
Human Values in Tibetan Tradition	25-00
Indian Thought on Human Values	20-00
Quotable Quotes of Gandhiji	24-00
Gandhiji's Concept of Value Based living	20-00
Mukundamala ***and*** **Shivanandalahari**	25-00
Subhashita Samputa	35-00
Biotechnology	40-00
Philosophy of Science	50-00
Space and Human Development	50-00
Elements of Nuclear Power	60-00
Nuclear Scientist **- Dr. RAJA RAMANNA:** His Life and Work	50-00
EINSTEIN : His Papers and his Letter	50-00
Indian Astronomy- A Primer	75-00
TRANSITS and OCCULTATIONS in Indian Astronomy	75-00
ECLIPSES in Indian Astronomy	90-00
Indian Mathematics and Astronomy–*Some Landmarks*	200-00
India's Struggle for Freedom	50-00
RAJAJI *in Anecdotes*	50-00
SAROJINI DEVI, *The Nightingale of India*	55-00
MAHATMA, *The Sage of Scientific Age*	60-00
Sparkles and Sprinkles *(Anecdotes of Gandhiji)*	50-00
Nectar of Love *(Anecdotes of Bapuji)*	50-00
Facets of Mahatma Gandhi	50-00
SAMSKRUTI - *A Culture Companion for the Young*	70-00
The Upanishats	60-00
The Veda-Vedanga	60-00
Samskruta Kavya	60-00
Dharmashastra and Arthashastra	60-00
A Handbook for the GITA	70-00
Alankaarashaastra	100-00
SRI KRISHNADEVARAYA: *Monarch of Vijayanagar*	70-00
Ubhaya Bharati *(A Historical Play)*	110-00

Wisdom of the Human Body
Human Rights and Bharatiya Values
A Peep into Eternal Values in Manusmriti
Human Values in Christianity and Islam
Human Values in Ramayana and Mahabharata
Essential Values in Indian Culture for Management
Gandhi's Outstanding Leadership

ಭವನ್ಸ್ ಗಾಂಧೀ ಕೇಂದ್ರದ ಪ್ರಕಟಣೆಗಳು

ವೇದ-ವೇದಾಂಗ	60-00
ಉಪನಿಷತ್ತು	60-00
ಧರ್ಮಶಾಸ್ತ್ರ ಮತ್ತು ಅರ್ಥಶಾಸ್ತ್ರ	60-00
ಗೀತೆಗೊಂದು ಕೈಪಿಡಿ	60-00
ಇತಿಹಾಸ - ಪುರಾಣ	60-00
ಚತುಷ್ಷಷ್ಟಿಕಲೆ	60-00
ಸಂಸ್ಕೃತಕಾವ್ಯ	60-00
ಸಂಸ್ಕೃತ ನಾಟಕ	60-00
ಅಲಂಕಾರಶಾಸ್ತ್ರ	60-00
ವಿಜ್ಞಾನ ಮತ್ತು ತಂತ್ರಜ್ಞಾನ	60-00
ಸಂಸ್ಕೃತಿ *ಪೌರಾತ್ಯ ಹಾಗೂ ಪಾಶ್ಚಾತ್ಯ ಸೂಕ್ತಿಗಳ ಸಂಗ್ರಹ*	70-00
ಸುಭಾಷಿತ ಸಂಪುಟ *(ಸುಭಾಷಿತ ಸಂಗ್ರಹ)*	40-00
ಸರೋಜಿನಿ ದೇವಿ, *ಭಾರತದ ಕೋಗಿಲೆ*	50-00
ವಿನೋಬಾ - *ನೂರು ಮುಖಗಳು*	50-00
ಅಮೋಘನಾಯಕ ಗಾಂಧಿ	100-00
ಬಾಪೂ ಬೀರಿದ ಬೆಳಕು	50-00
ವಿಜ್ಞಾನ ಯುಗದ ಮಹಾಪ್ರಾಜ್ಞ ಮಹಾತ್ಮಾ	50-00
ಮೌಲ್ಯಾಧಾರಿತ ಜೀವನ - ಗಾಂಧೀಜಿಯವರ ಪರಿಕಲ್ಪನೆ	50-00
ಗಾಂಧೀವಾಣಿ *(ಗಾಂಧೀಜಿಯವರ ನುಡಿಮುತ್ತುಗಳು ಸಂಗ್ರಹ)*	20-00
ಗಾಂಧಿ ಹೇಳಿದ್ದೇನು, ನಾವು ಮಾಡಿದ್ದೇನು?	25-00
ಬೆಂಗಳೂರಿನಲ್ಲಿ ಮಹಾತ್ಮಾಗಾಂಧಿ	100-00
ವಚನಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳು	50-00
ಆರ್ಯಭಟ	60-00
ಗಣಿತಶಾಸ್ತ್ರದ ಪ್ರವರ್ತಕರು ಮತ್ತು ಸ್ವಾರಸ್ಯಗಳು	80-00
ಭಾರತೀಯ ಖಗೋಳಶಾಸ್ತ್ರ - *ಒಂದು ಕಿರುಪರಿಚಯ*	60-00

ವೇದಾಂಗ ಜ್ಯೋತಿಷ – *ಲಗಧಮಹರ್ಷಿಯ ಖಗೋಳ ವಿಜ್ಞಾನ*	60–00
ಭಾರತೀಯ ಖಗೋಳವಿಜ್ಞಾನದಲ್ಲಿ, ಗ್ರಹಣಗಳು,	80–00
ಗಣೇಶ ದೈವಜ್ಞನ ಗ್ರಹಗಣಿತ (ಗ್ರಹಲಾಘವಮ್) (HB)	360–00
ಪರಮಾಣುರಾಜ ಡಾ॥ ರಾಜಾ ರಾಮಣ್ಣ	60–00
ನೊಬೆಲ್ ಪುರಸ್ಕೃತ ವಿಜ್ಞಾನಿ, ಡಾ॥ ಸುಬ್ರಹ್ಮಣ್ಯನ್ ಚಂದ್ರಶೇಖರ್	50–00
ಭಗವಾನ್ ಶ್ರೀ ರಮಣಮಹರ್ಷಿ – *ಒಂದು ಕಿರುಪರಿಚಯ*	25–00
ಸರಳ ಭಗವದ್ಗೀತೆ	50–00
ಸುಭಾಷಿತ ಸೂಕ್ತಿಮಾಲಾ *(ಸುಭಾಷಿತ ಸಂಗ್ರಹ)*	60–00
ಭಾರತರತ್ನ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯ	40–00
ಶ್ರೀನಿವಾಸ ರಾಮಾನುಜನ್ – *ವಿಶ್ವವಿಖ್ಯಾತ ಗಣಿತ ಪ್ರತಿಭೆ*	60–00
ಭಾರತದ ಪ್ರಸಿದ್ಧ ಗಣಿತಜ್ಞರು (*19–20 ಶತಮಾನದ ಕೀರ್ತಿಶೇಷರು*)	120–00
ಉಭಯಭಾರತೀ *(ಐತಿಹಾಸಿಕ ನಾಟಕ)*	100–00

ಭಾರತೀಯ ವಿದ್ಯಾಭವನ, ಮುಂಬೈ

ಸಂಸ್ಥಾಪಕರು	:	ದಿ. ಡಾ॥ ಕೆ.ಎಂ.ಮುನ್ಷಿ
ಅಧ್ಯಕ್ಷರು	:	ಶ್ರೀ ಸುರೇಂದ್ರಲಾಲ್ ಜಿ.ಮೆಹ್ತಾ
ಉಪಾಧ್ಯಕ್ಷರು	:	*ಜಸ್ಟೀಸ್* ಶ್ರೀ ಬಿ.ಎನ್.ಶ್ರೀಕೃಷ್ಣ
		ದಿ. ಶ್ರೀ ಮುರಳಿ ಎಸ್.ಡಿಯೋರಾ

ಡೈರೆಕ್ಟರ್ ಜನರಲ್ ಮತ್ತು *ಎಕ್ಸಿಕ್ಯೂಟಿವ್ ಸೆಕ್ರೆಟರಿ* : ಶ್ರೀ ಎಚ್.ಎನ್.ದಸ್ತೂರ್.

ಭವನ್ಸ್ ಗಾಂಧಿ ಸೆಂಟರ್.....

ಸಂಸ್ಥಾಪನಾಧ್ಯಕ್ಷರು	:	*ದಿ. ಡಾ॥ ರಾಜಾರಾಮಣ್ಣ*
ಅಧ್ಯಕ್ಷರು	:	ಡಾ॥ ಬಿ.ವಿ.ಶ್ರೀಕಂಠನ್
ಅಧ್ಯಕ್ಷರು (ಹಣಕಾಸು)	:	ಡಾ॥ ಎಂ.ಕೆ.ಪಾಂಡುರಂಗ ಶೆಟ್ಟಿ
ಗೌರವ ನಿರ್ದೇಶಕರು	:	ಡಾ॥ ಎಸ್.ಬಾಲಚಂದ್ರರಾವ್

<u>ಸದಸ್ಯರು</u>

ಶ್ರೀ ಎನ್. ರಾಮಾನುಜ	*ಶ್ರೀಮತಿ ವಿಮಲ ರಂಗಾಚಾರ್*
ಪ್ರೊ॥ ಕೆ.ಇ. ರಾಧಾಕೃಷ್ಣ	*ಡಾ॥ ಸಿ. ಸೀತಾರಾಮ್*
ಪ್ರೊ. ಎಸ್. ರಾಜಗೋಪಾಲ್	*ಡಾ॥ ಎಚ್. ಶ್ರೀನಿವಾಸಯ್ಯ*
ಡಾ॥ ಆರ್. ಗಣೇಶ್	*ಡಾ॥ ಎಸ್.ಆರ್. ಲೀಲಾ*
ಡಾ॥ ಕೆ.ಜಿ. ಗೋಪಾಲಕೃಷ್ಣರಾವ್	*ಡಾ॥ ಎ.ಎಸ್. ಚಂದ್ರಮೌಳಿ*
ಪ್ರೊ॥ ಎಚ್.ಕೆ. ಮೌಳೇಶ್	*ಶ್ರೀ ಬಿ.ಆರ್. ಗುರುಪ್ರಸಾದ್*
ಶ್ರೀ ಬಿ.ಎಸ್. ಗುಂಡೂರಾವ್	*ಶ್ರೀ ಎನ್. ಮಹೇಶ್‌ಚಂದ್ರ*



ಪ್ರೊ॥ ಎಸ್.ಕೆ. ರಾಮಚಂದ್ರರಾವ್(1925–2006) ತಂದೆಯವರಿಂದಲೇ ಸಂಗೀತ, ಶಾಸ್ತ್ರ ಮತ್ತು ಸಂಸ್ಕೃತಸಾಹಿತ್ಯ ಕಲಿತವರು. ಮಹಾರಾಜಾ ಕಾಲೇಜಿನಿಂದ ಮನಃಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ; ಪಾಲಿ, ಅರ್ಧಮಾಗಧಿ, ಟಿಬೆಟನ್ ಭಾಷೆಗಳ ಕಲಿಕೆ; ಮೂಲದಲ್ಲೇ ಬೌದ್ಧ–ಜೈನಗ್ರಂಥಗಳ ಅಧ್ಯಯನ; ಕೆಲವು ಐರೋಪ್ಯ ಭಾಷೆಗಳ ಪರಿಚಯ.

ಐ.ಐ.ಎಸ್.ಸಿ.,ಯಲ್ಲಿ ಉದ್ಯೋಗ; ನಿಮ್ಹಾನ್ಸ್‌ನಲ್ಲಿ ಚಿಕಿತ್ಸಕ ಮನಃಶಾಸ್ತ್ರ ವಿಭಾಗದ ಮುಖ್ಯಸ್ಥರು; ಬೆಂಗಳೂರು ವಿಶ್ವವಿದ್ಯಾಲಯ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮತ್ತು ಅಮೆರಿಕಾದ ಫೆಸಿಫಿಕ್ ವಿ.ವಿ.,ಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ.

ಸಂಸ್ಕೃತದಲ್ಲಿ 03, ಕನ್ನಡದಲ್ಲಿ 90 ಗ್ರಂಥಗಳ ಕರ್ತೃ ಇಂಗ್ಲಿಷಿನಲ್ಲಿ ಪ್ರತಿಮಾಕೋಶ (ಆರು ಸಂ.), ಆಗಮಕೋಶ(ಹನ್ನೆರಡು ಸಂ.); ಟಿಬೇಟನ್ ತಾಂತ್ರಿಕ್ ಟ್ರೆಡಿಷನ್, ಎನ್‌ಸೈಕ್ಲೋಪೀಡಿಯಾ ಆಫ್ ಇಂಡಿಯನ್ ಮೆಡಿಸಿನ್(ಮೂರು ಸಂ.) ಮೊದಲಾದ ಎಂಬತ್ತಕ್ಕೂ ಹೆಚ್ಚು ಕೃತಿಗಳ ರಚನೆ. ರಾಮಚಂದ್ರರಾಯರ ಅಸಾಧಾರಣ ವಿದ್ವತ್ಪ್ರತಿಭೆ. ಸಂಶೋಧನೆ ಮತ್ತು ವಾಕ್ಪಟುತ್ವಗಳನ್ನು ಮನ್ನಿಸಿ ವಿದ್ಯಾಲಂಕಾರ, ವಿದ್ಯಾವಾಚಸ್ಪತಿ, ಶಾಸ್ತ್ರಚೂಡಾಮಣಿ, ಸಂಗೀತಕಲಾರತ್ನ, ವೇದಾಂತನಿಧಿ ಮೊದಲಾದ ಬಿರುದುಗಳು; ಅಲ್ಲದೆ ಲಲಿತಕಲಾ ಅಕಾಡೆಮಿ, ಸಂಗೀತ ನೃತ್ಯ ಅಕಾಡೆಮಿ, ಶಿಲ್ಪಕಲಾ ಪ್ರತಿಷ್ಠಾನಗಳ ಪ್ರಶಸ್ತಿಗಳು, ರಾಜ್ಯೋತ್ಸವ, ಭಾರತ ಸರ್ಕಾರದ ವೇದಸನ್ಮಾನ(2000); ಅನಕೃ., ಸೇಡಿಯಾಪು ಪ್ರಶಸ್ತಿಗಳು ಸಂದಿವೆ.

Rs.60/-

ISBN : 978-81-89220-49-8